# ಕನ್ನಡ ಮನಸು

## ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನೂ ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯಪೂರ್ಣವೂ ಅಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು, ನುಡಿ ಸಂಸ್ಕೃತಿ ಮತ್ತು ಜನಜೀವನದ ಸರ್ವಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡ ಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಭೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ, ನಾಡಿನ ಕೋಟಿ ಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

ಕನ್ನಡ ನಾಡನ್ನು ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನಡ ವಿಶ್ವವಿದ್ಯಾಲಯವನ್ನು ನೋಡಿದಲ್ಲದೆ ಕನ್ನಡ ನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾ ಸಂಸ್ಥೆ ಇದು. ಕನ್ನಡಪ್ರಜ್ಞೆ ತನ್ನ ಸತ್ವ ಮತ್ತು ತತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು; ವಿಶ್ವಪ್ರಜ್ಞೆ ಕನ್ನಡ ದೇಶೀ ಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕು ಎಂಬುದೇ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡಮಾನವ ವಿಶ್ವಮಾನವನಾಗಿ ಬೆಳೆಯಲು ಸಾಧನವಾಗಬೇಕು. ಕನ್ನಡಿಗರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರಕ್ರಿಯೆಯಿಂದ ಬೆಳಕಿನ ಈ ಮಹಾಪಥವನ್ನು ಕ್ರಮಿಸುವುದು ನಮ್ಮ ವಿಶ್ವವಿದ್ಯಾಲಯದ ಮಹತ್ತರ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೬೦೦ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಕನ್ನಡ ನಾಡಿನ ಶಿಕ್ಷಣ ಮತ್ತು ಜನಜೀವನದ ಎಲ್ಲ ಮುಖಗಳಲ್ಲಿ ಈ ನಾಡಿನ ಭಾಷೆಯಾದ ಕನ್ನಡವು ಜೀವಂತವಾಗಿ ಮತ್ತು ಅರ್ಥಪೂರ್ಣವಾಗಿ ಹಬ್ಬಿಕೊಳ್ಳಬೇಕೆಂಬುದು, ಆ ಮೂಲಕವಾಗಿ ಪ್ರಪಂಚದ ಸಾಮಾನ್ಯ ಮತ್ತು ತಾಂತ್ರಿಕ ಜ್ಞಾನವೆಲ್ಲ ಈ ನಾಡಿನಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರೆಯಬೇಕೆಂಬುದು, ಈ ನಾಡಿನ ಶಿಕ್ಷಣವೇತ್ತರ ಮತ್ತು ಸಾಮಾನ್ಯ ಜನರ ಬಹು ದಿನಗಳ ಬಯಕೆಯಾಗಿದೆ. ಈ ಉದ್ದೇಶಕ್ಕಾಗಿ ಕನ್ನಡವನ್ನು ಸಮೃದ್ಧಗೊಳಿಸುವ ಮತ್ತು ಎಲ್ಲ ರೀತಿಯ ಅಭಿವ್ಯಕ್ತಿಗಳಿಗೆ ಅದನ್ನು ಸಮರ್ಥ ಮಾಧ್ಯಮವನ್ನಾಗಿ ಸಜ್ಜುಗೊಳಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸವಿರುವ ಕನ್ನಡ ಭಾಷೆ ಮತ್ತು ಸಾಹಿತ್ಯ ಎಂತಹ ಕ್ಲಿಷ್ಟ, ಗಹನ ಮತ್ತು ಗಂಭೀರ ವಿಷಯಗಳನ್ನೂ ಸರಳವಾಗಿ, ಸಂಪೂರ್ಣವಾಗಿ ಹಾಗೂ ಶಕ್ತವಾಗಿ ಅಭಿವ್ಯಕ್ತಗೊಳಿಸಬಲ್ಲುದು ಎಂಬ ಅರಿವೇ, ನಮ್ಮ ನಾಡಿನ ಬಹಳಷ್ಟು ಜನಕ್ಕೆ ಇಲ್ಲ. ಇದಕ್ಕೆ ಕಾರಣ ಈ ಭಾಷೆಯ ವ್ಯಾಪಕತೆಯ, ಸೂಕ್ಷ್ಮತೆಯ, ಸತ್ವಶೀಲತೆಯ ತಿಳುವಳಿಕೆ ಅವರಿಗಿಲ್ಲದಿರುವುದು. ಇದರಿಂದಾಗಿ ತಮ್ಮ ಮಕ್ಕಳು ಇಂಗ್ಲೀಶ್‌ಮಾಧ್ಯಮದಲ್ಲಿ ಕಲಿತರೆ ಮಾತ್ರ ಅವರ ಬದುಕು ಸಾರ್ಥಕ ಎಂಬ ಭ್ರಮೆಯಲ್ಲಿ ಅವರಿದ್ದಾರೆ. ಹೀಗಾಗಿ ನಮ್ಮ ವಿದ್ಯಾರ್ಥಿಗಳು ಸಂಪೂರ್ಣವಾಗಿ ಮತ್ತು ಸಮರ್ಥವಾಗಿ ಇಂಗ್ಲೀಶ್‌ಭಾಷೆಯನ್ನು ಕಲಿಯುವುದರಲ್ಲಿ ವಿಫಲರಾಗಿ, ತಮ್ಮ ತಾಯಿನುಡಿ ಹಾಗೂ ಪ್ರಾದೇಶಿಕ ನುಡಿಯಲ್ಲಿ ಶಿಕ್ಷಣ ಕೈಗೊಂಡರೆ ತಾವು ಕಲಿಯುವ ವಿಷಯ ಪರಿಪೂರ್ಣವಾಗಿ ತಮ್ಮ ಮನೋಗವಾಗುತ್ತದೆ ಎಂಬ ಪ್ರಜ್ಞೆಯಿಲ್ಲದೆ ಎಡಬಿಡಂಗಿಗಳಾಗುತ್ತಿದ್ದಾರೆ. ಇದು ವಿದ್ಯಾರ್ಥಿಗಳನ್ನು ಉರು ಹೊಡೆಯುವ ಯಂತ್ರಗಳನ್ನಾಗಿ, ತಲಸ್ಪರ್ಶಿಯಾದ ವಿಷಯ ಜ್ಞಾನವಿಲ್ಲದ ಕೇವಲ ಪರೀಕ್ಷಾ ಜೀವಿಗಳನ್ನಾಗಿ ಮಾಡುತ್ತಿದೆ. ಈ ಕಾರಣದಿಂದಾಗಿ ಒಂದು ರೀತಿಯ ಕೃತಕ ವಾತಾವರಣ ಕಲ್ಪಿತವಾಗಿ, ವಿಷಯದ ಅರ ಬರೆ ಜ್ಞಾನ ಮಾತ್ರ ಪಾಂಡಿತ್ಯವೆಂಬ ಭ್ರಮೆಯನ್ನು ಉಂಟುಮಾಡುತ್ತಿದೆ. ಈ ವಿಷಮ ಪರಿಸ್ಥಿತಿಯನ್ನು ಹೋಗಲಾಡಿಸಿ ಶಿಕ್ಷಣದ ಎಲ್ಲ ಮಟ್ಟಗಳಲ್ಲಿಯೂ ಕನ್ನಡ ಕಲಿಕೆ ಅಗತ್ಯ ಮತ್ತು ಅನಿವಾರ್ಯವೆಂಬುದನ್ನು ಶಿಕ್ಷಣ ಸಂಸ್ಥೆಗಳಿಗೆ ಮತ್ತು ಸರ್ಕಾರಕ್ಕೆ ಮನದಟ್ಟು ಮಾಡಿಕೊಡಲು, ಬಹುವರ್ಷಗಳಿಂದ ಶಿಕ್ಷಣ ಪ್ರೇಮಿಗಳು ಕನ್ನಡ ನಾಡಿನುದ್ದಕ್ಕೂ ಈ ಸಂಬಂಧವಾದ ಸಭೆ, ಚಳುವಳಿ, ಸಂವಾದಗಳನ್ನು ಸಂಘಟಿಸುತ್ತಾ ಬಂದಿದಾರೆ. ಈ ಒತ್ತಾಸೆಯ ಫಲವಾಗಿ ಮತ್ತು ಬಹುಮುಖ್ಯವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ದೃಢಸಂಕಲ್ಪದ ಪರಿಣಾಮವಾಗಿ, ಸರ್ಕಾರ ಕನ್ನಡ ಕಲಿಕೆಯು ಶಿಕ್ಷಣದ ಎಲ್ಲ ಹಂತಗಳಲ್ಲಿ ಅಗತ್ಯವೆಂದು ನಿಯಮಗಳನ್ನು ರೂಪಿಸಿದೆ. ಇದರ ಸತ್ಫಲವಾಗಿ ತಾಂತ್ರಿಕ ಪದವಿ ಶಿಕ್ಷಣ ತರಗತಿಗಳಲ್ಲಿ ಕನ್ನಡ ಮತ್ತು ಕನ್ನಡೇತರ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಪಠ್ಯಗಳನ್ನು ನೇಮಿಸಿ, ಎಲ್ಲರೂ ತಮ್ಮ ವಿಷಯ ಜ್ಞಾನಕ್ಕೆ ಪೂರಕವಾಗಿ ಇವುಗಳನ್ನು ಅಧ್ಯಯನ ಮಾಡಬೇಕೆಂದು ಅದೇಶ ಹೊರಡಿಸಲಾಗಿದೆ.

ಈ ಮೇಲಿನ ಹಿನ್ನಲೆಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ನನ್ನ ಅಧ್ಯಕ್ಷತೆಯಲ್ಲಿ ಪ್ರಸಿದ್ಧ ವಿದ್ವಾಂಸರಾದ ಪ್ರೊ. ಕೆ.ವಿ. ನಾರಾಯಣ, ಪ್ರೊ. ಬಿ.ಎ. ವಿವೇಕ ರೈ, ಡಾ. ರಹಮತ್‌ತರೀಕೆರೆ, ಡಾ. ಲಿಂಗದೇವರು ಹಳೆಮನೆ ಮತ್ತು ಡಾ. ಮಲ್ಲಿಕಾ ಘಂಟಿ ಅವರನ್ನು ಒಳಗೊಂಡು ಕನ್ನಡ ಪಠ್ಯಪುಸ್ತಕ ಸಮಿತಿಯನ್ನು ರಚಿಸಿದೆ. ಕನ್ನಡ ವಿದ್ಯಾರ್ಥಿಗಳಿಗೆ ಕನ್ನಡ ನಾಡಿನ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಅರಿವನ್ನು ತಮ್ಮ ವಿಷಯ ಪಠ್ಯಗಳ ಜೊತೆಯಲ್ಲಿಯೇ ಪಡೆಯಲು ಹಾಗೂ ಕನ್ನಡೇತರ ವಿದ್ಯಾರ್ಥಿಗಳು ತಮ್ಮ ವ್ಯವಹಾರಕ್ಕೆ ಮತ್ತು ಸಂವಹನಕ್ಕೆ ಅಗತ್ಯವಾಗುವ ಬಳಕೆಗನ್ನಡದ ಪರಿಚಯವನ್ನು ಪಡೆಯಲು ಅನುಕೂಲವಾಗುವಂತೆ, **ಕನ್ನಡ ಮನಸು** ಎಂಬ ಸಾಂಸ್ಕೃತಿಕ ಪಠ್ಯವನ್ನು, **ಕನ್ನಡ ಕಲಿ** ಎಂಬ ಭಾಷಾ ಪಠ್ಯವನ್ನು ರಚಿಸಲಾಗಿದೆ.

ಮೇಲಿನ ತರಗತಿಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆ ಮತ್ತು ಅದು ಅಭಿವ್ಯಕ್ತಿಸುವ ವಿಷಯ ಒಂದು ಹೊರೆಯಾಗದಂತೆ, ಅದೇ ಸಂದರ್ಭದಲ್ಲಿ ಉನ್ನತ ಕನ್ನಡ ಮನಸ್ಸುಗಳು ಸೃಷ್ಟಿಸಿರುವ ಸಾಹಿತ್ಯ ಮತ್ತು ಸಂಸ್ಕೃತಿ ಸಂಬಂಧಿಯಾದ ವಿಷಯಗಳನ್ನು ಆಕರ್ಷಕವಾಗಿ ಮನಸ್ಸಿಗೆ ಮುಟ್ಟಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಕನ್ನಡ ಸಾಂಸ್ಕೃತಿಕ ಪ್ರಜ್ಞೆಯನ್ನು ಮೊಳೆಯಿಸುವಂತೆ ಈ ಪಠ್ಯವನ್ನು ರೂಪಿಸಲಾಗಿದೆ. ಸಾಹಿತ್ಯ ಮತ್ತು ಇತರ ವಿಷಯಗಳ ಬಗೆಗಿನ ಅರಿವನ್ನು ಸರಳ ಸುಲಭವಾಗಿ ಮೂಡಿಸುವ ಪಠ್ಯಗಳಿಗೆ ಆದ್ಯತೆಯನ್ನು ನೀಡಲಾಗಿದೆ. ಕಥೆ, ಕಾವ್ಯ, ಹಾಸ್ಯ, ಪ್ರಬಂಧ, ವ್ಯಕ್ತಿ ಚಿತ್ರ, ಪ್ರವಾಸ ಕಥನ, ಅಂಕಣ ಬರಹ, ಪರಿಸರ, ತಂತ್ರಜ್ಞಾನ, ವಿಜ್ಞಾನ ಈ ಎಲ್ಲ ಮುಖಗಳನ್ನು ಕುತೂಹಲಕರವಾಗಿ ಪರಿಚಯ ಮಾಡಿಕೊಡುವ ಬರಹಗಳನ್ನು ಇಲ್ಲಿ ಆರಿಸಿ ಸಂಕಲಿಸಲಾಗಿದೆ. ಇವುಗಳನ್ನು ಆರಿಸುವಾಗ ವಿದ್ಯಾರ್ಥಿಗಳಿಗೆ ಜನಜೀವನದ ಹಲವು ಮುಖಗಳ ಅರಿವು ಸಹಜವಾಗಿಯೇ ಆಗುವಂತೆ ಮಾಡುವ

ದೃಷ್ಟಿಯನ್ನು ಇರಿಸಿಕೊಳ್ಳಲಾಗಿದೆ. ಇದರ ಜೊತೆಗೆ ಕರ್ನಾಟಕ ಸಂಸ್ಕೃತಿಯ ವಿಶಿಷ್ಟತಯನ್ನು ಹಾಗೂ ಮುಖ್ಯ ಸ್ವರೂಪಗಳನ್ನು ಪರಿಚಯ ಮಾಡಿಕೊಡುವ ವಿಷಯ ಸಂಪನ್ನವೂ, ಪಾರದರ್ಶಕವೂ ಆದ ಲೇಖನವೊಂದನ್ನು ಸೇರಿಸಲಾಗಿದೆ. ಇಂತಹ ಲೇಖನವೊಂದು ಈ ಸಾಂಸ್ಕೃತಿಕ ಪಠ್ಯದಲ್ಲಿರುವುದು ಅಗತ್ಯವೆಂದು ಸಮಿತಿ ಅಭಿಪ್ರಾಯಪಟ್ಟಿದ್ದರಿಂದ, ಡಾ. ರಹಮತ್‌ತರೀಕೆರೆ ಅವರಿಂದ ಈ ಪಠ್ಯಕ್ಕೆಂದೇ ಈ ಲೇಖನವನ್ನು ಬರೆಯಿಸಲಾಗಿದೆ. ವೈವಿಧ್ಯಮಯವಾದ ವಿಷಯಗಳಿಂದ ಹಾಗೂ ಸರಳ ನಿರೂಪಣೆಯಿಂದ ಪರಿಪುಷ್ಟವಾಗಿರುವ ಇಲ್ಲಿನ ಬರಹಗಳು, ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣ ಪದವಿಯಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಬಗ್ಗೆ ವಿಶೇಷ ಅರಿವನ್ನು ಪಡರಯುವ ಆಸಕ್ತಿಯನ್ನು ಉದ್ದೀಪಿಸುವಂತೆ ಇಲ್ಲಿ ಮಾಡಲು ಪ್ರಯತ್ನಿಸಲಾಗಿದೆ.

ಕನ್ನಡೇತರ ವಿದ್ಯಾರ್ಥಿಗಳ ಅಧ್ಯಯನಕ್ಕೆಂದು ರಚಿಸಲಾಗಿರುವ **ಕನ್ನಡ ಕಲಿ** ಪಠ್ಯವನ್ನು ಈ ಕ್ಷೇತ್ರದಲ್ಲಿ ಪರಿಣತರಾದ ಡಾ. ಲಿಂಗದೇವರು ಹಳೆಮನೆ ಅವರು ವಿಶೇಷ ಪರಿಶ್ರಮದಿಂದ ಮತ್ತು ಈ ಕ್ಷೇತ್ರದ ತಮ್ಮ ಸುದೀರ್ಘ ಅನುಭವದಿಂದ ತುಂಬು ಆಸಕ್ತಿ ವಹಿಸಿ ರಚಿಸಿ ಕೊಟ್ಟಿದ್ದಾರೆ. ಕನ್ನಡ ಭಾಷೆಯನ್ನು ಅತ್ಯಮತ ಸುಗಮವಾಗಿ ಕಲಿಯಲು, ಪ್ರಯೋಗಿಸಲು ಮತ್ತು ಅದರಲ್ಲಿ ವ್ಯವಹರಿಸಲು ಮತ್ತು ಆ ಮೂಲಕ ತಮ್ಮ ವಿಷಯ ಕ್ಷೇತ್ರದಲ್ಲಿ ಈ ನಾಡವರೊಡನೆ ಅರ್ಥಪೂರ್ಣ ಸಂಪರ್ಕ ಮತ್ತು ಸಂವಹನವನ್ನು ಸಾಧಿಸಲು ನೆರವಾಗುವ ರೀತಿಯಲ್ಲಿ ಇದು ರಚಿತವಾಗಿದೆ.

ಈ ಎರಡೂ ಪಠ್ಯಗಳನ್ನು ವಿದ್ಯಾರ್ಥಿಗಳು ಗಂಭೀರವಾದ ಆಸಕ್ತಿಯಿಂದ ಅಧ್ಯಯನ ಮಾಡಿದಲ್ಲಿ ಮತ್ತು ಇವುಗಳನ್ನು ಕಲಿಸುವ ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ನಾಡು-ನುಡಿಯ ಮೇಲಿನ ಅಭಿಮಾನ ಉದ್ದೀಪಿಸುವಂತೆ ಕಲಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದಲ್ಲಿ, ವಿಶ್ವವಿದ್ಯಾಲಯಗಳ ಹಾಗೂ ಈ ಸಮಿತಿಯ ಶ್ರಮ ಸಾರ್ಥಕವಾಗುತ್ತದೆಂದು ನಾನು ಭಾವಿಸಿದ್ದೇನೆ. ಬಹು ಸಮಯದ ಬೇಡಿಕೆಯಾದ ಈ ಪಠ್ಯಗಳನ್ನು ಸಿದ್ಧಪಡಿಸಲು ಸಮಿತಿ ರಚಿಸಿ ಚಾಲನೆ ನೀಡಿದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿಗಳಾದ ಮಾನ್ಯ ಡಾ. ಕೆ. ಬಾಲವೀರರೆಡ್ಡಿ ಅವರಿಗೆ, ಇವುಗಳನ್ನು ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳಲು ಆಸಕ್ತಿ ವಹಿಸಿದ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಮಾನ್ಯ ಡಾ. ಚಂದ್ರಶೇಖರ್ ಅವರಿಗೆ, ಅತ್ಯಂತ ಕಡಿಮೆ ಅವಧಿಯಲ್ಲಿ ಅತ್ಯಂತ ಪರಿಶ್ರಮ ಹಾಗೂ ಆಸಕ್ತಿಗಳಿಂದ ಈ ಪಠ್ಯಗಳನ್ನು ಸಿದ್ಧಪಡಿಸಿಕೊಟ್ಟ ಸಮಿತಿಯ ಎಲ್ಲ ಸದಸ್ಯರಿಗೂ ಹಾರ್ದಿಕ ಕೃತಜ್ಞತೆಗಳು.

**ಡಾ. ಎಚ್. ಜೆ. ಲಕ್ಕಪ್ಪಗೌಡ**
**ಕುಲಪತಿಗಳು**

# ೧. ಶ್ರಾವಣ

ಶ್ರಾವಣಾ ಬಂತು ಕಾಡಿಗೆ । ಬಂತು ನಾಡಿಗೆ
ಬಂತು ಬೀಡಿಗೆ ।ಶ್ರಾವಣಾ ಬಂತು ।
ಕಡಲಿಗೆ ಶ್ರಾವಣಾ ಬಂತು । ಕುಣಿದ್ಹಾಂಗ ರಾವಣಾ
ಕುಣಿದಾವ ಗಾಳಿ । ಭೈರವನ ರೂಪತಾಳಿ ।

ಶ್ರಾವಣಾ ಬಂತು ಘಟ್ಟಕ್ಕೆ । ರಾಜ್ಯಪಟ್ಟಕ್ಕ
ಬಾನಮಟ್ಟಕ್ಕ
ಏರ್ಯಾವ ಮುಗಿಲು । ರವಿ ಕಾಣೆ ಹಾಡೆಹಗಲು ।

ಶ್ರಾವಣಾ ಬಂತು ಹೊಳಿಗಳಿಗೆ । ಅದೇ ಶುಭಗಳಿಗೆ
ಹೊಳಿಗೆ ಮತ್ತ ಮಳಿಗೆ
ಆಗ್ಯೇದ ಲಗ್ನ । ಅದರಾಗ ಭೂಮಿ ಮಗ್ನ ।

ಶ್ರಾವಣಾ ಬಂತು ಊರಿಗೆ । ಕೇರಿಕೇರಿಗೆ
ಹೊಡೆದ ಝೂರಿಗೆ
ಜೋಕಾಲಿ ಏರಿ । ಅಡರ್ಯಾವ ಮರಕ ಹಾರಿ ।

ಶ್ರಾವಣಾ ಬಂತು ಮನಿಮನಿಗೆ । ಕೂಡಿ ದನಿದನಿಗೆ
ಮನದ ನನಿಕೊನಿಗೆ
ಒಡೆದಾವ ಹಾಡೂ । ರಸ ಉಕ್ಕತಾವ ನೋಡು ಶ್ರಾವಣಾ ಬಂತು ॥ ೧ ॥

ಬೆಟ್ಟ ತೊಟ್ಟಾವ ಕುತನಿಯ ಅಂಗಿ
ಹಸಿರು ನೋಡ ತಂಗಿ
ಹೊರಟಾವೆಲ್ಲೊ ಜಂಗಿ
ಜಾತ್ರಿಗೇನೋ । ನೆರದಽದ ಇಲ್ಲೆ ತಾನೋ ॥

ಬನ ಬನ ನೋಡು ಈಗ ಹ್ಯಾಂಗ
ಮದುವಿ ಮಗನ್ಹಾಂಗ
ತಲಿಗೆ ಬಾಸಿಂಗ
ಕಟ್ಟಿಕೊಂಡೂ । ನಿಂತಾವ ಹರ್ಷಗೊಂಡು ॥

ಹಸಿರುಟ್ಟ ಬಸುರಿಯ ಹಾಂಗ
ನೆಲಾ ಹೊಲಾ ಹ್ಯಾಂಗ
ಅರಿಸಿಣ ಒಡೆಧಾಂಗ
ಹೊಮ್ಮತಾವ । ಬಂಗಾರ ಚಿಮ್ಮತಾವ

ಗುಡ್ಡ ಗುಡ್ಡ ಸ್ಥಾವರಲಿಂಗ
ಅವಕ ಅಭ್ಯಂಗ
ಎರಿತಾವನ್ನೊ ಹಾಂಗ
ಕೂಡ್ಯಾವ ಮೋಡ | ಸುತ್ತೆಲ್ಲ ನೋಡ ನೋಡ ||

ನಾಡೆಲ್ಲ ಏರಿಯ ಹಾರಿ
ಹರಿತಾವ ಝರಿ
ಹಾಲಿನ ತೊರಿ
ಈಗ ಯಾಕಃ | ನೆಲಕೆಲ್ಲ ಕುಡಿಸಲಾಕ
ಶ್ರಾವಣಾ ಬಂತು || ೨||

ಜಗದ್ಗುರು ಹುಟ್ಟಿದ ಮಾಸ
ಕಟ್ಟಿ ನೂರು ವೇಷ
ಕೊಟ್ಟು ಸಂತೋಷ
ಕುಣಿತದ | ತಾನಃನ ದಣಿತದ |

ಶ್ರಾವಣಾ ಬಂತು ಕಾಡಿಗೆ | ಬಂತು ನಾಡಿಗೆ
ಬಂತು ಬೀಡಿಗೆ |ಶ್ರಾವಣಾ ಬಂತು |

**ಲೇಖಕರು**

ದತ್ತಾತ್ರೇಯ ರಾಮಚಂದ್ರ ಬೇಂದ್ರೆ (೧೮೯೬-೧೯೮೧) ಕನ್ನಡದ ದೊಡ್ಡ ಕವಿಗಳಲ್ಲಿ ಒಬ್ಬರು. ಅಂಬಿಕಾತನಯದತ್ತ ಎಂಬ ಕಾವ್ಯ ನಾಮದಲ್ಲಿ ಕವನಗಳನ್ನು ಬರೆದಿದ್ದಾರೆ. ಧಾರವಾಡದವರಾದ ಬೇಂದ್ರೆಯವರು ಕನ್ನಡ ಭಾಷೆಗೆ ಅಪಾರವಾದ ಸೂಕ್ಷತೆ ಹಾಗೂ ನಾದಮಯತೆಯನ್ನು ಕೊಟ್ಟ ಕವಿ. ಅವರು ಬರೆದ ನೂರಾರು ಕವನಗಳನ್ನು ಈಗಲೂ ನಾಡಿನ ತುಂಬ ಹಾಡಲಾಗುತ್ತಿದೆ. 'ಗರಿ', 'ಸಖೀಗೀತ', 'ನಾದಲೀಲೆ', 'ಗಂಗಾವತರಣ' ಅವರ ಮುಖ್ಯ ಸಂಕಲನಗಳು. 'ಅರಳು ಮರಳು' ಸಂಕಲನಕ್ಕೆ ೧೯೫೮ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿತು. 'ನಾಕುತಂತಿ' ಸಂಕಲನಕ್ಕೆ ೧೯೭೪ ರಲ್ಲಿ ಜ್ಞಾನಪೀಠ ಪ್ರಶಸ್ತಿ ಬಂದಿತು. ಬೇಂದ್ರೆಯವರು ಬರೆದ ಚಿಂತನ ಬರೆಹಗಳು ಸಾಹಿತ್ಯದ ವಿರಾಟ್‌ಸ್ವರೂಪ ಎಂಬ ಸಂಪುಟದಲ್ಲಿ ಪ್ರಕಟವಾಗಿವೆ. ಪ್ರಭಾವಶಾಲಿ ಮಾತುಗಾರರಾಗಿದ್ದ ಬೇಂದ್ರೆ, ಶಿವಮೊಗ್ಗದಲ್ಲಿ ನಡೆದ ೨೭ನೇ  ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಆಶಯ**

ಈ ಕವನವನ್ನು ಬೇಂದ್ರೆಯವರ 'ಹಾಡುಪಾಡು' ಸಂಕಲನಿಂದ ಆರಿಸಿಕೊಳ್ಳಲಾಗಿದೆ. ಕವನವು ಶ್ರಾವಣ ಮಾಸದಲ್ಲಿ ನಿಸರ್ಗದಲ್ಲಿ ಉಂಟಾಗುವ ಬದಲಾವಣೆಗಳನ್ನು ಹಾಗೂ ಅವುಗಳ ಚೆಲುವನ್ನು ವರ್ಣಿಸುತ್ತದೆ.

**ಪದಕೋಶ**

ಝೂರಿಗೆ = ರಭಸಕ್ಕೆ, ಆಡರು = ಹತ್ತು, ಕುತನಿ = ಹತ್ತಿ ಮತ್ತು ರೇಷ್ಮೆಯಿಂದ ಮಾಡಿದ ನುಣುಪಾದ ಬಟ್ಟೆ, ಜಂಗಿ =ಯುದ್ಧಕ್ಕೆ ಎಂಬಂತೆ, ವಿಶೇಷವಾಗಿ, ಬಾಸಿಂಗ = ಮದುಮಗನ ಕಿರೀಟ, ಅಭ್ಯಂಗ = ಮಂಗಳಸ್ನಾನ, ಜಗದ್ಗುರು = ಕೃಷ್ಣ

**ಟಿಪ್ಪಣಿ**

ಭೈರವ =ಶಿವನ ಉಗ್ರರೂಪದ ಅವತಾರ

**ಪ್ರಶ್ನೆಗಳು**

೧. ಶ್ರಾವಣವು ಕಡಲು ಆಕಾಶ ಮತ್ತು ಹೊಳೆಗಳ ಮೇಲೆ ಮಾಡಿದ ಪರಿಣಾಮ ಯಾವುದು?

೨. ಊರು ಮತ್ತು ಮನೆಗಳಲ್ಲಿ ಶ್ರಾವಣನ ಆಗಮನದಿಂದ ಉಂಟಾದ ಬದಲಾವಣೆಗಳು ಯಾವುವು?

೩. ಶ್ರಾವಣ ಮಾಸದಲ್ಲಿ ಬೆಟ್ಟ ಬನ ಹಾಗೂ ನೆಲ ಹೇಗೆ ಕಾಣುತ್ತಿವೆ?

೪. ಗುಡ್ಡಗಳನ್ನು ಆವರಿಸುವ ಮೋಡಗಳು ಕವಿಕಣ್ಣಿಗೆ ಹೇಗೆ ಕಂಡಿವೆ?

**ಪೂರಕ ಓದು**

೧. ಶ್ರಾವಣವನ್ನು ಕುರಿತಂತೆ ಬೇಂದ್ರೆಯವರೇ ರಚಿಸಿರುವ ಇತರ ಕವನಗಳು

೨. ಪಂಜೆ ಮಂಗೇಶರಾಯರ ‘ಕಾರ್ಗಾಲದ ವೈಭವ’ ಕವನ

೩. ಕುವೆಂಪು ಅವರ ‘ವರ್ಷ ಭೈರವ’ ಕವನ

## ೨. ಡಾ. ವಿಶ್ವೇಶ್ವರಯ್ಯ - ವ್ಯಕ್ತಿ ಮತ್ತು ಐತಿಹ್ಯ

ಕೆಲವು ವರ್ಷಗಳ ಹಿಂದೆ ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣ ಮಾಡುತ್ತಿದ್ದೆ. ಬಸ್ಸು ಮಂಡ್ಯ ಜಿಲ್ಲೆಯಲ್ಲಿ ಹೋಗುತ್ತಿದ್ದಾಗ ಆ ಜಿಲ್ಲೆ ಹಿಂದೆ ಇದ್ದ ಸ್ಥಿತಿಯ ನೆನಪಾಯಿತು. ಆಗ ಅದು ಮಳೆ ಸಾಲದೆ, ನೀರಿನ ಸೌಕರ್ಯವಿಲ್ಲದೆ, ಹೆಚ್ಚು ಕಡಿಮೆ ಬರಡು ಭೂಮಿಯಾಗಿತ್ತು. ಈಗ ರಸ್ತೆಯ ಇಕ್ಕೆಲದಲ್ಲೂ ಕಣ್ಣಿಗೆ ಕಾಣುವಷ್ಟು ದೂರವೂ ಹಸುರು ಕಂಗೊಳಿಸುತ್ತದೆ. ಎಲ್ಲಿ ನೋಡಿದರೂ ಭತ್ತದ ಬೆಳೆ; ಕಬ್ಬಿನ ಬೆಳೆ; ಎಲ್ಲ ಕಡೆಗಳಿಂದಲೂ ನೀರಿನ ಕಲರವ ಕಿವಿಯನ್ನು ಮುತ್ತುತ್ತದೆ. ನಾನು ಈ ಮಾರ್ಪಾಟನ್ನು ಸವಿಯುವುದರಲ್ಲಿ ಮಗ್ನನಾಗಿದ್ದಾಗ ನನ್ನ ಪಕ್ಕದಲ್ಲಿ ಕುಳಿತಿದ್ದ ಪ್ರಯಾಣಿಕ ಸುತ್ತಣ ಹಸುರಿನ ಕಡೆಗೆ ಕೈಬೀಸಿ ಇಂಗ್ಲಿಷಿನಲ್ಲಿ ‘All this is visvesvarayya (ಇವೆಲ್ಲ ವಿಶ್ವೇಶ್ವರಯ್ಯ)’ ಎಂದ. ನನ್ನ ಮನಸ್ಸಿನಲ್ಲಿದ್ದ ಯೋಚನೆಯೇ ಆತನ ಬಾಯಿಂದ ಹೊರಟಿತು. ಸಾಧಾರಣವಾಗಿ ನಾವು ‘ಇದೆಲ್ಲಾ ವಿಶ್ವೇಶ್ವರಯ್ಯನವರು ಮಾಡಿದ ಕೆಲಸ’ ಎಂದು ಹೇಳುವ ಪದ್ಧತಿ. ಆದರೆ ಈ ಸಂದರ್ಭದಲ್ಲಿ ಆತ ಹೇಳಿದ್ದೇ ಸರಿ ಎನ್ನಿಸತು. ಈಗ ವಿಶ್ವೇಶ್ವರಯ್ಯನವರ ಭೌತದೇಹ ನಮ್ಮೊಡನೆ ಇಲ್ಲ. ಆದರೆ ಮಂಡ್ಯ ಜಿಲ್ಲೆಯ ಸೌಂದರ್ಯದಲ್ಲಿ, ಅಲ್ಲಿಯ ಜನರ ಅಭ್ಯುದಯದಲ್ಲಿ, ಅವರು ಜೀವಂತರಾಗಿದ್ದಾರೆ. ಅಂಥ ಸಂಪತ್ತನ್ನು ಸೃಷ್ಟಿಸಿ ಜನಜೀವನದ ಸೌಖ್ಯವನ್ನು ಹೆಚ್ಚಿಸುವುದೇ ಅವರ ಜೀವದಜೀವ. ಆ ಜಿಲ್ಲೆಗೆ ನೀರನ್ನು ಒದಗಿಸುವ ಕೃಷ್ಣರಾಜಸಾಗರವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡರು, ಅದರ ಯೋಜನೆಯನ್ನು ತಯಾರಿಸಿದವರು, ಅದನ್ನು ಕಟ್ಟಿಸಿದವರು, ವಿಶ್ವೇಶ್ವರಯ್ಯ. ಅದರ ಪ್ರಯೋಜನವನ್ನು ಪಡೆಯುತ್ತಿರುವವರು ಮಂಡ್ಯದ ರೈತರು, ಮತ್ತು ಅವರ ಮೂಲಕ ಮೈಸೂರು ರಾಜ್ಯ. ಅದಕ್ಕಾಗಿಯೇ ನಾವು ಈ ಎಂಜಿನಿಯರ್‌ರಾಜತಂತ್ರಜ್ಞರು ಮಾಡಿದ ಲೆಕ್ಕವಿಲ್ಲದಷ್ಟು ಉಪಕಾರಗಳಲ್ಲಿ ಮೊದಲು ಕೃಷ್ಣರಾಜಸಾಗರವನ್ನು ನೆನೆಯುತ್ತೇವೆ. ನನ್ನ ಆ ಸಹಪ್ರಯಾಣಿಕನು ವಿಶ್ವೇಶ್ವರಯ್ಯನವರ ಇತರ ಮಹಾಕಾರ್ಯಗಳನ್ನು - ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಮೈಸೂರು ಬ್ಯಾಂಕು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರಿನ ಚೇಂಬರ್‌ಆಫ್‌ಕಾಮರ್ಸ್‌ಇವುಗಳನ್ನೂ ಸ್ಮರಿಸಿಕೊಂಡ. ಆದರೆ ಕೃಷ್ಣರಾಜ ಸಾಗರದ ಹೆಸರು ಹೇಳಿದ ಮೇಲೆ. ಗಾಂಧೀಜಿ ಒಂದು

ಸಾರಿ ಹೇಳಿದರು: ಭಗವಂತ ಮಾನವರಿಗೆ ಕಾಣಿಸಿಕೊಂಡರೆ, ಮೊದಲು ಅನ್ನದ ರೂಪದಲ್ಲಿ ಕಾಣಿಸಿಕೊಳ್ಳಬೇಕು, ಎಂದು ವಿಶ್ವೇಶ್ವರಯ್ಯನವರು ತಮ್ಮನ್ನು ನಿಮಿತ್ತವಾಗಿ ಮಾಡಿಕೊಂಡು ಮಂಡ್ಯ ಜಿಲ್ಲೆಯಲ್ಲಿ ಅನ್ನಬ್ರಹ್ಮನ ಅವತಾರ ಮಾಡಿಸಿದರು.

ಡಾ. ವಿಶ್ವೇಶ್ವರಯ್ಯನವರು ೧೯೧೯ರಲ್ಲಿ ಸ್ವಂತ ಇಚ್ಛೆಯಿಂದ ದಿವಾನಗಿರಿಯನ್ನು ಬಿಟ್ಟುಕೊಟ್ಟು ಅಧಿಕಾರದಿಂದ ನಿವೃತ್ತರಾದರು; ಆದರೆ ದೇಶಸೇವೆಯಿಂದ ನಿವೃತ್ತರಾಗಲಿಲ್ಲ. ವರ್ಷಗಟ್ಟಲೆ ಅವರು ಕೃಷ್ಣರಾಜಸಾಗರದ ಅಭಿವೃದ್ಧಿ ಸಮಿತಿಯ ಮತ್ತು ಭದ್ರಾವತಿಯ ಕಬ್ಬಿಣ ಮುತ್ತು ಉಕ್ಕಿನ ಕಾರ್ಖಾನೆಯ ಅಧ್ಯಕ್ಷರಾಗಿ ಕೆಲಸ ಮಾಡಿದರು. ಅವರ ಜೀವನದ ಕೊನೆ ಕೊನೆಯವರೆಗೂ ಕೈಗಾರಿಕೆ ಅಥವಾ ಎಂಜಿನಿಯರಿಂಗಿಗೆ ಸಂಬಂಧಪಟ್ಟ ತೊಡಕಾದ ಸಮಸ್ಯೆಯೇನು ಬಂದರೂ ಮೈಸೂರು ರಾಜ್ಯವು ಅವರ ಸಲಹೆಯನ್ನು ಬೇಡುತ್ತಿತ್ತು, ಪಡೆಯುತ್ತಿತ್ತು. ಅವರ ನಂತರ ಬಂದ ದಿವಾನರು ಮತ್ತು ಮಂತ್ರಿಗಳಲ್ಲಿ ಹೆಚ್ಚು ಕಡಿಮೆ ಎಲ್ಲರೂ ಅವರಲ್ಲಿ ಭಕ್ತಿಯಿಂದ ನಡೆದುಕೊಂಡು ಸಲಹೆ ಪಡೆದಿದ್ದಾರೆ. ನಮ್ಮ ರಾಜ್ಯದ ಜನಜೀವನದಲ್ಲಿ ಅದೆಷ್ಟು ಕಡೆ ಅವರ ಕೈವಾಡ ಕಾಣುತ್ತದೆಯೊ! ಅದಕ್ಕೇ ನಮ್ಮ ಜನ ದೊಡ್ಡದಾಗಿ ಕೈಬೀಸಿ ಹೇಳುತ್ತಾರೆ: 'ಇದೆಲ್ಲಾ ವಿಶ್ವೇಶ್ವರಯ್ಯನವರ ಕೆಲಸ' ಎಂದಲ್ಲ, 'ಇದೆಲ್ಲಾ ವಿಶ್ವೇಶ್ವರಯ್ಯ' ಎಂದು.

ವಿಶ್ವೇಶ್ವರಯ್ಯನವರು ಸಾಧಿಸಿದ ಕೆಲಸಗಳಷ್ಟೇ - ಬಹುಶಃ ಅವಕ್ಕಿಂತ ಹೆಚ್ಚಾಗಿ - ಅವರ ವ್ಯಕ್ತಿತ್ವ ಜನರ ಮನಸ್ಸನ್ನು ಸೆಳೆದಿದೆ. ಅವರು ಅತ್ಯಂತ ದಕ್ಷರಾದ ಎಂಜಿನಿಯರ್, ಮುಂದಾಲೋಚನೆಯುಳ್ಳ ರಾಜತಂತ್ರಜ್ಞರು, ರಾಜ್ಯದ ಅಭಿವೃದ್ಧಿಯ ವಿಷಯದಲ್ಲಿ ಘನವಾದ ಆದರ್ಶಗಳನ್ನು ಕಲ್ಪಿಸಿಕೊಂಡು ಅವನ್ನು ಸಾಧಿಸಲು ಶ್ರಮಿಸಿದವರು - ಇದನ್ನೆಲ್ಲಾ ಒತ್ತಿ ಹೇಳಬೇಕಾದ ಅವಶ್ಯಕತೆಯಿಲ್ಲ. ಇಲ್ಲಿ ಅವರ ವ್ಯಕ್ತಿತ್ವಕ್ಕೇ ಹೆಚ್ಚು ಗಮನ ಕೊಡಲಾಗಿದೆ. ಅವರ ವಿಷಯದಲ್ಲಿ ನಾನು ಕೇಳಿರುವ ಕಥೆಗಳೆಲ್ಲವೂ ನಿಜವಾಗಿ ನಡೆದುವೆಂದು ಹೇಳಲು ಸಾಕಾದಷ್ಟು ಆಧಾರವಿಲ್ಲ; ಆದರೆ ಆ ಕಥೆಗಳೆಲ್ಲವೂ ಅವರ ಸ್ವಭಾವಕ್ಕೆ ಹೊಂದುವಂಥವೇ ಅವರನ್ನು ದಿವಾನರನ್ನಾಗಿ ನೇಮಿಸಿದ ಸರ್ಕಾರಿ ಆಜ್ಞೆ ಕೈಗೆ ಬಂದಾಗ ಅವರು ಅದನ್ನು ತಾಯಿಯ ಪಾದಗಳ ಬಳಿ ಇಟ್ಟು 'ನಮ್ಮ ಬಂಧುಗಳಲ್ಲಿ ಯಾರೊಬ್ಬರಿಗಾಗಲಿ ನೌಕರಿ ಕೊಡಬೇಕೆಂದು ನೀನು ಶಿಫಾರಸು ಮಾಡಬಾರದು; ಮಾಡುವುದಿಲ್ಲವೆಂದು ಭರವಸೆ ಕೊಟ್ಟರೆ ದಿವಾನಗಿರಿಯನ್ನು ಒಪ್ಪಿಕೊಳ್ಳುತ್ತೇನೆ' ಎಂದರಂತೆ. ಈ ಮಾತನ್ನು ಹೇಳಿದ್ದು ಅವರ ತಾಯಿಗಲ್ಲ, ಸೋದರಮಾನಿಗೆ ಎಂದೂ ಕೇಳಿದ್ದೇನೆ - ಯಾವುದು ನಿಜವೋ ತಿಳಿಯದು. ಆದರೆ ಅವರು ತಮ್ಮ ಬಂಧುಗಳಲ್ಲಿ ಯಾರೊಬ್ಬರಿಗೂ ನೌಕರಿ ಕೊಡಲಿಲ್ಲವೆಂಬುದೇನೋ ಸತ್ಯ.

ಕ್ರಮ, ಶಿಸ್ತು, ತರ್ಕಬದ್ಧವಾದ ಆಲೋಚನೆ, ನಿಷ್ಪಕ್ಷತೆ ಇವು ವಿಶ್ವೇಶ್ವರಯ್ಯನವರು ಹುಟ್ಟುಗುಣಗಳು. ಇವುಗಳಿಗೆ ಲೋಪ ಬಂದೀತೆಂಬ ಶಂಕೆಯಿಂದ ಅವರು ಯಾವ ಕೆಲಕ್ಕಾಗಲಿ ಪೂರ್ವಸಿದ್ಧತೆಯಿಲ್ಲದೆ ಕೈಹಾಕುತ್ತಿರಲಿಲ್ಲ. ಇದಕ್ಕೆ ಉದಾಹರಣೆಯಾಗಿ ಅವರ ಜೀವನದಲ್ಲಿ ನಡೆದ ಒಂದು ಸಂಗತಿಯನ್ನು ಹೇಳಬಹುದು. ಒಂದು ಬಾರಿ ಅವರು ತಮ್ಮ ತವರೂರಾದ ಮುದ್ದೇನಹಳ್ಳಿಯಲ್ಲಿ ತಂಗಿದ್ದರು. ಅಂದು ಸಂಜೆ ಹಳ್ಳಿಯ ಪ್ರಾಥಮಿಕ ಶಾಲೆಯ ಬಳಿ ಹೋಗುತ್ತಿರುವಾಗ ಶಾಲೆಯಿಂದ ಮಕ್ಕಳು ಕೇಕೆಹಾಕುತ್ತಾ, ನಗುತ್ತಾ, ಕುಣಿಯುತ್ತ ಹೊರಬಂದರು. ವಿಶ್ವೇಶ್ವರಯ್ಯನವರು ಮಕ್ಕಳ ಕುಣಿದಾಟವನ್ನು ನೋಡಿ ಮುಗುಳುನಗೆ ನಗುತ್ತಾ ಮೇಷ್ಟರನ್ನು ಕರೆದು ಹತ್ತು ರೂಪಾಯಿ ನೋಟನ್ನು ಅವರ ಕೈಲಿಟ್ಟು 'ಮಕ್ಕಳಿಗೆ ಏನಾದರೂ ತರಿಸಿಕೊಡಿ, ಬಾಯಿ ಸಿಹಿಯಾಗಲಿ' ಎಂದರು. ಇದನ್ನು ನೋಡುತ್ತಿದ್ದ ವೃದ್ಧರೊಬ್ಬರು, 'ಸ್ವಾಮಿ ಅವರಿಗೆ ಪೆಪ್ಪರ್‌ಮೆಂಟ್‌ಹಂಚಿದರೆ ಸಾಕೆ? ನಾಲ್ಕು ಬುದ್ಧಿಯ ಮಾತೂ ಅಪ್ಪಣೆಯಾಗಬೇಕು' ಎಂದರು. ಹುಡುಗರೆಲ್ಲಾ ಮತ್ತೆ ಶಾಲೆಯೊಳಕ್ಕೆ ಕರೆತಂದ್ದಾಯಿತು; ವಿಶ್ವೇಶ್ವರಯ್ಯನವರು ಐದು ನಿಮಿಷ ಮಾತನ್ನೂ ಆಡಿದರು. ಆದರೆ ಶಾಲೆಯಿಂದ ಹೊರಗೆ ಬಂದಾಗ ಅವರಿಗೆ ತಮ್ಮ ವಿಷಯದಲ್ಲೇ ವಿಪರೀತ ಅಸಮಾಧಾನ. ಎಂದೂ ಮಾಡದ ಕೆಲಸವನ್ನೂ ಅಂದು ಮಾಡಿದ್ದರು. ಪೂರ್ವ ಸಿದ್ಧತೆಯಿಲ್ಲದೆ ಭಾಷಣ ಮಾಡಿದ್ದರು! ಅವರ ದೃಷ್ಟಿಯಲ್ಲಿ ಅಕ್ಷಮ್ಯವಾದ ಈ ಅಪರಾಧಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವವರೆಗೂ ರೂಪಾಯಿ ಖರ್ಚು ಮಾಡಿ, ಮಕ್ಕಳಿಗೆ ತಿಂಡಿತೀರ್ಥಗಳನ್ನು ಹಂಚಿ, ಮತ್ತೆ ಒಂದು ಭಾಷಣ ಮಾಡಿದರು. ಅದು ಜಾಗರೂಕತೆಯಿಂದ ತಯರು ಮಾಡಿದ್ದ ಭಾಷಣ. ಮೊದಲಿನ ಭಾಷಣಕ್ಕೂ ಎರಡನೆಯದಕ್ಕೂ ವಿಷಯಸಂಪತ್ತಿನಲ್ಲೂ ಸುಸಂಬದ್ಧತೆಯಲ್ಲೂ ಏನು ವ್ಯತ್ಯಾಸವಿತ್ತೊ ತಿಳಿಯದು; ಇದ್ದರೂ ಅದು ಆ ಚಿಕ್ಕಮಕ್ಕಳ ಗಮನಕ್ಕಂತೂ ಬಂದಿರಲಾರದು. ಅವರು ಮಿಠಾಯಿ ತಿಂದು ಬಾಯಿ ಚಪ್ಪರಿಸುತ್ತಾ ಬಟ್ಟಲುಗಣ್ಣು ಬಿಟ್ಟು 'ದಿವಾನರು' ಎಂಬ ವಿಚಿತ್ರ ಅದ್ಭುತ ವ್ಯಕ್ತಿಯನ್ನು ನೋಡುತ್ತಿದ್ದರೇ ಹೊರತು ಭಾಷಣವನ್ನು ಅಷ್ಟಾಗಿ ಕೇಳುತ್ತಿದ್ದಿರಲಾರರು. ಈ ಪ್ರಸಂಗದಲ್ಲಿ ನಾವು ಗಮನಿಸಬೇಕಾದ ಅಂಶ ಇದು:

ವಿಶ್ವೇಶ್ವರಯ್ಯನವರು ಮೇಧಾವಿಗಳಾದ ಮತ್ತು ವಿಚಾರ ಪರರಾದ ಶ್ರೋತೃಗಳಿಗೆ ಎಷ್ಟು ಗೌರವ ಸಲ್ಲಿಸಬೇಕೋ ಅಷ್ಟೇ ಗೌರವನ್ನು ಆ ಹಸುಮಕ್ಕಳಿಗೂ ಸಲ್ಲಿಸಿದರು.

ಶ್ರೋತೃವರ್ಗದ ವಿಷಯದಲ್ಲಿ ಗೌರವ, ಆಲೋಚನೆಯಲ್ಲಿ ಸತ್ಯನಿಷ್ಠೆ, ಈ ಉದಾತ್ತ ಗುಣಗಳಿಗೆ ಬೆಲೆ ಕೊಡಬೇಕಾದ್ದರಿಂದ ಅವರು ಎಂಥ ಅಮುಖ್ಯ ಸಂದರ್ಭದಲ್ಲಾಗಲಿ ಪೂರ್ವ ಸಿದ್ಧತೆಯಿಲ್ಲದೆ ಮಾತಾಡಲೊಲ್ಲರು. ಆಡಿದ ಮಾತು, ಬರೆದ ಬರಹ, ಯಾವುದರಲ್ಲೂ ಸತ್ಯಕ್ಕೂ ನಿಷ್ಕೃಷ್ಟತೆಗೂ ಲೋಪ ಬರಬಾರದು. ಕೆಲವರು ಪ್ರೀತಿಜನ್ಯವಾದ ವಿಷಾದದಿಂದ, 'ಇವರು ತಮ್ಮ ಮಾತಿನಿಂದಲೂ ಬರಹದಿಂದಲೂ ಭಾಷಾಸೌಂದರ್ಯವನ್ನು ನಿರ್ಧಯರಾಗಿ ಹೊರದೂಡೂತ್ತಾರಲ್ಲ' ಎಂದು ಅತೃಪ್ತಿಗೊಂಡಿದ್ದಾರೆ. ವಿಶ್ವೇಶ್ವರಯ್ಯನವರು ಹಾಗೆ ಮಾಡುತ್ತಿದ್ದುದ್ದೇನೋ ನಿಜ: ಆದರೆ ಅದು ನಕಾರಾತ್ಮಕ ಕ್ರಿಯೆಯಲ್ಲ. ಅವರ ಉದ್ದೇಶ ಭಾಷಾ ಸೌಂದರ್ಯವನ್ನು ಹೊರ ಹಾಕಬೇಕೆಂದಲ್ಲ, ಸತ್ಯವನ್ನು ಬರಮಾಡಿಕೊಳ್ಳಬೇಕೆಂದು ಅನೇಕ ವೇಳೆ 'ಭಾಷಾಸೌಂದರ್ಯ' ಎನ್ನಿಸಿಕೊಳ್ಳುವುದು ಸತ್ಯವನ್ನು ಮರೆಸುತ್ತದೆ. ಸುಂದರವಾದ ವಾಗ್ರತ್ನಗಳ ಅಲಂಕಾರ ಮಾಡಿ ಜನರನ್ನು ಮರಳುಮಾಡುವ ಕಲೆ ನಮ್ಮಲ್ಲಿ ಸಾಕಾದಷ್ಟು ಬೆಳೆದಿದೆ! ವಿಶ್ವೇಶ್ವರಯ್ಯನವರಿಗೆ ಸತ್ಯವೇ ಸೌಂದರ್ಯ; ಆದ್ದರಿಂದ ಅದನ್ನು ಅಲಂಕರಿಸಲೊಲ್ಲರು. ಸತ್ಯ ತನ್ನ ಸತ್ಯತೆಯಿಂದಲೆ ಪ್ರಭಾವಶಾಲಿಯಾಗಬಲ್ಲುದೆಂದು ಅವರ ನಂಬಿಕೆ.

'ಡಾ. ವಿಶ್ವೇಶ್ವರಯ್ಯನವರಿಗೆ ಪ್ರಕೃತಿ ಸೌಂದರ್ಯವನ್ನು ಅನುಭವಿಸಿ ಆನಂದ ಪಡೆಯುವ ಮನೋವೃತ್ತಿಯಿಲ್ಲ' ಎಂಬ ಟೀಕೆಯನ್ನೂ ಇದೇ ದೃಷ್ಟಿಯಿಂದ ಪರಿಶೀಲಿಸಬೇಕು. ನನಗೆ ಹಿರಿಯ ಮಿತ್ರರಾಗಿ ಗುರುಸ್ಥಾನದಲ್ಲಿರುವವರೊಬ್ಬರು ವಿಶ್ವೇಶ್ವರಯ್ಯನವರನ್ನು ಬಹುಕಾಲ ದಿಂದ ಚೆನ್ನಾಗಿ ಬಲ್ಲವರು; ಕೆಲವು ಸಂದರ್ಭಗಳಲ್ಲಿ ಕೇವಲ ವಿಶ್ವಾಸಕ್ಕಾಗಿ ಅವರ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದವರು. ಅವರು ಒಂದು ಸಾರಿ ವಿಶ್ವೇಶ್ವರಯ್ಯ ನವರೊಡನೆ ಪ್ರವಾಸದಲ್ಲಿದ್ದಾಗ ಕನ್ಯಾಕುಮಾರಿಯಲ್ಲಿ ಸಂಜೆ ಬೆಳಕು ಸಮುದ್ರದ ಮೇಲೆ ಬಿದ್ದು ನಿರ್ಮಿಸಿದ ಸೌಂದರ್ಯವನ್ನು ನೋಡಿ ಭಾವಾವೇಶದಿಂದ ಬಣ್ಣಿಸತೊಡಗಿದರಂತೆ. ವಿಶ್ವೇಶ್ವರಯ್ಯನವರು ನಿಟ್ಟುಸಿರುಬಿಟ್ಟು 'ನೀವು ಕವಿಗಳಾಗಿಬಿಟ್ಟಿರಿ!' ಎಂದರು ಪ್ರಕೃತಿ ಸೌಂದರ್ಯ ಅವರ ಕಣ್ಣಿಗೆ ಕಾಣಲಿಲ್ಲವೆಂದಲ್ಲ. ಆ ಸೌಂದರ್ಯ ಅಲ್ಲಿ ಇದ್ದೇ ಇದೆ. ಅದಕ್ಕೆ ಆಭರಣ ತೊಡಿಸುವುದರಲ್ಲಿ ನಮ್ಮ ಶಕ್ತಿ ವ್ಯಯವಾಗಬೇಕೆ? ಕಮಲಕ್ಕೆ ಬಣ್ಣ ಬಳಿಯಬೇಕೆ? ಅವರು ನಿಸರ್ಗ ಸೌಂದರ್ಯವನ್ನ ಬಲ್ಲರು; ಆದರೆ ಅದರ ಮುನ್ನೆಲೆಯಲ್ಲಿ ವಿಕಟ ನೃತ್ಯ ಮಾಡುತ್ತಿರುವ ಜನಜೀವನದ ಕಷ್ಟ, ಕಾರ್ಪಣ್ಯ, ದಾರುಣತೆಗಳನ್ನೂ ಬಲ್ಲರು. ಇವು ಅವರ ಹೃದಯವನ್ನು ಶೂಲದಂತೆ ಇರಿದಿವೆ. ನಿಸರ್ಗದ ಸೌಂದರ್ಯವನ್ನು ಜನಜೀವನದಲ್ಲೂ ತರಬೇಕು; ನಮ್ಮ ಗಮನ ಹರಿಯಬೇಕಾದ್ದು ಅತ್ತಕಡೆಗೆ. ಕಲ್ಪನಾ ಪ್ರಪಂಚದಲ್ಲೂ ಭಾವಪ್ರಪಂಚದಲ್ಲೂ ಇರುವ ಆದರ್ಶವನ್ನು ವಾಸ್ತವ ಪ್ರಪಂಚದಲ್ಲಿ ಸಾಧಿಸಬೇಕೆಂದು ಹಂಬಲಿಸುವ ಕಾರ್ಯವಾಸಿಗಳ ತರ್ಕ ಹೀಗೆ ಸಾಗುವುದೇ ಸ್ವಾಭಾವಿಕ. ವಿಶ್ವೇಶ್ವರಯ್ಯನವರು ಜೋಗ್‌ಜಲಪಾತದ ಅದ್ಭತ ಸೌಂದರ್ಯದ ಮುಂದೆ ಮೊದಲಬಾರಿ ನಿಂತಾಗ ಭಾವಸಮಾಧಿಗೆ ಹೋಗಲ್ಲೊಲ್ಲದೆ 'ಎಷ್ಟೊಂದು ಶಕ್ತಿ ಪೋಲಾಗುತ್ತಿದೆ!' ಎಂದರಂತೆ (ಈ ಮಾತನ್ನು ಇತರರ ವಿಷಯದಲ್ಲಿ ಹೇಳಿದ್ದನ್ನೂ ಕೇಳಿದ್ದೇನೆ). ಈ ಕಥೆ ನಿಜವಲ್ಲದಿದ್ದರೆ ನಿಜವಾಗಬೇಕಾದದ್ದು. ವಿಶ್ವೇಶ್ವರಯ್ಯನವರಿಂದ ಹೊರಡಬೇಕಾದರೆ ಅಂಥ ಮಾತೇ. ಆ ಜಪಪಾತದ ಶಕ್ತಿಯನ್ನು ಉಪಯೋಗಕ್ಕೆ ತರಲು ಮೈಸೂರು ಸರ್ಕಾರ ಈಗ ಶ್ರಮಿಸುತ್ತಿದೆ.

ಬಡವರು ತಮಗೆ ಅವಶ್ಯಕವಾದ ಸೇವೆಯೆಲ್ಲಕ್ಕೂ ಹಣ ಸುರಿಯಬೇಕು. ಹಣಗಾರರೂ ಅಧಿಕಾರದಲ್ಲಿರುವವರೂ ಅನೇಕ ವೇಳೆ ಬಿಟ್ಟಿ ಸೇವೆಯನ್ನು ನಿರೀಕ್ಷಿಸುತ್ತಾರೆ. ಪಡೆದೂ ಪಡೆಯಿತ್ತಾರೆ. 'ಅದು ಪ್ರಭಾವಶಾಲಿಗಳಾದವರಿಗೆ ನಾವು ಸಲ್ಲಿಸಬೇಕಾದ ಕಾಣಿಕೆ, ಅವರಿಂದ ಹಣ ತೆಗೆದುಕೊಳ್ಳದಿರುವುದು ವಿವೇಕ' ಎಂಬ ಭಾವನೆ ಜನರ ಮನಸ್ಸಿನಲ್ಲಿರುವುದು ಸಾಮಾನ್ಯ. ಆದರೆ ವಿಶ್ವೇಶ್ವರಯ್ಯನವರು 'ದುಡಿದವನಿಗೆ ಪ್ರತಿಫಲ ದೊರೆಯಲೇಬೇಕು' ಎಂಬ ತತ್ವಕ್ಕೆ ವಿರೋಧವಾಗಿ ಎಂದೂ ನಡೆದವರಲ್ಲ. ಒಂದು ಬಾರಿ ಅವರು ಹಾಸನ ಜಿಲ್ಲೆಯ ಯಾವುದೋ ಸಣ್ಣ ಊರಿನ ಬಳಿ ಬಿಡಾರ ಮಾಡಿದ್ದರಂತೆ. ಕೈಬೆರಳಿಗೆ ಅಕಸ್ಮಾತ್ತಾಗಿ ಸಣ್ಣ ಗಾಯವಾಗಿ ರಕ್ತ ಬಂತು. ಹಳ್ಳಿಯ ಆಸ್ಪತ್ರೆಗೆ ಹೋಗಿ ಗಾಯದ ಮೇಲೊಂದು ಪ್ಲಾಸ್ತ್ರಿ ಹಾಕಿಸಿ, ಮರಳಿ ಬಿಡಾರಕ್ಕೆ ಬಂದೊಡನೆ ಡಾಕ್ಟರಿಗೆ ಇಪ್ಪತ್ತೈದು ರೂಪಾಯಿನ ಚೆಕ್ಕು ಕಳಿಸಿದರು. ಡಾಕ್ಟರರು ಚೆಕ್ಕನ್ನು ಹಿಡಿದುಕೊಂಡು ಓಡಿಬಂದು, 'ನನ್ನ ಕರ್ತವ್ಯಕ್ಕಿಂತ ಹೆಚ್ಚಿನದೇನನ್ನೂ ನಾನು ಮಾಡಲಿಲ್ಲ. ಈ ಚೆಕ್ಕನ್ನು ತೆಗ್ದೆದುಕೊಳ್ಳಲಾರೆ. ತಮಗೆ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿದ್ದೇ ನನಗೊಂದು ಗೌರವ' ಎಂದರು. ಅದಕ್ಕೆ

ಉತ್ತರವಾಗಿ ವಿಶ್ವೇಶ್ವರಯ್ಯನವರು ಆತನ ಕೊನೆಯ ವಾಕ್ಯಕ್ಕೆ ಹೆಚ್ಚಿನ ವ್ಯಾಪ್ತಿಯನ್ನು ಕೊಟ್ಟು, ಗಂಭೀರ ಮುದ್ರೆಯಿಂದ ಹೇಳಿದರು: 'ಹೌದು, ಯಾವ ರೋಗಿಗೇ ಆಗಲಿ, ಸೇವೆ ಸಲ್ಲಿಸಿದಾಗ ನಿಮ್ಮನ್ನು ನೀವು ಗೌರವಿಸಿಕೊಂಡಂತೆ. ನಮ್ಮೆಲ್ಲರ ಮನೋವೃತ್ತಿಯೂ ಹಾಗಿರಬೇಕೆಂದೇ ನನ್ನ ಆಸೆ. ಆದರೆ ಹಣ ಕೊಡುವ ಶಕ್ತಿಯುಳ್ಳವನು ಕೊಡಬೇಕು. ಕೊಡದಿದ್ದರೆ. ಕೊಡಲಾರದವರಿಂದ ಹಣ ಪಡೆಯುವ ಆಸೆ ನಿಮ್ಮಲ್ಲಿ ಕುದುರಬಹುದು. ನಿಮ್ಮ ಕರ್ತವ್ಯವನ್ನು ನೀವು ಪಾಲಿಸಿದ್ದೀರಿ; ನನ್ನದನ್ನೂ ಪಾಲಿಸಲು ಅವಕಾಶ ಕೊಡಿ'.

ಕೆಲವು ವೇಳೆ ಮಹಾಪುರುಷರು ಉನ್ನತವಾಗಿ ಬೆಳೆದು ವಿಶಾಲವಾಗಿ ಕೊಂಬೆಗಳನ್ನು ಹರಡಿಕೊಂಡಿರುವ ಮರಗಳಂತೆ ತಮ್ಮ ಸುತ್ತಲೂ ನೆರಳು ಚೆಲ್ಲುತ್ತಾರೆ; ಆ ನೆರಳಿನಲ್ಲಿ ಮತ್ತಾವ ಗಿಡವೂ ಬೆಳೆಯದು. ಅಂಥವರ ಪ್ರಭಾವದಿಂದಾಗಿ ಅವರ ಸುತ್ತಮುತ್ತ ಇರುವವರ ಆತ್ಮವಿಶ್ವಾಸ, ಎದೆಗಾರಿಕೆ ಮುನ್ನುಗ್ಗುವ ಶಕ್ತಿ ಇವೆಲ್ಲಾ ಕುಂದುಹೋಗಬಹುದು. ಈ ಬಗೆಯ ಲೋಪಕ್ಕೆ ಅವಕಾಶ ಕೊಡದಿರುವ ಅಪರೂಪ ವ್ಯಕ್ತಿಗಳಲ್ಲಿ ವಿಶ್ವೇಶ್ವರಯ್ಯನವರೂ ಒಬ್ಬರು. ಅವರು ತಮ್ಮ ಸುತ್ತಲೂ ಚೆಲ್ಲಿರುವುದು ನೆರಳಲ್ಲ ಬೆಳಕು. ಅವರು ಬಯಸುತ್ತಿದ್ದದ್ದು ಕುರುಡು ವಿಧೇಯತೆಯಲ್ಲ; ಆತ್ಮವಿಶ್ವಾಸವುಳ್ಳವರನ್ನೂ ಹೊಸ ಪ್ರಯೋಗಗಳನ್ನು ನಡೆಸುವ ಕೆಚ್ಚುಳ್ಳವರನ್ನೂ ಅವರು ಹುಡುಕಿಕೊಂಡು ಹೋಗುತ್ತಿದ್ದರು; ಆ ಗುಣಗಳನ್ನು ಇತರರ ಮೇಲೆ ಬಲಾತ್ಕಾರವಾಗಿ ಹೊರಿಸಿದ್ದೂ ಉಂಟು. ಮೈಸೂರು ರಾಜ್ಯದಲ್ಲಿ ಅವರ ನಂತರ ಅಧಿಕಾರಕ್ಕೆ ಬಂದು ದಕ್ಷತೆಗೂ ಪ್ರಾಮಾಣಿಕತೆಗೂ ಹೆಸರು ಪಡೆದ ದಿವಾನರಿಬ್ಬರು ಅವರೊಡನೆಯೇ ಬಹುಕಾಲ ಕೆಲಸಮಾಡಿ ಅವರಲ್ಲಿ ಭಕ್ತಿಯಿಟ್ಟಿದ್ದರು; ಅವರ ಪಾಲಿಸಿಗಳನ್ನು ಮುಂದುವರೆಸಿದವರು. ಆದರೂ ಅವಶ್ಯಕವೆಂದು ತೋರಿದಾಗ ವಿಶ್ವೇಶ್ವರಯ್ಯನವರ ಅಭಿಪ್ರಾಯಗಳನ್ನು ವಿರೋಧಿಸುವ ಧೈರ್ಯ ಅವರಲ್ಲಿ ಬೆಳೆದಿತ್ತು; ಪ್ರಾಮಾಣಿಕ ವಿರೋಧಕ್ಕೆ ಗೌರವ ಕೊಡುವ ಔನ್ನತ್ಯ ವಿಶ್ವೇಶ್ವರಯ್ಯನವರಲ್ಲಿತ್ತು. ಆತ್ಮವಿಶ್ವಾಸವನ್ನು ಅವರು ಹೇಗೆ ಬೆಳೆಸುತ್ತಿದ್ದರೆಂಬುದಕ್ಕೆ ಉದಾಹರಣೆಯಾಗಿ ಒಂದು ಪ್ರಸಂಗವನ್ನು ಇಲ್ಲಿ ಕಾಣಿಸಬಹುದು. ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಬ್ಲಾಸ್ಟ್‌ಫರ್ನೇಸಿನ ಮೇಲ್ವಿಚಾರಣೆಗೆ ಅಂಮೇರಿಕದವರರೊಬ್ಬರನ್ನು ನೇಮಿಸಿದ್ದರು. ಆತನ ಅಧಿಕಾರಾವಧಿ ಮುಗಿದೊಡನೆ ವಿಶ್ವೇಶ್ವರಯ್ಯನವರು ಅವರನ್ನು ಗೌರವದಿಂದ ಕಳಿಸಿಕೊಟ್ಟು, ಮೈಸೂರಿನವರೊಬ್ಬರನ್ನು ಕರೆದು 'ಈ ಕೆಲಸವನ್ನು ನೀವು ವಹಿಸಿಕೊಳ್ಳಿ' ಎಂದರು. ಆ ಯುವಕನಿಗೆ ಅನಿರೀಕ್ಷಿತವಾಗಿ ಈ ಸನ್ಮಾನ ದೊರೆತದ್ದು ಆಶ್ಚರ್ಯವನ್ನುಂಟು ಮಾಡಿತು. ಯಾಂತ್ರಿಕ ವಿಷಯಗಳಲ್ಲಿ ದಕ್ಷತೆಯಿರುವುದೆಂದರೆ ಬಿಳಿಯರಲ್ಲಿ ಮಾತ್ರ ಎಂದು ಜನ ನಂಬಿದ್ದ ಕಾಲ! ಆತ 'ನನ್ನ ಕೈಲಾದಷ್ಟು ನಿಷ್ಠೆಯಿಂದ ಕೆಲಸ ಮಾಡುತ್ತೇನೆ. ನನಗೆ ಈ ಕೆಲಸಕ್ಕೆ ಬೇಕಾದಷ್ಟು ಶಕ್ತಿಯಿದೆಯೋ ಇಲ್ಲವೋ ಕಾಣೆ' ಎಂದು ನಮ್ರನಾಗಿ ತಡವರಿಸಿದ. ವಿಶ್ವೇಶ್ವರಯ್ಯನವರ ಉತ್ತರ ಸ್ವಲ್ಪ ನಿಷ್ಠುರವಾಗಿಯೇ ಬಂತು: 'ನಿಮಗೆ ಶಕ್ತಿಯಿದೆಯೆ ಅಂತ ನಾನು ಕೇಳುತ್ತಿಲ್ಲ, ಇದೆ ಅಂತ ಹೇಳುತ್ತಿದ್ದೇನೆ'.

'ವಿಶ್ವೇಶ್ವರಯ್ಯನವರಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಹೆಚ್ಚಾಯಿತಲ್ಲವೆ?' ಎಂಬ ಸಂದೇಹವನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ನಮ್ಮ ಜೀವಸಂಪತ್ತನ್ನು ಹೆಚ್ಚಿಸಲು ನೆರವಾಗುವ ಅಂಶಗಳು ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಕಂಡುಬಂದಾಗ ಅವನ್ನು ಸ್ವೀಕರಿಸಲು ವಿಶ್ವೇಶ್ವರಯ್ಯನವರು ಹಿಂದೆಗೆಯುತ್ತಿರಲಿಲ್ಲ. ಏಕೆ ಹಿಂದೆಗೆಯಬೇಕು? ಆದರೆ ಅವರ ಜೀವನಕ್ಕೆ ತಳಹದಿಯಾಗಿದ್ದದ್ದು ಭಾರತದ ಸಂಸ್ಕೃತಿಯಲ್ಲವೆಂದು ಭಾವಿಸಿದರೆ ಅದು ತಪ್ಪು. ಅವರಿಗೆ ಪಾಶ್ಚಾತ್ಯರ ದಿರಸನ್ನು ಕಂಡರೆ ಅಭಿಮಾನವೇನೋ ಉಂಟು. ಅದು ನೀಟಾಗಿರುತ್ತದೆ, ಅತ್ತ ಇತ್ತ ಹಾರಾಡುವುದಿಲ್ಲ, ಕೈ ಕಾಲುಗಳ ಚಲನೆಗೆ ಅಡ್ಡಿಯಾಗುವುದಿಲ್ಲ. ಆದರೆ ಮನೆಯಲ್ಲಿ ಊಟಕ್ಕೆ ಕುಳಿತುಕೊಳ್ಳುವಾಗ ಅವರು ಪಂಚೆಯನ್ನೇ ಉಡುತ್ತಿದ್ದರಂತೆ. ಕೈಗಾರಿಕೆಗಳನ್ನು ಬೆಳೆಸಿಕೊಳ್ಳದಿದ್ದರೆ ಭಾರತಕ್ಕೆ ಉಳಿಗಾಲವಿಲ್ಲವೆಂಬುದನ್ನು ಅವರಿಗಿಂತ ಚೆನ್ನಾಗಿ ಮನಗಂಡವರಿಲ್ಲ, ಆದರೆ ಅವರು ಪ್ರಯಾಣ ಹೊರಟಿದ್ದಾಗ ಅವರ ಸೂಟ್‌ಕೇಸಿನಲ್ಲಿ ಭಗವದ್ಗೀತೆಯ ಪ್ರತಿ ಇದ್ದದ್ದನ್ನುಉ ಮಿತ್ರರೊಬ್ಬರು ಕಂಡಿದ್ದಾರೆ. ಕೊನೆಯವರೆಗೂ ಅವರ ಮನೆಯಲ್ಲಿ ಉಪಾಕರ್ಮ ಮೊದಲಾದ ಹಬ್ಬಗಳು ಒಂದು ಮಿತಿಯಲ್ಲಿ - ಅವರಿಗಿದ್ದ ಕಾಲಾವಕಾಶದ ಮಿತಿಯಲ್ಲಿ - ಆಚರಣೆಯಲ್ಲಿದ್ದವೆಂದು ಕೇಳಿದ್ದೇನೆ. ಅವರು ಇಹಜೀವನಕ್ಕೆ ತಿರಸ್ಕಾರ ಹಾಕಿ ಆಧ್ಯಾತ್ಮಿಕ ಜೀವನವೊಂದನ್ನೇ ಗಗನಕ್ಕೆ ಏರಿಸುತ್ತಿರಲಿಲ್ಲ ನಿಜ. ಆದರೆ, ನಮ್ಮ ಉಪನಿಷತ್ತುಗಳು ತಾನೆ ಹಾಗೆ ಮಾಡುತ್ತವೇನು? ಕಾಯಕದ ಹಿರಿಮೆ, ಕರ್ತವ್ಯ ನಿಷ್ಠೆ ಸರ್ವರಿಗೂ ಸಂಪದ್ಯುಕ್ತವಾದ ಪೂರ್ಣಜೀವನ - ಇಂಥ ಆದರ್ಶಗಳನ್ನು ನಂಬಿದ್ದ ವಿಶ್ವೇಶ್ವರಯ್ಯನವರು ಉಪನಿಷತ್ತುಗಳ ಶ್ರುತಿಗೆ ಹೊಂದುವಂಥ ಜೀವನವನ್ನು ನಡೆಸುತ್ತಿದ್ದರೆಂದು ಧಾರಾಳವಾಗಿ ಹೇಳಬಹುದು.

ಅಸ್ಪಷ್ಟವಾದ, ಜೀವನದ ಸಂಬಂಧವನ್ನು ಕಡಿದುಕೊಂಡಿರುವ, ನಿಷ್ಫಲ ಅನುಭಾವವು 'ನಾನೇ ಭಾರತದ ಅಂತರಾತ್ಮ' ಎಂದು ಅನೇಕವೇಳೆ ಸೋಗುಹಾಕುತ್ತದೆ. ಈ ಬಗೆಯ ಅನುಭಾವ ವಿಶ್ವೇಶ್ವರಯ್ಯನವರಿಗೆ ಹಿಡಿಸದು.

'ವಿಶ್ವೇಶ್ವರಯ್ಯ: ವ್ಯಕ್ತಿ ಮತ್ತು ಐತಿಹ್ಯ' ಈ ದ್ವೈತ ಸಲ್ಲದು; ಅವರ ಮಟ್ಟಿಗೆ 'ವ್ಯಕ್ತಿಯೇ ಐತಿಹ್ಯ, ಐತಿಹ್ಯವೇ ವ್ಯಕ್ತಿ' ಎನ್ನಬಹುದು.

**ಲೇಖಕರು**

ಅಕ್ಕಿಹೆಬ್ಬಾಳು ನರಸಿಂಹ ಮೂರ್ತಿರಾವ್(೧೯೦೦) ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್‌ಪ್ರೊಫೆಸರ್‌ಆಗಿದ್ದವರು. ಕನ್ನಡದ ಲಲಿತ ಪ್ರಬಂಧಗಳಲ್ಲಿ ಅವರಷ್ಟು ಎತ್ತರದ ಸಾಧನೆ ಮಾಡಿದವರಿಲ್ಲ. ಬಹಳ ಸುಂದರವಾದ ಸರಸಪೂರ್ಣವಾದ ಗದ್ಯವನ್ನು ಬರೆದ ಮೂರ್ತಿರಾಯರು 'ಹಗಲುಗನಸುಗಳು', 'ಅಲೆಯುವ ಮನ', 'ಮಿನುಗುಮಿಂಚು' ಮುಂತಾದ ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ 'ಪತ್ರಗಳು ಚಿತ್ರಗಳು' ಕೃತಿಗೆ ೧೯೭೯ರಲ್ಲಿ ಕೇಂದ್ರ ಸಾಹಿತ್ಯ ಆಕಾಡೆಮಿ ಬಹುಮಾನ ಬಂದಿದೆ. ಕನ್ನಡದಲ್ಲಿ ಶಿವರಾಮ ಕಾರಂತರಂತೆ ಮೂರ್ತಿರಾಯರು ಕೂಡ ನಾಸ್ತಿಕವಾದಿ ಚಿಂತನೆಯ ಪ್ರತಿಪಾದಕರು. ಅವರು ಬರೆದ 'ದೇವರು' ಪುಸ್ತಕವು ಬಹಳ ಚರ್ಚೆಗೆ ಒಳಗಾಗಿದೆ. ಅವರ ಪ್ರವಾಸ ಕಥನದ ಹೆಸರು 'ಅಪರವಯಸ್ಕನ ಅಮೆರಿಕಾ ಯಾತ್ರೆ' ಕನ್ನಡದಲ್ಲಿ ನೂರುವರ್ಷಕ್ಕೂ ಮೀರಿದ ಸುದೀರ್ಘ ಬಾಳುವೆ ಮಾಡಿದ ಲೇಖಕರಲ್ಲಿ ಒಬ್ಬರಾಗಿರುವ ಮೂರ್ತಿರಾಯರು, 'ಸಂಜೆಗಣ್ಣಿನ ಹಿನ್ನೋಟ' ಎಂಬ ಆತ್ಮಚರಿತ್ರೆಯನ್ನು ಬರೆದಿದ್ದಾರೆ. ಮೂರ್ತಿರಾಯರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ೧೯೮೪ರಲ್ಲಿ ಕೈವಾರದಲ್ಲಿ ನಡೆದ ೫೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಈ ವ್ಯಕ್ತಿಚಿತ್ರವನ್ನು ಅವರ 'ಸಮಗ್ರ ಲಲಿತಪ್ರಬಂಧಗಳು' ಎಂಬ ಸಂಕಲನದಿಂದ ಆರಿಸಿಕೊಳ್ಳಲಾಗಿದೆ. ಇಲ್ಲಿ ಲೇಖಕರು ಸರ್‌ಎಂವಿ ಬಗ್ಗೆ ಜನರಲ್ಲಿರುವ ನೆನಪಿನ ಪ್ರಸಂಗಗಳನ್ನು ಇಟ್ಟುಕೊಂಡು, ಕರ್ನಾಟಕ್ಕೆ ಅವರು ಮಾಡಿದ ಸೇವೆಯನ್ನು ಚಿತ್ರಿಸಿದ್ದಾರೆ. ಅವರ ಬಗ್ಗೆ ಇರುವ ಕೆಲವು ಟೀಕೆಗಳಿಗೆ ಉತ್ತರಿಸಲು ಯತ್ನಿಸಿದ್ದಾರೆ.

**ಪದಕೋಶ**

ನಿಷ್ಕೃಷ್ಟತೆ = ಖಚಿತೆ, ವಾಗ್ರತ್ನ = ಮಾತಿನ ರತ್ನ, ಪ್ಲಾಸ್ತ್ರಿ =ಬ್ಯಾಂಡೇಜು, ದ್ವೈತ ವಿಭಜನೆ =ಎರಡುತನ, ಐತಿಹ್ಯ = ದಂತಕತೆಯಾಗಿ ಹರಡಿರುವ ಘಟನೆ

**ಟಿಪ್ಪಣಿ**

ದಿವಾನ ಪದವಿಗೆ ರಾಜಿನಾಮೆ ಪ್ರಸಂಗ ಹಿಂದುಳಿದ ವರ್ಗಗಳಿಗೆ ಸರಕಾರಿ ಕೆಲಸಗಳಲ್ಲಿ ಮೀಸಲಾತಿ ನೀಡುವ ಕುರಿತು ಮೈಸೂರಿನ ದೊರೆಗಳಾದ ನಾಲ್ವಡಿ ಕೃಷ್ಣರಾಜ ಒಡೆಯರು, ಮಿಲ್ಲರ್‌ಆಯೋಗ ನೇಮಿಸಿ ಪಡೆದ ವರದಿಯನ್ನು ಜಾರಿ ತರಬೇಕೆಂದು ಬಯಸಿದರು. ಇದಕ್ಕೆ ಸರ್‌ಎಂವಿ ಅವರ ವಿರೋಧವಿತ್ತು. ಹೀಗೆ ಮಾಡುವುದರಿಂದ ಪ್ರತಿಭೆಗೆ ಅನ್ಯಾಯ ಮಾಡಿದಂತಾಗುತ್ತದೆ ಎಂದು ಅವರು ಭಾವಿಸಿದ್ದರು. ಆದರೆ ಒಡೆಯರು ಮಿಲ್ಲರ್‌ವರದಿ ಜಾರಿಗೆ ತರಲು ನಿರ್ಧರಿಸಿದಾಗ ವಿಶ್ವೇಶ್ವರಯ್ಯನವರು ತಾತ್ವಿಕ ಕಾರಣ ನೀಡಿ ರಾಜಿನಾಮೆ ಕೊಟ್ಟರು.

**ಪ್ರಶ್ನೆಗಳು**

೧. ವಿಶ್ವೇಶ್ವರಯ್ಯನವರನ್ನು ಕುರಿತು ಪ್ರಯಾಣಿಕನೊಬ್ಬ ಮಾಡಿದ ಉದ್ಗಾರವು ಲೇಖಕರಿಗೆ ಯಾಕೆ ನಿಜವೆನಿಸಿತು?
೨. ಕರ್ನಾಟಕದ ಅಭಿವೃದ್ಧಿಗೆ ವಿಶ್ವೇಶ್ವರಯ್ಯನವರು ಮಾಡಿದ ಮುಖ್ಯ ಕೆಲಸಗಳು ಯಾವುವು?
೩. ದಿವಾನ ಪದವಿ ಬಂದಾಗ ವಿಶ್ವೇಶ್ವರಯ್ಯನವರು ತಮ್ಮ ತಾಯಿಗೆ ಹೇಳಿದ ಮಾತೇನು?

೪. ದಿವಾನರಾಗಿ ವಿಶ್ವೇಶ್ವರಯ್ಯನವರು ರಾಜಿನಾಮೆ ಕೊಡಬೇಕಾದ ಹಿನ್ನೆಲೆ ಯಾವುದು. ಈ ಕುರಿತು ನಿಮ್ಮ ಅಭಿಪ್ರಾಯವೇನು?

೫. ವಿಶ್ವೇಶ್ವರಯ್ಯನವರಿಗೆ ಪ್ರಕೃತಿ ಸೌಂದರ್ಯ ಸವಿಯುವ ಪ್ರಜ್ಞೆ ಇರಲಿಲ್ಲ ಎಂಬುದಕ್ಕೆ ಲೇಖಕರು ಕೊಡುವ ವಿವರಣೆ ಯಾವುದು?

೬. ವಿಶ್ವೇಶ್ವರಯ್ಯನವರು ತಮ್ಮ ಕೈಕೆಳಗೆ ಕೆಲಸ ಮಾಡುವವರಲ್ಲಿ ಆತ್ಮವಿಶ್ವಾಸ ತುಂಬುತ್ತಿದ್ದ ರೀತಿಯನ್ನು ವಿವರಿಸಿ?

೭. ವಿಶ್ವೇಶ್ವರಯ್ಯನವರ ಮೇಲಿದ್ದ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಕುರಿತಂತೆ ಲೇಖಕರ ಅಭಿಪ್ರಾಯವೇನು?

**ಪೂರಕ ಓದು**

೧. ಡಿವಿಜಿ ಅವರು ವಿಶ್ವೇಶ್ವರಯ್ಯನವರನ್ನು ಕುರಿತು 'ಜ್ಞಾಪಕಚಿತ್ರಶಾಲೆ ಸಂಪುಟ ೪' ರಲ್ಲಿ ಬರೆದಿರುವ ಲೇಖನ.

೨. ಪಿ ಲಂಕೇಶ್‌ಅವರು 'ಟೀಕೆಟಿಪ್ಪಣಿ ಸಂಪುಟ ೨' ರಲ್ಲಿ ಬರೆದಿರುವ 'ಇಂದಿನ ಭ್ರಷ್ಟವಾತಾರಣದಲ್ಲಿ ಸರ್‌ಎಂವಿ ನೆನಪು' ಲೇಖನ.

## ೩. ದೋಣಿ, ಹರಿಗೋಲುಗಳಲ್ಲಿ

ನೆಲ, ಜಲ, ವಾಯು ಸಂಚಾರಗಳಲ್ಲಿ ಒಂದೊಂದರ ಸೊಗಸು ಒಂದೊಂದಕ್ಕಿದೆ. ಜೀವನದ ಹೆದರಿಕೆ ಇರುವವನಿಗೆ ವಾಯುಸಂಚಾರ ಸ್ವಪ್ನದಲ್ಲೇ ಒಳ್ಳೆಯದು. ಬೆನ್ನುಲುಬಿನ ಆಸೆ ಇರುವವನಿಗೆ ನಮ್ಮ ಮುರುಕಲು ರಸ್ತೆಗಳ ಪ್ರಯಾಣವೂ ಬೇಡ; ರೈಲಿನ ನುಗ್ಗಾಟವೂ ಬೇಡ. ಸುಖಸಂತೋಷಗಳಿಗೆ ಹೇಳಿಸಿದ್ದು ಜಲಯಾನ. ನೀವು ಸಪ್ತಸಾಗರಗಳನ್ನೇ ದಾಟಿಹೋಗಿ, ಊರಿನ ಹೊಳೆಯಲ್ಲಿ ತೇಲಿ ಹೋಗಿ, ಬೆನ್ನಿನ ಸೌಖ್ಯಕ್ಕೂ ಅದೇ ಬೇಕು; ಕಣ್ಣಿನ ಸುಖಕ್ಕೂ ಅದೇ ಬೇಕು. ಸಾಗರ ಯಾನದ ಯೋಗ ಎಷ್ಟು ಮಂದಿಗಿರುತ್ತದೆ? ಆದರೆ; ನದೀಯಾನದ ಭೋಗ ನಾವು, ನೀವು ಎಲ್ಲರೂ ಉಣ್ಣ ಬಹುದಾದುದು. ವರ್ಷಕ್ಕೊಮ್ಮೆ ಸ್ನಾನ ಮಾಡುವವರಿಗೆ ನದಿಯೆಂದರೆ ಹೆದರಿಕೆಯಾದೀತು. ನಿತ್ಯ ಮೀಯುವವನಿಗೆ ನೀರಿನ ಭಯ ಬರಲಾರದಷ್ಟೆ. ಅದರಲ್ಲೇ ತೇಲಿ ಹೋಗುವ ಸುಖ, ನಾವು ಅನುಭವಿಸಬಹುದಾದ ಮಾನವೀ ಸುಖಗಳಲ್ಲಿ ಅತ್ಯುತ್ತಮವಾದುದು.

ನಾನು ಎಳೆಯನಾಗಿದ್ದಾಗ, ಒಂದು ರಾತ್ರಿ ಕಲ್ಯಾಣಪುರ ಎಂಬಲ್ಲಿ, ಹೊಳೆಯಲ್ಲಿ ದೋಣಿಯ ಮೇಲೆ ಕುಳಿತುಕೊಂಡೆ. ಬೆಳಿಗ್ಗೆ ಎದ್ದುದ್ದು ನಮ್ಮೂರಿನ ಕಡವು ಮಣೂರಿನಲ್ಲಿ, ಎಂಟು ಘಂಟೆಗೆ ಹೋದದ್ದು ಹತ್ತೇ ಮೈಲು. ಸಾಮಾನ್ಯ ದೋಣಿಯಲ್ಲಿ ಕುಳಿತರೆ ತಾಸಿಗೆ ಎರಡು ಮೈಲು ಹೋಗಬಹುದು. ಅವಸರವಿದ್ದ ಪ್ರಾಣಿಗೆ ಅದು ಹೇಳಿದ ಕ್ರಮವಲ್ಲ. ಆತ ತಂತಿಯಲ್ಲೋ, ವಾಯರ್‌ಲೆಸ್ಸಿನಲ್ಲೋ ಪ್ರಯಾಣ ಬೆಳಸಬಹುದು, ನಿಮಗೆ ವಿರಾಮ ವಿದ್ದದ್ದಾದರೆ, ನಿಮಿಷ ನಿಮಿಷಕ್ಕೂ ಸುಖ ಉಂಡು, ಹೋಗಬಹುದಾದ ಪಯಣವಿದು. ಆ ದಿನ ನಾನು, ದೋಣಿಯಲ್ಲಿ ಚಾಪೆ ಹಾಸಿ, ನಿದ್ದೆ ಬರುವಾಗ ಒರಗುವುದಕ್ಕೆ ದಿಂಬನ್ನಿಟ್ಟುಕೊಂಡು, ದೋಣಿಯ ಬಾನಿಗೆ ಒರಗಿ ಕುಳಿತುಕೊಂಡೆ. ಅದು ತೊಳೆ ದೋಣಿಯಲ್ಲ; ಜಲ್ಲೆಗಳಿಂದ ಒತ್ತುವ ದೋಣಿ. ಮಾಡು, ಮುಚ್ಚುಮರೆಗಳಿರಲಿಲ್ಲ. ಅದಕ್ಕೇನೆ ರಾತ್ರಿಯ ಪಯಣ ಆರಿಸಿದ್ದು. ನೀಲಬಾನಿಗಿಂತ ದೊಡ್ಡ ಮಾಡು ಯಾವುದು? ಒಂದಲ್ಲ, ಎರಡಲ್ಲ; ಸಾವಿರಾರು ಚುಕ್ಕಿಗಳು ಮೇಲಿಂದ ಮಿನುಗುತ್ತಿರುತ್ತವೆ. ಸಾಲದುದಕ್ಕೆ ತಿಂಗಳು ಮಾಮ ಮೂಡಣದಲ್ಲಿ ತಲೆ ಎತ್ತಿ ಮೇಲಕ್ಕೆ ಬಂದನೇ ಬಂದ. ಅವನ ಬೆಳಕಿಗೆ ನಗು, ನದಿಯ ಅಲೆಗಳಲ್ಲಿ ಮಿನುಗತೊಡಗಿತು. ಸಾವಿರ ಜನರು ಒಮ್ಮೆಗೇ ಹಲ್ಲುಕಿಸಿದರು, ನಿಷ್ಕಪಟವಾಗಿ ನಕ್ಕ ಹಾಗೆ, ನದಿಗೆ ನದಿಯೇ ನಗತೊಡಗಿತು. ದೋಣಿ ದಡ ಬಿಟ್ಟು ಹೊರಟಿತು. ಇಕ್ಕಡೆಯ ತೆಂಗಿನ ತೋಟಗಳು ತೂಕಡಿಸುತ್ತ, ನಿದ್ರೆ ಮಾಡುತ್ತ ನಿಂತಿದ್ದವು. ದೋಣಿಯ ಜಲ್ಲು ನಿರನ್ನು ಹೊಕ್ಕು, ಮೇಲೇಳುವಾಗ ಅದರ ಉಲಿಯೇ ಬೇರೆ. ಆ ಪುಟ್ಟ ದೋಣಿ ನೀರನ್ನು ಸೀಳಿಕೊಂಡು ಮೀನಿನ ಹಾಗೆ ಓಡುವಾಗ ಅದರ ಲಾಸ್ಯವೇ ಬೇರೆ. ತಂಪಾದ ಹವೆ, ಸೊಂಪಾದ ನೋಟ, ಬಾನು ನೀರುಗಳ ಅನುಪಮ ಮೇಳ ಇದು. ಬಾನನ್ನು ನೋಡುತ್ತಾ ಕುಳಿತರೆ, ಒಂದೋಂದೇ ನಕ್ಷತ್ರ ಸಿಡಿದು ಬೀಳುವುದೂ ಕಾಣುತ್ತದೆ. ನಕ್ಷತ್ರವಲ್ಲ; ನ್ಯಾಯವಾಗಿ ಉಲಕೆ ಅನ್ನುತ್ತಾರೆ ಅದನ್ನು. ಅಜ್ಜಿಯ ಕತೆ ಬೇರೆಯೇ ಹೇಳುತ್ತದೆ ಆ ವಿಷಯವಾಗಿ. 'ಸ್ವರ್ಗವನ್ನೇರಿದ ಆತ್ಮಗಳು ನಕ್ಷತ್ರಗಳಾಗಿದ್ದು, ತಮ್ಮ ಪುಣ್ಯ ಖರ್ಚಾಗುತ್ತಲೇ, ಕೆಳಕ್ಕೆ ಬಿದ್ದು, ನರಕಕ್ಕೆ ಹೋಗುತ್ತವೆ' ಎಂದು ಆ ಒಂದು ರಾತ್ರಿ ನಾನು ಹತ್ತಿಪ್ಪತ್ತು ಜೀವರುಗಳ ಪುಣ್ಯ

ಖರ್ಚಾಗಿ, ಅವರು ಬಿದ್ದದ್ದನ್ನು ನೋಡಿದೆ. ಆದರೆ, ನನ್ನ ಪುಣ್ಯ ಖರ್ಚಾಗಿ ಕಂಡದ್ದು, ನಾನು ದೋಣಿಯಿಂದ ಇಳಿಯಬೇಕಾಗಿ ಬಂದಾಗ ಮಾತ್ರ. ನಿದ್ದೆ ಬರಲಿ, ಬಾರದಿರಲಿ; ಮನಸ್ಸಿಗೆ ದೊರೆಯುವ ಜಲಯಾನದ ಶಾಂತಿ ಚಿರಸ್ಮರಣೀಯವಾದದ್ದು. ಇದೆಲ್ಲ ನನ್ನ ಎಳೆತನದ ಊಹೆ ಎಂದಿಟ್ಟುಕೊಂಡಿದ್ದೆ. ನಿಜಕ್ಕೂ ಹಾಗಲ್ಲ.

ಇನ್ನೊಮ್ಮೆ ನಾನು, ಬೆಳೆದು ಬುದ್ಧಿ ಬಾರದಿದ್ದರೂ, ಮೀಸೆ ಬಂದ ಮೇಲೆ ಹೊನ್ನಾವರದಿಂದ, ಗೆರಸೊಪ್ಪೆಯ ತನಕ ಹದಿನೆಂಟು ಮೈಲು ದೂರ - ನದಿಯಲ್ಲಿ ಹೋಗಿ ಬಂದಿದ್ದೆ. ಮಧ್ಯಾಹ್ನ ಹೊನ್ನಾವರ ಬಂದರದಲ್ಲಿ ಮೂರು ಘಂಟೆಯ ಹೊತ್ತಿಗೆ ದೋಣಿಯಲ್ಲಿ ಕುಳಿತೆ. ಹೊನ್ನಾವರದೆ ಹೊಳೆಯ ಅಗಲ ತುಂಬ ಜಾಸ್ತಿ. ಕಡಲಿಗೆ ನದಿ ಸಂಗಮವಾಗುವ ಸ್ಥಳ ಅದು. ಅಲೆಗಳ ಹೊಡೆತ ಹೆಚ್ಚು; ಮೇಲಿನ ಬಿಸಿಲು ಜೋರಾಗಿಯೇ ಇತ್ತು. ಆದರೆ, ಒಮ್ಮೆ ದೋಣಿಯಲ್ಲಿ ಕುಳಿತ ಮೇಲೆ, ದೋಣಿಗೆ ಹಾಕಿದ ಮಾಡಿನ ಒಳಗೆ ಕುಳಿತುಕೊಳ್ಳುವ ಆಸೆ ನನಗಾಗಲಿಲ್ಲ. ಉಯ್ಯಾಲೆಯ ತೂಗಾಟ ಸುಳ್ಳು, ದೋಣಿಯ ಓಲಾಟ ನಿಜ; ತೇಲಾಡುತ್ತಲೇ ಇತ್ತು ನಮ್ಮ ದೋಣಿ. ಚಿಕ್ಕಪುಟ್ಟ ಅಲೆಗಳು ಅದರ ಬಾಣಿಗೆ ಬಡಿಯುತ್ತಲೇ ಇದ್ದುವು. ದೋಣಿಯವ ಅದರ ಹಾಯಿ ಬಿಡಿಸಿದ, ಚಿಕ್ಕಾಣಿ ಹಿಡಿದು, ಭೂಪಾತಿರಂಗನ ಹಾಗೆ ಅದರ ಹಿಂಗೋಟಿನ ಮೇಲೆ ಹೋಗಿ ಕುಳಿತ. ದೊಡ್ಡ ದೋಣಿ ಹೊರಟೇ ಬಿಟ್ಟಿತು. ನಮ್ಮೂರ ಜಟಕಾ ಗಾಡಿಯ ವೇಗ ಮೀರಿಸುವ ವೇಗದಲ್ಲಿ ಹೊರಟಿತು. ಹುರುಳಿ ಹಾಕಿದ್ದಿಲ್ಲ; ಪೆಟ್ರೋಲ್‌ತುಂಬಿಸಿದ್ದಿಲ್ಲ. ದೋಣಿಕಾರನ ರಟ್ಟೆಗೂ ದಣಿಲ್ಲ. ಹಾಯಿಬಟ್ಟೆಯ ಹೊಟ್ಟೆಗೆ, ಪಡುವಣ ಗಾಳಿ ರುಮು, ರುಮು ಬಡಿದದ್ದೇ ತಡ - ನೀರನ್ನು ಸೀಳಿಕೊಂಡು, ದೋಣಿ ಸಾಗಿಯೇ ಬಿಟ್ಟಿತು. ಆ ನೀರೋ ಏನೇನು ಬಣ್ಣ ಬೇಕು ಅದರಲ್ಲಿ. ಕಡುನೀಲದಿಂದ ಹಿಡಿದು, ಕಡು - ಹಸುರಿನ ತನಕ ಎಲ್ಲವೂ ಇವೆ. ದಡದ ಗುಡ್ಡ, ತೆಂಗಿನ ತೋಟ, ಬಾನು, ಮುಗಿಲು ಇವ್ವೆಲ್ಲವುಗಳ ಬಣ್ಣ, ಬೆಡಗುಗಳನ್ನು ನೀರು ಬಿಂಬಿಸುತ್ತಿತ್ತು. ತಾನೂ ಹೊಳೆಯುತ್ತಿತ್ತು. ದಂಡೆಗೆ ಮುಖ ಮಾಡಿದರೆ, ಎರಡೆರಡು ದಂಡೆಗಳು! ನದಿಯ ಇಬ್ಬದಿಗಳಲ್ಲಲ್ಲ ಒಂದೇ ಕಡೆಯಲ್ಲಿ ಎರಡು ದಂಡೆಗಳು. ಮಗ್ಗುಲ ದಂಡೆ ಹೇಗೂ ಇದೆಯಲ್ಲ; ಅದರ ಕೆಳಗೆ ನೀರಲ್ಲಿ ತಲೆಕೆಳಗಾಗಿ ಕಾಣಿಸುವ ನೆಲ, ಗುಡ್ಡ, ಗಿಡಮರಗಳ ಸೊಬಗು, ಸೃಷ್ಟಿ ಸೌಂದರ್ಯದ ಮುಖಕ್ಕೆ ಕನ್ನಡಿ ಹಿಡಿದ ಹಾಗಿತ್ತು. ಸಂಜೆಯಾದ ಹಾಗೆ ದೋಣಿ ಹೋಗುತ್ತಲೇ ಇತ್ತು. ತೆಂಗಿನ ತೋಟಗಳನ್ನು ಹಾದು, ನೀರಿನ ನಡುಗುಡ್ಡೆಗಳನ್ನು ಹಿಂದಕ್ಕೆ ಬಿಟ್ಟು, ಸಾಗುತ್ತಲೇ ಇತ್ತು. ಮುಂದೆ, ಮುಂದೆ ಹೋದಂತೆ ಗುಡ್ಡಗಾಡುಗಳ ಸೊಬಗೆಲ್ಲ, ಚಿತ್ರಪಟ ಹಿಡಿದ ಹಾಗೆ ಕಣ್ಣೆದುರಿಗೆ ಬರುತ್ತಲೇ ಇತ್ತು. ಸಂಜೆಯಾಗುತ್ತ ಬಂದಂತೆ ಸೃಷ್ಟಿಯ ಬಣ್ಣ ಬೇರೆಯಾಯಿತು. ಎಲ್ಲೆಲ್ಲೂ ಹೊಂಬಣ್ಣ, ಚೆಂಬಣ್ಣಗಳು! ಮುಳುಗುವ ಸೂರ್ಯನ ಬೆಡಗನ್ನು ನೋಡಬೇಕಾದರೆ, ನದೀಯಾನದ ವೇಳೆಯಲ್ಲೇ ನೋಡಬೇಕು. ನಾವು ಗೆರಸೊಪ್ಪೆ ಊರು ಸೇರಿದ್ದು ಕತ್ತಲಾಗುವಾಗ, ಅಲ್ಲಿಂದ ಮುಂದೆ, ಹದಿನೆಂಟು ಮೈಲು ನಡೆದು ಜೋಗಿಗೆ ಹೋದೆವು. ಹಾಗೆ ಜಲಪಾತ ಕಂಡೆವು. ನೀರು ಬೀಳುವ ನೋಟ ಕಂಡೆವು. ಆ ಕಡೆಯಿಂದ ಜನ ಅದನ್ನು ಗೆರಸೊಪ್ಪೆಯ 'ಧಬೆಧಬೆ' ಅನ್ನುತ್ತಾರೆ. ಗೆರಸೊಪ್ಪೆ ಜಲಪಾತ ಬೀಳುವ ತಾಣಕ್ಕಿರುವ ಹೆಸರು ಅದು. ಹೆಚ್ಚಿನ ಶಬ್ಧ ಕೇಳಿ 'ಧಬಧಬಾ' ಅಂದಿರಬೇಕು ಜನ ಆದರೆ ಗೆರಸೊಪ್ಪೆ ಊರಲ್ಲೇ ಕುಳಿತರೆ, ನದಿಯ 'ಧಬಧಬಾ' ಇಲ್ಲವೇ ಇಲ್ಲ. ಎಷ್ಟು ಪ್ರಶಾಂತ ನದಿಯದು! ಮರುದಿನ ರಾತ್ರಿ ಅಲ್ಲಿಂದಲೇ ನಾವು ಬೆಳದಿಂಗಳ ಮರುಪಯಣ ಹೂಡಿದೆವು ಮರಳಿ ಹೊನ್ನಾವರಕ್ಕೆ. ಹಿಂದಿನ ದಿನ ನಾವು ಹಾದುಹೋದ ದಾರಿಯೇ ಬೇರೆ ಈ ದಾರಿಯೇ ಬೇರೆ - ಎನ್ನುವಂತಿತ್ತು ಆ ಒಂದೇ ದಾರಿ. ನದಿಯ ಹಗಲಿನ ಬಣ್ಣ ಬೆಡಗಿಗೂ, ರಾತ್ರಿಯ ಶಾಂತಿ ಸೊಬಗಿಗೂ ಎಷ್ಟು ಅಂತರ ಅನ್ನುತೀರಿ! ತಲಾವೊಂದರ ನಾಲ್ಕಾರಾಣೆ ಕೊಟ್ಟು, ಎಂಟು ಹತ್ತು ತಾಸಿನ ಸ್ವರ್ಗ ಸೌಂದರ್ಯ ಕಾಣಲು ಬರುತ್ತದೆ. - ಅಂದರೆ ನೀವು ನಂಬಲಾರರಿ. ಆದರೆ, ಗೆರಸೊಪ್ಪೆಯಿಂದ ಹೊನ್ನಾವರಕ್ಕೆ ಹೋಗಲು ನಾವು ಕೊಟ್ಟದ್ದೂ ಅಷ್ಟೇ ಹಣ. ಅದಕ್ಕೂ ಹೆಚ್ಚಲ್ಲ; ಆದರೆ, ಇಪ್ಪತ್ತು ವರ್ಷಗಳ ಹಿಂದೆ ಕಂಡ ಸುಖ ಈಗಲೂ ನೆನವರಿಕೆಯಾಗುತ್ತದೆ.

ಇನ್ನೊಮ್ಮೆ ನಾನು, ಎರ್ನಾಕುಳಂನಲ್ಲಿ ಕುಳಿತೆ - ರಾತ್ರಿ ಮೋಟಾರ್‌ಲಾಂಚಿನಲ್ಲಿ ಕತ್ತಲಲ್ಲೇ ಲಾಂಚು ಹೊರಟಿತು. ಲಾಂಚಿಗೆ ಮಾಡೂ ಇತ್ತು. ನನ್ನ ಸುತ್ತಲಿನ ಜನ ಹೆಣಬಿದ್ದ ಹಾಗೆ ನಾಲ್ಕು ಸುತ್ತಲೂ ಮಲಗಿದ್ದರು. ಬೆಳಿಗ್ಗೆ ಏಳುವಾಗ ನಾವು 'ಎಲೆಪ್ಪಿ'ಗೆ ಮುಟ್ಟಿದ್ದೆವು. ಆ ರಾತ್ರಿ ಕಂಡದ್ದೇನಿಲ್ಲ. ಸಜೀವ ಹೆಣಗಳ ಸಂತೆಯನ್ನು ಮಾತ್ರ. ಆ ಮಂದೀ ಮಾತ್ರ. ಮಾಡಿನ ಈ ಕಡೆಗೆ ಬಂದು ಕುಳಿತಾಗ, ಕಿರಿದಾದ ಕಾಲುವೆಯಲ್ಲಿ ಅದು ಸಾಗಿಹೋದಾಗ ಮುಂಬಯಿ ದೇಖೋ, ಮದ್ರಾಸ್ ದೇಖೋ ಅನ್ನುತ್ತಾರಲ್ಲ -ಅಂಥಾ ನೋಟ ಹೆಜ್ಜೆ, ಹೆಜ್ಜೆಗೂ ಕಾಣಿಸಿತು. ನಮ್ಮ ಮುಂದೆ, ಹಿಂದೆ, ಎದುರು, ಬದುರು ಎಷ್ಟೆಲ್ಲಾ ದೋಣಿಗಳು, ಗಾಳ ಹಾಕುವವರು, ಮೀನು ಹಿಡಿಯುವವರು, ಎಲ್ಲರೂ ದೋಣಿಯಲ್ಲೇ ಸಂಚರಿಸುತ್ತಿದ್ದರು.

ಬೇರೊಮ್ಮೆ, ವಂಡಸೆ ಎಂಬ ಊರಿನಿಂದ ಕುಂದಾಪುರಕ್ಕೆ ದೋಣಿಯಲ್ಲಿ ಹೋಗಿದ್ದೆ. ಪುಟ್ಟ ದೋಣಿ; ಹತ್ತೆಂಟು ಜೀವಗಳು ಒಳಗೆ ಬೆಳಗಾದ ಮೇಲೇಯೇ ಹೊರಟದ್ದು. ಉಬ್ಬಿನ ನದಿಯ ಕಾವಿಬಣ್ಣದ ನೀರಿನ ಮೇಲೇಯೇ ನಮ್ಮ ಯಾನ. ತುಸು ದೂರ ಹೋಗುತ್ತಲೇ ಮುಗಿಲು ಕವಿಯಿತು; ಗುಡುಗು, ಮಿಂಚು ಹೊಳೆಯಿತು. ಶಾಂತವಾಗಿದ್ದ ನದಿಯಲ್ಲಿ ಗಾಳಿ ಸಮುದ್ರದ ಕಲ್ಲೋಲವನ್ನು ಎಬ್ಬಿಸಿಬಿಟ್ಟಿತು. 'ಹೊಳೆ ಇಳಿದವನಿಗೆ ಚಳಿಯೇನು' ಎಂಬ ಗಾದೆ ಇದೆ ನಮ್ಮೂರಲ್ಲಿ. ಆ ಚಳಿಗೆ ನಾವು ಬಟ್ಟೆ ಹೊದ್ದರೂ ಅಷ್ಟೇ, ಬಿಟ್ಟರೂ ಅಷ್ಟೆ. ನಮ್ಮ ದೋಣಿ ಹೋಗುತ್ತಲೇ ಇತ್ತು. ನಾವು ಆ ದಿನ ಮಾಡಿದ ಸ್ನಾನ ಒಂದು ತಿಂಗಳಿಗೆ ಸಾಕಾಗುವಷ್ಟಾಯಿತು. ಆದರೆ, ಕಂಡ ನದಿಯ ರೌದ್ರಸೌಂದರ್ಯ - ಅಷ್ಟೇ ಚಿರಸ್ಮರಣೀಯವಾಗಿತ್ತು.

ಚಿಕ್ಕ ಮರದ ಪಾತ್ರೆಗೆ ದೋಣಿ ಎಂದು ನಾಮಕರಣ. ನಾಲಿಗೆ ತಿರುಗದವರು 'ಡೋಣಿ' ಎನ್ನುವುದೂ ಉಂಟು ಅದನ್ನು. ಆ ಪಾತ್ರೆ ದೊಡ್ಡದಾದ ಹಾಗೆ, ಬೇರೆ ಹೆಸರಿದೆ! ಸಣ್ಣದಾದರೆ ಬೇರೆ ಹೆಸರು. ಸಣ್ಣದು 'ಪಾತಿ' ಅನಿಸಿಕೊಳ್ಳುತ್ತದೆ. ಒಮ್ಮೆ ಭಟ್ಕಳದ ಕಡಲು ತೀರದ ಗುಡ್ಡಕ್ಕೆ ಹೋಗಿ ನಿಂತಾಗ, ಎದುರಿನ ಆಖಾಶದಲ್ಲಿ, ಆ ನೀಲ ಕಡಲಿನಲ್ಲಿ -ಒಬ್ಬೊಬ್ಬನೇ ಕುಳಿತಿರುವಷ್ಟು ದೊಡ್ಡ ಪಾತಿಗಳ ಮೇಲೆ ಬೆಸ್ತರು ಚಿಂತೆಯಿಲ್ಲದೆ ಕುಳಿತು, ಗಾಳಹಾಕಿ ಮೀನು ಹಿಡಿಯುತ್ತಿದ್ದರು. ಆದರೆ, ಅದರಲ್ಲೇ ಕುಳಿತು ಯಾನ ಮಾಡುವುದಕ್ಕೆ ಸಾಕಷ್ಟು ಜೀವವಿಮೆ ಮಾಡಿಲ್ಲ ಎಂದು ನಾನಂತೂ ಸಾಹಸಪಡಲಿಲ್ಲ. ದೋಣಿ ದೊಡ್ಡದಾದರೂ, ಕೆಲವು ಸಾರಿ ಇನ್ಶ್ಯೂರೆನ್ಸ್ಅಗತ್ಯವಾಗುವುದುಂಟು. ಬೆನ್ನು ನೋವಿಗಲ್ಲ; ಎದೆಯ ಪುಕ್ಕಿಗೆ, ಸವಿನ ಬೆದರಿಕೆಗೆ. ಸತ್ತಮೇಲೆ ಸ್ವರ್ಗಕ್ಕೆ ಹೋದರೆ, ಅಲ್ಲಿಯೂ ನದಿ ಇದೆ- ದೋಣಿಗಳಿವೆ ಎಂದೂ ಯಾರಾದರೂ ಗ್ಯಾರಂಟಿ ಕೊಟ್ಟರೆ, ಆಗ ಎಂಥ ದೋಣಿಯನ್ನೂ ಏರುವ ಮನವಾದೀತು.

ಎಲ್ಲಿಂದ - ಎಲ್ಲಿಗೋ ಬಂದೆ. ಚುಕ್ಕಾಣಿ ಇಲ್ಲದ ದೋಣಿಯ ಅವಸ್ಥೆಯೇ ಹೀಗೆ. ನೀರು ಹರಿದ ಹಾಗೆ ಅದೂ ಹೋಗುತ್ತದೆ. ದೋಣಿ ದೊಡ್ಡದಾದರೆ 'ಓಡ' ಅನ್ನುತ್ತಾರೆ. ಮತ್ತೂ ದೊಡ್ಡದಾದರೆ 'ಮಂಜಿ', 'ಪತ್ತೆಮಾರಿ', ನಗ, ಮಚ್ವೆ ಎಂದೇನೇನೋ ಹೆಸರಿನಿಂದ ಕರೆಯುತ್ತಾರೆ. ಎರಡು, ಮೂರು, ನಾಲ್ಕು ಹಾಯಿಗಳನ್ನು ಕಟ್ಟುವಂತಹ ಕಡಲು ಹಾಯುವ ದೋಣಿಗಳೂ ಇವೆ.

ಒಮ್ಮೆ, ಗಂಗೊಳ್ಳಿ ಬಂದರಿನಲ್ಲಿ ಕುಳಿತು ಅಳುವೆಯಿಂದ ಇಂಥದೊಂದು ಮಚ್ವೆಯ ಮೇಲೆ, ಎರಡು ಮೈಲು ದೂರ ಕಡಲಿನೊಳಗೆ ಹೋಗಿದ್ದೆ; ಸುಮ್ಮನೆ ತಮಾಷೆ ನೋಡುವುದಕ್ಕೆ. ಬಿಸಿಲೋ, ಬಲತುಂಬ! ಹೊರಟದ್ದೋ, ನಡು ಮಧ್ಯಾಹ್ನಕ್ಕೆ. ಕಡಲಿನ ಸೌಂದರ್ಯ ಆದಷ್ಟು ನೋಡಬೇಕೆಂದು. ಮಚ್ವೆ ದಡಬಿಟ್ಟಿತು. ಹಾಗೆಯೇ, ಕಡಲು ಸೇರುವ ಅಳುವೆಯನ್ನು ಹೊಕ್ಕಿತು. ಆಗಲೇ ತಳಮಳಾ ಹೆಚ್ಚಿತು. ಆಳೆತ್ತರದ ಕಡಲಿನ ಅಲೆಗಳು ಉಕ್ಕುವಾಗ ನಮ್ಮ ದೋಣಿ ಸಹ ಅಷ್ಟೇ ಮೇಲೆ, ಕೆಳಗೆ ಆಗುತ್ತದೆ. ಯಾವ, ಯಾವ ಕೋಣಾಕೃತಿಯಲ್ಲಿ ಬೇಕಾದರೂ ಅದು ಚಲಿಸುತ್ತದೆ. ಮೊದಲಿನ ಒಂದು ಮೈಲು ಹೋಗುವುದರೊಳಗೆ, ನಮ್ಮಲ್ಲಿ ಹಲವರ ಹೊಟ್ಟೆಯಲ್ಲೂ ಅಷ್ಟೇ ತಳಮಳವಾಗಿತು. ತಿಂದದ್ದನ್ನೆಲ್ಲ ಕಾರಿದವರೆಷ್ಟೋ ಮಂದಿ. ನಾನಂತು, ನನ್ನ ಎತ್ತರದ ಪೀಠದ ಮೇಲೆ ಗಟ್ಟಿಯಾಗಿ ಕುಳಿತು, ಆಚೀಚಿನ ಮರ ಹಿಡಿದು, ನೋಡುತ್ತ ಕುಳಿತಿದ್ದೆ. ಹಾಯಿ ಬಿಡಿಸಿದ್ದರು! ದೋಣಿ -ಅಂಥ ಎತ್ತರದ ಅಲೆಗಳ ಮೇಲೆ ಗಾಳಿಯ ಒತ್ತಡಕ್ಕೆ ಜಿಗಿದು ಹೋಗುತ್ತಿದ್ದ ನೋಟ ಅದ್ಭುತವಾಗಿತ್ತು. ಕಡಲಿನ ಅಲೆಗಳಿಗೆ -ರೂಢಿ ಇಲ್ಲದವರಿಗೆ, ಇದು ಸ್ವಲ್ಪ ಕಷ್ಟವಾದೀತು. ಆದರೆ, ನೋಟದ ಸುಖ ನೆನಸಿಕೊಂಡರೆ, ಕಡಲಯಾನ ವಿಚಿತ್ರ ಅನುಭವ ತಂದುಕೊಡುತ್ತದೆ. ನಮ್ಮ ದೋಣಿಯೊಟ್ಟಿಗೆ ನೀರಿನಲ್ಲಿ ಜಿಗಿದು, ಜಿಗಿದು, ಸ್ಪರ್ಧೆ ನಡೆಸುವ ಹಲವು ಜಾತಿಯ ಮೀನುಗಳನ್ನು ಕಾಣಬಹುದು. ಮೀನನ್ನು ಕಂಡೇ, ಮೊದಲಿನ ಮನುಷ್ಯ ದೋಣಿ ಮಾಡಿದ್ದು ಅನ್ನುತ್ತಾರೆ.

ಕಾಶೀಯಾತ್ರೆ ಮಾಡುವವನು ದೋಣಿಯ ಸುಖ ಅನುಭವಿಸಬಹುದು. ಗಂಗೆಯ ತಡಿಯಲ್ಲಿ ಹತ್ತಾರು ಸ್ನಾನ ಘಟ್ಟಗಳಿವೆ. ಅವು ಒಂದೊಂದನ್ನು ನಡೆದು, ಸಂಚರಿಸಿ ನೋಡುವುದು -ತುಂಬ ಕಷ್ಟದ ಕೆಲಸ. ಕಣ್ಣಿಗೂ ಸುಖವಿಲ್ಲ. ಅದರ ಬದಲು, ದೋಣಿಯೊಂದರ ಮೇಲೆ ಕುಳಿತು, ಒಂದು ತುದಿಯಲ್ಲಿ ಕುಳಿತು, ನಗರದ ಇನ್ನೊಂದು ತುದಿಯ ತನಕ ಸುಮಾರು ಐದಾರು ಮೈಲುಗಳ ತನಕ ಸಂಚರಿಸಬಹುದು. ದಂಡೆಗೆ ತುಸು ದೂರದಲ್ಲಿ ಕುಳಿತು ಅಂಥ ಯಾನ ಮಾಡಿದರೆ, ಆ ಪ್ರಾಚೀನ ನಗರದ ಸೊಬಗೆಲ್ಲ ಒಂದೊಂದಾಗಿ ಕಾಣಿಸುತ್ತದೆ. ನದಿ ದಂಡೆಯಲ್ಲಿನ ಸೋಪಾನಗಳು, ಉನ್ನತವಾದ ಸೌಧಗಳು, ನೀರಲ್ಲಿ ಮುಳುಗಿ, ಮೀಯುವ ಸಾವಿರಾರು

ಯಾತ್ರಿಕರು, ದಂಡೆಯಲ್ಲಿ ಕುಳಿತು, ಆ ಗದ್ದಲದಲ್ಲೂ ಶಾಂತಿಯಿದೆ ಎಂದು ತಿಳಿದು ತಪಸ್ಸು ಮಾಡುತ್ತಿರುವ ಗಡ್ಡದ ಬಾವಾಜಿಗಳು - ಒಂದೊಂದೇ, ಎಂತೆಂಥ ನೋಟ ಕೊಡುತ್ತದೆ ಬಲ್ಲಿರಾ? ಹಾಗೆಯೇ ಸಾಗಿಹೋದರೆ, ಮಣಿಕರ್ಣಿಕೆಯಲ್ಲಿ -ನೀರಿನಲ್ಲಿ ಮುಳುಗಿಸಿಟ್ಟ ಚಟ್ಟಗಳನ್ನೂ, ಬೆಂಕಿ ನುಂಗುತ್ತಿರುವ ಚಿತೆಗಳನ್ನು ಕಾಣಬಹುದು. ನಾವು ಒಬ್ಬರೇ ಹೀಗೆ ಹೋಗುವವರಲ್ಲ. ಹಿಂದೆ, ಮುಂದೆ ದೋಣಿಗಳು ಹೋಗುತ್ತಲೇ ಇರುತ್ತವೆ. ಅದರಲ್ಲಿ ಕುಳಿತು, ತಾಳ ಹಾಕಿ ಭಜನೆ ಮಾಡುತ್ತಿರುವ ಯಾತ್ರಿಕರೂ ಇದ್ದಾರೆ. ಜಲಯಾನಕ್ಕೂ, ಸಂಗೀತಕ್ಕೂ ಅನ್ಯೋನ್ಯವಾದ ಮೇಳವಿದೆ. ನದಿಯ ಮೇಲೆ ದೋಣಿ ಲಘುವಾಗಿ ತೇಲಿದ ಹಾಗೆ, ನೀರ ಮೇಲೆ ಹೋಗುವ ನಮ್ಮ ಮನಸ್ಸು ಪ್ರಾಪಂಚಿಕ ಕಷ್ಟಗಳನ್ನು ಮರೆತು, ಲಘುವಾಗಿ ತೇಲಿಹೋಗುತ್ತದೆ. ಇಷ್ಟೆಲ್ಲ ಹೊತ್ತು, ದೋಣಿಯ ಮಾತನ್ನೇ ಹೇಳಿದೆ. ಮರ ಇರುವ ಊರಿನಲ್ಲಿ ಇದ್ದರೆ ದೋಣಿ. ಇಲ್ಲದೆ ಹೋದರೆ, ಅಂಥವರ ಪಾಲಿಗೆ ಹರಿಗೋಲು. ಯಾಕೆ ಆ ಹೆಸರು ಬಂದಿತೋ ನನಗೆ ಗೊತ್ತಾಗದು. ಹತ್ತೆಂಟು ಮಂದಿ ಕುಳಿತುಕೊಳ್ಳಬಹುದಾದ, ಉರುಟಾದ ಬೆತ್ತದ ಬುಟ್ಟಿಯನ್ನು ಮಾಡಿ, ಅದಕೆ ಹೊರಮಗ್ಗುಲಲ್ಲಿ ಚರ್ಮಹೊದಿಸಿ, ಇಂಥ ಹರಿಗೋಲು ಮಾಡುತ್ತಾರೆ. ಇದು ಹರಿಯುವ 'ಕೋಲು' ಅಲ್ಲ. ಪ್ರಾಯಶಃ 'ಗೋಳು' ಇರಬಹುದು. ಒಮ್ಮೆ ಹಂಪಿಗೆ ಹೋದ ನಾನು, ತುಂಬಿದ ತುಂಘಭದ್ರಾ ನದಿಯನ್ನು ದಾಟಿ, ಆನೆಗುಂದಿಗೆ ಹೋಗುವುದಕ್ಕೆ ಇಂಥ ಹರಿಗೋಲಿನಲ್ಲಿ ಕುಳಿತೆ. ಅಪಾಯವೇನಿಲ್ಲ. ಒಳಗೆ ಹಿಡಿದಷ್ಟು ಜನ ತುಂಬಿಸುತ್ತಾರೆ. ಆ ಚರ್ಮಕ್ಕೆ ತೂತುಬಿದ್ದರೆ ಒಳಕ್ಕೆ ನೀರು ಬಂದೀತೇ ಎಂಬ ಅನುಮಾನ ಬರಬಹುದು. ಅದು ಜೀವನ ಪಾತ್ರೆ. ನಾವೂ ಜೀವನ ಪಾತ್ರೆಗಳೇ. ನಮಗೆ ತೂತುಬಿದ್ದರೆ ಒಳಗಿನ ನೀರು ಹೊರಕ್ಕೆ ಹರಿಯುತ್ತದೆ; ಅದಕ್ಕೆ ತೂತುಬಿದ್ದರೆ ಹೊರಗಿನ ನೀರು ಒಳಕ್ಕೆ ಬರುತ್ತದೆ. ಅದರಲ್ಲಿ ಕುಳಿತು ಹೋಗುವಾಗ, ದಿಕ್ಕಿನ ಮೇಲೆ ಹತೋಟಿ ಕಡಿಮೆ. ಆದರೂ, ಒಂದು ಬಸ್ಸಿನಲ್ಲಿ ಕುಳಿತ ಹಾಗೆ ಜನ, ಜಗಳ ಮಾಡಬೇಕಾದಂಥ ಕಾರಣವಿಲ್ಲ. ಮುಂದಿನ ಸೀಟು, ಹಿಂದಣ ಸೀಟು, ಎಡ, ಬಲ ಎಂಬ ತಕರಾರೇ ಇಲ್ಲ. ದೋಣಿ ಈ ದಂಡೆ ಬಿಟ್ಟು, ಆ ದಂಡೆ ಮುಟ್ಟುವುದರೊಳಗೆ ಪ್ರತಿಯೊಂದು ಕಡೆಯೂ, ಪ್ರತಿಯೊಂದು ದಿಕ್ಕೂ ಎಂಟೆಂಟು ಸಾರಿ ನೋಡಲು ಸಿಗುತ್ತದೆ. ಅಂದರೆ, ನೀರಿನ ಅಮಲು ನೀರಿಗೂ ಬಂದುಬಿಡುತ್ತದೆ. ದಡ ಬಿಟ್ಟರೆ ಅದಕ್ಕೆ ತಲೆ ತಿರುಕಲು ಸುರು. ದೋಣಿಕಾರ ತೊಳೆಹಾಕಲು ತೊಡಗಿದಂತೆ, ಉರುಟಾದ ಆ ಬುಟ್ಟಿ ಮೆಲ್ಲಗೆ ತಿರುಗಲು ತೊಡಗುತ್ತದೆ. ನೀರನ್ನು ಸೀಳಿಕೊಂಡು ಹೋಗುವ ಆಕಾರ ಇಲ್ಲದ್ದಕೆ, ಅದು ಪ್ರವಾಹದೊಡನೆ ತೇಲಿಹೋಗುತ್ತದೆ. ಈ ಕಡೆಯಿಂದ, ಆ ಕಡೆಗೆ ಲಂಬವಾಗಿ ಹೋಗಬೇಕು, ನೆಟ್ಟಗೆ ಹೋಗಬೇಕು- ಅನ್ನುವವನಿಗೆ ಹರಿಗೋಲು ಹೇಳಿದ್ದಲ್ಲ. 'ಹೋದರೆ ಸಾಕು, ಈಚೆಯಿಂದ ಆಚೆಗೆ - ಎನ್ನುವ ತಾಳ್ಮೆಬೇಕು. ನದಿಯ ಪ್ರವಾಹ ಕಂಡು, ಗುರಿಯಿಂದ ಗುರಿಗೆ, ನೆಟ್ಟಗೆ ಎದುರಾಗಿ ಹೋಗುವ ಬದಲು, ದಂಡೆಯಿಂದ ಎಷ್ಟೋ ಮೇಲಕ್ಕೆ ತೆಗೆದುಕೊಂಡು ಹೋಗಿ ಹರಿಗೋಲನ್ನು ತೇಲಿಸಿದಲ್ಲಿ ಹೆಚ್ಚು, ಕಡಿಮೆ ಗುರಿ ಮುಟ್ಟುತ್ತೇವೆ ನಾವು'. ಹೋಗಿ, ಆಚೆ ದಂಡೆ ಸೇರುವಾಗ ಇಳಿದ ವ್ಯಕ್ತಿಯನ್ನು ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ತೋರಿಸು ಎಂದು ಯಾರಾದರೂ ಕೇಳಿದರೆ, ಆತ ಮೇಲೆ ಕೆಳಗೆ ನೋಡುವನೇ ಹೊರತು, ಸರಿಯಾದ ದಿಕ್ಕು ತೋರಿಸಲಾರ. ಆ ಮಾತಂತಿರಲಿ. 'ನೀನು ಹೊರಟ ದಂಡೆ ಯಾವುದು, ಸೇರಿದದಂಡೆ ಯಾವುದು' ಎಂದು ಕೇಳಿದರೂ, ಉತ್ತರ ಅಷ್ಟೇ ಕಷ್ಟದ್ದು.

ಸಂಸಾರ ಸುಖ ಎಣಿಸಿ, ನೋಡಿ, ತೂಕ ಮಾಡಿ ಅನುಭವಿಸಬೇಕು - ಅನ್ನುವವನಿಗೆ ಹೇಳಿಸಿದ್ದು ದೋಣಿಯ ಯಾನ. ಭವಸಾಗರದಲ್ಲಿ ಹೇಗೋ ತೇಲಿದರಾಯಿತು - ಎನ್ನುವವನಿಗೆ ಹೇಳಿಸಿದ್ದು ಹರಿಗೋಲಿನ ಯಾನ. ದೋಣಿ, ಹರಿಗೋಲುಗಳ ಯಾನದ ಕಷ್ಟ, ಆಯಾಸ ಎಷ್ಟೇ ಇರಲಿ, ಗಾಡಿಯಲ್ಲಿ ಕಚ್ಚಾ ರಸ್ತೆಯಲ್ಲಿ ಪ್ರಯಾಣ ಮಾಡುವುದೂ ಬೇಗ ಮುಟ್ಟಿಯೇವೆಂದು ಭ್ರಮಿಸಿ ಮೋಟಾರಲ್ಲಿ ಕುಳಿತು, ಮೋಟಾರು ಕೆಟ್ಟು, ಹಾದಿಯಲ್ಲಿ ಒಣಗುವುದೂ - ಇವರೆಡಕ್ಕಿಂತ ದೋಣಿ, ಹರಿಗೋಲುಗಳು ಎಂದೆಂದೂ ವಾಸಿ.

**ಲೇಖಕರು**

ಶಿವರಾಮ ಕಾರಂತ (೧೯೦೨-೧೯೯೭) ಅವರಷ್ಟು ಲೋಕವನ್ನು ಸುತ್ತಾಟ ಮಾಡಿದ ಮತ್ತೊಬ್ಬ ಲೇಖಕ ಕನ್ನಡದಲಿಲ್ಲ ಅನ್ನಬಹುದು. ಅವರಷ್ಟು ಪ್ರಕಾರಗಳಲ್ಲಿ ಕೆಲಸ ಮಾಡಿದ ಲೇಖಕರೂ ಕಡಿಮೆ, ನಾಟಕ ರಚನೆ, ಯಕ್ಷಗಾನ, ಜಾನಪದ, ಸಿನಿಮಾ, ಚಿತ್ರಕಲೆ, ನಿಘಂಟು ರಚನೆ, ಪಠ್ಯಪುಸ್ತಕ ರಚನೆ, ವಿಶ್ವಕೋಶ ರಚನೆ, ಪರಿಸರ ಚಳುವಳಿ, ಚುನಾವಣೆ ರಾಜಕೀಯ ಹೀಗೆ ಅನೇಕ ಕ್ಷೇತ್ರಗಳಲ್ಲಿ ಕಾರಂತರು ಕೆಲಸ ಮಾಡಿದವರು. ಏಕಾಗಿಯಾಗಿ ಅವರು 'ವಿಜ್ಞಾನ ಪ್ರಪಂಚದ' ನಾಲ್ಕು ಸಂಪುಟಗಳನ್ನು ಪ್ರಕಟಿಸಿದರು. ಇಷ್ಟೆಲ್ಲ ಇದ್ದರೂ ಅವರು ಕನ್ನಡದ ಕಾದಂಬರಿಕಾರರು ಎಂದೇ ಪ್ರಸಿದ್ಧರಾಗಿದ್ದಾರೆ. 'ಚೋಮನದುಡಿ', 'ಮರಳಿ ಮಣ್ಣಿಗೆ', 'ಬೆಟ್ಟದಜೀವ',

‘ಮೈಮನಗಳ ಸುಳಿಯಲ್ಲಿ’ ಇವು ಅವರ ಪ್ರಮುಖ ಕಾದಂಬರಿಗಳು. ಹುಚ್ಚುಮಸ್ಸಿನ ಹತ್ತುಮುಖಗಳು ಅವರ ಆತ್ಮಚರಿತ್ರೆ. ‘ಯಕ್ಷಗಾನ ಬಯಲಾಟ’ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ (೧೯೬೦) ಪ್ರಶಸ್ತಿಯೂ, ‘ಮೂಕಜ್ಜಿಯ ಕನಸುಗಳು’ ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿಯೂ (೧೯೭೮) ಬಂದಿವೆ. ಪ್ರವಾಸಪ್ರಿಯರಾದ ಕಾರಂತರು ಇಡೀ ಪ್ರಪಂಚವನ್ನೇ ಸುತ್ತುಹಾಕಿ ಅನೇಕ ಪ್ರವಾಸ ಕಥನಗಳನ್ನು ಬರೆದಿದ್ದಾರೆ. ಕಾರಂತರು ೧೯೫೫ರಲ್ಲಿ ಮೈಸೂರಿನಲ್ಲಿ ನಡೆದ ೩೭ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು.

**ಆಶಯ**

ಪ್ರಸ್ತುತ ಲೇಖನವನ್ನು ‘ಕಾರಂತರ ಲೇಖನಗಳು ಸಂಪುಟ ೬’ ರಿಂದ ಆರಿಸಿಕೊಳ್ಳಲಾಗಿದೆ. ಮೂಲತ ರೇಡಿಯೋದಲ್ಲಿ ಮಾಡಲಾದ ಭಾಷಣವಿದು. ಇದು ಮೊದಲ ಬಾರಿಗೆ ೧೯೫೦ರಲ್ಲಿ ‘ಕನ್ನಡನುಡಿ’ ಪತ್ರಿಕೆಯಲ್ಲಿ ಪ್ರಕಟವಾಯಿತು. ಇದರಲ್ಲಿ ಲೇಖಕರು ತಾವು ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಬಗೆಯ ದೋಣಿಗಳಲ್ಲಿ ಮಾಡಿದ ಪ್ರಯಾಣದ ಅನುಭವವನ್ನು ಬಣ್ಣಿಸಿದ್ದಾರೆ. ಇದು ಪ್ರವಾಸ ಕಥನದಂತೆ ಕಂಡರೂ ನಮ್ಮ ನಾಡಿನ ದೋಣಿ ಸಂಸ್ಕೃತಿಯನ್ನು ಚಿತ್ರಿಸುವ ಕೆಲಸ ಕೂಡ ಮಾಡುತ್ತದೆ. ಕಾರಂತರ ಬಹಳ ಸುಂದರವಾದ ಗದ್ಯ ಬರೆಹಕ್ಕೆ ಈ ಲೇಖನ ಸಾಕ್ಷಿಯಾಗಿದೆ.

**ಪದಕೋಶ**

ಮಚ್ವೆ = ಹಡಗು, ತೊಳೆ = ಹುಟ್ಟು, ಮಾಡು = ಛಾವಣಿ, ಕಡವು =ನದಿ ದಾಟುವ ಜಾಗ, ಉರುಟಾದ = ನಾಜೂಕಿಲ್ಲದ

**ಟಿಪ್ಪಣಿ**

ಜಲ್ಲೆ = ದೋಣಿ ನಡೆಸಲು ಬಳಸುವ ಗಳು, ಅಳುವೆ = ಕಡಲಿಗೆ ನದಿ ಸೇರುವ ಜಾಗ, ಬಾಣು = ಕುಳಿತುಕೊಳ್ಳಲು ಮಾಡಿರುವ ದೋಣಿಯ ನಡುವಿನ ಅಡ್ಡಪಟ್ಟಿ,

**ಪ್ರಶ್ನೆಗಳು**

೧. ಕಾರಂತರು ತಮ್ಮ ಎಳವೆಯಲ್ಲಿ ಕಲ್ಯಾಣಪುರ ಹೊಳೆಯಲ್ಲಿ ಮಾಡಿದ ದೋಣಿ ಪಯಣದ ಅನುಭವವನ್ನು ಹೇಗೆ ವಿವರಿಸುತ್ತಾರೆ?
೨. ಗೇರಸೊಪ್ಪೆಯಲ್ಲಿ ಮಾಡಿದ ಜಲ ಪ್ರಯಾಣದ ವರ್ಣನೆಯನ್ನು ವಿವರಿಸಿರಿ.
೩. ಎರ್ನಾಕುಳಂ ದೋಣಿ ಪಯಣವು ಲೇಖಕರಿಗೆ ಯಾಕೆ ಸಂತೋಷ ಕೊಡಲಿಲ್ಲ?
೪. ಕುಂದಾಪುರಕ್ಕೆ ದೋಣಿಯಲ್ಲಿ ಹೋದಾಗ ಕಂಡ ರುದ್ರಸೌಂದರ್ಯ ಎಂತಹುದು?
೫. ಗಂಗೊಳ್ಳಿ ಬಂದರಿನಲ್ಲಿ ಮಾಡಿದ ಮಚ್ವೆಯ ಪಯಾಣವು ಯಾಕೆ ಅದ್ಭುತವಾಗಿತ್ತು?
೬. ಕಾಶಿಯ ಗಂಗಾನದಿಯಲ್ಲಿ ಪಯಣಿಸುವುದು ಹೇಗೆ ವಿಭಿನ್ನವಾದಾನುಭವಕ್ಕೆ ಕಾರಣವಾಗುತ್ತದೆ?
೭. ಹಂಪಿಯ ತುಂಗಭದ್ರಾ ನದಿಯನ್ನು ದಾಟುವಾಗ ಲೇಖಕರಿಗೆ ಯಾಕೆ ದಿಕ್ಕುಗಳೆಲ್ಲ ಕಲಸಿಕೊಂಡಂತೆ ಆಯಿತು?

**ಪೂರಕ ಓದು**

೧. ಕಾಕಾ ಕಾಲೇಲ್ಕರ್‌ಅವರು ಕರ್ನಾಟಕ ನದಿಗಳನ್ನೂ ಒಳಗೊಂಡಂತೆ ಭಾರತದ ನದಿಗಳನ್ನು ಕುರಿತು ಬರೆದಿರುವ ‘ಜೀವನಲೀಲೆ’ ಪುಸ್ತಕ.
೨. ಪೂರ್ಣಚಂದ್ರ ತೇಜಸ್ವಿಯವರ ‘ಅಲೆಮಾರಿಯ ಅಂಡಮಾನ್‌ಹಾಗೂ ಮಹಾನದಿ ನೈಲ್’.
೩. ಗೊರೂರು ರಾಮಸ್ವಾಮಿ ಅಯ್ಯಂಗಾರ್‌ಅವರ ಪ್ರಭಂಧ ಸಂಕಲನ ‘ಹೇಮಾವತಿ ತೀರದಲ್ಲಿ ಮತ್ತು ಇತರ ಪ್ರಬಂಧಗಳು’.
೪. ರಾವ್‌ಬಹಾದ್ದೂರರ ಕಾದಂಬರಿ ‘ಗ್ರಾಮಾಯಣ’.

೫. ಮಾಲಿನಿಮಲ್ಯ ಅವರು ಸಂಪಾದಿಸಿದ ಶಿವರಾಮ ಕಾರಂತರ 'ಶಿವರಾಮ ಕಾರಂತರ ಲೇಖನಗಳು ನಾಡು ನಿಸರ್ಗ ಪರಿಸರ ಸಂಪುಟ ೭'.
೬. ಹಿ. ಚಿ. ಬೋರಲಿಂಗಯ್ಯ ಅವರ 'ಗಿರಿಜನರ ನಾಡಿಗೆ ಪಯಣ' ಪ್ರವಾಸಕಥನ.

## ೪. ಅಣ್ಣಪ್ಪನ ರೇಷ್ಮೆ ಕಾಯಿಲೆ

ಬೇಸಗೆಯ ನಡುಹಗಲು. ಬಿಸಿಯ ಬಿಸಿಲು ಹಸುರು ಮಲೆಗಳ ಮೇಲೆ ಹುಲುಸಾಗಿ ಮಲಗಿತ್ತು. ಹೆಗ್ಗೋಟೆಯ ಹೆಗ್ಗೋಡೆಗಳಂತೆ ಸುತ್ತಲೂ ಎತ್ತರವಾಗಿ ಎದ್ದ ಗಿರಿಗಳಿಂದ ಸಂಕುಚಿತವಾದಂತೆ ತೋರುತ್ತಿದ್ದ ತಿಳಿಯಾಳದ ಬಾನಿನಲ್ಲಿ ಬೂರುಗದರಳೆಯಂತಿದ್ದ ತುಂಡುಮೋಡಗಳು ಸೋಮಾರಿಯ ಮೆದುಳಿನಲ್ಲಿ ಅಲೆದಾಡುವ ಕನಸುಗಳಂತೆ ತೇಲುತ್ತಿದ್ದವು, ಹಕ್ಕಿಗಳು ಬಿಸಿಲಿನ ಬೇಗೆಗೆ ಬಸವಳಿದು ಮರಗಳಲ್ಲಿ ಮರೆಯಾಗಿ ಕನವರಿಸುವುವೋ ಎಂಬಂತೆ ಕಿಚಿಮಿಚಿ ಮಾಡುತ್ತಿದ್ದವು. ಎಲ್ಲಿಯೋ ಒಂದು ಮರಕುಟಗನ ಹಕ್ಕಿ ಮಾತ್ರ ಅಡವಿಯ ಬಡಗಿಯಂತೆ ಕೊಟ್‌ಕೊಟ್‌ಸದ್ದು ಮಾಡುತ್ತಿತ್ತು. ನಾನು ಊಟ ಮುಗಿಸಿಕೊಂಡು ನಮ್ಮ ಮನೆಯ ಉಪ್ಪರಿಗೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳಲು ಹವಣಿಸುತ್ತಿದ್ದೆ. ಗಿ - ನನ್ನೊಡನೆ ಇದ್ದರು. ಅಷ್ಟರಲಿ ಮಾಯ ಓಡಿಬಂದು ಕಣ್ಣಿನಲ್ಲಿ ನೀರು ಸುರಿಸುತ್ತ "ಅಣ್ಣಪ್ಪನಿಗೆ ಕಾಯಿಲೆ ಜೋರಾಗಿದೆ, ಉಳಿಯುವಂತಿಲ್ಲ. ನಿಮ್ಮನ್ನು ಬರಹೇಳಿದೆ" ಎಂದನು. ನಾನು ಗಿ- ಇಬ್ಬರೂ ಉದ್ವೇಗದಿಂದ ಎದ್ದೆವು. ಪ್ರಕೃತಿ ಮಾತ್ರ ನಿಶ್ಚಿಂತ ಉದಾಸೀನವಾಗಿತ್ತು.

ಮಾಯ ಅಣ್ಣಪ್ಪನ ತಮ್ಮ. ಅಣ್ಣಪ್ಪ ನಮ್ಮ ಒಕ್ಕಲು ಬಹಳ ವಿನೋದಶೀಲ ಅವನದು. ಸತ್ಯವಂತ, ಪ್ರಾಮಾಣಿಕ ನಮ್ಮ ಹಿರಿಯ. ಕಾಲದಿಂದಲೂ ನಮ್ಮ ಗದ್ದೆಮಾಡಿಕೊಂಡು ಗುತ್ತಿಗೆಯನ್ನು ಸಲ್ಲಿಸುತ್ತ ಯೋಗ್ಯನಾಗಿದ್ದ ಮನುಷ್ಯ. ಅವನದು ಯಾವಾಗಲೂ ನಗುಮುಖ. ಸಾಮಾನ್ಯವಾಗಿ ಬಡವರಲ್ಲಿ, ಅದರಲ್ಲಿಯೂ ಮಲೆನಾಡಿನ ಸಾಹುಕಾರರ ಗಾಣಕ್ಕೆ ಸಿಕ್ಕಿಬಿದ್ದಿರುವ ಬಡವರಲ್ಲಿ ಸುಲಭವಲ್ಲದ ನಗುಮುಖ. ನನಗಿನ್ನೂ ನೆನಪಿದೆ. ಅವನೊಂದು ದಿನ ಏನನ್ನೋ ಕಡೆಯುವ ಕೆಲಸದಲ್ಲಿದ್ದ. ಅವನಿಗೆ ಸಹಾಯವಾಗಿದ್ದವನು ಒಬ್ಬ ಚಿಕ್ಕ ಹುಡುಗ. ಬಹಳ ಹೊತ್ತು ಕೆಲಸ ಮಾಡಬೇಕಾದ್ದರಿಂದ ಹುಡುಗನ ಉತ್ಸಾಹ ಬತ್ತುವ ಸ್ಥಿತಿಗೆ ಬರಲು, ಅಣ್ಣಪ್ಪ ಕತೆ ಹೇಳಲು ತೊಡಗಿದ. ಹುಡುಗನ ಕೈ ಚುರುಕಾಯಿತು. ನಾನು ಮರೆಯಲ್ಲಿದ್ದು ಆ ಕತೆಯನ್ನು ಆಲಿಸಿ ಬಹಳ ನಕ್ಕುಬಿಟ್ಟೆ - ಆ ಕಥೆ ಮತ್ತಿಂತೆಂದೊಡೆ.....

ಒಂದೂರಿನಲ್ಲಿ ಒಬ್ಬನು ರಾತ್ರಿ ಮಲಗಿದ್ದಾಗ ಒಂದು ಓಡುಹುಳು ಅವನ ಕಿವಿಯೊಳಗೆ ನುಗ್ಗಿತಂತೆ. ಅದು ಕಿವಿಯನ್ನು ಕೊರೆದು ಕೊರೆದು ತಲೆಯನ್ನು ಪ್ರವೇಶಿಸಿತು. ಅಲ್ಲಿ ಅದಾಗಲೆ ಗಬ್ಬವಾಗಿದ್ದರಿಂದ, ಮರಿಹಾಕಿ, ಸಂಸಾರ ಹೂಡಿತು. ತಾಯಿ ಮರಿಗಳಿಗೆ ಅವನ ಮೆದುಳೇ ಆಹಾರವಾಯಿತು. ಹೀಗೆ ಆ ಮರಿಗಳು ತಲೆಯ ತಿರುಳನ್ನು ತಿಂದು ತಿಂದು ಕಡೆಗೆ ಬರಿಯ ತಲೆಯೋಡು ಮಾತ್ರ ಉಳಿಯಿತು. ಆದರೂ ಆ ಮನುಷ್ಯ ಎಂದಿನಂತೆ ಕೆಲಸ ಮಾಡುತ್ತಿದ್ದನಂತೆ. ಒಂದು ದಿನ ಒಬ್ಬ ಪೋಲೀಸಿನವನು ಅಲ್ಲಿಗೆ ಬಂದು ಅವನನ್ನು ಕೂಗಿದನಂತೆ. ಆ ಮನುಷ್ಯ ಏನೋ ಕೆಲಸದ ಮೇಲಿದ್ದುದರಿಂದ ಬೇಗನೆ ಬರಲಾಗಲಿಲ್ಲ. ಪೋಲಿಸು ಮಹಾಶಯನಿಗೆ ಕೋಪ ಬಂದು ಗಟ್ಟಿಯಾಗಿ ರೇಗಿ ಕೂಗಲು ಆ ಮನುಷ್ಯ ಭೀತಿಯಿಂದ ಹೊರಗೆ ಬಂದನಂತೆ. ಅವನು ಹೊರಗೆ ಬರಲು ಪೋಲೀಸಿನವನು "ಏನೋ! ಏಕೆ ಬರಲಿಲ್ಲವೋ ನಾನು ಕರೆದ ಕೂಡಲೆ?" ಎಂದು ಕೆನ್ನೆಗೆ ಬಲವಾಗಿ ಹೊಡೆದನಂತೆ. ಹೊಡೆಯಲು, ತಿರುಳಿಲ್ಲದ ಕರಟದಂತಿದ್ದ ಆ ತಲೆಬುರುಡೆ ದೇಹದ ಮೇಲಿಂದ ಉರುಳಿಬಿದ್ದು ಒಡೆದೇ ಹೋಯಿತಂತೆ!

ಈ ಕತೆಯನ್ನು ಕೇಳುತ್ತಿದ್ದ ಹುಡುಗ ಬಿಲ್ಲುಂಬೆರಗಾಗಿ ಬಾಯಿ ತೆರೆದು ಕಣ್ಣರಳಿಸಿ ಅಣ್ಣಪ್ಪನ ಮುಖವನ್ನೇ ನೋಡುತ್ತಿದ್ದ. ಸ್ವಲ್ಪ ಹೊತ್ತಾದ ಮೇಲೆ ಆ ಹುಡುಗ "ನಿಜವಾಗಿಯೂ ನಡೆದುದು ಹೌದೇನೊ, ಅಣ್ಣಪ್ಪಾ?" ಎಂದ. ಅಣ್ಣಪ್ಪ ತಾನೇ ಆ ಕೇಸು

ವಿಚಾರಣೆಯಾದಾಗ ಸಾಕ್ಷಿ ಹೇಳಿದ್ದೆ ಎಂದನು. ಹುಡುಗ ಸುಮ್ಮನಾದ. ನಾನು ನಗುತ್ತ ಹೊರಟುಹೋದೆ. ಅಣ್ಣಪ್ಪ ಕತೆಗಾರ ಹೌದೋ ಅಲ್ಲವೋ ತಿಳಿಯದು ನನಗೆ; ನಗೆಗಾರನೆಂಬುದೇನೋ ನಿರ್ವಿವಾದವಾದುದು.

ಅಣ್ಣಪ್ಪನ ಗುಡಿಸಲಿಗೂ ನಮ್ಮ ಮನೆಗೂ ಸುಮಾರು ನಾಲ್ಕು ಫರ್ಲಾಂಗುಗಗಳು ದೂರವಿರಬಹುದು. ನಾನು, ಗಿ-ಆ ಉರಿಬಿಸಿಲಿನಲ್ಲಿ ಹೊರೆಟೆವು. ನಮ್ಮ ಕೂಡೆ ಮಾಯನು ಖಿನ್ನವದನನಾಗಿ ಬರುತ್ತಿದ್ದನು. ಅವನೊಡನೆ ಕಾಯಿಲೆಯ ವಿವರಣೆ ಏನೆಂದು ಕೇಳಿದೆವು.

"ಎರಡು ವಾರದಿಂದ ನೆಲ ಹಿಡಿದಿದ್ದಾನೆ. ಎಲುಬು ಚರ್ಮ ಎರಡೆ ಇದೆ. ಆಗಾಗ ಬಾಯಲ್ಲಿ ರಕ್ತ ಕಾರುತ್ತಾನೆ. ಮೇಲುಸಿರೆಳೆಯುತ್ತಿದ್ದಾನೆ" ಎಂದು ವ್ಯಸನಸೂಚಕವಾದ ಸ್ವರದಿಂದ ಹೇಳಿದ.

"ಔಷಧಿ ಏನು ಮಾಡಿದಿರಿ?"

"ಚೌಡಿಯ ಕಾಟ ಎಂದರು. ಭಟ್ಟರ ಹತ್ತಿರ ನಿಮಿತ್ತ ಕೇಳಿಸಿದ್ದಾಯಿತು. ಭಸ್ಮ ಕೊಟ್ಟರು; ಅದನ್ನು ತಿನ್ನಿಸಿದೆವು. ಆಮೇಲೆ ಪಂಜರೊಳ್ಳಿ ದೆವ್ವಕ್ಕೆ ಕೋಳಿ ಕೊಟ್ಟೆವು" ಎಂದು ಪ್ರಾರಂಭಿಸಿದನು. ನನಗೆ ರೇಗಿತು.

"ಔಷಧಿ ಏನು ಮಾಡಿದ್ದೀರಿ?" ಎಂದು ಕೇಳಿದರೆ, 'ಚೌಡಿ, ಭಟ್ಟ, ಭಸ್ಮ, ಕೋಳಿ!' - ಅಯ್ಯೋ ಮುಟ್ಠಾಳ! ಕಾಯಿಲೆಗೆ ಔಷದಿ ಕೊಡಬಾರದೇನೋ" ಎಂದೆ

"ಔಷಧಿಯನ್ನೂ ಕೊಟ್ಟರು" ಎಂದನು.

"ಯಾರು?" ಎಂದೆ

"ನೆರೆಮನೆ ಮಂಜಣ್ಣ" ಎಂದನು.

ನನಗೆ ಇನ್ನೂ ಸಿಟ್ಟುಬಂದಿತು. ಮಲೆನಾಡಿನಲ್ಲಿ 'ನನ್ಗೆ ನಾನೇ ವೈದ್ಯನಾಗಿ ಬಿಟ್ಟೆ!' ಎಂದುಕೊಂಡು ಔಷಧಿಕೊಟ್ಟು ಅನೇಕ ರೋಗಿಗಳನ್ನು ವೈಕುಂಠಧಾಮಕ್ಕೆ ಕಳುಹಿಸುವವರು ಬಹಳಮಂದಿ ಇದ್ದಾರೆ. ಜನಗಳು ಕಾಯಿಲೆಯಾದರೆ ಮೊದಲು ದೆವ್ವಕ್ಕೆ ಹೇಳಿಕೊಳ್ಳುತ್ತಾರೆ. ಆಮೇಲೆ ಸರ್ವಜ್ಞಮೂರ್ತಿಗಳಾದ ಭಟ್ಟರು, ಶಾಸ್ತ್ರೀಗಳು ಮುಂತಾದವರೊಡನೆ ನಿಮಿತ್ತ ಕೇಳಿಸಿ, ಅವರು ಕೊಟ್ಟ ಬೂದಿಯನ್ನು ಹಚ್ಚುತ್ತಾರೆ ಅಥವಾ ತಿನ್ನುಸುತ್ತಾರೆ. ತರುವಾಯ ತನಗೆ ತಾನೆ ವೈದ್ಯನಾಗಿಬಿಟ್ಟ ಯಾವನೋ ಒಬ್ಬನಿಂದ ಏನೋ ಔಷಧಿ ಕೊಡಿಸುತ್ತಾರೆ. ಕಡೆಯಲ್ಲಿ ರೋಗಿ ಅಪರಿಹಾರ್ಯವಾದ ದುರವಸ್ಥೆಗಿಳಿದ ಮೇಲೆ ಆಸ್ಪತ್ರೆಗೆ ಓಡುತ್ತಾರೆ. ಡಾಕ್ಟರು ಏನಾದರೂ ಔಷಧಿ ಕೊಟ್ಟರೆ ಅದನ್ನು ಕುಡಿಸುತ್ತಾ, ತಮಗೆ ತಿಳಿದ ಮದ್ದುಗಳನ್ನೂ ತಿನ್ನಿಸುತ್ತಾ, ದೆವ್ವಭೂತಗಳಿಗೆ ಹರಕೆ ಒಪ್ಪಿಸುತ್ತಾ, ಸಾಕಾದಷ್ಟು ಅಪತ್ಯ ಮಾಡುತ್ತಾ, ಅದೃಷ್ಟವಶದಿಂದ ರೋಗಿ ಬದುಕಿದರೆ, ಅದನ್ನು ಭಟ್ಟರ ಭಸ್ಮಕ್ಕೂ ದೆವ್ವದ ಕೃಪೆಗೂ - ಆರೋಪಿಸಿ, ರೋಗಿ ಸತ್ತರೆ ಅದನ್ನು ಆಸ್ಪತ್ರೆ ಡಾಕ್ಟರ ಔಷಧಿಗೆ ಆರೋಪಿಸಿ, ತಮ್ಮ ಅನುಭವದ ಜ್ಞಾನಭಂಡಾರವನ್ನು ಇತರರಿಗೂ ಹಂಚುತ್ತಾರೆ. ಹೀಗೆ ಅವಿವೇಕ ನಾಚಿಕೆಮುಳ್ಳಿನಂತೆ ಬೆಳೆಯುತ್ತಾ ಹೋಗುತ್ತದೆ.

ನಾವು ಅಣ್ಣಪ್ಪನ ಗುಡಿಸಲನ್ನು ಸೇರಿದೆವು. ಕಿರುಜಗುಲಿಯ ಕೆಸರುಹಲಗೆಯ ಮೇಲೆ ತೊಗಲು ಅಂಟಿದ ಎಲುಬಿನ ಗೂಡಿನಂತೆ ಅಣ್ಣಪ್ಪ ಮುದ್ದೆಯಾಗಿ ಮುದುರಿಕೊಂಡು ಕೂತಿದ್ದ! ಮೈಮೇಲೆ ಬಟ್ಟೆಯಿಲ್ಲ. ಒಂದು ಚಿಂದಿ ಕಂಬಳಿ ಅವನಿಗೆ ಸ್ವಲ್ಪ ದೂರದಲ್ಲಿ ಮುದುರಿಬಿದ್ದಿತ್ತು. ತಲೆಕೂದಲು ಕೆದರಿ ವಿಕಾರವಾಗಿತ್ತು. ನನ್ನನ್ನು ನೋಡಿದ ಕೂಡಲೆ ಕೈಮುಗಿದು ಬಿಕ್ಕಿ ಬಿಕ್ಕಿ ಅಳಲು ತೊಡಗಿದ. ಅವನಿಗೆ ಮಾತಾಡಲು ಉಸಿರೇ ಇರಲಿಲ್ಲ. ನೋಟ ಭಯಾನಕವಾಗಿತ್ತು. ನನಗೆ ನಮ್ಮ ದೇಶದ ದಾರಿದ್ರ್ಯವೇ ಮೂರ್ತಿಮತ್ತಾಗಿ ನನ್ನೆದುರು ಬಂದಂತಾಯಿತು. ಹೊಟ್ಟೆಯ ಅಳಲನ್ನು ಹಾಗೆಯೆ ತಿಂದುಕೊಂಡು ಕೆಸರುಹಲಗೆಯ ಮೇಲೆ ಕುಳಿತುಕೊಳ್ಳಲು ಹವಣಿಸುತ್ತಿದ್ದೆ.

ಅಷ್ಟರಲ್ಲಿ ಅಣ್ಣಪ್ಪ ಪಾತಾಳ ಧ್ವನಿಯಿಂದ “ಅಯ್ಯಾ, ಮೇಲೆ ಕುಳಿತುಕೊಳ್ಳಿ” ಎಂದು ಅಲ್ಲಿದ್ದ ಒಂದು ಮೊರಡಾದ ಕಾಲುಮಣೆಯನ್ನು ತೋರಿಸಿದ. ನಾನು ಅದರ ಮೇಲೆ ಕುಳಿತುಕೊಂಡೆ. ಸ್ವಲ್ಪ ಹೊತ್ತು ಮಾತಾಡಲು ಬಾಯೇ ಬರಲಿಲ್ಲ.

ಲೋಕರೂಢಿಯ ದೃಷ್ಟಿಯಿಂದ ಎಷ್ಟೇ ಅಲ್ಪವಾದುದಾಗಲಿ ಎಷ್ಟೇ ಮಹತ್ತಾದುದಾಗಲಿ ಪ್ರತಿಯೊಂದು ವಸ್ತುವನ್ನೂ ಪ್ರತಿಯೊಂದು ಸನ್ನಿವೇಶವನ್ನೂ ವಿರಾಟ್‌ದೃಷ್ಟಿಯಿಂದ ನೋಡಲೆಳಸುವುದು ನನಗೊಂದು ಹುಚ್ಚು. ಹಾಗೆ ನೋಡಿದರೆ ಅಲ್ಪತ್ವ ಮಹತ್ವಗಳೆಲ್ಲ ಮಯಾವಾಗಿ ಸಮತ್ವ ಮೂಡುತ್ತದೆ. ನಮ್ಮ ಅಂಹಾಂಕಾರವೂ ತೆಗ್ಗಿ, ಅಣುವಿನಿಂದ ಹಿಡಿದು ಆಕಾಶದವರೆಗೂ, ಅಜ್ಞಾತವಾದ ಇರುವೆಯಿಂದ ಜಗದ್ವಿಖ್ಯಾತನಾದ ಮಹಾತ್ಮನವರೆಗೂ ಎಲ್ಲರೂ ಎಲ್ಲವೂ ಮಹಿಮಾಮಾಯವಾಗಿ, ಅನಿರ್ವಚನೀಯವಾದ, ಅಪಾರವಾದ ವಿಶ್ವವ್ಯೂಹದಲ್ಲಿ ಸರ್ವ ಸಮತ್ವದ ಮತ್ತು ಸರ್ವಮಹತ್ವದ ಅನುಭವವುಂಟಾಗಿ, ಹೃದಯದಲ್ಲಿ ನಿಶ್ಚಲತೆಯೂ ಆನಂದವೂ ಶಾಂತಿಯೂ ಮೈದೋರುತ್ತವೆ. ಪ್ರತಿಯೊಂದು ವಸ್ತುವಿನ ಪೂರ್ಣ ಪ್ರಯೋಜನ ವ್ಯಕ್ತವಾಗುವುದು ಅಂತಹ ವಿರಾಟ್‌ದೃಷ್ಟಿಯಿಂದಲೆ. ಸೃಷ್ಟಿಯೆಲ್ಲವೂ ಒಂದು ಮಹಾಜಾಲದಂತೆ ಎಂದೂ ಪ್ರತಿಯೊಂದು ವಸ್ತುವೂ ಜಡವಾಗಿರಲಿ ಚೇತನವಾಗಿರಲಿ ಪರಸ್ಪರೋಪ ಜೀವಿಯೆಂದೂ ಅನೇಕ ಶತಮಾನಗಳ ಹಿಂದೆ ಮೃತ್ಯುಮುಖಿಯಾಗಿದ್ದ ರಾವಣನ ಆರ್ತನಾದ ನಾಳೆ ಸಾಯಲಿರುವ ನೊಣವೊಂದರ ರೋದನಕ್ಕೂ ನಾಳೆ ಅರಳಲಿರುವ ಕುಸುಮವೊಂದರ ಸೌಂದರ್ಯಕ್ಕೂ ಹೇಗೋ ಸಂಬಂಧಪಟ್ಟಿದೆಯೆಂದೂ ನನ್ನ ಧೃಡವಾದ ನಂಬುಗೆ. ಆದ್ದರಿಂದ ಬಣ್ಣ ಬಣ್ಣದ ಸಣ್ಣ ಹಕ್ಕಿಯೊಂದು ಯಾರೂ ಕಾಣದಂತೆ ಮಲೆನಾಡಿನ ಕಾಡಿನ ಒಂದು ಮರದಲ್ಲಿ ಕುಳಿತು ಪ್ರಾತಃಕಾಲದ ಸ್ವರ್ಣೋತ್ಸವದಲ್ಲಿ ಇಂಪಾಗಿ ಗಾನಗೈಯುತ್ತಿದ್ದರೆ ನಾನು ಆ ಸನ್ನಿವೇಶವನ್ನು ಸರ್ವಕಾಲ ಸರ್ವದೇಶರಚಿತವಾದ ವಿರಾಟ್‌ರಂಗದ ಭಿತ್ತಿಯಲ್ಲಿಟ್ಟು ನೋಡಿ ಕೇಳಿ ನಲಿಯುತ್ತೇನೆ. ಹಾಗೆ ಮಾಡುವುದರಿಂದ ಸನ್ನಿವೇಶದ ಮಹತ್ವ ನೂರ್ಮಡಿಯಾಗುತ್ತದೆ. ಅದು ಜಗತ್ತಿನಲ್ಲಿ ನಡೆಯುವ ಮತ್ತಾವ ಮಹದ್ವ್ಯಾಪಾರಕ್ಕೂ ಕೀಲಾಗುವುದಿಲ್ಲ. ಬ್ರಹ್ಮವ್ಯೂಹದಲ್ಲಿ ಷೇಕ್ಸಪಿಯರಿನ ನಾಟಕ ರಚನೆ ಎಷ್ಟು ಮುಖ್ಯವೋ, ಮೊನ್ನೆ ನಡೆದ ಘೋರಯುದ್ಧ ಎಷ್ಟು ಅನಿವಾರ್ಯವೋ, ಅದು ಅಷ್ಟೇ ಮುಖ್ಯ, ಅಷ್ಟೇ ಅನಿವಾರ್ಯ ಎಂಬುದು ನನ್ನ ನಂಬುಗೆ. ಭುವನಕವಿಯ ಭವ್ಯ ಸ್ವರಮೇಲದಲ್ಲಿ ರನ್ನ ಒಂದು ಲಲಿತರಾಗವಾದರೆ ಗೂಬೆ ಕೂಡ ಒಂದು ಕೀಚುದನಿ!

ಅಣ್ಣಪ್ಪನ ಗುಡಿಸಲಿನಲ್ಲಿ ಕಾಲಮಣೆಯ ಮೇಲೆ ಕುಳಿತು ಇಂತಹ ಸ್ವಪ್ನ ಸಮುದ್ರದಲ್ಲಿ ತೇಲತೊಡಗಿದೆನು. ಆ ಬಡವನ ರೋಗದ ವಿಷಮಾವಸ್ಥೆ ಭರತ ಖಂಡದ ಸ್ವಾತಂತ್ರ್ಯ ಸಂಗ್ರಾಮದಂತೆಯೇ ಮುಖ್ಯವಾಗಿ ಕಂಡಿತು. ಹೊರಗೆ ನೋಡಿದೆ. ಮಲೆನಾಡಿನ ಹೆಬ್ಬನ ಹೆಬ್ಬೆಟ್ಟಗಳು ಸಾಲುಸಾಲಾಗಿ ಅನಂತವಾಗಿ ಹಬ್ಬಿದ್ದುವು. ಆ ಪರ್ನಾಸಮುದ್ರದ ತರಂಗಗಳ ಮೇಲೆ ನಡುಹಗಲಿನ ಉರಿಬಿಸಿಲು ಪಸರಿಸಿತ್ತು. ಮೇಲೆ, ಅನಂತವಾಗಿದ್ದರೂ ಶಾಂತವಾಗಿ ಕಾಣುತ್ತಿದ್ದ ನೀಲಾಕಾಶದಲ್ಲಿ ಅನೇಕ ಕೋಟಿ ಮೈಲಿಗಳ ದೂರದಲ್ಲಿ ಸೂರ್ಯ ಹೊಳೆಯುತ್ತಿದ್ದನು. ಗುಡಿಸಲಿನ ಕೊಳಕಾದ ಅಂಗಳದಲ್ಲಿ ತಿಪ್ಪೆಯ ಮೇಲೆ ಹೇಂಟೆಯೊಂದು ಮಣ್ಣನ್ನು ಕೆದರಿ ಕೆದರಿ ತನ್ನ ಹೂಮರಿಗಳಿಗೆ ತಿಂಡಿ ತಿನ್ನಿಸುತ್ತಿತ್ತು; ಹುಳು ಹುಪ್ಪಟೆಗಳನ್ನು! ತನ್ನ ಯಜಮಾನನ ರೋಗದ ವಿಚಾರ ಅದಕ್ಕೆ ಗೊತ್ತಾದಂತೆ ತೋರಲಿಲ್ಲ! ಕಂತ್ರಿನಾಯಿಯೊಂದು ಅಲ್ಲಿಯೇ ಪಕ್ಕದಲ್ಲಿ ಮಲಗಿ ಮೈಮೇಲೆ ಕುಳಿತು ಪೀಡಿಸುವ ನೊಣಗಳನ್ನು ಬಾಯಿ ಹಾಕಿ ಅಟ್ಟಿಕೊಳ್ಳುತ್ತಿತ್ತು. ಎದುರುಗಡೆ ಗದ್ದೆಯ ಬಯಲಿನಲ್ಲಿ ಕೆಲವು ಕಾಲ್ನಡೆಗಳು ಮೇಯುತ್ತಿದ್ದವು. ಕಾಲದ ಆಳದಲ್ಲಿ ಮುಳುಗಿ ದೇಶದ ವಿಸ್ತಾರದಲ್ಲಿ ಸಂಚರಿಸಿದೆ. ಪುನಃ ವಿರಾಟ್‌ರಂಗದ ಭಿತ್ತಿಯಲ್ಲಿ ಅಣ್ಣಪ್ಪನ ರೇಷ್ಮೆ ಕಾಯಿಲೆಯನ್ನು ಚಿತ್ರಿಸಿದೆ- ಸಿಂಧುವಿನಲ್ಲಿ ಒಂದು ಬಿಂದು! ಈ ವಿಚಿತ್ರ ಸೃಷ್ಟಿಯ ಉದ್ದೇಶ, ಸುಖದುಃಖಗಳ ಅರ್ಥ, ಆ ಬಡವನೂ ಲೋಕರೂಢಿಯ ದೃಷ್ಟಿಗೆ ಅಲ್ಪನೂ ಆದ ಅಣ್ಣಪ್ಪನ ಜನ್ಮ ಜೀವಿತಗಳ ಉದ್ದೇಶ, ಅರ್ಥ; - ಏನೇನೋ ನೂರು, ಸಾವಿರ, ಲಕ್ಷ, ಕೋಟಿ ಬಾವನೆಗಳು ‘ದರ್ಶನ’ದಲ್ಲಿ ಮಿಂಚಿದವು. ನನಗೊಂದು ಬಗೆಹರಿಯಲಿಲ್ಲ ನಮ್ರನಾದೆ; ದೀನನಾದೆ ನಿಟ್ಟುಸಿರುಬಿಟ್ಟು ಮುಂದಿನ ಕರ್ತವ್ಯಕ್ಕೆ ಸಿದ್ಧನಾದೆ.

ಬತ್ತಲೆ ಕೂತಿದ್ದ ಅಣ್ಣಪ್ಪ! ಅವನು ಕೂತಿದ್ದ ಎಂಬುದನ್ನು ಕೇಳಿ ನೀವು ಕಾಯಿಲೆ ಅಷ್ಟೇನೂ ಜೋರಾಗಿರಲಿಲ್ಲ ಎಂದು ತಿಳಿದುಬಿಟ್ಟೇರಿ. ಆಸ್ಪತ್ರೆಯಲ್ಲಾದರೆ ಅಂತಹ ರೋಗಿಯನ್ನು ಸ್ವಲ್ಪ ಅಲುಗಾಡಲೂ ಕೂಡ ಬಿಡರು. ಅವನನ್ನು ನೋಡಿದರೆ ಸ್ಮಶಾನಕ್ಕೆ ತಾನೇ ಹೊರಡಲು ಸಿದ್ಧನಾಗಿ ಕುಳಿತಂತೆ ತೋರುತ್ತಿತ್ತು. ನಾನು ಮಾಯನ ಕಡೆ ತಿರುಗಿ “ಇದೇನೋ ಇದು? ಅವನಿಗೆ ಮಲಗಲು ಹಾಸಿಗೆ ಇಲ್ಲವೇನೋ?” ಎಂದೆ. ಮಾಯ “ಹಾಸಿಗೆ ಬೇಡ ಎಂದ. ಬಹಳ ಉರಿಯಂತೆ” ಎಂದು ಅಲ್ಲಿ ಬಿದ್ದಿದ್ದ ಚಿಂದಿ ಕಂಬಳಿಯನ್ನೇ ಹಾಸಿದನು. ನಾನು ಅಣ್ಣಪ್ಪನಿಗೆ ಮಲಗಲು ಹೇಳಿದೆ. ಅವನು ಪುನಃ ಅದೇ ಪ್ರೇತವಾಣಿಯೋ ಎಂಬಂತಿರುವ ಪಾತಾಳಸ್ವರದಿಂದ “ಅಯ್ಯಾ, ನಾನು

ಸಾಯುತ್ತೇನೆ. ನನ್ನ ಸಾಲಕ್ಕೆ ನನ್ನ ಮನೆಯ ದನಕರು ಪಾತ್ರೆ ಎಲ್ಲದರ ಪಟ್ಟಿಯನ್ನು ತೆಗೆದುಕೊಳ್ಳಿ" ಎಂದನು. ನನಗೆ ಎದೆಯಿರಿದಂತಾಯಿತು. "ಅದೆಲ್ಲಾ ಹಾಗಿರಲಿ! ನೀನು ಮಲಗಿಕೋ ಮೊದಲು" ಎಂದು ಗದರಿ ಹೇಳಿದೆ. ನನ್ನ ಬಲತ್ಕಾರಕ್ಕೆ ಮಲಗಿಕೊಂಡ. ಅವನು ಮಲಗಿಕೊಂಡ ರೀತಿಯನ್ನು ನೋಡಿದರೆ, ಮಲಗುವುದರಿಂದ ಏನೂ ಪ್ರಯೋಜನವಿಲ್ಲ ಎಂದು ಸಂಪೂರ್ಣವಾಗಿ ಹತಾಶನಾದಂತೆ ತೋರಿತು.

ನಾನು ಅವನ ಕಾಯಿಲೆಯ ಪ್ರಸ್ತಾಪವನ್ನು ತೆಗೆದರೆ ಅವನು ಸಾಲದ ಮಾತನ್ನೇ ತೆಗೆಯುತ್ತಿದ್ದನು. "ಅಯ್ಯಾ, ನನ್ನ ಋಣ ತೀರಿದ್ದನ್ನು ನೋಡಿ ಸುಖವಾಗಿ ಸಾಯುತ್ತೇನೆ. ನನ್ನ ದನಕರು ಪಾತ್ರೆ ಎಲ್ಲ ಪಟ್ಟಿಮಾಡಿ" ಎಂಬುದೇ ಅವನ ಪಲ್ಲವಿಯಾಯಿತು. ಗಿ- ಯವರು ಬಹಳವಾಗಿ ಹೇಳಿದರು. ಸಾಲದ ಚಿಂತೆ ಬೇಡ ಎಂದು. ನಾನೂ ಹೇಳಿದೆ ನೀನು ಸಾಯುವುದಿಲ್ಲ; ಏನೂ ಇಲ್ಲ. ಸುಮ್ಮನೆ ಮಲಗಿಕೋ. ಡಾಕ್ಟರಿಗೆ ನಾನೇ ಕಾಗದ ಬರೆದು ಔಷಧಿ ತರಿಸಿ ಕೊಡುತ್ತೇನೆ ಎಂದೆ. ನನ್ನ ಮಾತಿನ ಎರಡನೆಯ ಅಂಶವನ್ನು ನಂಬಿದನೇ ಹೊರತು ಮೊದಲನೆಯ ಭಾಗದಲ್ಲಿ ಅವನಿಗಿ ನಂಬುಗೆ ಇದ್ದಂತ ತೋರಲಿಲ್ಲ. ಕಡೆಗೆ ಅವನ ಕಾಟವನ್ನು ತಡೆಯಾಲಾರದೆ ಗಿ- ಯವರಿಗೆ ಹೇಳಿದೆ. "ಒಂದು ಪಟ್ಟಿ ಮಾಡಿ" ಎಂದು. ಅವರೂ ಪಟ್ಟಿಯನ್ನೂ ಬರೆಯುವಂತೆ ನಟಿಸಿದರು. ನಡು ನಡುವೆ ಅಣ್ಣಪ್ಪ ಮಾತನಾಡಲು ಯತ್ನಿಸಿದನು. ನಾನು ರೇಗಿದಂತೆ ನಟಿಸಿ ಅವನು ಸುಮ್ಮನೆ ಮಲಗುವಂತೆ ಮಾಡಿದೆ. ಒಂದು ಬಟ್ಟೆಯನ್ನೂ ಹೊದಿಸುವಂತೆ ಮಾಡಿದೆ. ಏಕೆಂದರೆ ಅವನಿಗೆ ಬಂದಿದ್ದುದು ನ್ಯೂಮೋನಿಯಾ ಕಾಯಿಲೆ. ಅವನಿಗಿದ್ದ ಕಷ್ಟ ಸಹಿಷ್ಣುತೆ ಇಲ್ಲದಿದ್ದರೆ ಅವನಾಗಲೆ ಹೆಣವಾಗಿರಬೇಕಿತ್ತು. ಹಳ್ಳಿಗರಿಗೆ ಕಾಯಿಲೆಗಳಿಗಿರುವ ಜಾತಿ ಭೇದ ತಿಳಿಯದು. ಅವರಿಗೆ ನ್ಯೂಮೋನಿಯಾ ಆಗಲಿ, ಟೈಫಾಯ್ಡ್ಆಗಲಿ, ಮಲೇರಿಯಾ ಆಗಲಿ, ಏನೇ ಆಗಲಿ, ಎಲ್ಲವೂ ಬರಿಯ ಕಾಯಿಲೆ, ನ್ಯೂಮೋನಿಯಾವನ್ನು ರೇಷ್ಮೆ ಕಾಯಿಲೆ ಎಂದು ಅವರಲ್ಲಿ ತಿಳಿದವರು ಕರೆಯುತ್ತಾರೆ. ಬಹುಶಃ "ಶ್ಲೇಷ್ಮಜ್ವರ" "ರೇಷ್ಮೆ ಕಾಯಿಲೆ" ಆಗಿರಬೇಕೆಂದು ತೋರುತ್ತದೆ.

ಪಟ್ಟಿ ಬರೆಯುವ ನಾಟಕವನ್ನು ಪೂರೈಸಿ ಅವನಿಗೆ ಧೈರ್ಯ ಹೇಳಿ, ಬುದ್ಧಿ ಹೇಳಿದೆವು. ಅವನು ಏಳದಂತೆ ನೋಡಿಕೊಳ್ಳಬೇಕೆಂದು ಮಾಯನಿಗೆ ಹೇಳಿದೆವು. ಕಡೆಗೆ ಡಾಕ್ಟರಿಗೊಂದು ವಿಷಾದವಾದ ಕಾಗದ ಬರೆದು ಒಬ್ಬ ಆಳನ್ನು ಔಷಧಿಗೆಂದು ಕಳುಹಿಸಿದೆವು. ಸಾಯಂಕಾಲ ಪುನಃ ಬಂದು ನೋಡುತ್ತೇವೆ ಎಂದು ಹೇಳಿ ಹೊರಟೆವು. ದಾರಿಯಲ್ಲಿ ಬರುತ್ತಾ ಅಣ್ಣಪ್ಪನಿಗಾಗಿ ಮನಸ್ಸಿನಲ್ಲಿಯೇ ನಮ್ರವಾಗಿ ಭಗಂತನನು ಪ್ರಾರ್ಥಿಸಿದೆ. ಮನೆಗೆ ಬಂದ ಮೇಲೆ ರೋಗಿಯ ಪಥ್ಯಕ್ಕಾಗಿ ಕೆಲವು ಪದಾರ್ಥಗಳನ್ನು ಕಳುಹಿಸಿದೆವು.
ಸಾಯಂಕಾಲ ರೋಗಿಯನ್ನು ನೋಡಲು ಹೋದವು!....

**ಲೇಖಕರು**

ಕುವೆಂಪು ಕಾವ್ಯನಾಮದಿಂದಲೇ ಪ್ರಸಿದ್ಧರಾಗಿರುವ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ (೧೯೦೪-೧೯೯೪) ಅವರು, ೨೦ನೇ ಶತಮಾನ ಕಂಡ ದೊಡ್ಡ ಲೇಖಕರಲ್ಲಿ ಒಬ್ಬರು. ಅವರು ಬರೆದ 'ಕಾನೂರು ಹೆಗ್ಗಡಿತಿ' ಹಾಗೂ 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳು, ಜಗತ್ತಿನ ಶ್ರೇಷ್ಠ ಕಾದಂಬರಿಗಳ ಸಾಲಿಗೆ ಸೇರುವಂತಹವು ' ಶ್ರೀರಾಮಾಯಾಣ ದರ್ಶನಂ' ಮಹಾಕಾವ್ಯಕ್ಕೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ (೧೯೫೫) ಜ್ಞಾನಪೀಠ ಪ್ರಶಸ್ತಿಯೂ (೧೯೬೮) ಬಂದಿವೆ. ಪಾಂಚಜನ್ಯ 'ಪಕ್ಷಿಕಾಶಿ', 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ', 'ಚಂದ್ರಮಂಚಕೆ ಬಾ ಚಕೋರಿ' ಮುಂತಾದ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಶೂದ್ರತಪಸ್ವಿ', 'ಬೆರಳ್ಗೆ ಕೊರಳ್' ಮುಂತಾದವು ಅವರ ನಾಟಕಗಳು. ಕುವೆಂಪು ನಮ್ಮ ದೊಡ್ಡ ಲೇಖಕರು ಮಾತ್ರವಲ್ಲ. ತಮ್ಮ ವೈಚಾರಿಕ ಚಿಂತನೆಗಳಿಂದ ಕನ್ನಡದಲ್ಲಿ ಅಪಾರ ಪ್ರಭಾವ ಭೀರಿದ ಸಾಂಸ್ಕೃತಿಕ ವ್ಯಕ್ತಿತ್ವ ಕೂಡ. ಅವರ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ', 'ವಿಚಾರಕ್ರಾಂತಿಗೀ ಆಹ್ವಾನ' ಮೊದಲಾದ ಕೃತಿಗಳಲ್ಲಿ ಪ್ರಖರವಾದ ವಿಚಾರಗಳಿವೆ. ' ನೆನಪಿನ ದೋಣಿಯಲ್ಲಿ ' ಅವರ ಆತ್ಮಚರಿತ್ರೆಯಾಗಿದೆ. ಕುವೆಂಪು ೧೯೫೭ರಲ್ಲಿ ಧಾರವಾಡದಲ್ಲಿ ನಡೆದ ೩೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಆಶ್ರಯ**

ಪ್ರಸ್ತುತ ಪ್ರಬಂಧವನ್ನು ಅವರ 'ಮಲೆನಾಡಿನ ಚಿತ್ರಗಳು' ಎಂಬ ಪ್ರಬಂಧ ಸಂಕಲನದಿಂದ ಆರಿಸಿಕೊಳ್ಳಲಾಗಿದೆ. ಈ ಪ್ರಬಂಧವು ಮಲೆನಾಡಿನಲ್ಲಿದ್ದ ಬಡತನ, ರೋಗ ಹಾಗೂ ಅಜ್ಞಾನವನ್ನು ಕುರಿತ ಹೃದಯವಿದ್ರಾವಕ ಚಿತ್ರವನ್ನು ನೀಡುತ್ತದೆ. ಬಡವರು ತಮ್ಮೆಲ್ಲ

ನೋವು ಕಷ್ಟಗಳ ಒಳಗೆ ಕೂಡ ಕತೆ ಹೇಳುವ ಹಾಡುಕತ್ತುವ ಪ್ರತಿಭೆಯನ್ನು ಪಡೆದಿರುತ್ತಾರೆ, ಎಂಬುದು ಕೂಡ ಇಲ್ಲಿ ಪ್ರಕಟವಾಗುತ್ತದೆ.

**ಪದಕೋಶ**

ಕಡೆಯುವುದು = ರುಬ್ಬುವುದು, ಬಿಲ್ಲಂಬೆರಗು = ಮಹಾ ಆಶ್ಚರ್ಯ, ಕಾಲ್ನಡೆ = ದನಗಳು, ರನ್ನ = ಒಂದು ಜಾತಿಯ ಪಕ್ಷಿ, ಮೊರಡಾದ = ಉರುಟಾದ, ನಾಚಿಕೆಮುಳ್ಳು = ಮುಟ್ಟಿದರೆ ಎಲೆ ಮುದುರಿಕೊಳ್ಳುವ ಮುಳ್ಳಿನ ಗಿಡ, ಓಡಹುಳು = ಸಹಣಿಯ ಹುಳು, ಶ್ಲೇಷ್ಮ = ಕಫ, ಪರ್ಣಸಮುದ್ರ = ಎಲೆಗಳ ಸಮುದ್ರ, ಬೂರುಗ = ಹತಿಯನ್ನು ಬಿಡುವ ಒಂದು ಜಾತಿಯ ಕಾಡುಮರ

**ಟಿಪ್ಪಣಿ**

ಕೆಸರು =ಹಲಗೆ ಮಲೆನಾಡಿನಲ್ಲ್ ಹೊರಗಿಂದ ಬಂದವರು ಕುಳಿತುಕೊಳ್ಳಲು ಜಗಲಿಯಲ್ಲಿ ಇರುವ  ಒಂದು ಜಾಗ

**ಪ್ರಶ್ನೆಗಳು**

೧. ಅಣ್ಣಪ್ಪನ ಸ್ವಭಾವದ ಬಗ್ಗೆ ಲೇಖಕರು ಕೊಡುವ ಚಿತ್ರ ಯಾವುದು?
೨. ಅಣ್ಣಪ್ಪ ಹೇಳುವ ಓಡಹುಳು ಕತೆ ಏನು?
೩. ಮಲೆನಾಡಿನಲ್ಲಿ ಕಾಯಿಲೆ ಬಿದ್ದವರಿಗೆ ಯಾವ ಬಗೆಯ ಉಪಚಾರದ ಪದ್ಧತಿಯಿತ್ತು?
೪. ಲೋಕದ ಕಣ್ಣಲ್ಲಿ ಅಲ್ಪವಾದುದು ಹೇಗೆ ನಿಜವಾಗಿಯೂ ಮಹತ್ವವಾದುದು ಎಂದು ಲೇಖಕರು ವಿವರಿಸುತ್ತಾರೆ.?
೫. ಅಣ್ಣಪ್ಪನ ದೇಹಸ್ಥಿಯು ಲೇಖಕರ ಕಣ್ಣಿಗೆ ಹೇಗೆ ಕಂಡಿತು?
೬. ರೋಗಿಯಾದ ಅಣ್ಣಪ್ಪನ ಮುಂದೆ ಕುಳಿತು ಲೇಖಕರು ಮಾಡುವ ದಾರ್ಶನಿಕ ಚಿಂತನೆ ಯಾವುದು?
೭. ಅಣ್ಣಪ್ಪ ತನ್ನ ಸಾಲ ತೀರಿಸಲು ಮಾಡುವ ಕೊನೆಯ ವಿನಂತಿಯಲ್ಲಿ ಅವನ ಅಸಹಾಯಕತೆ ಹಾಗೂ ಸ್ವಾಭಿಮಾನ ಹೇಗೆ ವ್ಯಕ್ತವಾಗುತ್ತದೆ?

**ಪೂರಕ ಓದು**

೧. ಕುವೆಂಪು ಅವರ 'ಯಾರೂ ಅರಿಯದ ವೀರ' ಹಾಗೂ 'ಶ್ರೀಮನ್ಮೂಕವಾಗಿತ್ತು' ಎಂಬ ಕತೆಗಳು
೨. ತ್ಯಾನಂದೂರು ಪುಟ್ಟಣ್ಣನವರು ಬರೆದ 'ನಾ ಕಂಡ ಮಲೆನಾಡು'
೩. ಬಿಳುಮನೆ ರಾಮದಾಸ್‌ಅವರು ಬರೆದ 'ಹುಲಿಮಾಡಿಸಿದ ಮದುವೆ ಮತ್ತು ಇತರ ಲೇಖನಗಳು' ಸಂಕಲನ
೪. ಪೂರ್ಣಚಂದ್ರ ತೇಜಸ್ವಿ ಅವರ 'ಪರಿಸರದ ಕತೆ'

# ೫. ನಮ್ಮ ಎಮ್ಮೆಗೆ ಮಾತು ತಿಳಿಯುವುದೆ?

ನಮ್ಮ ನಾಡು ಎಮ್ಮೆಯ ನಾಡು. ಮಹಿಷಮಂಡಲವೆಂಬುದು ನಾವು ಹೆಮ್ಮೆಯಿಂದ ಹೇಳಿಕೊಳ್ಳುವ ಹೆಸರು. ನಮ್ಮ ರಾಜರಿಗೆ ಮಹಿಷಾಸುರಮರ್ದಿನಿ ದೇವರು. ನಾವೆಲ್ಲಾ ಎಮ್ಮೆಯ ಹಾಲಿನಿಂದಲೇ ಬೆಳೆದವರು. ಎಮ್ಮೆ ಹೀಗೆ ನಮಗೆ ದೇವರಾದುದರಿಂದಲೇ ನಮ್ಮ ದೇಶದಲ್ಲಿ ಇತರ ದೇಶಗಳಿಗಿಂತ ಎಮ್ಮೆ ಪ್ರಾಬಲ್ಯ ಹೆಚ್ಚು.

ಇನ್ನು ನಮ್ಮ ಮನೆಯ ಮಾತು. ನಮಗೆ ಎಮ್ಮೆ ಪ್ರಕೃತಿಯಂತೆ ಶಾಶ್ವತ. ಎಮ್ಮೆ ಇಲ್ಲದ ಕಾಲ ನಮ್ಮಲ್ಲಿ ಇಲ್ಲವೇ ಇಲ್ಲ. ಮನೆಯ ಯಜಮಾನರ ವಂಶವನ್ನೂ ಹಿರಿಯರನ್ನೂ ಮೂರು ತಲೆ ನಾಲ್ಕು ತಲೆಗಳಿಂದ ಗುರುತಿಸುವಂತೆ ನಮ್ಮ ಮನೆಯ ಎಮ್ಮೆಯ ಮೂಲವನ್ನೂ ನಾಲ್ಕು ತಲೆಗಳಿಂದ ಗುರುತಿಸಬಹುದು. ಇದು ಹೀರೇಗೌಡ್ನ ಹಳ್ಳಿ ಎಮ್ಮೆ. ಇದರ ಹೆಸರು ದೊಡ್ಡಿ. ಇದು ಒಂಭತ್ತು ಕರು ಹಾಕಿದೆ. ಇದರ ನಾಲ್ಕನೆಯ ಕರು ಬಿಳಿಕೋಡಿನ ಎಮ್ಮೆ ಅದರ ಮೂರನೆಯ ಕರು ಸಣ್ಣ ಎಮ್ಮೆ. ಅದರ ಎರಡನೆಯ ಕರು ಕಡಸು. ಸಣ್ಣೆಮ್ಮೆಯ ಮೊದಲನೆ ಕರು ಈಗಾಗಲೇ ಎರಡು ಕರ ಹಾಕಿದೆ. ಹೀಗೆ ನಮ್ಮ ಮನೆಯ ಎಮ್ಮೆಯ ವಂಶವೃಕ್ಷ ರಾಜಮಹಾರಾಜರ ವಂಶವೃಕ್ಷ ಗಳಿಗಿಂತ ಹೆಚ್ಚು ಸ್ಪಷ್ಟವೂ ಶುದ್ಧವೂ ನೇರವೂ ಆಗಿದೆ. ಸಣ್ಣ ಎಮ್ಮೆಯ ಸಾಧು ಸ್ವಭಾವವನ್ನೂ ಆಂದವಾದ ಕೋಡುಗಳನ್ನೂ, ಅಷ್ಟು ಸಣ್ಣ ಕೆಚ್ಚಲಿಗೆ ಅಷ್ಟೊಂದು ಹಾಲನ್ನೂ ನೋಡಿ ಅನೇಕರು, ಅದರ ಅಪ್ಪ, ಅಮ್ಮ, ತಳಿ ಯಾವುದೆಂದು ಪದೇ ಪದೇ ವಿಚಾರಿಸಿಕೊಂಡು ಹೋಗುತ್ತಾರೆ. ಈ ಕಾರಣಗಳಿಗಾಗಿ ನಮ್ಮ ಎಮ್ಮೆಯ ವಂಶವೃಕ್ಷವನ್ನಿಡುವುದು ನಮಗೆ ಅವಶ್ಯಕ.

ನಮ್ಮ ಮನೆಗೆ ಎಮ್ಮೆ ಪ್ರಕೃತಿಯಂತೆ ಶಾಶ್ವತ ಎಂದು ಹೇಳಿದೆ. ನಮ್ಮ ಮನೆಯಲ್ಲಿ ಯಾವಾಗಲೂ ಎಮ್ಮೆಗಳು ಇದ್ದೇ ಇರುತ್ತವೆ; ಆದರೆ ಈ ಎಲ್ಲಾ ಎಮ್ಮೆಗಳೂ ಹಿರೇಗೌಡ್ನ ಹಳ್ಳಿಯ ದೊಡ್ಡ ಎಮ್ಮೆಯ ತಳಿಗಳೇ ಎಂದು ನಮ್ಮ ಹಿರಿಯರು ಹಟದಿಂದ ವಾದಿಸುತ್ತಾರೆ. ಹಿರೇಗೌಡ್ನ ಹಳ್ಳಿಯ ಆ ದೊಡ್ಡ ಎಮ್ಮೆಗೆ ಈಗಾಗಲೇ ಮುವತ್ತು ನಲವತ್ತು ವರುಷಗಳಾಗಿರಬೇಕು. ಆದರೆ ಅದರ ತಳಿಗಳ ಸಂಖ್ಯೆ ಹೆಚ್ಚಾಗಿ ಬೆಳೆದಿರುವುದರಿಂದ ಯಾವುದರ ಅಪ್ಪ ಅಜ್ಜಿ ಯಾರು ಎಂದು ಗುರುತಿಸುವುದು ಅಸಾಧ್ಯವಾಗುತ್ತಿದೆ, ಆದರೆ ಇಷ್ಟು ಖಂಡಿತ. ನಮಗೆ ಗಾಳಿ, ನೀರು, ನದಿ, ಮರ, ಕೆರೆ, ಹೂವು, ಕಾಡು ಹೇಗೆ ಪ್ರಕೃತಿಯೋ ಹಾಗೆಯೇ ಎಮ್ಮೆಯೂ ಪ್ರಕೃತಿ, ಜನ ಬರಬಹುದು; ಜನ ಹೋಗಬಹುದು; ಜನ ಹುಟ್ಟಬಹುದು; ಜನ ಸಾಯಬಹುದು; ರಾಜ ಬದಲಾಯಿಸಬಹುದು; ರಾಜ್ಯದಲ್ಲಿ ಕ್ರಾಂತಿಯಾಗಬಹುದು; ಆದರೆ ನಮ್ಮ ಕೊಟ್ಟಿಗೆಯಲ್ಲಿ ಮಾತ್ರ ಎಮ್ಮೆ ನಿತ್ಯ; ಪುರಾತನ ; ಅಚಲ.

ಪ್ರಕೃತಿಯನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟ. ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಸುಮ್ಮನೆ ನೋಡಬೇಕು. ಸಾಧ್ಯವಾದರೆ ಅನುಸರಿಸಬೇಕು. ನಮ್ಮ ಪೂರ್ವದ ಋಷಿಗಳು ಪ್ರಕೃತಿಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಲಿಲ. ಅದನ್ನು ಅನುಸರಿಸಿದರು. ಅದರ ಪೂಜಾರಿಗಳಾದರು. ಎಮ್ಮೆ ಪ್ರಕೃತಿಯಂತೆ; ಅದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಅದನ್ನು ಸುಮ್ಮನೆ ಅನುಸರಿಸಬೇಕು. ಮಹಾತ್ಮ ಗಾಂಧಿಯಂತಹ ಭಾರತ ಭಾಗ್ಯವಿಧಾತರಿಗೆ ಸಹ ಎಮ್ಮೆ ಅರ್ಥವಾಗಿಲ್ಲ ಮಾಹಾತ್ಮ ಗಾಂಧಿಯಂತಹ ಭಾರತ ಭಾಗ್ಯವಿಧಾತರಿಗೆ ಸಹ ಎಮ್ಮೆ ಅರ್ಥವಾಗಿಲ್ಲ. "ಎಮ್ಮೆ ಗೋಜಾತಿಗೆ ಸೇರಿದುದಲ್ಲ. ಇದರ ಬೆಳವಣಿಗೆಯಿಂದ ಭಾರತಲ್ಲಿ ಗೋವುಗಳ ಪ್ರಾಬಲ್ಯ ಕಡಿಮೆಯಾಗಿದೆ. ಸಾಧ್ಯವಾದಷ್ಟು ಬೇಗ ಎಮ್ಮೆಗಳನ್ನು ಇಲ್ಲದಂತೆ ಮಾಡಬೇಕು. ಇದರ ಹಾಲೂ ಜನಕ್ಕೆ ಆರೋಗ್ಯವಲ್ಲ. ಹಸುವಿನ ಹಾಲಿನಲ್ಲಿರುವ ತ್ರಾಣಪುಷ್ಟಿ ಎಮ್ಮೆಯ ಹಾಲಿನಲ್ಲಿ ಇಲ್ಲ. ಆದುದರಿಂದ ಎಮ್ಮೆಗಳನ್ನು ಇಲ್ಲದಂತೆ ಮಾಡಿ ಒಳ್ಳೆಯ ಜಾತಿಯ ಗೋವುಗಳನ್ನು ವೃದ್ಧಿಪಡಿಸುವುದೇ ಗೋಸೇವೆ" ಎಂದು ಮಹಾತ್ಮಗಾಂಧಿಯವರು ಸಾರಿ ಸಾರಿ ಹೇಳಿದ್ದಾರೆ. ನಮ್ಮ ಮನೆಯ ಎಮ್ಮೆಯ ಮುಖವನ್ನು ನೋಡಿದರೆ ಅದು ನನ್ನನ್ನು ನೋಡಿ ಕನಿಕರದಿಂದ "ಪಾಪ, ಋಷಿಗಳಿಗೆ ಪ್ರಕೃತಿ ಅರ್ಥವಾಗಲಿಲ್ಲ. ಹಾಗೆಯೇ ಗಾಂಧಿಗೂ ನಾವು ಅರ್ಥವಾಗಿಲ್ಲ. ನಮ್ಮನ್ನು ಇಲ್ಲದಂತೆ ಮಾಡಬೇಕಂತೆ; ಹೇಗೆ ಮಾಡುತ್ತೀರಿ? ಬೆಟ್ಟಗಳನ್ನು ಇಲ್ಲದಂತೆ ಮಾಡುತ್ತೀರಾ? ನದಿಗಳನ್ನೂ ಕಾಡುಗಳನ್ನು ಇಲ್ಲದಂತೆ ಮಾಡುತ್ತೀರಾ? ಪಾಪ, ಗಾಂಧಿಗೆ ಏನು ಗೊತ್ತು?" ಎಂದು ಹೇಳುವಂತೆ ತೋರುತ್ತದೆ. ಗಾಂಧಿಯವರ ತತ್ವವನ್ನು ಜ್ಞಾಪಕದಲ್ಲಿಟ್ಟುಕೊಂಡಿರುವ ನಾನು ಆ ಎಮ್ಮೆಯ ಮುಂದೆ ಹೋದಾಗ ನಮ್ಮ

ಮನಸ್ಸಿನಲ್ಲಿರುವುದನ್ನು ಅದು ತಿಳಿದಿರುವಂತೆ "ನನಗೆ ಎಲ್ಲಾ ಗೊತ್ತು" ಎಂಬುದಾಗಿ ತಲೆಯಲ್ಲಾಡಿಸುತ್ತದೆ. ಗಾಂಧಿಯವರ ತತ್ವವನ್ನು ತಿಳಿದುದೇ ನನ್ನ ತಪ್ಪು ಎಂಬ ಭಾವ ನನ್ನಲ್ಲಿ ಮೂಡಿ ನಾನು ಈ ಎಮ್ಮೆಗೆ ಅಪರಾಧಿ ಎಂದುಕೊಳ್ಳುತ್ತೇನೆ.

ನಮ್ಮ ದೇಶದ ಜನಗಳಂತೆಯೇ ನಮ್ಮ ದೇಶದ ರಾಸುಗಳೂ. ಈಗಾಗಲೇ, ಪುಷ್ಟರಾದ ಜನ ನಮ್ಮಲ್ಲಿ ಎಲ್ಲಿಯೂ ಕಣ್ಣಿಗೆ ಬೀಳುವುದಿಲ್ಲ. ಎಲ್ಲರೂ ಗುಜ್ಜಾರಿಗಳೇ, ವಾಮನರೇ ಇನ್ನೂ ಕೆಲವು ಕಾಲ ಕಳೆದರೆ ಇವರು ಮನುಷ್ಯರೋ ಎಂಬುದನ್ನು ಕುರಿತು ನೋಡಬೇಕಾಗುತ್ತದೆ. ಹೊಟ್ಟೆ ತುಂಬ ಆಹಾರವಿಲ್ಲದವನು ಬೆಳೆಯುವುದು ಹೇಗೆ? ಜನಕ್ಕೆ ಹೊಟ್ಟೆಗಿಲ್ಲದೆ ತಿರುಗುವಾಗ ದನಕ್ಕೆ ಏನು ಸಿಕ್ಕೀತು? ನಮ್ಮ ಹಸುಗಳು ಆಡು ಕುರಿಗಳಂತೆ ಆಗುತ್ತಿವೆ. ಆಹಾರ ನಿಪುಣರ ಸಲಹೆ ಪ್ರಕಾರ ನಮ್ಮಲ್ಲಿ ಪ್ರತಿಯೊಬ್ಬರೂ ಪ್ರತಿದಿನವೂ ಹತ್ತು ಔನ್ಸ್‌ಹಾಲನ್ನಾದರೂ ಕುಡಿಯಬೇಕಂತೆ. ಇಲ್ಲದಿದ್ದರೆ ನಮ್ಮ ಆರೋಗ್ಯ ಸರಿಯಾಗಿರುವುದಿಲ್ಲವಂತೆ. ಹಾಲು ಇರಲಿ. ಈ ನಲವತ್ತು ಕೋಟಿ ಜನಕ್ಕೆ ನಿತ್ಯಾ ಹತ್ತು ಔನ್ಸ್‌ಗಂಜಲ ಸಹ ದೊರೆಯುವಷ್ಟು ಒಳ್ಳೆಯ ಹಸುಗಳು ನಮ್ಮ ದೇಶದಲ್ಲಿ ಇಲ್ಲ. ಎಮ್ಮೆ ವಿಶ್ವಾಮಿತ್ರನ ಸೃಷ್ಟಿಯೆಂದು ಹೇಳುತ್ತಾರೆ. ವಿಶ್ವಾಮಿತ್ರ ಕಾರುಣ್ಯ, ಸೇಡು, ಛಲ, ಮನುಷ್ಯತ್ವ, ಮಾನ ರಸಿಕತೆಗಳ ಪ್ರತಿಬಿಂಬ. ವಸಿಷ್ಠನಂತೆ ಅವನು ಬರಿಯ ಒಣಕಾಷ್ಠವಲ್ಲ. ಅವನು ಅಂತಹ ಕರುಣಾಮಯಮೂರ್ತಿ ಆದುದರಿಂದಲೇ ತಾಯಿ ತಂದೆಗಳಿಬ್ಬರಿಗೂ ಬೇಡವಾದ ಶುನಶ್ಶೇಫನನ್ನು ಯಜ್ಞಬಲಿಯಿಂದ ಉಳಿಸಿದನು. ಅವನು ಕರುಣಾಮಯ  ಮೂರ್ತಿಯಾದುದರಿಂದಲೇ ವಸಿಷ್ಠನ ಮತ್ತು ಅವನ ಮಕ್ಕಳ ಕ್ರೋಧಕ್ಕೆ ತುತ್ತಾಗಿ ಚಂಡಾಲನಾಗೆಂದು ಶಪಿಸಲ್ಪಟ್ಟ ತ್ರಿಶಂಕುವಿನಿಂದ ಯಜ್ಞಮಾಡಿಸಿ ಅವನನ್ನು ಸ್ವರ್ಗಕ್ಕೆ ಕಳುಹಿಸಿದನು. ಹೀಗೆ ಸಂಪ್ರದಾಯಗಳಿಗೆಲ್ಲಾ ವಿರೋಧವಾಗಿ ಕ್ರಾಂತಿಯನ್ನೆಬ್ಬಿಸಿದ ವಿಶ್ವಾಮಿತ್ರನ ಶಿಷ್ಯ ತ್ರಿಶಂಕುವಿಗೆ, ಈ ಸಂಪ್ರದಾಯಶರಣನಾದ ಇಂದ್ರ, ತನ್ನ ಸಂಸ್ಥಾನದಲ್ಲಿ ಸ್ಥಳ ಕೊಡಲಿಲ್ಲ. ತ್ರಿಶಂಕು ತಲೆಕೆಳಗಾಗಿ ಭೋ ಎಂದು ಕೂಗುತ್ತಾ ಭೂಮಿಗೆ ಬಿದ್ದನು. ಆ ಅರ್ತನಾದವನ್ನು ಕೇಳಿ ಕರುಣಾಮಯನಾದ ವಿಶ್ವಾಮಿತ್ರ ಅವನಿಗೆ ಒಂದು "ಪಾಕೀಸ್ಥಾನ" ವನ್ನೇ ನಿರ್ಮಿಸಿದನು. ಹೊಸ ಜಗತ್ತನ್ನೇ ಸೃಷ್ಟಿಮಾಡಿದನು. ತೆಂಗಿನ ಮರಕ್ಕೆ ಬದಲು ಈಚಲು ಮರನ್ನು ಸೃಷ್ಟಿಸಿದನು. ಹಸುವಿಗೆ ಬದಲು ಎಮ್ಮೆಯನ್ನು ಸೃಷ್ಟಿಮಾಡಿದನು. ವಿಶ್ವಾಮಿತ್ರ ಮಾಡಿದುದೇ ಸರಿ ಎಂಬಂತೆ ತೆಂಗಿನಮರದಿಂದಲೂ ಹೆಂಡವನ್ನೇ ತೆಗೆಯುತ್ತಿದ್ದಾರೆ. ವಿಶ್ವಾಮಿತ್ರ ಎಮ್ಮೆಯನ್ನು ಸೃಷ್ಟಿಸಲು ಅವನಿಗೆ ಹಸುವಿನ ಮೇಲೆ ಉಂಟಾದ ಒಂದು ತಿರಸ್ಕಾರವೂ ಕಾರಣ. ವಸಿಷ್ಠ ಋಷಿ ತನ್ನಲ್ಲಿದ್ದ ನಂದಿನೀಧೇನುವನು ವಿಶ್ವಾಮಿತ್ರನಿಗೆ ಕೊಡಲಿಲ್ಲ. ವಿಶ್ವಾಮಿತ್ರ ಕೋಪದಿಂದ ಹಸುವಿಗಿಂತ ಹೆಚ್ಚು ಹಾಲು ಕೊಡುವ ಎಮ್ಮೆಯನ್ನೇ ಸೃಷ್ಟಿಸಿದನು. ವಿಶ್ವಾಮಿತ್ರ ಮೈಸೂರಿನವನೇ ಆಗಿರಬೇಕು. ಆದುದರಿಂದಲೇ ಇಲ್ಲಿ ಎಮ್ಮೆಗಳು ಹೆಚ್ಚು. ಈ ದೇಶಕ್ಕೂ ಎಮ್ಮೆಯ ದೇಶವೆಂದು ಹೆಸರು.

ನಮ್ಮಲ್ಲಿ ಸ್ವಲ್ಪ ಬುದ್ಧಿ ಮಂಕಾಗಿರುವುದನ್ನು "ಎಮ್ಮೆಯ ಹಾಲು ಕುಡಿದನು" ಎಂದು ಹಾಸ್ಯ ಮಾಡುತ್ತಾರೆ. ಹಾಲು ಬೆಳ್ಳಗಿದೆಯೋ, ಕಪ್ಪಗಿದೆಯೋ ಎಂಬುದನ್ನು ನಮ್ಮ ದೇಶದ ಅನೇಕ ಹಳ್ಳಿಗಳವರು ಕಾಣರು. ಹಾಲು ಹಸುವಿನಿಂದ ಬರುತ್ತದೆ. ಎಂಬುದೇ ಅನೇಕರಿಗೆ ಗೊತ್ತಿಲ್ಲ. ನಮ್ಮೂರಿನಿಂದ ಕೊಡಗಿಗೆ ಒಂದು ಸಲ ಬಸ್‌ನಲ್ಲಿ ಹೋಗುತ್ತಿದ್ದೆ. ಬಸ್ಸಿನ ಪ್ರಯಾಣಿಕರ ಪೈಕಿ ಒಬ್ಬ ಹೆಂಗಸು ಒಂದು ಚಿಕ್ಕ ಮಗುವನ್ನು ಎತ್ತಿಕೊಂಡು ಕುಳಿತಿದ್ದಳು. ಮಗು ಸಾಯುವಂತೆ ಇತ್ತು. ಹತ್ತು ಹದಿನೈದು ದಿನಗಳಿಂದ ಜ್ವರ ಬರುತ್ತಿದೆ ಎಂದು ಆಕೆ ಮತ್ತೊಬ್ಬರೊಂದಿಗೆ ಹೇಳುತ್ತಿದ್ದಳು. ಮಧ್ಯಾಹ್ನ ಒಂದು ಗಂಟೆಯ ಉರಿಬಿಸಿಲಿನಲ್ಲಿ ಬಸ್ಸು ಒಂದು ಹಳ್ಳಿಯ ಮುಂದೆ ನಿಂತಿತು. ತಾಯಿ ಎತ್ತಿಕೊಂಡಿದ್ದ ಮಗು ಮೆತ್ತಗೆ ಸಣ್ಣದನಿಯಲ್ಲಿ ಅಳಲು ಪ್ರಾರಂಭಿಸಿತು. ಅದರ ಗಂಟಲಿನಿಂದ ಧ್ವನಿ ಹೊರಡುವುದೇ ಕಷ್ಟವಾಗಿತ್ತು. ತಾಯಿ ಸ್ವಲ್ಪ ಹಾಲು ಕುಡಿಸಬೇಕು ಎಂದುಕೊಂಡು ಮೇಲೆ ಬುಟ್ಟಿಯನ್ನು ಕೆಳಗೆ ತೆಗೆಸಿಕೊಂಡಳು. ಬುಟ್ಟಿಯಲ್ಲಿ ಒಂದು ಸೀಸೆಯಲ್ಲಿ ಇಟ್ಟಿದ್ದ ಹಾಲು ಚೆಲ್ಲಿ ಬುಟ್ಟಿಯ ಬಟ್ಟೆ ನೆನೆದಿದ್ದಿತು. ಹಾಲು ಇರಲಿಲ್ಲ. ಮಗು ಹಸಿವಿನಿಂದ ಸಾಯುವಂತೆ ಆರಚುತ್ತಾ ಕೈಕಾಲು ಬಡಿಯುತ್ತಿದ್ದಿತು. ನಮಗೆಲ್ಲಾ ಅದು ಹಾಲಿಲ್ಲದಿದ್ದರೆ ಸಾಯುವುದೆಂದು ಖಂಡಿತವಾಗಿದ್ದಿತು. ಆ ಹಳ್ಳಿಯಲ್ಲಿ ಮುವ್ವತ್ತು ಮನೆಗಳನ್ನೂ ವಿಚಾರಿಸೆದೆವು. ಸೇರಿಗೆ ಒಂದು ರೂಪಾಯಿ ಕೊಡುವುದಾಗಿ ಹೇಳಿದೆವು. ಆದರೆ ಹಾಲು ಸಿಕ್ಕಲಿಲ್ಲ. ಒಂದು ಮನೆಯಲ್ಲಿಯೂ ಕರೆಯುವ ಹಸುವಾಗಲಿ ಎಮ್ಮೆಯಾಗಲಿ ಇರಲಿಲ್ಲ. ಹಳ್ಳಿಗರು ತಿಂಗಳಿಗೆ ಒಂದು ದಿನವೂ ಮಜ್ಜಿಗೆ ಕುಡಿಯುತ್ತಿರಲಿಲ್ಲ.

ಇಂತಹ ದೇಶದಲ್ಲಿ - "ಎಮ್ಮೆಯ ಹಾಲು ಕುಡಿದರೆ ಬುದ್ಧಿ ಮಂದ. ಹಸುವಿನ ಹಾಲು ಕುಡಿ" ಎಂದು ಹೇಳುವುದು ಹೊಟ್ಟೆಗೆ ಅನ್ನ ಒದಗಿಸಲು ಚೈತನ್ಯವಿಲ್ಲದವನ ಮಗುವಿಗೆ ಶಕ್ತಿ ಬರುವುದಾಕ್ಕಾಗಿ ಗ್ಲೂಕೋಸ್‌ಓವಲ್ಟೀನ್‌ಸೇವಿಸು" ಎಂದಂತೆ. ವಸಿಷ್ಠ ಶ್ರೀಮಂತ

(ಅರಿಸ್ಟೋಕ್ರಾಟ್) ಪಂಹಡಕ್ಕೆ ಸೇರಿದವನು. ಈತನ ಗೋವು ನಂದಿನೀಧೇನು ಯಜ್ಞಕ್ಕೆ ಹಾಲನ್ನೂ ಘೃತವನ್ನೂ ಒದಗಿಸುವುದು. ದೇವತಾರಾಧನೆಗೆ ಅಮೃತವನ್ನು ಒದಗಿಸುವುದು. ಆದರೆ ಅದರ ಹಾಲು ಎಲ್ಲರಿಗೂ ಸಾಲದು; ಗೋವಿನ ಹಾಲು ಅತಿ ಸಾತ್ವಿಕ, ವಸಿಷ್ಠ ಋಷಿಗಳಂತೆಯೇ ಮೇನಕೆಯ ನರ್ತನವನ್ನು ನೋಡಿ ಮುಗ್ಧನಾಗಿ ಇಂದ್ರಿಯಗಳ ಮೇಲಿನ ಹಿಡಿತವನ್ನು ಸಡಿಲಿಸಿ ಆಕೆಯೊಂದಿಗೆ ಹತ್ತು ವರುಷ ವಿಲಾಸಿಯಾಗಿ, - ನೀನು ಇಲ್ಲಿ ಬಂದುದು ನೆನ್ನೆ ಅಲ್ಲವೇ ಎಂದು ಆಕೆಯನ್ನು ಕೇಳಿದ ರಸಿಕತೆ, ಕಾವು, ರಾಜಸಗುಣಗಳುಳ್ಳ ರಾಜಋಷಿಯ ಸೃಷ್ಟಿ ಎಮ್ಮೆಯ ಹಾಲು. ವಸಿಷ್ಠನ ಎದುರಿಗೆ ನೂರು ಮೇನಕೆಯರು ನೂರು ಭಾವಭಂಗಿಗಳಲ್ಲಿ ನೂರು ವರುಷ ಕುಣಿದಿದ್ದರೂ ಆ ಕಾಷ್ಠ ಚಿಗುರುತ್ತಿರಲಿಲ್ಲ. ಆದರೆ ಮನುಷ್ಯನೇ ಆಗಿದ್ದ ವಿಶ್ವಾಮಿತ್ರ ಮೇನಕೆಗೆ ಮಸಸೋತನು. ಅದೇ ರಾಜಸಗುಣ. ಈ ಕಲಿಯುಗದಲ್ಲಿ ಬೇಕಾದುದು ಶುದ್ಧ ಸಾತ್ವಿಕವಲ್ಲ, ಅದು ಅತಿ ಬಿಳುಪು ಶುದ್ಧ ತಾಮಸವೂ ಅಲ್ಲ; ಅದು ಅತಿ ಕಪ್ಪು ಬೇಕಾದುದು ಕೆಂಪು ರಾಜಸಗುಣ. ಕಲಿಯುಗದಲ್ಲಿ ಧರ್ಮಕ್ಕೆ ಮೂರು ಕಾಲು ಇಲ್ಲವೆಂಬಂತೆ, ಸಾತ್ವಿಕಗುಣಕ್ಕೆ ಸ್ಥಾನವೇ ಇಲ್ಲ. ಅದು ರಸ ಅದರ ತಾಮಸ ಗುಣ ಬೇಕಾಗಿಲ್ಲ; ಅದು ವಿರಸ. ಬೇಕಾದುದು ಸಮರಸ. ಅದೇ ರಾಜಸ. ಕಾಫಿ ಈ ರಾಜಸ ಗುಣದ ಗುರುತು. ಅದು ಕೃತಯುಗದ ಅಮೃತದಂತಹ ಸಾತ್ವಿಕ ವಸ್ತೂವೂ ಅಲ್ಲ. ಕಲಿಯುಗದ ಕಳ್ಳು ಸಾರಾಯಿನಂತಹ ತಾಮಸ ವಸ್ತುವೂ ಅಲ್ಲ. ಕಲಿಯುಗದ ನಾಗರೀಕತೆಯ ಶಿಖರ ಕಾಫಿ. ಸ್ವಭಾವದಿಂದ ಋಷಿಯಾದ ವಿಶ್ವಾಮಿತ್ರನಿಗೆ ಈ ರಹಸ್ಯ ಭವಿಷ್ಯ ತಿಳಿಯಿತು. ಆತ ರಾಜಸ ಕಾಫಿಗೆ ಅನುಗುಣವಾದ ರಾಜಸ ಎಮ್ಮೆಗಳನ್ನು ಸೃಷ್ಟಿ ಮಾಡಿದ. ಎಮ್ಮೆಯ ಹಾಲು ಸೇರದ ಕಾಫಿ ಕಾಫಿಯೇ ಅಲ್ಲ; ಸ್ವರ್ಗಲೋಕದಲ್ಲಿ ಕಾಂಗ್ರೆಸ್‌ಮಂತ್ರಿಮಂಡಲಗಳು ಬಂದು ಎಲ್ಲೆಲ್ಲೂ ಪಾನನಿರೋಧದ ಕಾನೂನು ಜಾರಿಯಾಯಿತಷ್ಟೆ, ಅಮೃತವನ್ನೆಲ್ಲಾ ಉಗ್ರಾಣದಲ್ಲಿ ಹಾಕಿ "ಸೀಲು" ಮಾಡಿಬಿಟ್ಟರು. ಅಮೃತಪಾನದಿಂದ ಮತ್ತರಾಗುವುದರಲ್ಲಿ ನಿರತನಾಗುತ್ತಿದ್ದ ಇಂದ್ರಾದಿಗಳು ಸಹ ಗುಟ್ಟಿನಲ್ಲಿ ಎಮ್ಮೆಯ ಹಾಲನ್ನು ತರಿಸಿ ಕಾಫಿ ಮಾಡಿಕೊಂಡು ಕುಡಿದು ಸ್ವಲ್ಪ ತುಷ್ಟರಾದರಂತೆ!

ಇಂತಹ ಪೂರ್ಣಪುರುಷ ವಿಶ್ವಾಮಿತ್ರನಿಂದ ಪ್ರತಿ ಜಗತ್ತಾಗಿ ಸೃಷ್ಟಿಯಾದುದರಿಂದಲೇ ಎಮ್ಮೆ ಮೂಲ ಜಗತ್ತಿನ ಹಸುವಿಗಿಂತ ಹೆಚ್ಚು ಬಲವಾಗಿದೆ. ಹೆಚ್ಚು ಒರಟಾಗಿದೆ, ಹೆಚ್ಚು ಕಪ್ಪಾಗಿದೆ; ಹೆಚ್ಚು ದಪ್ಪನಾಗಿದೆ. ಎಮ್ಮೆಯಲ್ಲಿ ಹಾಲೂ ಹೆಚ್ಚು. ಬೆಣ್ಣೆಯೂ ಹೆಚ್ಚು. ಇಂತಹ ಪ್ರಾಣಿಯ ಹಾಲನ್ನು ತೆಗೆದುಕೊಳ್ಳುವವರಿಗೆ ಬುದ್ಧಿ ಮಂಕು ಎಂದು ಹೇಳುವವರ ಬುದ್ಧಿಗೆ ಏನು ಹೇಳೋಣ? ನಮ್ಮ ಮೈಸೂರಿನವರ ಬುದ್ಧಿ ಮಂಕೆ? ಇವರನ್ನು ನೋಡಿದ ಕೂಡಲೇ ಇವರು ಎಮ್ಮೆಯ ಹಾಲನ್ನು ಕುಡಿದವರೆಂಬುದು ಗೊತ್ತಾಗುವುದಿಲ್ಲವೆ? ಎಮ್ಮೆಯ ಹಾಲನ್ನು ಕುಡಿಯುವವರ ಬುದ್ಧಿ ಇರಲಿ. ಸ್ವತಃ ಎಮ್ಮೆಯೇ ಬಹು ಚುರುಕಾದ ತೀಕ್ಷ್ಣ ಬುದ್ಧಿಯ ಪ್ರಾಣಿ. ಎಮ್ಮೆಯನ್ನು ಅನುಸರಿಸಿಕೊಂಡು ಅದರ ಜೊತೆಯಲ್ಲಿ ಓಡಾಡುತ್ತಿರುವವರಿಗೆ ಇದು ಗೊತ್ತಾಗುವುದೇ ಹೊರತು ಎಲ್ಲಿಯೋ ದೂರದಿಂದ ಅದರ ಕಪ್ಪು ಮೈಯನ್ನು ನೋಡುವವರಿಗೆ ಖಂಡಿತ ಗೊತ್ತಾಗುವುದಿಲ್ಲ. ಬುದ್ಧಿಯ ವಿಷಯ ಒಂದೇ ಅಲ್ಲ. ಎಮ್ಮೆಗೆ ಮಾತು ಸಹ ತಿಳಿಯುವುದು. ಒಂದು ಉದಾಹರಣೆ ಕೇಳಿ.

ನಮ್ಮ ಮನೆಯ ಎಮ್ಮೆ- ಇದು ಸಾಧಾರಣವಾಗಿ ಕರು ಹಾಕಬೇಕಾದರೆ ನಿಂತುಕೊಂಡೇ ಕರುವನ್ನು ಎಸೆದುಬಿಡುತ್ತಿದ್ದಿತು. ಅಂತಹ ಒರಟು ಪ್ರಾಣಿ! ಹೊಟ್ಟೆಯಿಂದ ಹೊರಕ್ಕೆ ಬರುವಾಗಲೇ ಅಂತಹ ಒದೆತದೊಂದಿಗೆ ರಭಸದಿಂದ ಭೂಮಿಗೆ ಬಿದ್ದ ಹೊಸ ಎಳೆಗರು ಪಾಪ, ಚೇತರಿಸಿಕೊಳ್ಳುವುದಕ್ಕೇ ಎರಡು ಮೂರು ಗಂಟೆ ಬೇಕಾಗುತ್ತಿದ್ದಿತು. ಪ್ರಪಂಚ ಏನು ಸುಖವಿಲ್ಲ. ಇಲ್ಲಿ ಒದೆತಗಳೇ ಜಾಸ್ತಿ. ತಾಯಿ ತಂದೆ ಅಣ್ಣ ತಮ್ಮ ಹೆಂಡತಿ ಅಪ್ಪ ಮಗ ಎಲ್ಲರೂ ಒಬ್ಬರನ್ನೊಬ್ಬರು ಒದೆಯುತ್ತಾರೆ, ಬಡಿಯುತ್ತಾರೆ. ಜಗತ್ತಿಗೆ ಬರುವುದು ಸುಖಕ್ಕಲ್ಲ ಎಂಬುದು ಆ ಬಡಪಾಯಿಗಳ ಎಳಗರುವಿಗೆ ಜಗತ್ತಿಗೆ ಬರುವಾಗಲೇ ಗೊತ್ತಾಗುತ್ತದೆ. ಹೋಗು ನಿನ್ನ ಪಾಪಗಳಿಗೆ ಅಲ್ಲಿ ಅನುಭವಿಸು ಎಂದು ತನ್ನನ್ನು ತಂದು ಹೊರಕ್ಕೆ ದೂಡಿದಂತಾಗಿ ಕರು ಭೂಮಿಯ ಮೇಲೆ ಎರಡು ಗಂಟೆ ಬಿದ್ದಿದ್ದು ಮುಂದಿನ ಕಷ್ಟಗಳಿಗೆ ಸಿದ್ಧವಾಗುತ್ತದೆ. ಹೀಗೆ ಎಮ್ಮೆ ಎರಡು ಮೂರು ಸಲ, ಕರುವನ್ನು ಎಸೆದುದನ್ನು ನೋಡಿ ನನ್ನ ಆಳು ತೂರ "ಮುಂದಿನ ಸಲ ಎಸೆಯೋದಕ್ಕೆ ಬಿಡಕೂಡದು. ಗೋಣಿಚೀಲ ಹಿಡಿದುಕೊಂಡು ಕರ ಆತುಕೋ ಬೇಕು" ಎಂದ. ಎಮ್ಮೆ ಮುಂದಿನ ಸಲ ಗಬ್ಬವಾಗಿ ಯುವ ಕಾಲವೂ ಬಂದಿತು.

ಆ ಬೆಳಿಗ್ಗೆ ತೂರ ನನ್ನೊಂದಿಗೆ "ಇವತ್ತು ಸಾಯಂಕಾಲ ಎಮ್ಮೆ ಕರ ಹಾಕುತ್ತೆ" ಎಂದ. ಆ ವಿಷಯ ಅವನಿಗೆ ಚೆನ್ನಾಗಿ ಅನುಭವ. ಈ ವಿಚಾರಗಳು ಇವನಿಗೆ ಇಷ್ಟು ಖಂಡಿತವಾಗಿ ಹೇಗೆ ಗೊತ್ತಾಗುವುದೆಂದು ನಾನು ಅನೇಕ ಬಾರಿ ಆಶ್ಚರ್ಯಪಟ್ಟಿದ್ದೇನೆ. ತೂರ ಎಮ್ಮೆಗೆ

ಕೇಳಿಸುವಂತೆ "ಇರಲಿ, ನಿನಗೆ ಮಾಡುತ್ತೇವೆ, ಕರ ಎಸೀತೀಯ" ಎಂದ. ನನ್ನೊಂದಿಗೆ "ಗೋಣಿಚೇಲ ಹಿಡಿದುಕೊಂಡು ಆತುಕೋಬೇಕು" ಎಂದ ಆ ಮಾತನು ಕೇಳಿ ಎಮ್ಮೆ ಸರ್ರನೆ ಒಂದು ಸಲ ನನ್ನ ಕಡೆ ತಿರುಗಿತು. ಆ ನೋಟವನ್ನು ನೋಡಿ ನಾನು ಬೆಚ್ಚಿಬಿದ್ದೆ. ಒಬ್ಬನನ್ನು ನೀವು ಮನಸ್ಸಿನಲ್ಲಿಯೇ ಬೈದುಕೊಂಡು ಹೋಗುತ್ತಿರುವಾಗ ಆತ ನಿಮ್ಮೆದುರಿಗೆ ಬಂದು ನಿಂತರೆ ಹೇಗಾವುದೋ ಹಾಗೇ ಆಯಿತು. ಆ ಕ್ಷಣದಲ್ಲಿ "ಇದಕ್ಕೆ ಬುದ್ಧಿ ಇದೆ, ಮಾತೂ ತಿಳಿಯುತ್ತದೆ; ಕಿವಿಯೂ ಕೇಳಿಸುತ್ತದೆ" ಎಂಬ ಭಾವವುಂಟಾಯಿತು. ಇದರಿಂದ ನನ್ನ ಮನಸ್ಸಿನಲ್ಲಿ ಹೇಗೆ ಹೇಗೋ ಆಯಿತು. ಹಿಂದೆ ಹಾಲಿವುಡ್‌ಸಿನಿಮಾ ತಾರೆಯರು, ನಿಗ್ರೋ ಪುರುಷರನ್ನು ಪುರುಷರಾಗಿಯೋ ಪರಿಗಣಿಸದೆ ಅವರ ಎದುರಿಗೆ ಅಸ್ತವ್ಯಸ್ತವಾಗಿ ಉಡುಪುಗಳನ್ನು ಧರಿಸಿ, ಅಂತಃಪುರದಲ್ಲಿ ತಿರುಗಾಡುತ್ತಿದ್ದರಂತೆ. ನೀಗ್ರೋಗಳು ನಾಗರಿಕ ಜನಾಂಗ ಎಂದು ಆದ ಮೇಲೆ ಅವರಿಗೆ ಬಹಳ ಬೇಜಾರಾಯಿತಂತೆ. ನನ್ನ ವಿಷಯೂ ಹಾಗೆಯೇ ಆಯಿತು. ಎಮ್ಮೆಗೆ ಮಾತು ತಿಳಿಯುವುದಿಲ್ಲ ಎಂದು ಅದರ ಎದುರಿಗೆ ಮನಸ್ಸಿಗೆ ಬಂದುದನ್ನು ಹರಟುತ್ತಿದ್ದ ನನಗೆ ನಮ್ಮ ಎಮ್ಮೆಯ ಆ ನೋಟವನ್ನು ನೋಡಿ ಗಾಬರಿಯಾಯಿತು. ಎಮ್ಮೆ "ಆಗಲಿ" ಎನ್ನುವಂತೆ ನನ್ನ ಕಡೆ ನೋಡಿತು. ಆ ನೋಟ ಅದರ ಮುಖದಲ್ಲಿ ಕಂಡುದು ಒಂದೇ ಕ್ಷಣ. ಮರುಕ್ಷಣ ಎಮ್ಮೆ ಮುಖವನ್ನು ಬೇರೆ ಕಡೆ ತಿರುಗಿಸಿಕೊಂಡಿತು. ಅದರ ಕಣ್ಣಿನಲ್ಲಿ ನನಗೆ ಆ ಮೊದಲಿನ ತಿಳಿವಿನ ನೋಟ ಈಗ ಕಾಣಲಿಲ್ಲ.

ಸಾಯಂಕಾಲವಾಯಿತು. ಎಮ್ಮೆಗೆ ಪ್ರಸವ ವೇದನೆ ಪ್ರಾರಂಭವಾಗಿದೆ ಎಂದು ತೂರ ಸೂಚಿಸಿದ. ಎಮ್ಮೆ ನಿಂತುಕೊಂಡೇ ಇದ್ದಿತು. "ಇದು ಮಲಗಿಕೊಂಡು ಕರ ಹಾಕುವುದಿಲ್ಲ. ಅದೇ ಇದರ ಕೆಟ್ಟ ಚಾಳಿ" ಎಂದ ತೂರ. ನಾವು ಅಂದಾಜುಮಾಡಿ ಎಮ್ಮೆ ನಿಂತಿದ್ದ ನೇರದಿಂದ ಒಂದು ಮಾರು ಆಚೆಗೆ, ಪ್ರಾಯಶಃ ಕರುವನ್ನು ಇಲ್ಲಿಗೆ ಎಸೆಯಬಹುದು ಎಂದುಕೊಂಡು, ಗೋಣಿಚೇಲದ ಆಚೆ ಈಚೆ ಹಿಡಿದುಕೊಂಡು ನಿಂತುಕೊಂಡೆವು. ಎಮ್ಮೆ ಒಂದು ಮಾರು ಬಲಗಡೆಗೆ ತನ್ನ ಹಿಂಭಾಗವನ್ನು ತಿರುಗಿಸಿಕೊಂಡು ನಿಂತಿತು. ನಾವೂ ಸರ್ರನೆ ಚೇಲದೊಂದಿಗೆ ಅದರ ನೇರಕೆ ಹಾರಿ ನಿಂತುಕೊಂಡೆವು. ಎಮ್ಮೆ ಕೂಡಲೆ ಎರಡು ಮಾರು ಎಡಗಡೆಗೆ ತನ್ನ ಹಿಂಭಾಗವನ್ನು ತಿರುಗಿಸಿತು. ನಾವೂ ಗೋಣಿಚೇಲದೊಂದಿಗೆ ಹಾರಿದೆವು. ಎಮ್ಮೆ ನಿಮಿಷ ನಿಮಿಷಕ್ಕೂ ತಿರುಗತೊಡಗಿತು. ನಾವು ನಿಮಿಷ ನಿಮಿಷಕ್ಕೂ ಕೊಕ್ಕಿನ ಆಟದಲ್ಲಿಯಂತೆ ಹಾರತೊಡಗಿದೆವು. ಸರ್ಕಸ್‌ನಲ್ಲಿ ಮೇಲುಗಡೆ ಒಬ್ಬ ಆಟಗಾರ ಸಾಧನೆ ಮಾಡುತ್ತಿರುವಾಗ ಅವನ ಕೈಕಾಲು ಜಾರೀತೇಂಬ ಭಯದಿಂದ ಕೆಳಗಡೆ ಹತ್ತಾರು ಜನ ಬಂದು ಜಮುಖಾನ ಹಿಡಿದುಕೊಂಡು ಅವನ ನೇರದಲ್ಲಿ ತಿರುಗುವುದನ್ನು ನೀವು ಕಂಡಿದ್ದೀರಿ. ನಮಗೂ ಎಮ್ಮೆಗೂ ಉಂಟಾದ ಸ್ಪರ್ಧೆ ಈ ಬಗೆಯದಾಯಿತು. ಬರುಬರುತ್ತಾ ಎಮ್ಮೆ ನಿಮಿಷಕ್ಕೆ ಎರಡು ಸಲ ತಿರುಗಲು ಪ್ರಾರಂಭಿಸಿತು. ಅದು ಈ ವಿನೋದದಲ್ಲಿ, ಕರು ಹಾಕಬೇಕೆಂಬುದನ್ನೇ ಪೂರ್ಣವಾಗಿ ಮರೆತಂತೆ ತೋರಿತು. ಈ ಓಡಾಟದಲ್ಲಿ, ಎಮ್ಮೆಗಿಂತ ನಮಗೇ ಹೆಚ್ಚು ಸುಸ್ತಾಗಿ ನಮ್ಮ ಅಳ್ಳೆಗಳು ಹೊಡೆದುಕೊಳ್ಳತೊಡಗಿದವು! ಎಮ್ಮೆ ಮಾತ್ರ ಹಿಂದಿನ ಚೇಷ್ಟೆಯ ನಗುವಿನಿಂದ ಮತ್ತೆ ನನ್ನ ಕಡೆ ನೋಡಿತು. ಇದು ಸಧ್ಯಕ್ಕೆ ಕರು ಹಾಕುವುದಿಲ್ಲ. ಇನ್ನು ಒಂದು ಗಂಟೆ ಬಿಟ್ಟು ಬರೋಣವೆಂದು ನಾನೂ ತೂರನೂ ಚೇಲವನ್ನು ಒಂದು ಮೂಲೆಗಿಟ್ಟು ಒಳಕ್ಕೆ ಹೋದೆವು. ಒಂದು ನಿಮಿಷದೊಳಗಾಗಿ ಕೊಟ್ಟಿಗೆಯಲ್ಲಿ ದೊಪ್ಪೆಂದು ಸದ್ದಾಯಿತು. ಹೋಗಿ ನೋಡಿದರೆ ಎಮ್ಮೆ ಪದ್ಧತಿಯಂತೆ ನಿಂತುಕೊಂಡೇ ಎರಡು ಮಾರು ಆಚೆ ಕರುವನು ಎಸೆದಿದ್ದಿತು.

ಹೀಗೆ ತನ್ನನ್ನು ಅವಮಾನ ಮಾಡಿದುದರಿಂದಲೋ ಎಂಬಂತೆ ಪ್ರತಿ ಸಲವೂ ಸರಾಗವಾಗಿ ಹಾಲು ಕೊಡುತ್ತಿದ್ದ ಎಮ್ಮೆ ಈ ಕರು ಹಾಕಿದ ಮೇಲೆ, ಹಾಲು ಕರೆಯುವುದಕ್ಕೆ ಹೋದರೆ ಇದೆಯುವುದನ್ನು ಪ್ರಾರಂಭಿಸಿತು. ಆಗ ಅದಕ್ಕೆ ತವುಡು, ಹಿಂಡಿ, ಹತ್ತಿಯ ಬೀಜ ಮುಂತಾದ ತಿಂಡಿಗಳನ್ನು ಎರಡು ಹೊತ್ತೂ ಕರೆಯುವ ವೇಳೆಯಲ್ಲಿ ಇಡತೊಡಗಿದೆವು. ತಿಂಡಿಯನ್ನು ತನ್ನ ಮುಂದೆ ಇಟ್ಟಾಗ ಎಮ್ಮೆ "ತನ್ನಿ, ನೀವೇನೋ ಪರೋಪಕಾರ ದೃಷ್ಟಿಯಿಂದಲೂ ಗೋಸೇವಾ ಬುದ್ಧಿಯಿಂದಲೂ ತರುತ್ತಿಲ್ಲ. ನನ್ನ ಹಾಲು ಬೇಕಾಗಿದೆ. ಅದಕ್ಕಾಗಿ ತರುತ್ತಿದ್ದೀರಿ" ಎನ್ನುವಂತೆ ನಮ್ಮ ಕಡೆ ನೋಡುತ್ತಿದ್ದಿತು. ಬೆಳಗಿನ ಕಾಫಿ ನಮಗೆ ಹೇಗೆ ಸಕಾಲಕ್ಕೆ ಆಗಬೇಕೋ ಹಾಗೆ ಎಮ್ಮೆಗೆ ತಿಂಡಿ ಸಕಾಲಕ್ಕೆ ಆಗಬೇಕಾಗಿದ್ದೀತು. ಒಂದು ದಿವಸ ತಿಂಡಿ ಇಟ್ಟು ಹಾಲಿ ಕರೆಯುವುದಕ್ಕೆ ನನ್ನ ಹೆಂಡತಿ ಬರುವುದು ಬೆಳಿಗ್ಗೆ ಹತ್ತು ಗಂಟೆಯಾಯಿತು. "ಇಷ್ಟು ಹೊಟ್ಟು ಯಾಕೆ? ಹೊತ್ತಿಗೆ ಮುಂಚೆ ಕರೆಯುವುದಕ್ಕೇನು? ಈಗ ಕೊಡುತ್ತದೆಯೆ?" ಎಂದೆ. ನನ್ನ ಹೆಂಡತಿ "ಕೊಡದೆ ಅದಕ್ಕೇನು ರೋಗ? ಹೊಟ್ಟೆ ಬಿರಿಯುವ ಹಾಗೆ ತಿಂಡಿ ತಿನ್ನುತ್ತಿಲವೆ? "ಎಂದಳು. ಎಮ್ಮೆ ಒಂದು ಸಲ ಸರ್ರನೆ ಅವಳ ಕಡೆ ನೋಡಿತು. ಆ ನೋಟದಲ್ಲಿ ಆ ಹಿಂದಿನ ತಿಳಿವು ಕಾಣುತ್ತಿದ್ದಿತು. ಎಮ್ಮೆಯ ಭಾಷೆ ನನಗೆ ಅರ್ಥವಾಯಿತು. ನನ್ನ ಹೆಂಡತಿ ಅದರ

ಮೊಲೆಯನ್ನು ಎಷ್ಟು ಈಜಿದರೂ ಎಮ್ಮೆ ಸೋರು ಬಿಡಲಿಲ್ಲ. ಬಾಂಡಲೆಯಲ್ಲಿದ್ದ ತಿಂಡಿಯೆಲ್ಲಾ ಮುಗಿಯಿತು. "ತಿಂಡಿ ಹೊಡೆಯುವುದಕ್ಕೆ ಇದೊಳ್ಳೆ ಅಭ್ಯಾಸ ಮಾಡಿಕೊಂಡಿತು. ಹಾಳು ಮುಂಡೇದು" ಎಂದುಕೊಂಡು ನನ್ನ ಹೆಂಡತಿ ಮತ್ತೊಂದು ಬಾಂಡಲೆ ತಿಂಡಿ ತರಲು ಒಳಕ್ಕೆ ಹೋದಳು. ಅವಳು ಒಳಗಿನಿಂದ ತಿಂಡಿ ತರುತ್ತಿರುವಾಗ ಎಮ್ಮೆ ಮತ್ತೆ ದುರುದುರನೆ ನೋಡಿತು. "ತನ್ನಿ ತನ್ನಿ, ಇಲ್ಲದಿದ್ದರೆ ನೀವು ತರುತ್ತೀರಾ" ಎಂಬಂತೆ ಕಣ್ಣು ಮಿಟುಕಿಸಿತು. "ಇದು ಈ ಉಪಾಯ ಮಾಡಿಕೊಳ್ಳದೆ ಸುಮ್ಮನೆ ಸಾಧುವಾಗಿ ಹಾಲು ಕೊಟ್ಟಿದ್ದರೆ ನೀವು ಹೀಗೆ ನಿತ್ಯಾ ಇದಕ್ಕೆ ಎರಡು ಹೊತ್ತು ತಿಂಡಿ ಇಡುತ್ತಿದ್ದಿರಾ" ಎಂದು ನಾನು ನಕ್ಕೆ. ಹೀಗೆ ಅಂದು ಎಮ್ಮೆಗೆ ತಿಂಡಿ ಎರಡು ಸಲ ಇಡಬೇಕಾಗಿ ಬಂದುದರಿಂದ ಅಲ್ಲಿಂದ ಮುಂದೆ ನನ್ನ ಹೆಂಡತಿ ಎಮ್ಮೆಗೆ ಸಕಾಲದಲ್ಲಿ ಇಟ್ಟು ಹಾಲು ಕರೆದುಕೊಳ್ಳುತ್ತಿದ್ದಳು.

ಈ ಎಮ್ಮೆಯನ್ನು ಸಾಧಾರಣವಾಗಿ ನನ್ನ ಹೆಂಡತಿಯೇ ಕರೆಯುವ ಅಭ್ಯಾಸವಿದ್ದಿತು. ಒಂದು ಸಲ ಎಂಟು ದಿವಸ ಅವಳು ನರಸೀಪುರದ ತೇರಿಗೆ ಹೋದಳು. ನಾನೇ ತಿಂಡಿ ಕಲಸಿ ಎಮ್ಮೆಗೆ ತೆಗೆದುಕೊಂಡು ಹೊರಟೆ. ತೂರ "ಹಿಂಡಿ ಸಾಲದು. ಇನ್ನೊಂದು ಹಿಡಿ ರಾಗಿ ಹಿಟ್ಟು ಹಾಕಿ " ಎಂದ. ನಾನು "ಸರಿ ಸರಿ. ಜನರಿಗೆ ತಿನ್ನುವುದಕ್ಕೆ ರಾಗಿ ಇಲ್ಲ; ಹನುಮಂತರಾಯ ಹಗ್ಗ ಮೇಯ್ತಿರೋವಾಗ ಪೂಜಾರಿ ಶಾವಿಗೆ ಬೇಡಿದ ಹಾಗೆ ಆಯಿತು. ನಡಿ ಸಾಕು" ಎಂದೆ ತಿಂಡಿಯನ್ನು ತೆಗೆದುಕೊಂಡು ಹೋಗಿ ಎಮ್ಮೆಯ ಮುಂದೆ ಇಟ್ಟು ನಾನೇ ಹಾಲು ಕರೆಯಲು ಕುಳಿತೆ. ಎಮ್ಮೆ ಒಂದು ಸಲ ತಿಂಡಿ ಮೂಸಿ ನೋಡಿತು. ನಾನು ಹಾಲು ಕರೆಯಲು ಕೈಯಲಿ ಹಿಡಿದಿದ್ದ ಪಾತ್ರೆ ಕೆಳಕ್ಕೆ ಬೀಳುವಂತೆ ಪಟಾರನೆ ಒದೆಯಿತು. ನಾನು ತೂರನಿಗೆ ನಿನ ಮಾತು ನಿಜ. ಇದಕ್ಕೆ ರಾಗಿ ಹಸಿಹಿಟ್ಟಿನ ರಸ ಹಲ್ಲಿಗೆ ಇಳಿದು ಅಭ್ಯಾಸವಾಗಿದೆ. ಇನ್ನಷ್ಟು ಹಸಿಹಿಟ್ಟು ಹಾಕಿಕೊಂಡು ಇನ್ನೊಂದು ಗಳಿಗೆ ಬಿಟ್ಟು ಬರೋಣ. "ಎಲ್ಲಾ ಕೆಟ್ಟಭ್ಯಾಸ" ಎಂದು ಒಳಕ್ಕೆ ಬಂದೆ. ಮತ್ತೆ ತಿಂಡಿ ಸರಿಮಾಡಿಕೊಂಡು ಹೋಗುವುದಕ್ಕೆ ಮುಂಚೆ ತೂರ "ಇದಕ್ಕೆ ಅವ್ನೋರು ಕರ ಬಿಟ್ಟೆ ಪಾಠ. ನಿಮಗೆ ಕೊಡೋಕಿಲ್ಲ. ಖಂಡಿತ ಒದೀತದೆ" ಎಂದ. ಆಗ ನಾನು ಒಂದು ಉಪಾಯವನ್ನು ಮಾಡಿದೆ. ಇದನ್ನು ಓದುವ ವಾಚಕರು ನಗಬೇಕಾಗಿಲ್ಲ. ನನ್ನ ಹೆಂಡತಿಯ ಒಂದು ಸೀರೆಯನ್ನು ಮೈತುಂಬ ಹೊದೆದುಕೊಂಡು ಎಮ್ಮೆಯ ಮುಂದೆ ಕುಳಿತೆ. ಎಮ್ಮೆ ಈ ಮೋಸಕ್ಕೆ ಬಿದ್ದಿತು. ಹಾಲು ಕೊಟ್ಟಿತು. ಹೀಗೆ ನಾನು ಐದು ಆರು ದಿನ ಅಭಿನವಸೈರಂಧ್ರಿಯಾಗಿ ರಾಗಿಹಿಟ್ಟು ಹಿಂಡಿಗಳನ್ನು ಪೂರಾ ಹಾಕಿ ಹಾಲು ಕರೆದುಕೊಳ್ಳುತ್ತಿದ್ದೆ. ನನ್ನ ಹೆಂಡತಿ ಹಿಂತಿರುಗುವುದು ನಾಳೆ ಎನ್ನುವಾಗ, ನಾನು ಎಮ್ಮೆಯ ಮುಂದೆ ಹಾಲು ಕರೆಯುತ್ತಾ ಕುಳಿತಿದ್ದೆ. ತೂರ "ಹಸು ಆಗಿದ್ರೆ ವಾಸನೆ ಮೇಲೆ ಹಿಡಿದು ಒದ್ದು ಬಿಡೋದು. ಇದು ಎಮ್ಮೆ ಜಾತಿ. ದೆಯ್ಯದಂತ ಮುಂಡೇದು, ಬುದ್ಧಿ ಇಲ್ಲ " ಎಂದ. ನಾನು ನನ್ನ ಹೆಂಡತಿಯ ದನಿಯಂತೆ ದನಿಮಾಡಿಕೊಂಡು "ಇದಕ್ಕೆ ಬುದ್ಧಿ ಇದೆ" ಎಂದೆ. ಎಮ್ಮೆ ಒದ್ದೇಬಿಟ್ಟಿತು.

ಈ ಎಮ್ಮೆಗೆ ಒಂದು ಸಲ ಕಾಲುಜ್ವರ ಬಾಯಿಜ್ವರ ಆಯಿತು. ಆಳು ತೂರ ಎಲ್ಲಾ ಹಸುಗಳನ್ನೂ ಬೋರೆಗೆ ಬಿಡುತ್ತದೆ. "ಎಮ್ಮೆ ಬಿಡಬೇಡ. ದನಿನ ಆಸ್ಪತ್ರೆಯಿಂದ ಔಷಧಿ ತರಿಸಿ ಹುಯ್ಯಿಸುತ್ತೇನೆ" ಎಂದೆ. ಆ ಮಾತು ಅಲ್ಲೇ ನಿಂತಿದ್ದ ಎಮ್ಮೆಗೆ ಕೇಳಿಸಿರಬೇಕು. ನಾವು ಒಳಕ್ಕೆ ಹೋದಾಗ ಎಮ್ಮೆ ಕಿತ್ತುಕೊಂಡು ಬೋರೆಗೆ ಓಡಿಬಿಟ್ಟಿತು. ಈ ಎಮ್ಮೆಗೆ ರಾಗಿಯ ಅಂಬಲಿ ಬಹಳ ಇಷ್ಟ. ಕಾಯಿಲೆಯಾದಾಗಲೂ ಬೇರೆ ಹುಲ್ಲು ತಿಂಡಿಗಳನ್ನು ಮುಟ್ಟದಿದ್ದರೂ, ಇದು ರಾಗಿಯ ಅಂಬಲಿಯನ್ನು ಮಾತ್ರ ಯಾವಾಗಲೂ ಕುಡಿಯುತ್ತದೆ. ಇದಕ್ಕೆ ಕಾಲುಜ್ವರ ಬಾಯಿಜ್ವರವಾದಾಗ "ಇದನ್ನು ಹಿಡಿದುಕೊಂಡು ಗಂಟಲಿಗೆ ಗೊಟ್ಟ ಹಾಕಿ ಔಷಧಿ ಹುಯ್ಯುವುದು ಕಷ್ಟ. ಅಂಬಲಿಗೆ ಸೇರಿಕೊಟ್ಟುಬಿಡೋಣ" ಎಂದಳು ನನ್ನ ಹೆಂಡತಿ. ಮೊದಲನೆಯ ಸಲ ಹಾಗೆ ಮಾಡಿ ಎಮ್ಮೆಯ ಮುಂದೆ ಇಟ್ಟೆವು. ಅದು ಏನೂ ತಿಳಿಯದ ಪ್ರಾಣಿಯಂತೆ ಸುಮ್ಮನೆ ಅಂಬಲಿ ಕುಡಿಯಿತು. ಆ ಸಾಯಂಕಾಲ, ದನದ ವೈದ್ಯರು ಮನೆಗೆ ಬಂದು ಎಮ್ಮೆ ನೋಡಿದರು. 'ಇದಕ್ಕೆ ಔಷಧಿ ಹೇಗೆ ಕುಡಿಸುತ್ತೀರಿ' ಎಂದರು. ಆಳು ತೂರ 'ಅಂಬಲಿ ಒಳಗೆ ಕುಡೀತದೆ' ಎಂದ. ಆ ಮಾತು ಎಮ್ಮೆಗೆ ಕೇಳಿಸಿತು. ಆ ಸಂಧ್ಯಾಕಾಲದಿಂದಲೇ ಅದು ಅಂಬಲಿ ಕುಡಿಯುವುದನ್ನು ಬಿಟ್ಟಿತು. ಮರುದಿನ ಬೆಳ್ಳಿಗೆ ಬಂದ ವೈದ್ಯರು "ಇದಕ್ಕೆ ಔಷಧಿ ಕುಡಿಸಲೇಬೇಕು" ಎಂದರು. ಆಗ ಎಮ್ಮೆ ಮಲಗಿದ್ದಿತು. ಆಳು ತೂರ " ಮಲಗಿರುವಾಗ ಕಾಲುಕಟ್ಟಿ ಗೊಟ್ಟದಲ್ಲಿ ಹುಯ್ಯಬೇಕು" ಎಂದನು. ಎಮ್ಮೆ ಎದ್ದು ನಿಂತುಕೊಂಡಿತು. ತೂರ ಮನೆಯಲ್ಲಿರುವವರೆಗೆ ಅದು ಮಲಗುತ್ತಲೇ ಇರಲಿಲ್ಲ. ಹುಷಾರಿಲ್ಲದಿದ್ದರೂ ನೀಂತೇ ಇರುತ್ತಿದ್ದಿತು. ತೂರ ಹನ್ನೊಂದು ಗಂಟೆಗೆ ದನಗಳನ್ನು ಬೋರೆಗೆ ಹೊಡೆದುಕೊಂಡು ಹೋದಮೇಲೆಯೇ ಅದು ಮಲಗುತ್ತಿದ್ದಿತು. ಅನಂತರ ತೂರ ಬೋರೆಯಿಂದ ಸಾಯಂಕಾಲ ಬಂದ ನಂತರ ಉಳಿದ ದನಗಳೆಲ್ಲಾ ಒಳಕ್ಕೆ ಬಂದ ಕೂಡಲೇ ಎದ್ದು

ನಿಂತುಕೊಂಡುಬಿಡುತ್ತಿದ್ದಿತು. ರಾತ್ರಿ ಮಲಗಿದ ಮೇಲೆ ಮಲಗುತ್ತಿದ್ದಿತ್ತು. ಬೆಳಿಗ್ಗೆ ನಮ್ಮ ಮುಖ ಕಂಡ ಕೂಡಲೇ ಎದ್ದು ನಿಂತುಬಿಡುತ್ತಿದ್ದಿತು.

ಹೀಗೆ ನಮ್ಮ ಎಮ್ಮೆ ನಮ್ಮ ಮನೆಯಲ್ಲಿ ಒಂದು ಅದೃಶ್ಯ ವ್ಯಕ್ತಿಯಾಗಿದೆ. ಭಗವಂತ ಕಣ್ಣಿಗೆ ಕಾಣದಿದ್ದರೂ ನಮ್ಮ ಕಾರ್ಯಗಳ ಮೇಲೆ ತನ್ನ ಪ್ರಭಾವವನ್ನು ಬೀರುವಂತೆ ಎಮ್ಮೆ ಮೂಕಪ್ರಾಣಿಯಾದರೂ ನಮ್ಮ ಆಚರಣೆ ಮಾತುಗಳಿಗೆ ಒಂದು ವಿಧವಾದ ಅಂಕುಶವಾಗಿದೆ. ಈ ಎಮ್ಮೆ ಮಾತ್ರವೇ ಅಲ್ಲ. ಯಾವ ಮೂಕ ಪ್ರಾಣಿಯ ಎದುರಿಗೂ ಮನಸ್ಸಿಗೆ ಬಂದಂತೆ ಮಾತನಾಡಲು ನಮಗೆ ಭಯವಾಗಿದೆ. ಯಾಕೆಂದರೆ ಯಾವ ಪ್ರಾಣಿಗೆ ಯಾವ ಶಕ್ತಿ ಇದೆಯೋ ಬಲ್ಲವರಾರು? ಹೀಗಿರುವಲ್ಲಿ ಎಮ್ಮೆಗೆ ಬುದ್ಧಿ ಇಲ್ಲ ಎಂದು ಹೇಳಿದರೆ ನಂಬುವುದಕ್ಕೆ ಆಗುತ್ತದೆಯೇ? ಆ ಎಮ್ಮೆಯ ಹಾಲನ್ನು ಕುಡಿದ ನಮ್ಮನ್ನೇ ನೋಡಿ!

**ಲೇಖಕರು**

ಗೊರೂರು ರಾಮಸ್ವಾಮಿ ಅಯ್ಯಂಗಾರರು (೧೯೦೪-೧೯೧) ಕನ್ನಡದಲ್ಲಿ ಹಾಸ್ಯಭರಿತ ಬರವಣಿಗೆ ಮಾಡಿದ ಲೇಖಕರಲ್ಲಿ ಒಬ್ಬರು. ಗಾಂಧಿವಾದಿಯಾಗಿದ್ದ ಗೊರೂರರು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲುಗೊಂಡವರು. 'ಹೇಮಾವತಿ ತೀರದಲ್ಲಿ ಮತ್ತು ಇತರ ಪ್ರಬಂಧಗಳು', 'ಹಳ್ಳಿಯ ಚಿತ್ರಗಳು', 'ನಮ್ಮ ಊರಿನ ರಸಿಕರು', 'ಬೈಲುಹಳ್ಳಿಯ ಸರ್ವೆ', ಮುಂತಾದವು ಇವರ ಪ್ರಬಂಧ ಸಂಕಲನಗಳು. 'ಅಮೆರಿಕದಲ್ಲಿ ಗೊರೂರು' ಅವರ ಪ್ರವಾಸ ಕಥನ. ವಿನೋದ ಶೈಲಿಯಲ್ಲಿ ಬರೆಯುವ ಗೊರೂರರು ಕನ್ನಡದಲ್ಲಿ ಬಹಳ ಜನಪ್ರಿಯತೆಯನ್ನು ಪಡೆದ ಲೇಖಕರು. ಅವರ 'ಅಮೆರಿಕದಲ್ಲಿ ಗೊರೂರು' ಕೃತಿಗೆ ಕೆಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೮೦) ಬಂದಿದೆ. ಗೊರೂರರು ೧೯೮೨ರಲ್ಲಿ ಶಿರಸಿಯಲ್ಲಿ ನಡೆದ ೫೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಅಶಯ**

ಪ್ರಸ್ತುತ ಪ್ರಬಂಧವನ್ನು 'ಹೇಮಾವತಿ ತೀರದಲ್ಲಿ ಮತ್ತು ಇತರ ಪ್ರಬಂಧಗಳು' ಸಂಕಲನದಿಂದ ಆರಿಸಿಕೊಳ್ಳಲಾಗಿದೆ. ಸ್ವತ ಗಾಂಧಿವಾದಿಯಾಗಿದ್ದರೂ ಎಮ್ಮೆಯನ್ನು ಕುರಿತ ಗಾಂಧಿಯ ಅಭಿಪ್ರಾಯವನ್ನು ಒಪ್ಪದ ಗೊರೂರರು, ಎಮ್ಮೆಯ ಪರವಾಗಿ ವಾದ ಮಾಡುತ್ತಾರೆ. ಪ್ರಾಣಿಗೆ ಬುದ್ಧಿಯಿಲ್ಲ ಎಂಬುದು ಮನುಷ್ಯರ ಅಹಂಕಾರದ ನಿಲುವು. ಆದರೆ ಪ್ರಾಣಿಗಳಿಗೂ ಮನಸ್ಸು ಎಂಬುದು ಇದೆ. ಭಾವನೆ ಇದೆ. ನಮ್ಮ ಅಹಂಕಾರ ಬಿಟ್ಟು ವಿನಯದಿಂದ ನೋಡಿದರೆ ಇದರ ಸತ್ಯ ದರ್ಶನವಾಗುತ್ತದೆ ಎಂಬುದು ಲೇಖಕರ ಅಭಿಪ್ರಾಯವಾಗಿದೆ. ಲೇಖನವು ಹಾಸ್ಯಬರಹವಾಗಿದ್ದರೂ, ಆಳದಲ್ಲಿ ನಮ್ಮ ಸಂಸ್ಕೃತಿಯ ಅನೇಕ ವೈರುಧ್ಯಗಳನ್ನು ನಿರೂಪಿಸುತ್ತದೆ.

**ಪದಕೋಶ**

ಕಾಷ್ಠ = ಕಟ್ಟಿಗೆ, ತಾಮಸ = ಉಗ್ರಗುಣವುಳ್ಳ, ರಾಜಸ = ಕ್ಷಾತ್ರಗುಣವುಳ್ಳ , ಸಾತ್ವಿಕ = ಸೌಮ್ಯವಾದ. ತುಷ್ಟ = ಸಂತೃಪ್ತ, ಸೂರು = ಧಾರೆ, ಕೊಕ್ಕಿನ ಆಟ = ಖೋಖೊ ಆಟ, ಅಳ್ಳೆ =ಪಕ್ಕೆಲುಬು.

**ಟಿಪ್ಪಣಿ**

ಕಡಸು = ಇನ್ನೂ ಕಾರು ಹಾಕದ ಪ್ರಾಯದ ಎಮ್ಮೆ, ಮಣಕ, ಕಾಲುಬಾಯಿಜ್ವರ = ದನಗಳ ಕಾಲಿನ ಗೊರಸಿಗೆ ಬರುವ ಒಂದು ಕಾಯಿಲೆ, ಗೊಟ್ಟ = ದನಗಳಿಗೆ ಔಷಧಿ ಕುಡಿಸಲು ಬಳಸುವ ಬಿದಿರಕೊಳವೆ, ಬೋರೆ = ಹುಲ್ಲುಮೇಯಿಸುವ ದಿಬ್ಬ

**ಪ್ರಶ್ನೆಗಳು**

೧. ನಮಗೆ ಎಮ್ಮೆ ಪ್ರಕೃತಿಯಂತೆ ಶಾಶ್ವತ ಎಂದು ಹೇಗೆ ಲೇಖಕರು ಭಾವಿಸುತ್ತಾರೆ?

೧. ಮಹಾತ್ಮ ಗಾಂಧಿಯವರು ಯಾಕೆ ಎಮ್ಮೆಯ ವಿರೋಧಿಯಾಗಿದ್ದರು?
೩. ಮಿಶ್ವಾಮಿತ್ರನನ್ನು ಯಾಕೆ  ಕ್ರಾಂತಿಕಾರ ಎಂದು ಲೇಖಕರು ವರ್ಣಿಸುತ್ತಾರೆ?
೪. ಎಮ್ಮೆಯ ಹಾಲು ರಾಜಸವೆಂದು ಮೆಚ್ಚಲು ಕಾರಣವೇನು?
೫. ಎಮ್ಮೆ ಕರುವನ್ನು ಹೇಗೆ ಹಾಕುತ್ತಿತ್ತು ಮತ್ತು ಅದನ್ನು ತಪ್ಪಿಸಲು ಮಾಡಿದ ಉಪಾಯ ಹೇಗೆ ವ್ಯರ್ಥವಾಯಿತು?
೬. ಲೇಖಕರು ತಮ್ಮ ಹೆಂಡತಿ ಊರಿಗೆ ಹೋದಾಗ ಎಮ್ಮೆಗೆ ಮಾಡಿದ ಮೋಸ ಎಂತಹುದು?
೭. ಎಮ್ಮೆಯ ಕಾಯಿಲೆ ಬಿದ್ದಾಗ ಯಾವ ರೀತಿ ವರ್ತಿಸಿತು?

**ಪೂರಕ ಓದು**

೧. ಪು ತಿ ನ ಅವರ 'ಧೇನುಕಪುರಾಣ' ಪ್ರಬಂಧ
೨. ಕುಂ ವೀರಭದ್ರಪ್ಪ ಅವರ 'ಎಲುಗನೆಂಬ ಕೊರಚನೂ ಚವುಡನೆಂಬ ಹಂದಿಯೂ' ಕತೆ
೩. ಸಿದ್ಧಲಿಂಗಯ್ಯ ಅವರ 'ಕತ್ತೆ ಮತ್ತು ಧರ್ಮ' ಕವನ
೪. ಅಜ್ಞಾತ ಕವಿ ಬರೆದ 'ಗೋವಿನಹಾಡು'
೫. ಫಕೀರ್‌ಮುಹಮ್ಮದ್‌ಕಟ್ಪಾಡಿ ವರ 'ಹತ್ಯೆ' ಕತೆ

## ೬. ಆನೆಹಳ್ಳದಲ್ಲಿ ಹುಡುಗಿಯರು

ದೊರೆತಿದ್ದ ಗಿಡಮರಗಳೇ ಇಲ್ಲಿಯೂ ಬೆಳೆಯುತ್ತಿದ್ದುವಾದ್ದರಿಂದ. ಹೆಚ್ಚಿನ ಸಂಗ್ರಹಣಕ್ಕೆ ಅವಕಾಶವಿರಲಿಲ್ಲ. ಮುಂದೆ ಮುಂದೆ ಹೋಗುತ್ತಲೇ ಇದ್ದೆವು. ರೇಂಜರು ತಟಕ್ಕನೆ ನಿಂತು ಅತ್ತಿತ್ತ ನೋಡಲಾರಂಭಿಸಿದ. ಹಾದಿ ಗೊತ್ತುಮಾಡುವುದು ಸ್ವಲ್ಪ ಕಷ್ಟವಾಯಿತು. ಫಾರೆಸ್ಟರು ಕೊಂಚ ದೂರ ಮುಂದೆ ಹೋಗಿ ಹುಡುಕಾಡಿ ರೇಂಜರಿಗೆ ಅದೇನನ್ನೋ ಮಲೆಯಾಳ ಭಾಷೆಯಲ್ಲಿ ವರದಿ ಒಪ್ಪಿಸಿದ. ಸ್ವಲ್ಪ ದೂರ ಹೋದರೆ ನಾವು ಬಂದ ದಾರಿ ಮೂರಾಗಿ ಕವಲೊಡೆಯುತ್ತದೆಯಂತೆ. ಅವುಗಳೊಂದರಲ್ಲಿ ಮಾತ್ರ ನಾವು ಮುಂಬರಿಯಬೇಕು; ಮಿಕ್ಕ ಎರಡೂ ಆನೆ ಹಿಂಡಿನ ನಿವಾಸ ಸ್ಥಾನವನ್ನು ಕುರಿತು ಸೇರುತ್ತವೆಯಂತೆ. ಅರಣ್ಯಾಧಿಕಾರಿಗಳ ಹಿಂದೆಯೇ ಒಂದು ಮೈಲಿ ನಡೆದವು. ವಿದ್ಯಾರ್ಥಿಗಳಲ್ಲಿ ಕೆಲವರಂತೂ ಬಹಳ ದಣಿದುಹೋಗಿದ್ದಿರಬೇಕು. ಕಿಸೆಯಲ್ಲಿ ತುಂಬಿಕೊಂಡು ಬಂದಿದ್ದ ಪೆಪ್ಪರ್‌ಮಿಂಟುಗಳನ್ನೂ ಬಿಸ್ಕತ್ತು ಚಾಕಲೇಟುಗಳನ್ನೂ ತಿಂದುಬಿಟ್ಟಿದ್ದರು. ಹಾದಿಯಲ್ಲಿ ಪೈಪೋಟಿಯಿಂದ ಶೇಖರಿಸಿಕೊಂಡಿದ್ದ ನೆಲ್ಲಿಕಾಯಿ ಹುಣಸೆಕಾಯಿಗಳನ್ನೂ ಮುಗಿಸಿಬಿಟ್ಟಿದ್ದರು. ಹಸಿವೂ ಬಾಯಾರಿಕೆಯೂ ಕಾಲ್ನಡಿಗೆಯ ಬಾಧೆಯೂ ಪೀಡಿಸುತ್ತಿದ್ದರೂ ಕಾಡಾನೆಯ ಹಿಂಡನ್ನು ನೋಡಲಿರುವ ಭವಿಷ್ಯದಲ್ಲಿ ಹುರುಪುಗೊಂಡಿದ್ದರು. ಬರಿಯ ಹುರುಪೂ ಮನೋಬಲವೂ ಇದ್ದರೆ ಸಾಕೆ? ಇವಕ್ಕೆ ಸರಿದೂಗುವ ದೇಹಶಕ್ತಿಯೂ ಇದ್ದರಲ್ಲವೆ ಆಸೆ ನೆರವೇರುವುದು? ವಿದ್ಯಾರ್ಥಿಗಳು ಅವರವರ ಶಕ್ತಿಸಾಮರ್ಥ್ಯಗಳಿಗನುಸಾರವಾಗಿ ಸಣ್ಣಸಣ್ಣ ಗುಂಪುಗಳಾಗಿ ಒಡೆದು ಹಿಂದೆ ಹಿಂದೆ ಉಳಿಯುವುದು ಅನಿವಾರ್ಯವೇ ಆಯಿತು. ನಾವು ಈ ಒಂದು ಮೈಲಿಯನ್ನು ದಾಟಿದ್ದು ಈ ರೀತಿಯಲ್ಲಿ. ರೇಂಜರು ತಿರುಗಿಯೂ ದಾರಿ ಹುಡುಕುವುದಕ್ಕೆಂದು ನಿಂತು ನೋಡಿದ. ನಾವೂ ಹಿಂದೆ ನೋಡಿ ವಿದ್ಯಾರ್ಥಿಗಳನ್ನು ಏಣಿಕೆ ಮಾಡಿದೆವು. ವರದರಾಜ ಹತ್ತು ಸಲ ಎಣಿಸಿ "ಐವರು ಹುಡುಗಿಯರು ನಾಪತ್ತೆ" ಎಂದ. ನಮಗೆ ವಿಪರೀತ ದಿಗಿಲಾಯಿತು. ಗೋವಿಂದ್‌ಅವರೂ ಇನ್ನೊಂದು ಸಲ ಎಣಿಕೆ ಮಾಡಿ ನಾಪತ್ತೆಯಾಗಿದ್ದ ಹುಡುಗಿಯರ ಹೆಸರುಗಳನ್ನು ಗುರುತು ಮಾಡಿಕೊಂಡರು - ಜಾನಕಿ, ಕಲ್ಪಕಂ, ಶಾಮಲ, ರಾಧಿಕಾ, ವನಜ. ಸ್ವಲ್ಪದೂರ ಅತ್ತಿತ್ತ ಹುಡುಕಿ ಬನ್ನಿರೆಂದು ಸುಂದರಂ ಅವರನ್ನು ಫಾರೆಸ್ಟರು ಅಟೆಂಡರುಗಳೊಡನೆ ಜತೆಮಾಡಿ ಕಳುಹಿಸಿದ್ದಾಯಿತು. ಇಪ್ಪತ್ತು ನಿಮಿಷಗಳಾದ ನಂತರ ಬಂದು ತಲೆ ಅಲ್ಲಾಡಿಸಿದರು. ನಮ್ಮೊಂದಿಗೆ ಉಳಿದಿದ ಹುಡುಗಿಯರನ್ನು ತನುಖೆಮಾಡಿ ಕೂಗಾಡುತ್ತಿದ್ದ. ಅಂದಿನ ಪ್ರವಾಸವನ್ನು ಅಲ್ಲಿಗೇ ಮುಕ್ತಾಯ ಮಾಡಿ ಮೂರು ದಾರಿ ಸೇರುವ ಎಡೆಗೆ ತಿರುಗಿಬಂದು ಆನೆ ನಿವಾಸವನ್ನು ಸೂಚಿಸುವ ದಾರಿಯಲ್ಲಿ ಎರಡು ಗುಂಪುಗಳಾಗಿ ಹುಡುಕಿ ನೋಡುವುದೆಂದು

ತೀರ್ಮಾನ ಮಾಡಿದೆವು. ನಾನು, ಗೋವಿಂದ್, ರೇಂಜರು, ವರದರಾಜು, ತಂಗವೇಲು ಒಬ್ಬ ಅಟೆಂಡರು ಮೊದಲನೆಯ ಗುಂಪು. ಎಡಪಕ್ಕದ ಹಾದಿಯಲ್ಲಿ ಹೋಗಬೇಕಾದವರು. ಫಾರೆಸ್ಟರು, ಇನ್ನೊಬ್ಬ ರೇಜಂರು, ರಾಮಮೂರ್ತಿ ಎರಡನೆಯ ಗುಂಪು; ಬಲಪಕ್ಕದ ಹಾದಿಯಲ್ಲಿ ಹೋಗಬೇಕಾದವರು. ಉಳಿದವರು (ಸುಸ್ತುಬಿದ್ದಿದ್ದವರು) ಮೂರನೆಯ ಗುಂಪು; ಸುಂದರಂ ಅವರೊಡನೆ ಅಲ್ಲಿಯೇ ನಮಗಾಗಿ ಕುಳಿತು ಕಾಯುತ್ತಿರಬೇಕಾದವರು. ಒಂದರ್ಧ ಫರ್ಲಾಂಗು ದೂರ ದಾರಿ ಮಾಡಿಕೊಳ್ಳುತ್ತ ಕೊರಲು ಕೊಟ್ಟುಕೊಂಡೇ ಹೋದೆವು. ವರದರಾಜ ನಪತ್ತೆಯಾಗಿದ್ದ ಹುಡುಗಿಯರ ಹೆಸರುಗಳನ್ನು ಒಂದೊಂದಾಗಿ ಕೂಗುತ್ತಲೇ ಬಂದದ್ದರಿಂದ ಗಂಟಲು ಒಣಗಿಹೋಗಿ ಸುಮ್ಮನಾದ. ಅಂತರಾಳದಿಂದ "ಏಲ್ಪ್, ಏಲ್ಪ್" ಎಂಬ ದನಿಯೊಂದು ಕೇಳಿದ ಹಾಗಾಯಿತು. ಕಿವಿಗೊಟ್ಟು ಕೇಳಿದೆವು. ಎರಡು ನಿಮಿಷ ಬಿಟ್ಟು ತಿರುಗಿಯೂ "ಏಲ್ಪ್, ಏಲ್ಪ್" ಯಾವುದಾರೂ ಮೃಗದ ಉಲಿಯಿರಬಹುದೆ ಎಂದು ಗೋವಿಂದ್‌ವಿಚಾರಿಸಿದ್ದಕ್ಕೆ ರೇಜಂರು "ಇಲ್ಲ ನಮಗೆ ಪರಿಚಿತವಾದ ಕಾಡು ಮೃಗದ ಕೊರಲಾವುದೂ ಇದಲ್ಲ" ಎಂದ ಒಡನೆಯೆ ವರದರಾಜ ಇತ್ಯರ್ಥ: "ಹಾದಾರೆ ನಮ್ಮ ಊರುಮೃಗಗಳದ್ದೇ ಆಗಿರಬೇಕು!" ಅಳುಕಿನಿಂದ ಮುಂದುವರಿದೆವು, ಆಕ್ಲಾಂಡ ಕೆದರಿ ಬಾಗಿದ್ದ ಸಣ್ಣ ಚದುರ ಭೂಮಿಯನ್ನು ಸಮೀಪಿಸಿದೆವು, ಬತ್ತಿಹೋದ ಕೊರಲಿನ "ಏಲ್ಪ್, ಏಲ್ಪ್" ದನಿ ಹತ್ತಿರವಾಯಿತು. "ಅಯ್ಯಯ್ಯೋ" ಎಂದ ರೇಂಜರು. ಕಾಡಾನೆಯನ್ನು ಹಿಡಿಯುವುದಕ್ಕಾಗಿ ತೋಡಿದ್ದ ಹಳ್ಳ ಅದೆಂದು ಅವನಿಗೆ ತಟ್ಟನೆ ಹೊಳೆಯಿತು. ಹನ್ನೆರಡಡಿ ಆಳ ಹತ್ತು ಅಡಿ ಅಗಲವಿರುವ ಹಳ್ಳವನ್ನು ಬಾವಿಯ ರೀತಿಯಲ್ಲಿ ತೋಡಿ ಅದು ಇರುವ ಜಾಗ ತಟ್ಟನೆ ತಿಳಿಯಬಾರದೆಂಬ ಉದ್ದೇಶದಿಂದ ನೆಲಮಟ್ಟದ ಮೇಲೆ ಸಣ್ಣಸಣ್ಣ ಗಳುಗಳನ್ನು ಅಡ್ಡಕ್ಕೂ ಉದ್ದಕ್ಕೂ ಹಾಸಿ ಅದರ ಮೇಲೆ ತರಗೆಲೆಗಳನ್ನೂ ಎಲೆಗುತ್ತಿಗಳನ್ನೂ ಆಕ್ಲೇಂಡ್ರ ಕಾಂಡಗಳನ್ನೂ ಸಿಕ್ಕಿಸಿ ಮರೆಮಾಡಿದ್ದರು. ಹತ್ತಿರ ಧವಿಸಿ ಇಣುಕಿ ನೋಡುತ್ತೇವೆ: ನಾಪತ್ತೆಯಾಗಿದ್ದ ಪಂಚಕನ್ಯೆಯರೇ! ತಳದಲ್ಲಿ ಹಾಸಿದ್ದ ಒಣಹುಲಿನಲ್ಲಿ ಅರ್ಧ ಹುದುಗಿಹೋಗಿದ್ದರು.

ನಮ್ಮನ್ನು ಕಂಡೊಡನೆಯ ಹುಡುಗಿಯರಿಗೆ ನಾಚಿಕೆ, ನಂಬಿಕೆ, ಅಂಜಿಕೆ, ಅಳು ನಾಲ್ಕೂ ಒಟ್ಟಿಗೆ ಬಂದವು. ಗಾಬರಿಯಿಂದ ಪೆಚ್ಚುಬಿದ್ದಿದ್ದರು. ನಿರಾಶೆಯಿಂದ ನಚ್ಚುಗೊಂಡಿದ್ದರು. "ನಮ್ಮನ್ನು ಊರಿಗೆ ಕಳುಹಿಸಿಬಿಡಿ" ಎಂದು ಬಿಕ್ಕಿ ಬಿಕ್ಕಿ ಅತ್ತರು. "ಊರಿಗೆ ರವಾನೆ ಹಾಕುವುದಕ್ಕೆ ಮೊದಲು ನಿಮ್ಮನ್ನು ಮೇಲೆತ್ತುವ ಸಾಹಸ ಮಾಡಬೇಕಾಗಿದೆ. ಮೊದಲಿನ ಕಾರ್ಯ ಮೊದಲಾಗಲಿ" ಎನ್ನುವಷ್ಟರಲ್ಲಿಯೇ ವರದರಾಜ " ಖಂಡಿತ ನೀವೇ ಹೋಗಿ, ತಿರುಗಿ ಬರಬೇಡಿ, ನೀವಿರುವ ಕಂದರದಲ್ಲಿಯೇ ಗುಪ್ತ ಮಾರ್ಗವಿದ್ದರೆ ಹುಡುಕಿನೋಡಿ, ಅಷ್ಟು ಅವಸರವಾದರೆ ಅದರೊಳಕ್ಕೆ ನುಸುಳಿ ನಿಮ್ಮ ಮನೆಗಳನ್ನು ಸೇರಿಕೊಂಡುಬಿಡಿ" ಎಂದ. ಇತ್ತ ವರದರಾಜನ ಬಡಾಯಿ ಬಾಯನ್ನು ಮುಚ್ಚಿಸಿ ಅತ್ತ ಹಳ್ಳದ ಹುಡುಗಿಯರ ಅಳುಬಾಯನ್ನು ಮುಚ್ಚಿಸುವ ಹೊತ್ತಿಗೆ ನನಗೆ ಸಾಕು ಸಾಕಾಗಿಹೋಯಿತು. ಇನ್ನೊಂದು ದಿಕ್ಕಿನಲ್ಲಿ ಹುಡುಕಹೋಗಿದ್ದ ಗುಂಪಿನವರನ್ನೂ ಕಾದು ಕುಳಿತಿದ್ದ ಗುಂಪಿನವರನ್ನೂ ಕರೆದುಕೊಂಡು ಬರಲು ಗೋವಿಂದ್‌ಅವರನ್ನೂ ಅಟೆಂಡರನ್ನೂ ಕಳುಹಿಸಿದೆ.

ಬಾವಿಯೊಳಗಿಂದಲೇ ಕಲ್ಪಕಂ: "ಮತ್ತಾರೂ ಇಲ್ಲಿ ಬರುವುದು ಬೇಡ, ಸರ್".

ವರದ: "ನಮಗೇನು ಹುಚ್ಚೆ ನೀವಿರುವಲ್ಲಿಗೆ ಬರುವುದಕ್ಕೇ!"

ವರದರಾಜನ ಬಾಯನ್ನು ನನ್ನ ಬಲಗೈಯಿಂದ ಗಟಿಯಾಗಿ ಮುಚ್ಚಿ ಹೇಳಿದೆ: "ನೀವು ಹೀಗೆಲ್ಲ ಸವಾಲು ಹಾಕುವುದು ಒಳಿತಲ್ಲ. ನಿಮ್ಮನ್ನು ಈಗ ಮೇಲಕ್ಕೆ ಎತ್ತುವ ಕೆಲಸ ಮಾಡಬೇಕಾಗಿದೆ. ನಮಗೆ ಜನಸಹಾಯ ಬೇಕು. ನಾವು ಹೇಳಿದಂತೆ ನೀವು ಕೇಳುವುದು ಒಳಿತು.

ಜಾನಕಿ: "ಅವರೆಲ್ಲ ಬಂದು ನೋಡಿ ಹಾಸ್ಯಮಾಡುತ್ತಾರೆ. ಸರ್".

ನನ್ನ ಕೈಹಿಡಿತದಿಂದ ತಪ್ಪಿಸಿಕೊಳ್ಳುತ್ತಿದ್ದ ವರದರಾಜನನ್ನು ತಡೆಯುತ್ತ: "ಅವರು ನಕ್ಕರೆ ನಗಲಿ, ನೀವೂ ವಿನೋದದಲ್ಲಿ ಕಲೆಯಿರಿ."

ಶಾಮಲ: "ನಾವು ಹಿಂತಿರುಗಿ ಮದರಾಸಿಗೆ ಹೋದಮೇಲೆ ಅಲ್ಲಿನವರಿಗೆಲ್ಲ ಹೇಳಿ ಬಿಡುತ್ತಾರೆ, ಸರ್".

ವನಜ: “ಹಾಸ್ಟಲಿನಲ್ಲೆಲ್ಲ ಡಂಗುರ ಹುಯ್ಯುತ್ತಾರೆ, ಸರ್”.

ರಾಮ ರಾಮ! ಸಾಕುಸಾಕಾಗಿಹೋಯಿತು. ನನಗೆ ಹಲ್ಲುಕಚ್ಚಿಕೊಂಡು ಬದಲು ಕೊಡದೆ ಸುಮ್ಮನಿದ್ದೆ. ನಿಶ್ಯಬ್ಧವನ್ನು ಕಂಡು ಅವರಿಗೆ ಏನನ್ನಿಸಿತೋ ಏನೋ “ಸಾರ್‌ಸಾರ್, ಹೋಗಿಬಿಟ್ಟಿರಾ! ಹೋಗಬೇಡಿ, ಸಾರ್. ಇಲ್ಲಿಯೇ ಇರಿ. ಹೆದರಿಕೆಯಾಗುತ್ತೆ.” ತಲೆ ಚಚ್ಚಿಕೊಂಡೆ. “ಎಲ್ಲಿಯೂ ಹೋಗಲಿಲ್ಲ, ಇಲ್ಲಿಯೇ ಇದ್ದೇವೆ. ಸ್ವಲ್ಪ ಸುಮ್ಮನಿರುತ್ತೀರೋ ಇಲ್ಲವೋ?” ಎಂದೆ. ವರದರಾಜನ ಬಾಯನ್ನು ಎಷ್ಟು ಹೊತ್ತು ಅದುಮಿಟ್ಟಿರಲು ಸಾಧ್ಯ? ಹಿರಿಯ ಕೊರಲಿನಲ್ಲಿ ಕಿರುಚಿದ: “ಪ್ರಾರಬ್ಧಗಳೇ, ನಿಮಗೆ ಸಹಾಯ ಮಡುವುದಕ್ಕೆ ನಮಗೆ ಅವಕಾಶ ಕೊಡುತ್ತೀರೋ ಇಲ್ಲವೋ? ದೂರ ಸರಿದರೆ ಬಾ ಎನ್ನುತ್ತೀರಿ. ಹತ್ತಿರ ಬಂದರೆ ಹೋಗು ಎನ್ನುತ್ತೀರಿ. ನಿಮಗೇನಾದರೂ ಮಾರ್ಯದೆ ಇದೆಯೆ? ಬಿದ್ದಿರಿ, ಅಲ್ಲಿಯೇ ಬಿದ್ದಿರಿ. ರಾತ್ರಿ ನಿಮ್ಮೊಂದಿಗೆ ಇನ್ನೊಂದೆರಡು ಆನೆಗಳೂ ಬೀಳುತ್ತವೆ. ಅವುಗಳ  ಜತೆಯಲ್ಲಿರಿ, ಯಾರಿಗೂ ಗೊತ್ತಾಗುವುದಿಲ್ಲ” ಎಂದ. ಬಾವಿಯಲ್ಲಿ ನಿಶ್ಯಬ್ಧವಾಯಿತು, ಮಿಕ್ಕವರೂ ಹತ್ತಿರದಲ್ಲಿಯೇ ಬರುತ್ತಿರುವ ಕೊರಲೂ ಕೇಳಿಸಿತು:-

“ಆನೆ ಇವರನ್ನು ಕಚ್ಚಿಕೊಂಡು ಹೋಗಿಬಿಟ್ಟಿತಾ?”

“ಎಷ್ಟು ಆನೆಗಳು ಬಂದಿದ್ದವೋ?”

“ಒಂದೇ ಆನೆ ಐವರನ್ನೂ ಹೆಗಲ ಮೇಲೆ ಕೂಡಿಸಿಕೊಂಡು ಹೋಗಿರಬೇಕು”.

“ಇಲ್ಲ, ಹಳ್ಳದಲ್ಲಿ ಆನೆ ಇವರನ್ನು ಸೆಳೆದುಕೊಂಡಿರಬೇಕು”.

“ಆನೆಗೆ ತೋಡಿದ್ದ ಹಳ್ಳ ಇವರ ಕಣ್ಣಿಗೆ ಬೀಳಲಿಲ್ಲವೇ?”

“ಆನೆ ಇವರನ್ನು ಕಂಡು ಹೆದರಿರಬೇಕು. ಪ್ರೋಫೆಸರು ಹೇಳಿರಲಿಲ್ಲವೆ, ಉಗ್ರ ಬಣ್ಣಗಳ ಉಡುಗೆ ಬೇಡವೆಂದು?”

“ಅಥವಾ ಆನೆಯನ್ನು ನೋಡಿ ಇವರೇ ಹೆದರಿರಬೇಕು”.

“ಅದು ಹೋಗಲಿ, ಇವರು ನಮ್ಮ ಗುಂಪನ್ನು ಬಿಟ್ಟು ಬೇರೆಯಾಗಬೇಕಾಗಿದ್ದ ಪ್ರಮೇಯವೇನಿತ್ತು? ಶುದ್ಧ ತಲೆಹರಟೆಗಳು.”

ಈ ಶೈಲಿಯ ಪ್ರಶ್ನೆಗಳು, ಉಹೆಗಳು ಮರುಪ್ರಶ್ನೆಗಳು, ಹೊಸ ಊಹೆಗಳು ಕೇಳಿಬಂದವು. ರೇಂಜರು ಫಾರೆಸ್ಟರನ್ನು ಕರೆದು “ಎರಡು ದೊಡ್ಡ ಬಿದಿರುಗಳನ್ನು ಕಡಿದುಕೊಂಡು ಬಾ” ಎಂದ. ಬಿದಿರುಮೆಳೆ ಪಕ್ಕದಲ್ಲಿಯೇ ಇತ್ತು. ಎರಡು ಗಳುಗಳಿಗೆ ಅಡ್ಡಪಟ್ಟಿಗಳನ್ನು ಕಟ್ಟಿ ಏಣಿಯಂತೆ ಹವಣಿಸಿ ಹಳ್ಳದೊಳಕ್ಕೆ ಇಳಿಬಿಟ್ಟಾಗ ಮೇಲಿನ ಮೆಟ್ಟಲಿಗೂ ನೆಲದ ಸಮಕ್ಕೂ ಎರಡು ಅಡಿಗಳ ಅಂತರ ಬಿಟ್ಟಿತ್ತು. ಈಗಾಗಲೇ ಹೊತ್ತಾಗಿಬಿಟ್ಟಿರುವುದರಿಂದ ನೆಲಸಮವನ್ನು ಮುಟ್ಟುವ ಇನ್ನೊಂದು ಏಣಿಯನ್ನು ತಯಾರಿಸುವುದು ಬೇಡವೆಂದೂ, ಹುಡುಗಿಯರು ಏಣಿಯ ಕೊನೆ ಮೆಟ್ಟಲನ್ನು ಹತ್ತಿ ನಿಲ್ಲುವುದೆಂದೂ, ದಡದ ಮೇಲೆ ಯಾರಾದರೂ ನಿಂತುಕೊಂಡು ಕೈಕೊಟ್ಟು ಅವರನ್ನು ನೆಲದ ಮೇಲಕ್ಕೆ ಸೆಳೆದುಕೊಳ್ಳುವುದೆಂದೂ ತೀರ್ಮಾನಿಸಿದೆವು. ಮೊದಲು ಹತ್ತಿದವಳು ಶಾಮಲ; ಕೊನೆಯ ಮೆಟ್ಟಲಿಗೆ ಬಂದಾಗ ನಾನೇ ಕೈಚಾಚಿದೆ, ಅವಳು ಹಿಡಿದುಕೊಳ್ಳಲೆಂದು. ನಾಚಿಕೊಂಡು ನಿಂತಳು. ಹೋಗಲಿ, ನಾನು ಬೇಡ ಗೋವಿಂದ್‌ಅವರು ಕೈಚಾಚಿದರು. ನಾಚಿಕೆ ಅಧಿಕವಾಯಿತು. ವರದರಾಜನಿಗೆ ಹೇಳಿದೆ, ಅವನು ಕೈಚಾಚಿದ್ದಕ್ಕೆ ಸೊಟ್ಟ ಮೋರೆ ಹಾಕಿಕೊಂಡು ಸಿಡುಗುಟ್ಟಿದಳು. ಒಳಗಿನಿಂದ ಇತರರೂ ಇವಳ ನಿಲುವನ್ನೇ ಸಮರ್ಥಿಸುತ್ತಿದ್ದರು. ನನಗಂತೂ ಕೋಪ ಉಕ್ಕಿಬಂದಿತು. ಇವರ ಪಾತಿವ್ರತ್ಯ  ಧರ್ಮ ರೀತಿಯನ್ನು ಕಂಡು. ಹಲ್ಲುಕಚ್ಚಿಕೊಂಡು ನಮ್ಮೊಂದಿಗಿದ್ದ ಹುಡುಗಿಯರಿಬ್ಬರನ್ನು ಕಳುಹಿಸಿದೆ. ಅವರು ತಮ್ಮ ಕೈಚಾಚಿ ಶಾಮಲಳ ಕೈ ಹಿಡಿದುಕೊಂಡರು. ಶಾಮಲ ನೆಲದ ಮೇಲೆ ಹೆಜ್ಜೆಯಿಡುವುದಕ್ಕೆ ಬದಲಾಗಿ ಇವರಿಬ್ಬರೂ ಒಳಕ್ಕೆ ಬೀಳುವ ಸ್ಥಿತಿ ಏರ್ಪಟ್ಟಿತು. ರೆಂಜರು ಎರಡು ಹೆಜ್ಜೆ ಮುಂದೆ ಧಾವಿಸಿ ಒಳ ಬೀಳಲಿದ್ದ ಹುಡುಗಿಯರ ರಟ್ಟೆಗಳನ್ನು ಬಲವಾಗಿ ಹಿಡಿದು ಹಿಂದಕ್ಕೆ ಸೆಳೆದದ್ದರಿಂದ ಇನೊಂದು ಅನಾಹುತ ತಪ್ಪಿತು. ನಾವು ಸೋತೆವೆಂದು ಒಪ್ಪಿಕೊಂಡೆವು. ಆದರೆ ಜವಾಬ್ದಾರಿ ನನ್ನದು ತಾನೆ?

ಅವರನ್ನು ಅಲ್ಲಿಯೇ ಬಿಟ್ಟುಹೋಗುವುದು ಸಾಧ್ಯವೇ? ಹಗೆ ಮಾಡುವುದಕ್ಕೆ ಧೈರ್ಯತಾನೆ ಎಲ್ಲಿಂದ ಬರಬೇಕು? ಹಸ್ತಸ್ಪರ್ಶ ಅವರಿಗೆ ಮೈಲಿಯಾಗುವುದಾಗಿದ್ದ ಪಕ್ಷಕ್ಕೆ ಬಿದಿರಿನಲ್ಲಿಯೇ ಮೂರು ಅಡಿಯ ಕೋಲೊಂದನ್ನು ತೆಗೆದುಕೊಂಡು, ನಾನು ಅದರ ಒಂದು ತುದಿಯನ್ನು ಬಲವಾಗಿ ಹಿಡಿದುಕೊಂಡು ಇನ್ನೊಂದು ತುದಿಯನ್ನು ಮೇಲೇರಿ ಬರುವವರೆಗೆ ನೀಟುವುದೆಂದೂ, ಅವರು ಬರಿತುದಿಯನ್ನು ಹಿಡಿದುಕೊಂಡು ನೆಲದ ಮೇಲಕ್ಕೆ ಬರುವುದೆಂದೂ ಯೋಚಿಸಿ ಹಾಗೆಯೇ ಮಾಡಿದೆ. ಒಬ್ಬೊಬ್ಬರಾಗಿ ಹತ್ತಿಬಂದರು. ಮೇಲಕ್ಕೆ ಬಂದವರಿಗೆ ಸುತ್ತಲಿನ ಸುಳಿವೇ ಇಲ್ಲ! ಐವರೂ ಒಬ್ಬರನ್ನೊಬ್ಬರು ವಿಧವಿಧವಾಗಿ ತಬ್ಬಿಕೊಂಡು ತಮತಮಗೇ ವಂದಾನಾಸಮರ್ಪಣೆ ಮಾಡಿಕೊಳ್ಳುತ್ತಿದ್ದುದನ್ನು ನೋಡಿ ನಮಗೆಲ್ಲರಿಗೂ ವೀಪರೀತ ನಗು ಬಂದಿತು. ಈ ಆಲಿಂಗನಾಮಹೋತ್ಸವ ಮುಗಿದೊಡನೆಯ ನಾವು ಹಲ್ಲು ಬಿಟ್ಟಿದನ್ನು ಗಮನಿಸಿದರು. ನೀರುಜಡೆ ಜಾನಕಿ ಸಿಟ್ಟೆದ್ದು ಹುಡುಗರನ್ನು ನೋಡಿ "ಯಾಕ್ರೋ ಹಲ್ಲು ಕಿರಿಯುತ್ತಿದ್ದೀರ?" ಎಂದು ಗದರಿಸಿದಳು. ಮಿಕ್ಕ ನಾಲ್ವರೂ "ನಮ್ಮ ಚೀಲಗಳನ್ನು ಯಾರೋ ತೆಗೆದುಕೊಂಡುಬಿಟ್ಟಿದ್ದಾರೆ! ನಮ್ಮ ಸಸ್ಯಕರಂಡಗಳನ್ನು ಯಾರೋ ಕದ್ದುಬಿಟ್ಟಿದ್ದಾರೆ! ಎಂದು ಕೂಗಾಡಹತ್ತಿದರು. ಯಾರೂ ಯಾವುದನ್ನೂ ತೆಗೆದುಕೊಳ್ಳಲಿಲ್ಲ. ಹಳ್ಳಕ್ಕೆ ಜಾರಿಬಿದ್ದಾಗ ಹೊತ್ತಿದ್ದ ಸಾಮಾನುಗಳ ಸಮೇತ ಒಳಕ್ಕೆ ಕುಸಿದಿದ್ದರು. ಹತ್ತಿಬಂದಾಗ ಅವನ್ನು ಅಲ್ಲಿಯೇ ಮರೆತಿದ್ದರು. ಅಟೆಂಡರುಗಳು ಹಳ್ಳದಲ್ಲಿ ಇಳಿದು ಸಾಮಾನುಗಳನ್ನು ತೆಗೆದುಕೊಂಡು ಬಂದರು. ಬಿಡಿದಿಗೆ ವಾಪಸು ಬಂದೆವು.

ವಾಪಸು ಬರುವ ದಾರಿಯಲ್ಲಿ ಎಲ್ಲರಿಗೂ ಏನೋ ಒಂದು 'ಥರ' ಮಾತಿಲ್ಲ ಕತೆಯಿಲ್ಲ, ಗೆಲುವಿಲ್ಲ. ಕಾಡಾನೆಗಳನ್ನೂ, ಕಾಡೆಮ್ಮೆಗಳನ್ನೂ ಕಣ್ಣಾರ ಕಾಣುವ ಅವಕಾಶ - ಅತಿ ಅಪರೂಪವಾದ ಅವಕಾಶ - ಹೋಗಿಬಿಟ್ಟಿತಲ್ಲಾ ಎಂಬ ಉತ್ಸಾಹಭಂಗ ಕೆಲವರಿಗೆ ಪಂಚಕನ್ಯೆಯರಿಂದ ತಪ್ಪಿಹೋಯಿತಲ್ಲಾ ಎಂಬ ರೋಷ ಕೆಲವರಿಗೆ. ಸಂಜೆ ನಾಲ್ಕು ಗಂಟೆಯಾಗಿಬಿಟ್ಟಿದ್ದರಿಂದ ಹಸಿವು ಬಾಯರಿಕೆಗಳು ಅನೇಕರಿಗೆ ಹಿಂದೆ ನಮಗೆ ಮಹಾದಾನಂದವನ್ನು ಕೊಟ್ಟಿದ್ದ ಅಶೋಕಮರಗಳ ಹತ್ತಿರ ಬಂದಾಗ ಕೂಡ "ಇವಕ್ಕೆ ಕಾಡಿನಲ್ಲೇಕೆ ಇಷ್ಟು ಶೃಂಗಾರ?" ಎಂದು ತಾತ್ಸಾರಗೊಳ್ಳುವಂತಾಯಿತೇ ಹೊರತು ಉತ್ಸಾಹ ತರಲಿಲ್ಲ. ವರದರಾಜನಂತೂ "ಕಾಡಾನೆಗಳನ್ನು ಕಾಣುವ ಬದಲು ಊರಾನೆಗಳನ್ನು ಕಂಡದ್ದಾಯಿತು" "ಕಾಡಾನೆಗಳನ್ನು ಕಾಣುವ ಬದಲು ಊರಾನೆಗಳನ್ನು ಕಂಡದ್ದಾಯಿತು" ಎಂದು ಗೊಣಗುತ್ತಲೇ ಇದ್ದ. ಹುಡುಗಿಯರೂ ಮೌನತಾಳಿದ್ದರು; ತಾವಾಡಿದ್ದ ಮಾತುಗಳೂ ನಡೆದುಕೊಂಡಿದ್ದ ರೀತಿಯೂ ನೆನಪಿಗೆ ಬಂದು ತಮ್ಮನ್ನು ತಾವೇ ಹಳಿದುಕೊಳ್ಳುತ್ತಿದ್ದರೋ ಏನೋ! ಆದರೂ ಒಂದು ಸಲ ಜಾನಕಿ "ಆ ಹಳ್ಳದಲ್ಲಿ ಆನೆಯೊಂದು ಬಿದ್ದುಬಿಟ್ಟಿದ್ದರೆ, ಪಾಪ……!" ಎನ್ನುವಷ್ಟರಲ್ಲಿಯೇ ವರದರಾಜ "ನಮಗೆ ಕಷ್ಟವಾಗುತ್ತಿರಲಿಲ್ಲ! ಅದು ಬೇಟೆಗಾರರ ಪಾಡಾಗುತ್ತಿತ್ತು. ನೀವು ಬಿದ್ದದ್ದರಿಂದ ನಮ್ಮದು ನಾಯಿಪಾಡಾಯಿತು!" ಎಂದು ಬಾಯಿ ಮುಚ್ಚಿಸಿದ.

**ಪ್ರಭಾವತೀ ದರ್ಬಾರು**

ಬಿಡದಿಯನ್ನು ಸೇರಿದೊಡನೆಯೆ ಊಟಮಾಡಿ, ಸಂಜೆ ಆರುಗಂಟೆಯ ಹೊತ್ತಿಗೆ ಬೆಳಕು ಹೊತ್ತಿಸಿಕೊಂಡು ನಾವು ತಂದಿದ್ದ ಸಂಗ್ರಹಣ ಚೀಲಗಳನ್ನೂ ಕರಂಡಗಳನ್ನೂ ಬಿಚ್ಚಿ, ಗಿಡಸಾಮಾಗ್ರಿಗಳ ಅಧ್ಯಯನಕ್ಕೆ ಕುಳಿತುಕೊಂಡೆವು. ದೊಡ್ಡ ಕೈಸಾಲೆ, ವಿದ್ಯಾರ್ಥಿಗಳಿಗೆ ಹೇಳಬೇಕಾದುದನ್ನು ಕಲಿಸಲು ಅನುಕೂಲವಾಗಿತ್ತು. ಈ ದಿನ ಹುಡುಗರು ಬಂದರು; ಅರ್ಧಗಂಟೆಯಾದರೂ ಹುಡುಗಿಯರೂ ಬರಲಿಲ್ಲ. ಯೂಜಿನೀಷಿಯ ಮೊಳಕೆಯನ್ನು ಮೈಕ್ರೋಸ್ಕೋಪಿನಲ್ಲಿಟ್ಟು ಪರಾವಲಂಬಿಯ ಬೇರು ಅತಿಥೇಯ ಬೇರನ್ನು ಹೊಕ್ಕಿರುವ ರೀತಿಯನ್ನು ಕಾಣಿರೆಂದು ಎಲ್ಲರನ್ನೂ ಕರೆದೆ. ಹುಡುಗರೆಲ್ಲ ಬಂದು ನೋಡಿದರು. ಹುಡುಗಿಯರಾದರೂ ಕೋಣೆಯಿಂದ ಹೊರಬರಲಿಲ್ಲ. ನನ್ನ ಕರೆ ಕೇಳಿಸಿತೋ ಇಲ್ಲವೋ ಎಂಬ ಸಂದೇಹದಿಂದ ಏರುಕೊರಲು ಕೊಟ್ಟೆ. ಸುಳಿವಿಲ್ಲ. ಬೇರೊಂದು ಸಾಮಗ್ರಿಯನ್ನಿಟ್ಟು ಹುಡುಗರಿಗೆ ತೋರಿಸಬೇಕೆಂದುಕೊಂಡೆ. ಒಡನೆಯೇ ಹುಡುಗಿಯರ ವಿಷಯದಲ್ಲಿ ಕನಿಕರ ಹುಟ್ಟಿತು. ಸರಾಸರಿ ಪ್ರಕಾರ ಹುಡುಗಿಯರು ಹುಡುಗರಿಗಿಂತಲೂ ಓದಿನಲ್ಲಿ, ಕುಳಿತುಕೊಳ್ಳುವುದರಲ್ಲಿ, ಪಾಠ-ಗಿಣಿಪಾಠವೇ ಆದರೂ ಒಪ್ಪಿಸುವುದರಲ್ಲಿ ಉತ್ಸಾಹಿಗಳು. ಹುಡುಗರಿಗೆ ಕೊಟ್ಟ ಅವಕಾಶಗಳನ್ನೇ ಅವರಿಗೂ ಕೊಡುವುದು ನನ್ನ ಧರ್ಮವಲ್ಲವೆ? ಹೀಗೆಂದುಕೊಂಡು ವರದರಾಜನನ್ನು ನೋಡಿ ಬಾ ಎಂದೆ. ಅವನು ಹೋಗಿ ಮೆಲ್ಲಗೆ ಬಾಗಿಲು ತಟ್ಟಿದ; ಬರಲಿಲ್ಲ. ದಬ್ಬಿದ, ಒಳಗೆ ಅಗುಳಿ ಹಾಕಿತ್ತು; ಬೀಗದಕೈ ತೂತಿನಲ್ಲಿ ನೋಡಿದ, ನೆಗೆದುಬಿದ್ದು ನಕ್ಕ, ಹತ್ತಿರ ಬಂದು, "ಸರ್, ನೀವೇ ಬಂದು ನೋಡಿ, ನೋಡಬೇಕಾದ ದೃಶ್ಯ" ಎಂದ. ಇವನ ಹುಡುಗುತನ ನೋಡಿ ನನಗೆ ರೇಗಿತಾದರೂ ನಾನೇ ಎದ್ದುಹೋಗಿ ನೋಡುವ ಆಸೆಯಾಯಿತು. ಹೋಗಿ ಬಾಗಿಲು ತಟ್ಟಿದೆ. ಅಗುಳಿ ಬಿದ್ದುಕದ ಸ್ವಲ್ಪ ತೆರೆಯಿತು,

“ಪ್ರಭಾವತಿ ದರ್ಬಾರು” ದೃಶ್ಯ: ಕಲ್ಪಕಂ ಮಂಚದ ಮೇಲೆ ಸುತ್ತಿದ ಹಾಸಿಗೆಯನ್ನೊರಗಿಕೊಂಡು ಕಾಲುಚಾಚಿ ಪವಡಿಸಿದ್ದಾಳೆ. ಬಿರಿಹಾಕಿದ ತಲೆಕೂದಲನ್ನು ವನಜ ಬಾಚುತ್ತಿದ್ದಾಳೆ, ಜಾನಕಿ ಅವಳ ಭುಜದ ಹತ್ತಿರ ಟ್ರಂಕೊಂದರ ಮೇಲೆ ಕುಳಿತು ಕಾಗದದ ಚೀಲದಿಂದ ಬಿಸ್ಕತ್ತುಗಳನ್ನು ತೆಗೆದು ಕಲ್ಪಕಂನ ಬಾಯಲ್ಲಿ ಇರಿಸುತ್ತಿದ್ದಾಳೆ, ಮಧ್ಯೆ ಮಧ್ಯೆ ತಾನೂ ತಿನ್ನುತ್ತಿದ್ದಾಳೆ. ಇನ್ನಿಬ್ಬರು ಎಡಬಲದಲ್ಲಿ ಕುಳಿತು ಕಲ್ಪಕಂನ ಕಾಲುಗಳನ್ನು ಒತ್ತುತ್ತಿದ್ದಾರೆ. ಮಿಕ್ಕವರು ಕಲ್ಪಕಂಗೆ ಎದುರಾಗಿ ಕುಳಿತಿದ್ದಾರೆ; ಅವರ ಪೈಕಿ ಒಂದಿಬ್ಬರು ಯಾವುದೊ ತಮಿಳು ಸಿನಿಮಾ ಹಾಡೊಂದನ್ನು ಕುಂಞ್‌ಯೆನ್ನುತ್ತಿದ್ದಾರೆ. ನನಗೆ ವಿಪರೀತ ನಗು ಬಂದಿತು. ಅವರು ದಣಿವಾರಿಸಿಕೊಳ್ಳಲು ಸುಖಪಡುತ್ತಿದ್ದ ವೈಖರಿಯನ್ನು ಕಂಡು ಅಸೂಯೆಯ ಸುಳಿವೂ ಹರಿದು ಮಾಯವಾಯಿತು. ಕದವನ್ನು ಪೂರ್ತಿ ತೆಗೆದು ಕೃತಕ ಕೋಪದಿಂದ “ಏನು ಬರುತ್ತೀರೋ, ಇಲ್ಲ ಹೀಗೆಯೇ ದರ್ಬಾರಿನಲ್ಲಿ ಕುಳಿತಿರುತ್ತೀರೋ?” ಎಂದು ಗದರಿಸಿದೆ. ನಾನಲ್ಲಿದ್ದ ಅರಿವಾದದೊಡನೆಯೆ ಎಲ್ಲರೂ ಚಿಮ್ಮನೆ ನೆಗೆದು ಎದ್ದು ಬಂದರು. ಅಷ್ಟರಲ್ಲಿ ವರದರಾಜ ತಾನು ಕಂಡಿದ್ದ ನೋಟಕ್ಕೆ ಬಣ್ಣವನ್ನೂ, ಮೆರುಗನ್ನೂ ಕೊಟ್ಟು ಗೆಳೆಯರಿಗೆಲ್ಲಾ ಹೇಳಿಬಿಟ್ಟಿದ್ದ. ತಮಗೆ ಆ ದೃಶ್ಯವನ್ನು ಕಾಣುವ ಅವಕಾಶ ಒದಗಲಿಲ್ಲವೆಂದು ಹುಡುಗರು ನಿರುತ್ಸಾಹಗೊಂಡಿದ್ದರೂ, ಹುಡುಗಿಯರು ಬಂದು ಮೈಕ್ರೋಸ್ಕೋಪಿನೊಳಗೆ ನೋಡುತ್ತಿರುವಾಗ ಮುಳು ಮುಳು ನಗುತ್ತಿದ್ದರು. ಜಾನಕಿ: “ಯಾಕ್ರೋ, ಈ ಮುಸಿನಗೆ? ಗಟ್ಟಿಯಾಗಿ ನಗುವುದಕ್ಕೆ ಧೈರ್ಯವಿಲ್ಲವೇ?” ಎಂದು ಮೂದಲಿಸಿದಳು. ರಾಮಮೂರ್ತಿ ಎಂದ; “ಧೈರ್ಯವಿಲ್ಲದೇ ಇಲ್ಲ. ನಾವು ಯಥೋಚಿತವನ್ನು ಅರಿತವರು. ಪ್ರಕೃತಕ್ಕೆ ಮುಸಿನಗು ಉಚಿತ. ಇನ್ನೊಂದು ಸಂದೇಹ ನಿವಾರಣೆಯಾದ ಮೇಲೆ ಹುಚ್ಚುನಗೆ ಉಚಿತ. ಆಗ ಅದನ್ನೂ ಧೈರ್ಯವಾಗೆಯೇ ಪ್ರದರ್ಶಿಸುತ್ತೇವೆ.” ವರದರಾಜ ಜಾನಕಿಯನ್ನು ಕುರಿತು, “ಆ ಸಂದೇಹ ಏನು ಎಂದು ಕೇಳಿ” ಎಂದ. ಇವನು ತನ್ನ ಪರ ಇರುವನೆಂಬ ನಂಬಿಕೆಯಿಂದ “ನನ್ನನು ಕೇಳೊ, ಹೇಳುತ್ತೇನೆ” ಎಂದಳು. ರಾಮಮೂರ್ತಿ: “ಹಗಲಲ್ಲಿ ಹಳ್ಳಕ್ಕೆ ಬಿದ್ದ ಎಂಬ ಸಾಮತಿಯನ್ನು ಮಾತ್ರ ಕೇಳಿದ್ದೇವು. ಅದು ಉತ್ಪ್ರೇಕ್ಷಾಲಂಕಾರ ಎಂದುಕೊಂಡಿದ್ದೆವು. ಆದರೆ ನೀವು ಸಾಮತಿಗೆ ಲಕ್ಷ್ಯವಾಗಿ ಶೋಭಿಸುತ್ತಿದ್ದೀರ. ಅದು ಹೇಗೆತಾನೆ ಅಷ್ಟು ದೊಡ್ಡ ಹಳ್ಳ - ಆನೆಗಳನ್ನು ಹಿಡಿಯುವುದಕ್ಕಾಗಿ - ತೋಡಿದ್ದ ಹಳ್ಳ, ಹತ್ತಡಿ ಅಗಲ ಹನ್ನೆರಡಡಿ ಆಳ ಅಗೆದಿದ ಹಳ್ಳ- ಕೃತಿಮ ಸಸ್ಯಾವಳಿಯಿಂದ ಹೊಂದಿಕೆಗೊಂಡಿದ್ದ ಹಳ್ಳವನ್ನು ಸಸ್ಯಾಶಾಸ್ತ್ರ ಓದಿಯೂ ತಾನಾಗಿ ಬೆಳೆದ ಬೆಳೆ ಯಾವುದು. ಕೃತಕವಾಗಿ ನೆಟ್ಟು ಸಿಕ್ಕಿಸಿದ ಬೆಳೆ ಯಾವುದೂ ಎಂಬುದರ ವಿವೇಚನೆಯಿಂದ ಕೃತಿಮವನ್ನು ಅರಿಯಬಹುದಾಗಿದ್ದ ಹಳ್ಳವನ್ನು ಹುಡುಕಿಕೊಂಡು ಹೋಗಿ ಬಿದ್ದಿರಲ್ಲಾ, ಅದು ಹೇಗೆ ಹುಡುಕಿದಿರಿ?” ಜಾನಕಿ ಅಣಕಿಸುತ್ತ ಅದನ್ನು “ನಾವೇನೂ ಹುಡುಕಿಕೊಂಡು ಹೋಗಲಿಲ್ಲ” ಎಂದು ಸರ್ರನೆ ನನ್ನ ಕಡೆ ತಿರುಗಿ “ಇಲ್ಲ ಸರ್. ನಮಗೆ ಹಿಂದೆ ಸಿಕ್ಕಿದ್ದ ಯೂಜಿನೀಷಿಯ ಗಿಡಗಳು ಮುರಿದು ಹೋಗಿದ್ದವು, ಸರ್‌ಈ ಪ್ರದೇಶದಲ್ಲಿ ಇನ್ನೂ ಹುಲುಸಾದ ಗಿಡಗಳನ್ನು ಕಂಡೆವು , ಸರ್‌ಇನೊಂದೆರಡು ಗಿಡಗಳನ್ನು ಅಗೆಯೋಣವೆಂದುಕೊಂಡು ಐವರೂ ಒಟ್ಟಾಗಿ ನುಗ್ಗಿದೆವು, ಸಾರ್. ನಾನು ಮುಂದು ತಾನು ಮುಂದು ಎಂದು ನುಗ್ಗಿದಾಗ ಈ ಕೃತಿಮ ನಮಗೆ ಗೊತ್ತಾಗಲಿಲ್ಲ, ಸರ್.” ವರದರಾಜ: “ಆದರೂ ಹಳ್ಳದೊಳಕ್ಕೆ ಇವರಾಗಿಯೇ ಬೀಳಲಿಲ್ಲ, ಸರ್‌ಹಳ್ಳವೇ ಇವರನ್ನು ತನ್ನೊಳಕೆ ಸೆಳೆದುಕೊಂಡು ಬಿಟ್ಟಿತು, ಸರ್‌ಪಾಪಿ ಹಳ್ಳ, ಸರ್!!” ಪಾಪ ಎಂದೆನ್ನಿಸಿದರೂ, ಯಾರಿಗೆ ತಾನೆ ನಗು ಬರುವುದಿಲ್ಲ ಈ ಸಂದರ್ಭದಲ್ಲಿ ? ಹುಡುಗರು ಕೇಕೆಹಾಕಿಕೊಂಡೇ ನಕ್ಕರು.

ಮಾರನೆಯ ದಿನ ಹುಡುಗಿಯರಿಗೆ ರಜ ಕೊಟ್ಟೆ . ಅವರು ಒಡನೆಯೇ ಒಪ್ಪಿಕೊಳ್ಳುತ್ತಾರೆಯೇ? ಪ್ರಶ್ನೆಗಳು, ವಾಗ್ವಾದಗಳು ಕೂಗಾಟಗಳು ನಡೆಯಬೇಕಲ್ಲ!

ಜಾನಕಿ: “ನಮಗೇನೂ ದಣಿವಾಗಿಲ್ಲ”

ಗೋವಿಂದ್: “ಅದನ್ನು ನಿರ್ಣಯಿಸುವವರು ನೀವಲ್ಲ, ನಾವು.”

“ನಿನ್ನೆಯೂ ನಮಗೆ ದಣಿವಾಗಿರಲಿಲ್ಲ…….”

“ನಿನ್ನೆಯ ಮಾತನ್ನು ನಿನ್ನೆಗೇ ಬಿಟ್ಟುಬಿಡಿ; ಅದರ ವಿಷಯ ನಮಗೆ ಗೊತ್ತು”.

“ನಾವೆಲ್ಲ ರೆಡಿ ಆಗಿಬಿಟ್ಟಿದ್ದೇವೆ.”

“ಅದು ಸರಿಯೆ. ಅಟೆಂಡರೊಂದಿಗೆ ನಿಮ್ಮನ್ನು ಬೇರೆ ಕಡೆ ಕಳುಹಿಸುತ್ತೇವೆ. ಅಲ್ಲಿಗೆ ಹೋಗಿ ಬನ್ನಿ”.

“ಹುಡುಗರಿಗೆ ಮಾತ್ರ ಬೇರೆ, ನಮಗೆ ಬೇರೆ, ಏಕೆ ಸಾರ್ಈ ಪಕ್ಷಪಾತ?”

“ಬೇರೆ ಏಕೂ ಅಲ್ಲ. ಅವರು ಹುಡುಗರು, ನೀವು ಹುಡುಗಿಯರು ಅಷ್ಟೆ. ಅದಕ್ಕೇ ಪಕ್ಷಪಾತ”.

ನಾನು ಬಾಯಿ ಹಾಕಿದೆ: “ಎಲ್ಲಿ ನೋಡಿ ಈ ದಿನ ರಜ ತೆಗೆದುಕೊಂಡು ಬಿಡದಿಯಲ್ಲಿಯೇ ಉಳಿದುಕೊಂಡು ವಿಶ್ರಾಂತಿ ತೆಗೆದುಕೊಳ್ಳಿ. ನಾಳೆ ಪೀರಮೇಡಿಗೆ ನಿಮ್ಮನ್ನೂ ಕರೆದುಕೊಂಡು ಹೋಗುತ್ತೇವೆ. ಇಲ್ಲದಿದ್ದರೆ ಈ ದಿನ ಬನ್ನಿ, ನಾಳೆ ಬೇಡ”.

ಅವರವರಲ್ಲಿಯೇ ಗುಸುಗುಸು ಮಾತನಾಡಿಕೊಂಡು ವನಜ ಮುಂದೆ ಬಂದಳು;

“ಈ ದಿನ ಬರುತ್ತೇವೆ. ನಾಳೆ….” ಎನ್ನುವಷ್ಟರಲ್ಲಿಯೇ ಜಾನಕಿ ಅವಳನ್ನು ಜಿಗುಟಿ “ಅಲ್ಲ ಸಾರ್, ಈ ದಿನ ಇಲ್ಲಿಯೇ ಉಳಿಯುತ್ತೇವೆ; ನಾಳೆ ಕರೆದುಕೊಂಡು ಹೋಗುವುದಾರೆ.” ಸಧ್ಯ, ಇಂದಿನ ಇತ್ಯರ್ಥ ಕೈಗೂಡಿತೆಂಬ ಸಂತೋಷದಿಂದ ಹೊರಟೆವು.

ವರದರಾಜನೂ ತಂಗವೇಲುವೂ ಅವರನ್ನು ರೇಗಿಸುವ ಉದ್ದೇಶದಿಂದ ಹೆಜ್ಜೆಹೆಜ್ಜೆಗೂ ಹಿಂತಿರುಗಿ “ಟಾ ಟಾ” ಎಂದು ಕೈಯಾಡಿಸುತ್ತ ಬಂದರು. ಹುಡುಗಿಯರು ಸೆರಗುಗಳನ್ನು ಬಿಗಿಸುತ್ತ ಏನೋ ಶಪಿಸಿದರು, ವರದರಾಜ “ಹೋಗಿ, ನಿನ್ನೆಯ ದರ್ಬಾರು ನಡೆಸಿ, ಹೋಗಿ, ಹೊತ್ತಾಗುತ್ತದೆ” ಎಂದು ಇನ್ನಷ್ಟು ರೇಗಿಸಿದ.

**ಲೇಖಕರು**

ಬೆಂಗಳೂರು ಗುಂಡಪ್ಪ ಲಕ್ಷ್ಮಣಸ್ವಾಮಿ (೧೯೧೬-೧೯೮೦) ಅವರು ಕರ್ನಾಟಕ ಕಂಡ ಪ್ರತಿಭಾವಂತ ಸಸ್ಯಶಾಸ್ತ್ರಜ್ಞರಲ್ಲಿ ಒಬ್ಬರು.

ಅವರ ‘ಹಸಿರು ಹೊನ್ನು’, ‘ಸಾಕ್ಷಾತ್ಕಾರದ ಹಾದಿಯಲ್ಲಿ’, ‘ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕಾ’ ಮುಂತಾದವು ಸಸ್ಯಶಾಸ್ತ್ರಕ್ಕೆ ಸಂಬಂಧಪಟ್ಟ ಪುಸ್ತಕಗಳು. ಆದರೆ ಇವು ಕೇವಲ ಸಸ್ಯ ವಿಜ್ಞಾನದ ಪುಸ್ತಕಗಳಾಗಿರದೆ, ಕತೆ ಪುಸ್ತಕದಂತೆ ಓದಿಸಿಕೊಳ್ಳುವ ಆಪ್ತಶೈಲಿಯನ್ನು ಒಳಗೊಂಡಿವೆ. ಹಾಸ್ಯಮಯವಾಗಿ ಬರೆಯುವುದು, ವಿಡಂಬನೆ ಮಾಡುವುದು ಸ್ವಾಮಿಯವರ ಬರೆಹದ ವಿಶೇಷವಾಗಿದೆ. ಜಗತ್ಪ್ರಸಿದ್ಧ ಸಸ್ಯಶಾಸ್ತ್ರಜ್ಞನಾದ ಅಮೆರಿಕದ ಇರ್ವಿಂಗ್‌ಬೈಲಿಯವರ ಶಿಷ್ಯನಾಗಿ, ಅಮೆರಿಕೆಯ ಹಾರ್ವರ್ಡ್‌ವಿಶ್ವವಿದ್ಯಾಲಯದಲ್ಲಿ ಕಲಿತ ಸ್ವಾಮಿ, ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸಸ್ಯಶಾಸ್ತ್ರದ ಪ್ರೊಫೆಸರ್‌ಆಗಿದ್ದರು. ಸಾಹಿತ್ಯ ಸಂಗೀತ ವಿಷಯದಲ್ಲಿ ಅಪಾರ ಅಧ್ಯಯನ ಮಾಡಿದ್ದ ಸ್ವಾಮಿಯವರು, ‘ಕಾಲೇಜು ರಂಗ’, ‘ತಮಿಳುತಲೆಗಳ ನಡುವೆ’ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಅವರ ‘ಹಸಿರು ಹೊನ್ನು’ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೭೮) ಬಂದಿತು.

**ಆಶಯ**

ಪ್ರಸ್ತುತ ಬರೆಹವನ್ನು ಅವರ ‘ಹಸಿರು ಹೊನ್ನು’ ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ. ಸಸ್ಯಶಾಸ್ತ್ರದ ವಿದ್ಯಾರ್ಥಿಗಳನ್ನು ಸಸ್ಯವೀಕ್ಷಣೆ ಹಾಗೂ ಸಸ್ಯಸಂಗ್ರಹಕ್ಕೆಂದು ಕಾಡಿಗೆ ಕರೆದುಕೊಂಡು ಹೋಗಿದ್ದಾಗ, ಲೇಖಕರಿಗಾದ ಅನುಭವಗಳನ್ನು ಇದು ವರ್ಣಿಸುತ್ತದೆ. ನಗರ ವಾತಾವಾರಣದಲ್ಲಿ ಬೆಳೆದ ವಿದ್ಯಾರ್ಥಿಗಳು, ಕಾಡಿನ ಪರಿಸರದಲ್ಲಿ ಪಡುವ ಪಾಡಿನ ಚಿತ್ರಣ ಇಲ್ಲಿದೆ. ಜತೆಗೆ ಕಾಲೇಜು ಹುಡುಗ ಗುಡುಗಿಯರಲ್ಲಿ ಇರುವ ಪರಸ್ಪರ ಛೇಡಿಸುವ ಸ್ವಭಾವವನ್ನು ವಿನೋದಮಯ ರೀತಿಯಲ್ಲಿ ಬರೆಹ ಚಿತ್ರಿಸುತ್ತದೆ.

**ಪದಕೋಶ**

ಎಲೆಗುತ್ತಿ = ಎಲೆಗುಚ್ಛ, ನೀಟುವುದು = ಚಾಚುವುದು, ಬಿಡದಿ = ತಾತ್ಕಾಲಿಕವಾಗಿ ಮಾಡಿದ ವಸತಿ, ಪ್ರಕೃತಕ್ಕೆ = ಸದ್ಯಕ್ಕೆ, ಯಥೋಚಿತ = ಎಷ್ಟುಬೇಕೋ ಅಷ್ಟು, ಸಾಮತಿ = ಗಾದೆಮಾತು, ಲಕ್ಷ್ಯ = ಉದಾಹರಣೆ, ಕೃತಿಮ = ಮೋಸ

**ಟಿಪ್ಪಣಿ**

ರೇಂಜರು = ಅರಣ್ಯದ ಬೇರೆ ಬೇರೆ ವಲಯಗಳ ರಕ್ಷಣೆಯ ಅಧಿಕಾರಿ, ಸಸ್ಯಕರಂಡ = ಸಂಗ್ರಹಿಸಿದ ಸಸ್ಯಗಳನ್ನು ಬಾಡದಂತೆ ರಕ್ಷಿಸಿಡುವ ತಗಡಿನ ಪೆಟ್ಟಿಗೆ, (Vasculum), ಯೂಜಿನೀಷಿಯ = ಒಂದು ಬಗೆಯ ಸಸ್ಯ, ಉತ್ಪ್ರೇಕ್ಷಾಲಂಕಾರ = ಇರುವುದನ್ನು ಕೊಂಚ ಅತಿಮಾಡಿ ವರ್ಣಿಸುವ ಒಂದು ಕಾವ್ಯವಿಧಾನ

**ಪ್ರಶ್ನೆಗಳು**

೧. ಐವರು ಹುಡುಗಿಯರು ಇದ್ದಕ್ಕಿದಂತೆ ಹೇಗೆ ನಾಪತ್ತೆಯಾಗುತ್ತಾರೆ?
೨. ಆನೆಹಳ್ಳದಲ್ಲಿದ್ದ ಹುಡುಗಿಯರನ್ನು ಪತ್ತೆ ಮಾಡಿದ ರೀತಿ ಯಾವುದು?
೩. ಆನೆಹಳ್ಳದಲ್ಲಿ ಬಿದ್ದಿದ್ದ ಹುಡುಗಿಯರ ಮೊದಲ ಪ್ರತ್ರಿಕ್ರಿಯೆ ಏನಾಗಿತ್ತು?
೪. ವರದರಾಜನು ಹಳ್ಳದೊಳಗೆ ಬಿದ್ದಿದ್ದ ಹುಡುಗಿಯರನ್ನು ಹೇಗೆ ಛೇಡಿಸಿದನು?
೫. ಆನೆಹಳ್ಳದಲ್ಲಿದ್ದ ಹುಡುಗಿಯರನ್ನು ಹೊರಗೆ ತಂದ ವಿಧಾನದ ಸ್ವಾರಸ್ಯ ಚಿತ್ರಿಸಿರಿ.
೬. ಹಳ್ಳದಿಂದ ಹೊರಬಂದ ಮೇಲೆ ತಂಡದಲ್ಲಿ ವರ್ತನೆಯಲ್ಲಿ ಉಂಟಾದ ಬದಲಾವಣೆಗಳು ಯಾವುವು?
೭. ಪ್ರಭಾವತಿ ದರ್ಬಾರಿನಲ್ಲಿ ಯಾರ್ಯಾರು ಯಾವ್ಯಾವ ಸೇವೆ ಮಾಡುತ್ತಿದ್ದರು?
೮. ರಾಮಮೂರ್ತಿ ಪಂಚಕನ್ಯೆಯರನ್ನು ಹೇಗೆ ಟೀಕಿಸಿದನು?
೯. ಮಾರನೆಯ ದಿನ ಸಸ್ಯಸಂಗ್ರಹಕ್ಕೆ ಹೋಗುವ ಮುನ್ನ ನಡೆದ ಸಂಭಾಷಣೆಯ ಸ್ವಾರಸ್ಯವೇನು?
೧೦. ವರದರಾಜನ ತಮಾಶೆ ಸ್ವಭಾವ ಕುರಿತು ಬರೆಯಿರಿ.

**ಪೂರಕ ಓದು**

೧. ಬಿ ಜಿ ಎಲ್‌ಸ್ವಾಮಿ ಅವರ 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕ'
೨. ದೇನಾಶ್ರೀ ಅವರ 'ಕಾಲಾತೀತದ ದ್ವೀಪಗಳಲ್ಲಿ ' ಎಂಬ ಟಂಡಮಾನ್‌ಪ್ರವಾಸಕಥನ
೩. ಪೂರ್ಣಚಂದ್ರ ತೇಜಸ್ವಿ ಅವರ 'ಕರ್ವಾಲೋ' ಹಾಗೂ 'ಜುಗಾರಿ ಕ್ರಾಸ್' ಕಾದಂಬರಿಗಳು
೪. ಚಂದ್ರಶೇಖರ ನಂಗಲಿ 'ಕಾಡು ಮತ್ತು ತೋಪು' ಚಾರಣ ಕಥನ

# ೭. ಬೆಡ್ ನಂಬರ್ ಏಳು

'ಓಹೋ, ನೀನು ಯಾವಾಗ ಇಲ್ಲಿಗೆ ಬಂದೆ?'

'ನೀನು ಯಾರು? ಓ.....ಇದು ನಾನು ಮೊದಲಿದ್ದ ವಾರ್ಡಲ್ಲವೆಂದು ತೋರುತ್ತದೆ'. ನಾನು ಸುತ್ತಲೂ ತಿರುಗಿ ನೋಡಿದೆ. ಸುತ್ತಲಿನ ವಾತಾವರಣ ನನಗೆ ಹೊಸದಾಗಿ ಕಂಡಿತು. ನರ್ಸುಗಳು ಸುತ್ತಲೂ ಇದ್ದ ರೋಗಿಗಳು ಎಲ್ಲರೂ ನನಗೆ ಹೊಸಬರು ಎಂದೆನಿಸಿತು. ಗೋಡೆಯ ಮೇಲಿದ್ದ ದೊಡ್ಡ ಗಡಿಯಾರ ಅರ್ಧ ಗಂಟೆ ಹೊಡೆಯಿತು. ನಾನು ಗಡಿಯಾರದ ಕಡೆ ನೋಡಿದೆ. ಗಂಟೆ ಎಂಟೂವರೆಯಾಗಿತ್ತು. ನಾನು ಮೊದಲಿದ್ದ ವಾರ್ಡಿನಲ್ಲಿ ನಾಲ್ಕು ಹಾಸಿಗೆಗಳಿದ್ದವು. ಇಲ್ಲಿ ಆರು ಹಾಸಿಗೆಗಳಿದ್ದವು.

'ಇದೇನು ಹೀಗೆ ಕಣ್ಣುಬಿಟ್ಟುಕೊಂಡು ಬೆಪ್ಪುತಕ್ಕಡಿ ಹಾಗೆ ಸುತ್ತಲೂ ನೋಡ್ತಿದಿಯಾ?'

ಆರನೆಯ ಬೆಡ್‌ಗಹಿಗಹಿಸಿ ನಗುತ್ತಾ ಕೇಳಿತು.

'ಊಂ.....ಹೊಸ ಜಾಗ, ಆದುದರಿಂದ ಸುತ್ತಲೂ ನೋಡಿದೆ'.

ನನ್ನ ಬಳಿ ಹೆಜ್ಜೆಯ ಸದ್ದನ್ನು ಕೇಳಿ ಸುಮ್ಮನಾದೆ. ಮೇಲ್‌ನರ್ಸೊಬ್ಬ ನನ್ನ ಬಳಿ ಬಂದು ಮಂಚಕ್ಕೆ ಚೀಟಿಯೊಂದನ್ನು ತಗುಲಿ ಹಾಕಿ ಹೋದ. ನಾನು ಅವನು ತಗುಲಿ ಹಾಕಿದ ಚೀಟಿಯನ್ನು ನಿಧಾನವಾಗಿ ಓದಿದೆ.

'ಬೆಡ್‌ನಂಬರ್‌ಏಳು. ಓಹೋ ಇಂದಿನಿಂದ ನನಗೆ ಬೇರೆ ಹೆಸರು',

'ಇದುವರೆವಿಗೂ ಯಾವ ಹೆಸರಿತ್ತು?'

'ಬೆಡ್‌ನಂಬರ್‌ಮೂರು'.

'ನಮ್ಮ ಬಾಳು ಈ ರೋಗಿಗಳ ಸೇವೆಯಲ್ಲೇ ಆಯಿತು. ನನಗಂತೂ ಈ ಬಾಳು ಬೇಸರವಾಗಿದೆ. ಥೂ, ನೀನೇನು ಬೇಕಾದರೂ ಹೇಳು, ಇದಕ್ಕಿಂತ ಸಾವು ಉತ್ತಮ'.

ಆರನೆಯ ಬೆಡ್‌ಅತ್ಯಂತ ಬೇಸರದಿಂದ ನುಡಿಯಿತು. ನಾನು ಪ್ರತ್ಯುತ್ತರ ಕೊಡಲಿಲ್ಲ. ನನ್ನ ಮೌನವನ್ನು ಕಂಡು ಅದು ಪುನಃ ಹೇಳಿತು.

'ನಿನಗೆ ಹಾಗೆನಿಸುವುದಿಲ್ಲವೇ? ನಿನಗೆ ರೋಗಿಗಳ ಸಹವಾಸ ಬೇಸರವಾಗಿಲ್ಲವೇ?'

'ಊಹೂಂ. ಇದರಲ್ಲಿಯೂ ಆನಂದವಿದೆ'.

ಆರನೆಯ ಬೆಡ್‌ಸಂತಾಪದಿಂದ ನುಡಿಯಿತು.

'ಆನಂದ! ನೀನು ಮೂರ್ಖ. ಕಡು ಮೂರ್ಖ. ಸದಾ ಈ ರೋಗಿಗಳ ನರಳಾಟ, ಕೆಮ್ಮು, ವಾಂತಿ ಇವು ಯಾರಿಗೆ ಬೇಕಾಗಿದೆ? ಇವರ ಗೋಳು ಕೇಳಿ ನನ್ನ ತಲೆ ಚಿಟ್ಟು ಹಿಡಿದುಹೋಗಿದೆ. ಸತ್ವಹೀನ ಮುಖ, ಒಣಗಿದ ಕಂಠ, ಬೆಳುಪೇರಿದ ತುಟಿ, ಕಾಂತಿಹೀನವಾದ ಕಣ್ಣು.... ಸಾವಿನ ಬದುಕಿನ ಮಧ್ಯೆ ತೂರಾಡುವ ಈ ದೇಹಗಳನ್ನು ನೋಡಿ ನೋಡಿ ನನ್ನ ಕಣ್ಣುಗಳು ಸಿಡಿಯುತ್ತಿವೆ. ಜೀವನದಲ್ಲಿ ನಮಗೂ, ಶಾಂತಿ, ಸೌಂದರ್ಯ ಬೇಡವೆ? ಸುಖ, ಸೌಂದರ್ಯ ಕಾಣಲು ನೀನು ಹಾತೊರೆಯುವುದಿಲ್ಲವೇ?'

‘ಇಲ್ಲ ಗೆಳೆಯಾ ಸುಖ, ಸೌಂದರ್ಯ, ಕ್ಷಣಿಕವಾದುದಕ್ಕೆ ನಾನು ಬೆಲೆ ಕೊಡುವುದಿಲ್ಲ. ನೀನೊಬ್ ಹುಚ್ಚ. ಸುಖ, ಸೌಂದರ್ಯಕ್ಕಾಗಿ ನಾನೆಷ್ಟು ಹಂಬಲಿಸುತ್ತಿದ್ದೇನೆ ಗೊತ್ತೆ?’ ಈ ರೋಗಿಗಳ ಸಹವಾಸದ ಬದಲು ಮುಗ್ಧೆಯೊಬ್ಬಳ ಸಾನ್ನಿಧ್ಯ ಸಿಕ್ಕದಿದರೆ... ಆರನೆಯ ಬೆಡ್ಡು ಕನಸು ಕಾಣುತ್ತಿರುವಂತೆ ನುಡಿಯಿತು.

‘ಚೆಲುವೆಯೊಬ್ಬಳ ಮೃದು ಸ್ಪರ್ಶವನ್ನು ದಿನವೂ ಅನುಭವಿಸಬಹುದಾಗಿತ್ತು. ಅವಳು ಮುಡಿದ ಮಲ್ಲಿಗೆ ಹೂವಿನಿಂದ ನನ್ನ ದೇಹವೆಲ್ಲಾ ಪರಿಮಳವಾಗುತ್ತಿತ್ತು. ಅವಳ ಬಳೆಗಳ ನಾದ ನನಗೆ ಜೋಗುಳ ಹಾಡುತ್ತಿತ್ತು. ಅವಳು ತನ್ನ ಹಾಲುಗೆನ್ನೆಯನ್ನು ನನಗೊತ್ತಿ ನಿದ್ರಿಸಿದಾಗ ನನ್ನನ್ನು ನಾನೇ ಮರೆಯಬಹುದಿತ್ತು. ಅವಳ ಪ್ರಥಮ ರಾತ್ರಿ... ಮಧುರ ಮಿಲನದ ರಾತ್ರಿ... ನಾನು ಆ ನೂತನ ದಂಪತಿಗಳ ಪ್ರೇಮ ಸಂವಾದವನ್ನು ಕೇಳಿ ಹಿಗ್ಗಬಹುದಾಗಿತ್ತು. ಅವರ ಪ್ರೇಮ ಚೇಷ್ಟೆಯಲ್ಲಿ....’

‘ಗೆಳೆಯಾ, ಎಚ್ಚರ ಮಾಡಿಕೋ, ಹೀಗೆ ಹಗಲುಗನಸು ಕಾಣಬೇಡ.’

ಆರನೆಯ ಬೆಡ್ಡಿನ ಅನ್ಯ ಮನಸ್ಕತೆ ಕಂಡು ನಾನು ಕೂಗಿದೆ.

‘ನೀನು ಪಾಪಿ ನನ್ನನ್ನೇಕೆ ಆ ಕನಸಿನಿಂದ ಕೂಗಿ ಎಬ್ಬಿಸಿ ಈ ನರಕಕ್ಕೆ ಎಳೆದು ತಂದೆ? ಈ ರೋಗಿಗಳ ಮೂಳೆಯ ದೇಹದಿಂದ ನನ್ನ ದೇಹ ಬಡಕಲಾಯಿತು. ಇವರ ಬೆಳೆದ ಗಡ್ಡ ನನ್ನನ್ನು ಹಿಂಸಿಸುತ್ತಿದೆ. ನೀನು ಆ ಸುಂದರ ದೃಶ್ಯವನ್ನು ಕಾಣಲು ಬಯಸುವುದಿಲ್ಲವೇ?’

‘ಖಂಡಿತ ಇಲ್ಲ. ನನ್ನ ಜೀವನದಲ್ಲಿ ಭೋಗಕ್ಕಿಂತಲೂ ನಾನು ತ್ಯಾಗಕ್ಕೆ ಶ್ರೇಷ್ಠ ಸ್ಥಾನ ಕೊಡುತ್ತೇನೆ.’

‘ಸರಿ, ನೀನೊಬ್ಬ ಹುಚ್ಚ.’

ಅಲ್ಲಿ ನೋಡು, ಹೊಸ ರೋಗಿಯೊಬ್ಬನನ್ನು ಇತ್ತ ಕಡೆಗೇ ಕೊಂಡು ಬರುತ್ತಿದ್ದಾರೆ.

ಇಬ್ಬರೂ ಅತ್ತ ಕಡೆ ನೋಡಿದೆವು.

ಹೊಸರೋಗಿಗೆ ಸುಮಾರು ಮೂವತ್ತು ವರ್ಷಗಳಿರಬಹುದು. ರೋಗ ಅವನ ದೇಹದ ಮೇಲೆ ತನ್ನ ದಾಳಿಯನ್ನು ನಡೆಸಿತ್ತು. ಆತನ ತಲೆಗೂದಲು ಕೆದರಿ ಕಣ್ಣುಗಳಲ್ಲಿ ಭಯ, ಕಳವಳ ತುಂಬಿದ್ದವು. ಮುಖ ಒಣಗಿ ಮುದುಡಿ ಹೋಗಿತ್ತು.

‘ಅಯ್ಯೋ ಪಾಪ. ಈ ರೋಗ ಇನ್ನೂ ಹೊಸದಾಗಿ ಅಂಟಿರಬೇಕು. ಆದುದರಿಂದಲೇ ಮುಖದಲ್ಲಿ ಇನ್ನೂ ಜೀವಕಳೆಯಿದೆ. ಪಾಪ! ಹೆದರಿ ನಡುಗುತ್ತಿದ್ದಾನೆ. ಅವನ...’

ಆರನೆಯ ಬೆಡ್ಡು ಉತ್ಸಾಹದಿಂದ ಕೂಗಿತು.

‘ಅವನ ಪಕ್ಕದಲ್ಲಿ ಬರುತ್ತಿರುವ ಚೆಲುವೆಯನ್ನು ನೋಡು. ಬಹುಶಃ ಅವನ ಹೆಂಡತಿ ಇರಬೇಕು. ಅಬ್ಬ! ಏನು ಸೌಂದರ್ಯ! ಸೃಷ್ಟಿಕರ್ತ ತನ್ನ ಜಾಣ್ಮೆಯನ್ನೆಲ್ಲಾ ಇವಳನ್ನು ಸೃಷ್ಟಿಸಲು ಖರ್ಚು ಮಾಡಿರಬೇಕು. ಅವಳ ಕಣ್ಣುಗಳು ಆರೋಗ್ಯ, ಯೌವನವನ್ನು ಸೂಸುತ್ತಿವೆ. ಅವಳ ದುಂಡು ದೇಹದ ಸೊಬಗು ಕಣ್ಣು ಸೆಳೆಯುವಂತಿದೆ. ಇಂತಹ ಸೌಂದರ್ಯ ನೋಡಿ ಬಹಳ ದಿನಗಳಾಗಿದ್ದವು.’

ಆದರೆ ನನ್ನ ಗಮನ ರೋಗಿಯಲ್ಲಿ ನೆಟ್ಟಿತ್ತು. ಅವನು ಜೀವನದಲ್ಲಿ ತನಗೆ ದೊರೆತ ಪೆಟ್ಟಿನಿಂದ ಚಳಿ ಬಂದವನಂತೆ ನಡುಗುತ್ತಿದ್ದ.

‘ಅವಳ ಮುಖದ ಬಣ್ಣ, ತುಟಿಯ ರಂಗು...’

ನಾನು ನಿದ್ದೆಯಿಂದ ಎಚ್ಚೆತ್ತವನಂತೆ ಆರನೆಯ ಬೆಡ್ಡಿನ ಕಡೆ ತಿರುಗಿದೆ. ಅದು ಮುಕ್ತ ಕಂಠದಿಂದ ಅವಳ ಚೆಲುವನ್ನು ಬಣ್ಣಿಸುತ್ತಿತ್ತು.

'ನೀನು ಯಾರ ವಿಚಾರ ಹೇಳ್ತಿದಿಯಾ?'

'ಕುರುಡಾ, ನಿನಗೆ ಕಣ್ಣಿದ್ದೂ ವ್ಯರ್ಥ. ಎದುರಿಗೆ ನಿಂತಿರುವ ಸೌಂದರ್ಯವನ್ನೂ ನೀನು ಕಾಣಲಾರೆ. ಅವಳೇ ನೋಡು, ರೋಗಿಯ ಹಿಂದೆ ಬರುತ್ತಿದ್ದಾಳೆ….'

ಅವಳನ್ನು ನಾನು ಇದುವರೆಗೂ ಗಮನಿಸಿಯೇ ಇರಲಿಲ್ಲ. ಆರನೆಯ ಬೆಡ್ಡು ನನ್ನ ಗಮನವನ್ನು ಅವಳ ಕಡೆ ಸೆಳೆಯಲು ನಾನೂ ನೋಡಿದೆ.

ನಿಜವಾಗಿಯೂ ಅವಳು ಸುಂದರಿಯಾಗಿದ್ದಳು.

'ಅವಳ ಕಣ್ಣು ನೋಡು, ಯಾವ ವಜ್ರಕ್ಕಿಂತ ಕಡಿಮೆಯಾಗಿದೆ….'

ಅವಳ ಕಣ್ಣುಗಳು ಹೊಳೆಯುತ್ತಿದ್ದವು. ಅವಳು ಮತ್ತೊಂದೆರಡು ಹೆಜ್ಜೆ ಮುಂದೆ ಬರುತ್ತಲೂ ನಾನು ಅವಳನ್ನು ಸೂಕ್ಷ್ಮವಾಗಿ ಗಮನಿಸಿದೆ.

ಹೃದಯದಲ್ಲಿ ಹೆಪ್ಪುಗಟ್ಟಿದ್ದ ಶೋಕದಿಂದ, ತುಂಬಿಯೂ ತುಳುಕದ ದುಃಖದ ಕಾವಿನಿಂದ ಅವಳ ಕಣ್ಣುಗಳು ಪ್ರಜ್ವಲಿಸುತ್ತಿದ್ದವು. ಉಕ್ಕಿ ಬರುತ್ತಿದ್ದ ಅಳುವನ್ನು ತಡೆಯಲು ಅವಳು ತನ್ನ ಕೆಂದುಟಿಯನ್ನು ಆಗಾಗ್ಗೆ ಕಚ್ಚಿ ಮನಸ್ಸನ್ನು ಕಲ್ಲು ಮಾಡುತ್ತಿದ್ದಳು. ಹೊಸ ರೋಗಿಯನ್ನು ನನ್ನ ಬಳಿಯೇ ನಿಲ್ಲಿಸಿದರು.

'ಇದೇ ನಿಮ್ಮ ಹಾಸಿಗೆ, ಮಲಗಿಕೊಳ್ಳಿ' ಎಂದು ವಾರ್ಡ್‌ಬಾಯ್‌ಹೇಳಿದ.

ಅವನು ಮಂಚದ ಮೇಲೆ ಕುಳಿತು ಹೆಂಡತಿಯ ಕಡೆ ನೋಡಿದ. ಅವಳು ಮಂಚದ ಪಕ್ಕದಲ್ಲಿದ್ದ ಕುರ್ಚಿಯನ್ನು ಎಳೆದುಕೊಂಡು ಆರನೆಯ ಬೆಡ್ಡಿಗೆ ಬೆನ್ನು ಮಾಡಿ ಗಂಡನ ಮುಖ ನೋಡುತ್ತಾ ಕುಳಿತಳು. ಆರನೆಯ ಬೆಡ್ಡು ಮತ್ಸರದಿಂದ ನುಡಿಯಿತು.

'ನೀನು ಪುಣ್ಯಶಾಲಿ. ಅವಳ ಮುಖವನ್ನು ಕಣ್ಣುತುಂಬ ನೋಡಬಹುದು. ಆದರೆ ನಿನ್ನಂತಹ ಅರಸಿಕನೆದುರಿಗೆ ಅವಳ ರೂಪವೆಲ್ಲ ವ್ಯರ್ಥ.'

ನನಗೆ ಅವಳ ಮುಖದಲ್ಲಿದ್ದ ಸೌಂದರ್ಯಕ್ಕಿಂತಲೂ, ನೋವಿನ ಕಡೆ ಹೆಚ್ಚು ಲಕ್ಷ್ಯವಿತ್ತು.

ಅವಳು ಅಳುವನ್ನು ನುಂಗಿ, ಮಧುರವಾಗಿ ನಕ್ಕಳು. ಅವನು ಕ್ಷೀಣವಾದ ದನಿಯಲ್ಲಿ ಹೇಳಿದ.

'ಉಮಾ, ಇನ್ನು ಸಂಸಾರದ ಗತಿಯೇನು?'

'ನೀವು ಧೈರ್ಯವಾಗಿರಿ. ದೇವರು ಹೇಗೋ ನಡೆಯಿಸುತ್ತಾನೆ.'

'ಹಾಗಲ್ಲ ಉಮಾ, ನಾನು ನರಕದಿಂದ ಹೊರಬೀಳಬೇಕಾದರೆ ಎಷ್ಟು ವರ್ಷವಾಗುತ್ತದೋ ಅದುವರೆಗೂ ಅಪ್ಪನಿಗೆ ಬರುವ ಐವತ್ತು ರೂಪಾಯಿ ಪೆನ್ಷನ್ನಿನಲ್ಲಿ ಜೀವನ ಸಾಗಿಸಲು ಸಾಧ್ಯವೇ?'

ನಾನು ಎಲ್ಲಾದರೂ ಕೆಲಸಕ್ಕೆ ಸೇರಿಕೊಳ್ಳತ್ತೇನೆ.

‘ಹುಡುಕಿದ ತಕ್ಷಣ ಸಿಗಬೇಕಲ್ಲ ? ಅಮ್ಮ, ಅಪ್ಪ ನನಗೆ ಕ್ಷಯವೆಂದು ತಿಳಿದರೆ ಎಷ್ಟು ಗೋಳಾಡುವರೋ.....!’

‘ನೀವು ಸಂಸಾರದ ವಿಷಯವಾಗಿ ಕೊರಗು ಹಚ್ಚಿಕೊಂಡು ನಿಮ್ಮ ದೇಹಸ್ಥಿತಿಯನ್ನು ಕೆಡಿಸಿಕೊಂಡರೆ ನನ್ನಾಣೆ’.

‘ಯೋಚನೆ ಮಾಡದಿರಲು ಹೇಗೆ ಸಾಧ್ಯ? ನಾನು ಇಲ್ಲಿಂದ ಹೊರ ಬೀಳುವುದು ಯವಾಗಲೋ!’

‘ಡಾಕ್ಟರ್‌ಹೇಳಿದ್ದು ಆಗಲೇ ಮರೆತುಹೋಯಿತೇ’ ಖಾಯಿಲೆ ಈಗತಾನೆ ಶುರುವಾಗಿದೆ. ಇನ್ನಾರು ತಿಂಗಳಿಗೆ ಪೂರ್ತಿ ವಾಸಿಯಾಗುತ್ತದೆ. ಆದರೆ ನೀವು ಧೈರ್ಯ ಬೀಡಬಾರದು ಅಂತ ಡಾಕ್ಟರು ಹೇಳಿದ್ದಾರೆ’.

‘ಸರಿ, ಅವರು ಹೇಳಿದರೂ ನನಗೆ ನಂಬಿಕೆ ಬರುವುದಿಲ್ಲ’.

ತಾತ್ಸಾರವಡಗಿತ್ತು ಅವನ ದನ್ನಿಯಲ್ಲಿ.

‘ಹೀಗೆ ನೀವು ಧೈರ್ಯಗೆಡಬಾರದು ನನಗೇನೋ ಸಂಪೂರ್ಣ ಧೈರ್ಯವಿದೆ. ಒಂದಲ್ಲ ಒಂದು ದಿನ ನಿಮಗೆ ಖಂಡಿತ ಗುಣವಾಗುತ್ತದೆ’.

“ಆತ ಉತ್ಸಾಹದಿಂದ ಕೇಳಿದ ನನಗೆ ನಿಜವಾಗಿಯೂ ವಾಸಿಯಾಗುತ್ತದೆಯೇ?’

‘ಅದರಲ್ಲಿ ಸಂದೇಹವೇ ಇಲ್ಲ. ಆದರೆ ನೀವು ಭರವಸೆ ಬಿಡಬಾರದು ನಿಮ್ಮ ಮನಸ್ಸಿನ ಧೈರ್ಯದಿಂದಲೇ ರೋಗದೂರವಾಗಬೇಕು’.

ಆತನ ಮುಖದಲ್ಲಿ ನಸುನಗೆ ತಲೆದೂರಿತು.

‘ನಿಮ್ಮನ್ನು ನೋಡಿದರೆ ನನಗೆ ಈ ರೋಗ ಬರಬಾರದಾಗಿತ್ತೆ ಎಂದೆನಿಸುತ್ತದೆ’. ಉಮಾ ಚೇಷ್ಟೆಯಿಂದ ನುಡಿದಳು.

‘ಛೀ! ಕೆಟ್ಟ ಮಾತನಾಡಬೇಡ’.

‘ಊಹುಂ. ಸುಖವಾಗಿ ಮಲಗಿದ ಕಡೆ ರಾಜೋಪಚಾರವಾಗುತ್ತದೆ. ನಾಳೆ ಬರುವಾಗ ಮೊಟ್ಟೆ, ಹಣ್ಣುಗಳನ್ನು ತರುತ್ತೇನೆ. ನಾನಿನ್ನು ಬರಲೇ?’

‘ಬಸ್ಸಿನಲ್ಲಿ ಹೋಗು’

‘ಬಸ್ಸಾದರೆ ಪುನಃ ನಾಲ್ಕಾಣೆ ಖರ್ಚು’

‘ಈ ಬಿಸಿಲಿನಲ್ಲಿ ನಡೆಯಬೇಡ, ಗಂಡ ಹೇಳಿದ’.

ಉಮಾ ಅನುಮಾನಿಸುತ್ತಾ ಒಪ್ಪಿಕೊಂಡಳು.

‘ನಡಿ ನಾನೂ ಬಾಗಿಲನವರೆಗೆ ಬರುತ್ತೇನೆ’.

‘ಬೇಡಿ ನೀವು ಮಲಗಿಕೊಳ್ಳಿ. ನಾನು ನಾಳೆ ಸಂಜೆ ಬರುತ್ತೇನೆ’.

ಉಮಾ ಎದ್ದು ನಗುತ್ತಾ 'ಬರ್ತೀನಿ' ಎಂದಳು. ಅವಳು ಕಣ್ಮರೆಯಾದೊಡನೆ ಆತ ಮಲಗಿದ. ಆರನೆಯ ಬೆಡ್ಡಿನಲ್ಲಿ ಮಲಗಿದ್ದವನು ಕುತೂಹಲದಿಂದ ಪ್ರಶ್ನಿಸತೊಡಗಿದ.

'ನಿಮ್ಮ ಹೆಸರೇನು?'

'ವಿಶ್ವನಾಥರಾವ್'

'ಖಾಯಿಲೆ ಶುರುವಾಗಿ ಎಷ್ಟು ದಿನವಾಯಿತು?'

'ಈಗತಾನೆ ಶುರುವಾಗಿದೆ. ವಾಸಿ ಮಾಡುತ್ತೇನೆ ಎಂದು ಡಾಕ್ಟರು ಹೇಳಿದ್ದಾರೆ. ನೀವು ಇಲ್ಲಿಗೆ ಬಂದು ಎಷ್ಟು ದಿನವಾಯಿತು.?

ಆತ ಕರ್ಕಶವಾಗಿ ನಕ್ಕ.

'ನಾನೇ? ನಾನು ಇಲ್ಲಿಗೆ ಬಂದು ಮೂರು ವರ್ಷಗಳಾದವು ನನಗೀಗ ಆಸ್ಪತ್ರೆಯೇ ಮನೆಯಾಗಿ ಹೋಗಿದೆ. ನನ್ನ ಎದೆಯಲ್ಲಿನ ನಾಲ್ಕು ಮೂಳೆಗಳನ್ನು ಕತ್ತರಿಸಿದ್ದಾರೆ. ಇನ್ನೂ ಎರಡು ಮೂಳೆಗಳನ್ನು ಕತ್ತರಿಸಬೇಕಂತೆ….

ವಿಶ್ವನಾಥ ಕಂಪಿಸಿದ. ಅವನ ಕಂಪನವನ್ನು ಗಮನಿಸಿದ ಆತ,

'ಕ್ಷಮಿಸಿ, ನಿಮ್ಮನ್ನು ಹೆದರಿಸಿಬಿಟ್ಟೆ. ಎಲ್ಲರೂ ನನ್ನಂತೆ ದುರದೃಷ್ಟಶಾಲಿಗಳಲ್ಲ, ನೀವು ಪುಣ್ಯ ಮಾಡಿದ್ದರೆ ಒಂದಲ್ಲ ಒಂದು ದಿನ ಇಲ್ಲಿಂದ ಹೊರಬೀಳಬಹುದು. ಆಕೆ ನಿಮ್ಮ ಹೆಂಡತಿಯೇನು?

'ಹೌದು'

'ಪಾಪ! ತಾಯಿ, ತಂದೆ ಇದ್ದಾರೆಯೇ?'

'ಇದ್ದಾರೆ'

'ಮಕ್ಕಳು?'

'ನಾಲ್ಕು ವರ್ಷದ ಒಬ್ಬ ಮಗನಿದ್ದಾನೆ' ಎನ್ನುತ್ತಾ ವಿಶ್ವನಾಥ ಮಲಗಿದ.

'ಗೆಳೆಯಾ, ಯಾಕೆ ಮಾತನಾಡುವುದಿಲ್ಲ' ಆರನೆಯ ಬೆಡ್ಡು ಕೂಗಿತು.

'ಏನು ಮಾತನಾಡಲಿ?'

'ಅವಳು ಹೋದಮೇಲೆ ವಾರ್ಡ್‌ಮಂಕಾಯಿತಲ್ಲವೇ?'

'ನೀನು ಬರೀ ಅವಳ ಸೌಂದರ್ಯ ಕಾಣುವೆ, ಆ ಸೌಂದರ್ಯದಲ್ಲಿನ ನೋವನ್ನು ಕಾಣಲೊಲ್ಲೆಯೇಕೆ? '

'ನೋವು ನನಗೆ ಬೇಡ. ದಿನಾ ನಾವು ನೋಡುವುದು ನೋವು ನರಳಾಟವಲ್ಲವೇ? ನಾನು ಅಂತಹ ಚೆಲುವೆಯ ಸಾನಿಧ್ಯ ಬಯಸುತ್ತೇನೆ. ನೀನು?'

‘ರೋಗಿಗಳಿಗೇ ನಮ್ಮ ಅಗತ್ಯ ಹೆಚ್ಚಲ್ಲವೇ?’

‘ನಿನ್ನ ಕೈಲಿ ಮಾತನಾಡಿ ಪ್ರಯೋಜನವೇನು!’ ಎನ್ನುತ್ತಾ ಆರನೆಯ ಬೆಡ್ಡು ಸುಮ್ಮನಾಯಿತು.

ಮಾರನೆಯ ದಿನ ಸಂಜೆ ಉಮಾ ಸಂತಸದ ನಗೆ ಬೀರುತ್ತಾ ಒಳಗೆ ಬಂದಳು.

ಆರನೆಯ ಬೆಡ್ಡು ಹರ್ಷದಿಂದ ಕೂಗಿತು.

‘ಅಗೋ ಚೆಲುವಿನ ರಾಣಿ ಬಂದಳು’

ವಿಶ್ವನಾಥ ಉತ್ಸಾಹದಿಂದ ಎದ್ದುನಿಂತು ಹೆಂಡತಿಯನ್ನೂ, ಮಗನನ್ನೂ ಸ್ವಾಗತಿಸಿದ.

‘ರಾಜನ್ನೂ ಕರ್ಕೊಂಡು ಬಂದಿದೀಯಾ?’

‘ನಾನೂ ಅಣ್ಣನ್ನ ನೋಡ್ಬೇಕು ಬರ್ತೀನಿ ಎಂದು ಹಟಮಾಡಿದ’.

ತಂದೆಯ ಮುಖ ಕಂಡಕೂಡಲೇ ರಾಜ ತಾಯಿಯ ಕೈಬಿಟ್ಟು ಓಡಿಬಂದು ತಂದೆಯನ್ನಪ್ಪಿದ. ವಿಶ್ವನಾಥ ಮಗನನ್ನು ಎದೆಗೊತ್ತಿಕೊಂಡ.

‘ಇವತ್ತು ನಿಮ್ಮ ಮುಖ ಎಷ್ಟೋ ಗೆಲುವಾಗಿದೆ’

‘ಮನೆಯ ಗತಿಯೇನು, ಉಮಾ?’

‘ಹುಟ್ಟಿಸಿದ ದೇವರು ಹುಲ್ಲು ಮೇಯಿಸುವುದಿಲ್ಲ’.

‘ಹೀಗೆ ಸ್ವಲ್ಪವಾಗಿ ಸಾಯುವುದಕ್ಕಿಂತ ಒಂದೇ ಬಾರಿಗೆ ಸಾಯುವುದು ಮೇಲು’.

‘ಸಾವು’ ಎಂಬ ಪದ ಕೇಳಿ ಉಮಾ ಬೆಚ್ಚಿದಳು.

‘ಎಂತಹ ಮಾತನ್ನಾಡುವಿರಿ? ನಮ್ಮ ಸಂಸಾರದ ಬೆಳಕು ನೀವು. ಹೀಗೆ ಮಾತನಾಡುವುದು ಸರಿಯೇ?’

ವಿಶ್ವನಾಥನ ಮುಖದಲ್ಲಿ ಪಶ್ಚಾತ್ತಾಪ ಕಾಣಿಸಿತು. ತಪ್ಪಾಯಿತು, ಉಮಾ, ನಾನು…..’

ಮಾತಿನ ನಡುವೆಯೇ ಅವನು ಕೆಮ್ಮತೊಡಗಿದ. ಕೆಮ್ಮಿನಿಂದ ಅವನ ದೇಹ ಮಂಚದೊಡನೆ ಕುಲುಕಾಡಿತು. ವಿಶ್ವನಾಥ ತನ್ನೆದೆಗೆ ತಲೆಯಾನಿಸಿ ಕುಳಿತಿದ್ದ ಮಗನನ್ನು ದೂರ ತಳ್ಳಿ ಟವಲಿನಿಂದ ಬಾತಿ ಮುಚ್ಚಿಕೊಂಡ. ಕೆಮ್ಮಿನ ಪರಿಣಾಮವಾಗಿ ಕಣ್ಣಿನಲ್ಲಿ ನೀರು ಹರಿಯತೊಡಗಿತು. ಉಸಿರು ತಡೆದು, ತಡೆದು ಬರತೊಡಗಿತು. ಉಮಾ ಗಂಡನ ಸಂಕಟವನ್ನು ತಾನೇ ಅನುಭವಿತ್ತಿರುವಂತೆ ತೋರಿತು.

‘ಇನ್ನು ಮೇಲೆ ರಾಜೂನ ಇಲ್ಲಿಗೆ ಕರೆದುಕೊಂಡು ಬರಬೇಡ. ಈ ರೋಗ ಬಹಳ ಅಪಾಯವಾದುದು. ಮಗುವಿಗೆ ನರಕದ ದರ್ಶನವೇಕೆ?’

‘ಊಂ….. ನಾನು ಬರ್ತೀನಿ’ ರಾಜು ರಾಗ ತೆಗೆದ.

‘ಹಾಗೆ ಆಗ್ಲಿ’ ಎಂದು ಮಗನ ಸಮಾಧಾನಕ್ಕಾಗಿ ನುಡಿದ ವಿಶ್ವನಾಥ.

* * *

‘ಇದೇಕೆ ಅವಳಿನ್ನೂ ಬರಲಿಲ್ಲ?’

ಆರನೆಯ ಬೆಡ್ಡು ತವಕದಿಂದ ಕೇಳಿತು.

‘ಬಸ್ಸು ಇನ್ನೂ ಬಂದಿಲ್ಲವೇನೋ?’ ವಿಶ್ವನಾಥ  ಎದ್ದು ಕುಳಿತು ಪಕ್ಕದವನಿಗೆ ಹೇಳಿದ.

‘ಅವಳು ಬಂದರೆ ಇರಲು ಹೇಳಿ. ನಾನು ಈಗಲೇ ಬಂದುಬಿಡುತ್ತೇನೆ’ ಎನ್ನುತ್ತಾ ಬಾತ್‌ರೂಮಿನ ಕಡೆ ಹೊರಟ.

ಅವನು ಹೋದ ಎರಡು ನಿಮಿಷಗಳಲ್ಲಿ ಉಮಾ ಬಂದಳು. ಆಕೆ ಬಂದು ಗಂಡನನ್ನು ಮಂಚದ ಮೇಲೆ ಕಾಣದೆ ಸುತ್ತಲೂ ನೋಡಿದಳು.

‘ಇನ್ನೇನು ಬರುತ್ತಾರೆ’ ಪಕ್ಕದ ರೋಗಿ ಹೇಳಿದ. ಉಮಾ ಕುರ್ಚಿಯ ಮೇಲೆ ಕುಳಿತು ಅಂಗೈಗೆ ಕೆನ್ನೆಯಾನಿಸಿ ತಲೆ ತಗ್ಗಿಸಿದಳು. ಅವಳ ಮುಖದಲ್ಲಿ ಚಿಂತೆ ಮನೆಮಾಡಿತು. ಎರಡು ಹನಿ ನೀರು ಅವಳ ಸೀರೆಯ ಮೇಲೆ ಬಿತ್ತು.

‘ಉಮಾ ಅಳುತ್ತಿದ್ದಾಳೆ ‘ ನಾನು ಆರನೆಯ ಬೆಡ್ಡಿಗೆ ಕೂಗಿ ಹೇಳಿದೆ.

‘ಅವಳ ಮುಖ ನನಗೆ ಕಾಣುವುದಿಲ್ಲ. ಹೆಂಗಸರು ಅಳುವಾಗ ಸುಂದರವಾಗಿ ಕಾಣುವರು ಎಂದು ಕೇಳಿದ್ದೇನೆ. ಉಮಾ ಹೇಗೆ ಕಾಣುಸುತ್ತಾಳೆ?’.

‘ನನಗೆ ದುಃಖ, ನೋವಿನ ಹೊರತು ಬೇರೇನೂ ಕಾಣುವುದಿಲ್ಲ. ದುಃಖವಿದ್ದೆಡೆ ಸೌಂದರ್ಯ ಕಾಣಲು ಸಾಧ್ಯವೆ, ಗೆಳೆಯ?’

ನಾನು ಅನುಕಂಪದಿಂದ ನುಡಿದೆ.

‘ನೀನೊಬ್ಬ ಕುರುಡ’ ಅದು ಕಟುವಾಗಿ ಉತ್ತರಿಸಿತು.

ನಾನು ಅವಳ ಮುಖವನ್ನೇ ನೋಡುತ್ತಿದ್ದೆ. ಇದೇನು ಇದ್ದಕ್ಕಿದಂತೆಯೇ ಉಮೆಯ ಮುಖದ ಮೇಲೆ ಸಿಹಿ ನಗೆ ಪಸರಿಸಲು ಕಾರಣವೇನು? ಅವಳ ಕಣ್ಣುಗಳು ಅಗಲವಾಗಿ ಮಿಂಚಿದವು. ನಾನು ಅವಳ ನೋಟವನ್ನು ಅನುಸರಿಸಿ ನೋಡಿದೆ. ವಿಶ್ವನಾಥ ಬರುತ್ತಿದ್ದ.

ಅಬ್ಬ! ಒಂದು ಕ್ಷಣದಲ್ಲಿ ಎಂತಹ ಬದಲಾವಣೆ!

ವಿಶ್ವನಾಥ ಹಾಸಿಗೆಯ ಮೇಲೆ ಕುಳಿತ.

‘ಇದೇನು ಉಮಾ, ಈ ದಿನ ನೀನು ಬಹಳ ಸಂತೋಷವಾಗಿರುವ ಹಾಗಿದೆ?’

ಅವನ ಅಜ್ಞಾನಕ್ಕೆ ನಾನು ವ್ಯಥೆ ಪಟ್ಟೆ. ಒಂದು ಕ್ಷಣ ಹಿಂದೆ ಅವಳ ಮೂಕರೋದನಕ್ಕೆ ನಾನು ಸಾಕ್ಷಿಯಾಗಿದ್ದೆ. ಗಂಡನಿಗಾಗಿ ಒಂದು ಗಳಿಗೆಯಲ್ಲಿ ನಗುವಿನ ಮುಖವಾಡ ಧರಿಸಬಲ್ಲ ಈ ಹೆಂಗಸಿನ ಚಾತುರ್ಯಕ್ಕೆ ನಾನು ಬೆರಗಾದೆ.

‘ನಿಮಗೆ ಮೊದಲಿಗಿಂತಲೂ ವಾಸಿ ಎಂದು ಡಾಕ್ಟರು ಹೇಳಿದರು. ತೂಕ ಈಗ ಹೆಚ್ಚಾಗಿದೆಯಂತೆ. ಮುಖವೂ ಮೊದಲಿನಷ್ಟು ಬಿಳಚಿಕೊಂಡಿಲ್ಲ’.

‘ನಿಜವಾಗಿಯೂ?’

‘ಹೌದು’ ಎಂದು ಉಮಾ.

ಸ್ವಲ್ಪ ಹೊತ್ತಿನಲ್ಲಿ ಏನನ್ನೋ ಜ್ಞಾಪಿಸಿಕೊಂಡಡವಳಂತೆ ನುಡಿದಳು.

‘ನನಗೆ ಕೆಲಸ ಸಿಕ್ಕಿದೆ.’

‘ನೀನು ದುಡಿದು ನನ್ನನ್ನು ಸಾಕುವ ಹಾಗಾಯಿತು.’

‘ನೀವು ಹಾಗೆ ಮಾತನಾಡಬೇಡಿ. ಇದುವರೆಗೂ ನಾನು ಹಾಯಾಗಿ ಮನೆಯಲ್ಲಿರಲಿಲ್ಲವೇ? ನಿಮಗೆ ಕೈಲಾಗದ ಒಂದೆರಡು ದಿನ ನಾನು ದುಡಿದರೆ ತಪ್ಪೇನು?’

‘ಅಮ್ಮ, ಅಣ್ಣ ಏನೆಂದರು?’

‘ಏನೂ ಅನ್ನಲಿಲ್ಲ. ಸದ್ಯಕ್ಕೆ ಅವರ ಪೆನ್ಷನ್ನಿನಲ್ಲಿ ಸಂಸಾರ ಸಾಗುತ್ತಿದೆ. ನನ್ನ ಮೂವತ್ತು ರೂಪಾಯಿ ಸಂಬಳವನ್ನು ನಿಮ್ಮ ಹಣ್ಣು, ಮೊಟ್ಟೆ, ಟಾನಿಕ್ಕಿಗಾಗಿ ಉಪಯೋಗಿಸುತ್ತೇನೆ. ನೀವು ಇಲ್ಲಿಂದ ಬಂದನಂತರ ಬೇಕಾದರೆ ನನ್ನ ರಾಣಿಯಂತೆ ಒಂದೆಡೆ ಕೂರಿಸಿಬಿಡಿ.’

ಉಮಾ ಕಿಲಕಿಲನೆ ನಕ್ಕಳು ವಿಶ್ವನಾಥನೂ ಪ್ರಸನ್ನನಾದ.

* * *

‘ನರ್ಸುಗಳಿಗೆ ಹೇಳಾಯಿತೇ?’ ಉಮಾ ಕೇಳಿದಳು.

‘ಹೂಂ ಹೇಳಾಯಿತು. ಡಾಕ್ಟರು ಬಂದರು. ಅವರು… ‘ ನಾವಿಬ್ಬರೂ ಡಾಕ್ಟರ ಮಾತನ್ನು ಆಲಿಸಿದೆವು. ಡಾಕ್ಟರು ಉಮೆ ಕಡೆ ತಿರುಗಿ ಹೇಳಿದರು.

‘ತಾಯಿ, ಇದರಲ್ಲಿ ನನ್ನ ಕೈವಾಡವೇನೂ ಇಲ್ಲ. ನಿನ್ನ ಧೈರ್ಯ, ಭರವಸೆಯೇ ನಿನ್ನ ಗಂಡನನ್ನು ಕಾಪಾಡಿದವು’ ಎನ್ನುತ್ತಾ ವಿಶ್ವನಾಥನ ಕಡೆ ತಿರುಗಿ,

‘ವಾರಕ್ಕೊಂದು ಸಲ ಬಂದು ‘ಸ್ಕ್ರೀನ್’ ಮಾಡಿಸಿಕೊಂಡು ಹೋಗಿ ಎಂದರು.

ವಿಶ್ವನಾಥ, ಉಮಾ, ಡಾಕ್ಟರಿಗೆ ಕೈಮುಗಿದು ಹೊರಟುಹೋದರು.

‘ಉಮೆಯ ಮೂಕದಲ್ಲಿದ್ದ ಆನಂದಕ್ಕೆ ನೀನು ಬೆಲೆಕಟ್ಟಬಲ್ಲೆಯಾ?’

ನಾನು ಕೇಳಿದೆ.

‘ಸಾಧ್ಯವಿಲ್ಲ. ಈಗ ಅವಳಲ್ಲಿ ಮೊದಲಿನ ಸೌಂದರ್ಯವೂ ಇಲ್ಲ. ಕಾರಣವೇನು?’

‘ದುಃಖಾಗ್ನಿಗೆ ಸಿಕ್ಕಿ ಅವಳ ಮೊದಲಿನ ಸೌಂದರ್ಯ ಸುಟ್ಟುಹೋಗಿದೆ ಗೆಳೆಯಾ, ಮೊದಲನೆಯ ದಿನ ಅವಳ ಕೊರಳಲ್ಲಿ ಒಂದೆಳೆ ಚಿನ್ನದ ಸರ ನೋಡಿದ್ದೆ ಈಚೀಚೆಗೆ ಆ ಸರ ಅವಳ ಕತ್ತಿನಲ್ಲಿ ಕಾಣುತ್ತಿರಲಿಲ್ಲ.

‘ಮಾರಿಕೊಂಡಳೋ ಏನೋ, ಅವಳ ಮುಖ ನೋಡಿದರೆ ಹೆದರಿಕೆಯಾಗುವಂತಿದೆ. ಅವಳ ಕಣ್ಣುಗಳು ಕಾಂತಿಹೀನವಾಗಿದೆ. ತುಂಬಿದ ದೇಹ ಬಡಕಲಾಗಿದೆ. ಅವಳ ಸೌಂದರ್ಯ....’

‘ಹೌದು, ನಶಿಹೋಗಿದೆ.’

‘ಮೊದಲನೆಯ ದಿನ ಅವಳ ಚೆಲವು ನೋಡಿ ನಾನು ಎಷ್ಟು ಹಿಗ್ಗಿದ್ದೆ?’

‘ಎರಡು ವರ್ಷ ಸತತವಾಗಿ ಗಂಡನ ಸೇವೆ ಮಾಡಿದುದನ್ನು ಮರೆತೆಯಾ? ಅವನ ಆರೋಗ್ಯಕ್ಕಾಗಿ ತನ್ನ ಸೌಭಾಗ್ಯಕ್ಕಾಗಿ ಈಕೆ ತನ್ನ ಸೌಂದರ್ಯ, ಸಂತೋಷ ಆರೋಗ್ಯ ಎಲ್ಲವನ್ನೂ ಬಲಿಗೊಟ್ಟಿದ್ದಾಳೆ. ಎಂತಹ ತ್ಯಾಗ!’

* * *

ನಾನು ಹೆಂಗಸರ ವಾರ್ಡಿಗೆ ಬಂದುದು ಇದೇ ಮೊದಲನೆಯ ಬಾರಿ. ವಾರ್ಡಿಗೆ ಬಂದ ಕೂಡಲೇ ನಾನು ಎಲ್ಲರ ಪರಿಚಯವನ್ನು ಮಾಡಿಕೊಂಡೆ.

‘ನಾನು ಹೆಂಗಸರ ವಾರ್ಡಿಗೆ ಬಂದೇ ಇರಲಿಲ್ಲ. ನನ್ನನ್ನು ಈಗ ಯಾಕೆ ತಂದರೋ!’ ಎನ್ನುತ್ತಾ ನಾನು ನರ್ಸ್‌ತೂಗಿಹಾಕಿದ ಚೀಟಿಯನ್ನು ನೋಡಿದೆ.

‘ನಿನ್ನ ನಂಬರ್‌ಎಷ್ಟು?’ ಎಂಟನೆಯ ಬೆಡ್ಡು ಕೇಳಿತು.

‘ಬೆಡ್‌ನಂಬರ್‌ಏಳು. ನನ್ನ ಇಲ್ಲಿಗೇಕೆ ತಂದರು.?

‘ಯಾಕೆ ತಂದರು ಎಂದರೆ - ಹೊಸ ರೋಗಿ ಬಂದಿರಬೇಕು’.

‘ಪಾಪ! ಇನ್ನೊಂದು ಜೀವಿ ಈ ನರಕ ಪ್ರವೇಶಿಸುವುದನ್ನು ನೋಡಿದರೆ ವ್ಯಥೆಯಾಗುತ್ತದೆ. ‘ಶ್, ಹೊಸ ರೋಗಿ ಬರುತ್ತಿದ್ದಾಳೆ.’

ನಾನು ಕುತೂಹಲದಿಂದ ನೋಡಿದೆ.

ಉಮಾ!

ನಾನು ಚಕಿತನಾದೆ. ಅವಳ ಸೌಂದರ್ಯ ಮಾಯವಾಗಿತ್ತು ಅವಳ ಕಣ್ಣುಗಳು ಗುಳಿ ಬಿದ್ದಿದ್ದವು. ಕೆನ್ನೆಯ ಮೂಳೆ ಹಾಯ್ದುಕೊಂಡಿತ್ತು. ಆಕೆ ಚರ್ಮ, ಎಲುಬಿನ ಗೂಡಾಗಿದ್ದಳು.

ನಾನು ಉದ್ವೇಗದಿಂದ ‘ಉಮಾ, ಉಮಾ’ ಎಂದು ಚೀರಿದೆ. ಉಮಾ ತನ್ನೊಡನೆ ಬರುತ್ತಿದ್ದ ವ್ಯಕ್ತಿಗೆ,

‘ನೀವು ಹೋಗಿ, ಆಫೀಸಿಗೆ ಹೊತ್ತಾಗುತ್ತದೆ’ ಎಂದಳು.

ವಿಶ್ವನಾಥ! ನನಗೆ ಅವನ ಗುರುತೇ ಸಿಕ್ಕಿರಲಿಲ್ಲ. ಆರು ತಿಂಗಳಲ್ಲಿ ವಿಶ್ವನಾಥ ಎಷ್ಟು ಬದಲಾಯಿಸಿದ್ದಾನೆ! ಆ ಮೂಳೆ ದೇಹವೆಲ್ಲಿ ! ಈ ಕೊಬ್ಬಿದ ಶರೀರವೆಲ್ಲಿ? ವಿಶ್ವನಾಥ ಕೊಬ್ಬಿದ ಗೂಳಿಯಂತಿದ್ದ. ರಕ್ತ ಮುಖದಿಂದ ಚಿಮ್ಮುತ್ತಿತ್ತು

'ಹಾಗಾದರೆ ನಾನು ಹೋಗಲೇ'

'ಹೂಂ. ಮಗೂನ ಸರಿಯಾಗಿ ನೋಡಿಕೊಳ್ಳಿ'.

ವಿಶ್ವನಾಥ ಹೊರಟುಹೋದ. ಉಮೆಯ ಪರಿಸ್ಥಿತಿಯನ್ನು ನೆನೆದು ನಾನು ದುಃಖಿಸಿದೆ.

* * *

ಒಂದು ದಿನ ಸಂಜೆ ಬಸ್ಸು ಬರುವ ಸಮಯವಾಗುತ್ತಲೇ ಉಮಾ ಎದ್ದು ಕುಳಿತು ತಲೆಬಾಚಿಕೊಂಡಳು.

'ಎಲ್ಲಿಗೆ ಹೋಗ್ತೀರಾ?' ಎಂಟನೆಯ ಬೆಡ್ಡಿನ ರೋಗಿ ಪ್ರಶ್ನಿಸಿದಳು.

'ಬೇಜಾರಾಗಿದೆ, ವರಾಂಡದಲ್ಲಿ ನಿಲ್ಲುತ್ತೇನೆ'.

'ಗಂಡ ಬರುವ ಸಮಯವಾದರೆ ಅವಳ ಮುಖ ಹೇಗೆ ಅರಳುತ್ತದೆ'. ಎಂಟನೆಯ ಬೆಡ್ಡು ಹಾಸ್ಯ ಮಾಡಿ ನಕ್ಕಿತು.

'ಅವನು ಈಚೀಚೆಗೆ ಸರಿಯಾಗಿ ಬರುತ್ತಿಲ್ಲ'.

ಬಸ್ಸಿನ ಹಾರನ್ನಿನ ಸದ್ದು ಕೇಳಿಸಿತು.

'ಓ ಬಸ್ಸು ಬಂತು. ಅವಳ ಗಂಡ ಬಂದಿರಬಹುದಲ್ಲವೇ?'

'ಆದರೂ ಅವರು ಒಳಗೇಕೆ ಬರಲಿಲ್ಲ?'

'ಮರಗಳ ಕೆಳಗೇ ಕುಳಿತು ಮಾತನಾಡತ್ತಿರಬಹುದು. ಕಾಲು ಗಂಟೆಯ ನಂತರ ಎಂಟನೆಯ ಬೆಡ್ಡು ಕೂಗಿತು.

'ಅವಳು ಬಂದಳು!'

'ಯಾರು?'

'ನಿನ್ನ ರೋಗಿ?'

'ಉಮಾನೇ? ಅವಳ ಗಂಡ ಎಲ್ಲಿ? ಒಬ್ಬಳೆ ಬರುತ್ತಿದ್ದಾಳೆ'.

'ಹೌದು. ಮುಖ ತುಂಬಾ ಪೆಚ್ಚಾಗಿದೆ'.

ಉಮಾ ಒಬ್ಬಳೇ ಬಂದದನ್ನು ನೋಡಿ ಪಕ್ಕದಾಕೆ ಪ್ರಶ್ನಿಸಿದಳು.

‘ಈ ದಿನವೂ ನಿಮ್ಮ ಯಜಮಾನರು ಬರಲಿಲ್ಲವೇ’

‘ಇಲ್ಲಮ್ಮ, ಈಚೀಚೆಗೆ ಅವರಿಗೆ ಆಫೀಸಿನಲ್ಲಿ ತುಂಬಾ ಕೆಲಸವಂತೆ. ಆದುದರಿಂದ ಬರುವುದಕ್ಕಾಗುವುದಿಲ್ಲ ಎಂದು ಹೇಳಿ ಕಳಿಸಿದ್ದಾರೆ’.

ಇಷ್ಟು ನುಡಿದವಳೇ ಉಮಾ ಮುಸುಕು ಹಾಕಿ ಮಲಗಿದಳು ಅವಳ ಕಣ್ಣಿನಿಂದ ನೀರು ಹರಿಯತೊಡಗಿತು.

‘ಉಮಾ ಅಳುತ್ತಿದ್ದಾಳೆ’ ನಾನು ಕೂಗಿ ಹೇಳಿದೆ.

‘ಯಾಕೆ?’

‘ಅವಳಿಗೆ ತುಂಬಾ ದುಃಖವಾಗಿದೆ. ಈಚೀಚೆಗೆ ಅವಳ ಗಂಡ ತುಂಬಾ ಉದಾಸೀನ ನಾಗುತ್ತಿದ್ದಾನೆ. ತನಗೆ ತಾನೆ ಮಾತನಾಡಿಕೊಂಡು ಕಂಬನಿಗೆರೆಯುತ್ತಿದ್ದಾಳೆ’.

‘ಪಾಪ ಬಡಪಾಯಿ. ಹಾಗಾದರೆ ಸ್ನೇಹಿತೆ ಬಂದು ಹೇಳಿದುದು ಸುಳ್ಳೇ?

‘ಸುಳ್ಳು, ತನ್ನ ಗಂಡನ ಔದಾಸೀನ್ಯವನ್ನು ನೆರೆಯವಳಿಂದ ಮುಚ್ಚಲು ಹಾಗೆ ಹೇಳಿಕೊಂಡಳು. ನೋಡು, ಅವಳ ಕಣ್ಣೀರಿನಿಂದ ನನ್ನ ದಿಂಬೆಲ್ಲಾ ಒದ್ದೆಯಾಗುತ್ತಿದೆ’.

‘ರೋಗಗ್ರಸ್ತ ಹೆಂಡತಿಯಲ್ಲಿ ಅವನಿಗೆ ಆಸಕ್ತಿಯಿಲ್ಲವೇನೋ’

‘ಸಾಕು ಸುಮ್ಮನಿರು. ಇವಳಿಗೂ ಹೃದಯವಿಲ್ಲವೆ? ಅವನಿಗಾಗಿ ಎಲ್ಲವನ್ನೂ ತ್ಯಾಗ ಮಾಡಿದಳು. ಅವನಿಗೆ ಆ ಕೃತಜ್ಞತೆಯಾದರೂ ಬೇಡವೆ? ಆಫೀಸು ಕೆಲಸ ಎಲ್ಲಾ ಬರೀ ನೆಪ. ತನಗೆ ಉಪಯೋಗವಿಲ್ಲದ ಹೆಂಡತಿಯಲ್ಲಿ ಅವನಿಗೆ ಶ್ರದ್ಧೆಯಿಲ್ಲ.

‘ಅವನು ಇಲ್ಲಿಗೆ ಬಂದು ಎಷ್ಟು ದಿನವಾಯಿತು.?’

‘ಇವಳು ಇಲ್ಲಿಗೆ ಸೇರಿದ ಹೊಸದರಲ್ಲಿ ದಿನವೂ ಬರುತ್ತಿದ್ದ. ಆಮೇಲೆ ಮೂರು ದಿನಕೊಂದು ಬಾರಿ ಬರಲಾರಂಬಿಸಿದ. ಅದು ವಾರಕೊಂದು ಬಾರಿಗಿಳಿದು, ಈಗ ಹದಿನೈದು ದಿನವಾದರೂ ಗಂಡನ ಮುಖವನ್ನು ನೋಡಿಲ್ಲ. ರೋಗಿಗೆ ಔಷಧಿಗಿಂತಲೂ ಪ್ರೀತಿ, ವಿಶ್ವಾಸ ಬೇಕು’.

‘ಅವನು ಕಟುಕ’

‘ಇವಳು ಇಲ್ಲಿಗೆ ಬಂದು ಒಂದೂವರೆ ವರ್ಷವಾಯಿತು. ಒಂದು ದಿನ ತನ್ನ ಮಗುವನ್ನು ನೋಡಿಲ್ಲ’.

‘ಕಾರಣ?’

‘ಗಂಡ, ಆ ಮಗುವನ್ನು ಇಲ್ಲಿಗೆ ಕರೆದು ತರುವುದಿಲ್ಲ’.

‘ಹಾಗಾದರೆ ಇವಳ ಗತಿ?’ ಎಂಟನೆಯ ಬೆಡ್ಡು ಕಳವಳದಿಂದ ಕೇಳಿತು.

‘ಗಂಡನ ಔದಾಸೀನ್ಯದ ಅರಿವಾಗಿದೆ. ನಿನ್ನೆ ಮುಸುಕಿನಲ್ಲಿ ಅಳುತ್ತಾ ಹೇಳಿಕೊಳ್ಳುತ್ತಿದ್ದಳು. “ಭಗವಂತಾ, ನಾನವರಿಗೆ ಬೇಡವಾದ ಮೇಲೆ ನನಗೆ ಬದುಕುಲಾಶೆಯಿಲ್ಲ” ಎಂದು.

‘ಗಂಡನ ಔದಾಸೀನ್ಯ ತಿಳಿದಿದ್ದರೂ ಪ್ರತಿದಿನವೂ ಬಸ್ಸು ಬರುವ ವೇಳೆಗೆ ಇವಳು ಅಲಂಕರಿಸಿಕೊಂಡು ಹೊರಗೆ ನಿಲ್ಲಲು ಕಾರಣವೇನು?’

‘ಅವಳಿಗಿನ್ನೂ ಆಸೆಯಿದೆ. ಒಂದಲ್ಲ ಒಂದು ದಿನ ಗಂಡ ಬಂದಾನು ಎಂಬ ಹಂಬಲವಿನ್ನೂ ಅವಳ ಹೃದಯದಿಂದ ದೂರವಾಗಿಲ್ಲ. ಈ ಹಂಬಲಿನಿಂದಾಗಿ ಅವಳ ಆತ್ಮ ಇನ್ನೂ ದೇಹದೊಳಗಿದೆ’.

‘ಅದಾರೋ ಬರುವ ಸದ್ದು, ಅವಳ ಗಂಡನಿರಬೇಕು’.

ನಾನು ತಿರುಗಿ ನೋಡಿದೆ. ಹೆಂಗಸೊಬ್ಬಳು ಉಮ್ಮೆಯ ಬಳಿ ನಿಂತು ‘ಉಮಾ’ ಎಂದು ಕೂಗಿದಳು.

ಉಮಾ ಮುಸುಕು ತೆಗೆದು,

‘ಕುಳಿತುಕೋ ಗೌರಿ. ಇದೇನು ಇಲ್ಲಿಗೆ ಬಂದೆ’ ಎಂದಳು.

‘ನಮ್ಮ ಗುರುತಿನವರೊಬ್ಬರನ್ನು ನೋಡಲು ಬಂದೆ. ಹಾಗೆ ನಿನ್ನನ್ನೂ ನೋಡಿಕೊಂಡು ಹೋಗೋಣವೆಂದು ಬಂದೆ. ನಿಮ್ಮ ಯಜಮಾನರು ಬರಲಿಲ್ಲವೇ?’

‘ಅವರಿಗೆ ಸಮಯ ಸಿಗುವುದಿಲ್ಲ. ಆಫೀಸಿನ ಕೆಲಸ ತುಂಬಾ ಇರುತ್ತದೆ. ಬಿಡುವಿದ್ದ ದಿನ ಬರುತ್ತಾರೆ’.

‘ನಾನೂ, ಎಂಟನೆಯ ಬೆಡ್ಡು ಪರಸ್ಪರ ನೋಡಿಕೊಂಡೆವು. ಸುಳ್ಳು ಹೇಳುವುದರಲ್ಲಿ ಈಕೆ ಚತುರೆ’. ಎಂಟನೆಯ ಬೆಡ್ಡು ಟೀಕಿಸಿತು.

‘ಗಾದೆ ಕೇಳಿಲ್ಲವೇ ಸಂಸಾರ ಗುಟ್ಟು, ರೋಗ ರಟ್ಟು ಅಂತ್ಯ’.

‘ತಾಳು ಅವರ ಮಾತು ಕೇಳೋಣ’. ಎಂಟನೆಯ ಬೆಡ್ಡು ಕೂತೂಹಲದಿಂದ ಅವರ ಸಂಭಾಷಣೆಗೆ ಕಿವಿಯೊಡ್ಡಿತು.’

‘ನಿಮ್ಮ ಯಜಮಾನರು ಬಂದು ಎಷ್ಟು ದಿನವಾಯಿತು?’

‘ಮೂರು ದಿನವಾಯಿತು’.

ಗೌರಿ, ಉಮೆಯನ್ನೂ ತೀಕ್ಷ್ಣವಾಗಿ ನೋಡಿದಳು.

‘ಸುಳ್ಳೇಕೆ ಹೇಳುವೆ? ನಿನ್ನ ಗಂಡನ ಚರ್ಯೆಯನ್ನು ನನ್ನಿಂದ ಅಡಗಿಸಿಡಬೇಡ’.

ಉಮಾ ವಿಷಾದದಿಂದ ನಕ್ಕಳು.

‘ಉಮಾ, ನಾನೊಂದು ಸುದ್ದಿ ಕೇಳಿದೆ. ಮುಂದಿನ ಸೋಮವಾರ ನಿನ್ನ ಗಂಡನಿಗೆ ಕುಲಕರ್ಣಿಯವರ ಮಗಳನ್ನು ಕೊಟ್ಟು ಪಶ್ಚಿಮವಾಹಿನಿಯಲ್ಲಿ ಮದುವೆಯಂತೆ.

‘ಏನು?’ ಉಮೆಯೊಡನೆ ನಾವೂ ಚೀರಿದೆವು.

‘ಸುಳ್ಳು ಎಂದು ಅವಳೊಡನೆ ಪ್ರತಿಭಟಿಸಿದೆವು’.

'ಖಂಡಿತವಾಗಿಯೂ ಸುಳ್ಳಲ್ಲ ಉಮಾ ಕುಲಕರ್ಣಿಯವರ ಅಕ್ಕನೇ ನನಗೆ ಈ ಸುದ್ದಿ ತಿಳಿಸಿದರು'.

ಉಮಾ ಅಷ್ಟು ಬೇಗ ಶಾಂತಳಾದುದು ನನಗೆ ಆಶ್ಚರ್ಯವನ್ನುಂಟುಮಾಡಿತು.

'ದೇವರು ಅವರಿಬ್ಬರಿಗೂ ಒಳ್ಳೆಯದು ಮಾಡಲಿ. ಛಿದ್ರವಾದ ಅಂಗಿಯನ್ನು ತೊಡಲು ಆದೀತೇ?'

ಗೌರಿ ಹೊರಟುಹೋದೊಡನೆ ಉಮಾ ಮುಸುಕು ಬೀರಿ ಮಲಗಿದಳು. ಅವಳ ಕಣ್ಣೀರಿನಿಂದ ದಿಂಬು ತೊಯ್ದುಹೋಯಿತು. ನಾನು ಮೌನವಾಗಿ ಅವಳೊಡನೆ ದುಃಖಿಸತೊಡಗಿದೆ.

ಕತ್ತಲು ನಿಧಾನವಾಗಿ ಕವಿಯತೊಡಗಿತು.

**ಲೇಖಕರು**

ತ್ರಿವೇಣಿ (೧೯೨೮-೧೯೬೩) ಅವರ ಮೂಲ ಹೆಸರು ಭಾಗೀರಥಿ, ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡ ತ್ರಿವೇಣಿ ಅವರು ಕಡಿಮೆ ಕಾಲಾವಧಿಯಲ್ಲಿಯೇ ಅನೇಕ ಕತೆ ಕಾದಂಬರಿಗಳನ್ನು ಬರೆದು ಜನಪ್ರಿಯರಾದರು. 'ಶರಪಂಜರ', 'ಬೆಕ್ಕಿನ ಕಣ್ಣು', 'ಬೆಳ್ಳಿಮೋಡ', 'ಹಣ್ಣೆಲೆ ಚಿಗುರಿದಾಗ', ಮುಂತಾದ ಕಾದಂಬರಿಗಳನ್ನು 'ಸಮಸ್ಯೆಯ ಮಗ', 'ಹೆಂಡತಿಯ ಹೆಸರು' ಮುಂತಾದ ಕಥಾಸಂಕಲನಗಳನ್ನು ಹೊರತಂದರು. ಅವರ ಅನೇಕ ಕಾದಂಬರಿಗಳು ಸಿನಿಮಾಗಳಾಗಿಯೂ ಜನಪ್ರಿಯವಾಗಿವೆ. ತ್ರಿವೇಣಿ ಒಬ್ಬ ಪ್ರತಿಭಾವಂತ ಲೇಖಕಿಯಾಗಿದ್ದರು. ಅವರ ಕತೆ ಕಾದಂಬರಿಗಳ ವಿಶೇಷತೆ ಎಂದರೆ, ಮನಶ್ಯಾಸ್ತ್ರದ ಹಿನ್ನೆಲೆಯಲ್ಲಿ ಮಾನವೀಯ ಸಮಸ್ಯೆಗಳನ್ನು ಕುರಿತು ಚಿತ್ರಿಸುವುದು.

**ಆಶಯ**

ಪ್ರಸ್ತುತ ಕತೆಯು ಮಾನವೀಯ ಕಷ್ಟ ಬಂದಾಗ ನಮ್ಮ ಸಮಾಜದಲ್ಲಿ ಗಂಡು ಮತ್ತು ಹೆಣ್ಣುಗಳು ತೋರುವ ವಿಭಿನ್ನ ವರ್ತನೆಗಳನ್ನು ಕುರಿತ ಒಂದು ಚಿತ್ರವಾಗಿದೆ.

**ಪದಕೋಶ**

ಚರ್ಯೆ = ವರ್ತನೆ

**ಪ್ರಶ್ನೆಗಳು**

೧. ಎರಡು ಮಂಚಗಳು ಮಾಡುವ ಸಂಭಾಷಣೆಯಲ್ಲಿ ಇರುವ ಜೀವನದ ಸತ್ಯವೇನು?
೨. ಆರನೇ ನಂಬರಿನ ಬೆಡ್‌ಗೆ ಯಾಕೆ ಜೀವನ ಬೇಸರವಾಗಿತ್ತು?
೩. ಆರನೇ ನಂಬರ್‌ಬೆಡ್‌ಕಾಣುತ್ತಿದ್ದ ಕನಸು ಯಾವುದು? ಅದಕ್ಕೆ ಏಳನೇ ನಂಬರಿನ ಬೆಡ್‌ಕೊಟ್ಟ ಉತ್ತರ ಯಾವುದು?
೪. ಹೊಸದಾಗಿ ಬಂದ ರೋಗಿ ಸ್ಥಿತಿಯೂ ಅವನ ಹೆಂಡತಿಯ ಚೆಲವೂ ಹೇಗಿದ್ದವು?
೫. ಸಂಸಾರ ನಿರ್ವಹಣೆ ಬಗ್ಗೆ ಗಂಡ ಮಾಡಿದ ಚಿಂತೆಗೆ ಉಮಾ ಹೇಗೆ ಸಮಾಧಾನ ಮಾಡುತ್ತಾಳೆ.?
೬. ವಿಶ್ವನಾಥನಲ್ಲಿದ್ದ ಸಾವಿನ ಭಯವನ್ನು ಹೋಗಲಾಡಿಸಲು ಉಮಾ ಹೇಗೆ ಪ್ರಯತ್ನಿಸುತ್ತಾಳೆ?
೭. ಆರೋಗ್ಯ ಕಳೆದುಕೊಂಡ ಉಮಾ ಯಾವ ಅವಸ್ಥೆಯಲ್ಲಿ ಆಸ್ಪತ್ರೆಗೆ ಬರುತ್ತಾಳೆ?
೮. ವಿಶ್ವನಾಥನ ವರ್ತನೆಯಲ್ಲಿ ಯಾವ ಬದಲಾವಣೆಗಳಾದವು?

೯. ಉಮಾ ಕೊನೆಗೂ ಅನಾಥಳಾದ ರೀತಿ ಯಾವುದು?

೧೦. ಏಳನೇ ನಂಬರಿನ ಬೆಡ್ಡು ಕಂಡುಕೊಂಡ ಜೀವನ ದರ್ಶನ ಯಾವುದು?

೧೧. ಈ ಕತೆಯ ಜೀವನದ ಯಾವ ಸತ್ಯವನ್ನು ಹೇಳಲು ಯತ್ನಿಸುತ್ತಿದೆ?

೧೨. ಪುರುಷರ ಸ್ವಾರ್ಥ ಹಾಗೂ ಹೆಣ್ಣಿನ ಮಾನವೀಯತೆ ಕುರಿತು ಕತೆ ಮಾಡುತ್ತಿರುವ ಹೇಳಿಕೆ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಪೂರಕ ಓದು**

೧. ಇದೇ ಪುಸ್ತಕದಲ್ಲಿರುವ 'ಗಾಂಧಿ' ಹಾಗೂ 'ಅಣ್ಣಪನ ರೇಷ್ಮೆಕಾಯಿಲೆ' ಕತೆಗಳು.

೨. ಶಾಂತನಾಥ ದೇಸಾಯಿ ಅವರ 'ಮುಕ್ತಿ' ಕಾದಂಬರಿ.

೩. ಗಾಂದೀಜಿ ದಕ್ಷಿಣ ಆಫ್ರಿಕಾದಲ್ಲಿ ಕಸ್ತೂರಬಾ ಕಾಯಿಲೆಯಾದಾಗ ತೋರುವ ವರ್ತನೆಗಳ ಚಿತ್ರ (ಅವರ ಆತ್ಮಕತೆ) 'ನನ್ನ ಸತ್ಯಾನ್ವೇಷಣೆ'ಯಲ್ಲಿ)

## ೮. ರೊಟ್ಟಿ ಮತ್ತು ಕೋವಿ

ತಟ್ಟನೆ ನಿಂತು ನೋಡಿದೆ, ತೊಟ್ಟಿಯಾಚೆಂದ
ಹಸಿದ ಹಾವುಗಳಂತೆ ಇಳಿದು ಒಳಗೆ
ಎರಡು ಕೈಗಳು; ಸಿಕ್ಕ ಎಂಜಲಿನೆಲೆಯನ್ನು
ಹಿರಿದು ತೆಗೆದವು, ಕಸದಿಂದ ಹೊರಗೆ.

ತಡಮಾಡಲಿಲ್ಲ, ತಡೆದನುಮಾನಿಸಲಿಲ್ಲ.
ಎಲ್ಲಾದರೂ ಉಂಟೆ ತುಂಡು ರೊಟ್ಟಿ?
ಮತ್ತು ಅನ್ನದ ಅಗಳು? ಎಲೆಯೆಲ್ಲ ಬಳಿದಾಗ
ಏನೋ ಸಿಕ್ಕಿತು; ತಣ್ಣಾಗಾತು ಹೊಟ್ಟೆ.

ಎರಡು ಬ್ರೆಡ್ಡಿನ ತುಂಡು, ಚೆಲ್ಲಿದ ಹುಳಿಯನ್ನ
ಸಿಪ್ಪೆ ಉಪ್ಪಿನ ಕಾಯಿ ಕೂಡಿದುಪ್ಪು
ಎಲ್ಲಿಯೊ ಕಂಡಿದ್ದೆನಲ್ಲ ಈ ಕೈಗಳು?
ಹೌದಿವೇ ಕೈಗಳು; ಬಲಿಷ್ಠ, ಕಪ್ಪು.

ಅಷಾಢ ಮೋಡಗಳು 'ಧೋ' ಗುಟ್ಟಿ ಸುರಿದು
ಹೊಲಗದ್ದೆಗಳು ತೊಯ್ದು ತಪ್ಪಡ್ಯಾಗಿ
ಹೂಡಿದ್ದ ನೇಗಿಲಿನ ಹಾಡು, ರವಕೆಯ ಹಸಿರು
ತೊಡಸಿದ್ದವಲ್ಲದೆ ತೆನೆಯು ತೂಗಿ

ಅಂದು ಕೊಂಡೆನು. ಅಲ್ಲ ಇವುಗಳೆ ಅಲ್ಲವೆ
ಗಚ್ಚುಗಾರೆಯ ಹೊತ್ತು ಹಗಲು ಇರುಳು.

ಉಪ್ಪರಿಗೆ ಬಂಗಲೆಯ ನಿಲ್ಲಿಸಿಲ್ಲವೆ? ಮ
ತ್ತೆ, ಇವುಗಳಿಂದಲ್ಲವೆ ಸುಖದ ನೆರಳು

ಹಸಿದ ಕೈಗಳಿಗೆ ದುಡಿಮೆಯೆಂದರೆ ಪ್ರೀತಿ
ಚೆಲುವೆಂದರೂ ಪ್ರೀತಿ ಕಾಣೊ ಅವಕೆ
ಹಾಗೆಂದೇ ಲಾವಣ್ಯ ವರ್ತುಲಗಳನು ಬರೆ
ವ, ಬೆಳ್ಳಕಿಗಳ ಹಿಂಡು ಬೆರೆವ ಬಯಕೆ

ಕಣ್ಣಿಗಷ್ಟೆ ಅಲ್ಲ. ಕಿವಿಗಳೂ ಸಂತಸದ
ಹಕ್ಕಿಗಳ ಗೂಡಾಗಲೆಂದು, ನುಡಿಸಿ
ಯಾವ್ಯಾವುದೋ ವಾದ್ಯ. ಈ ಕೈಗಳಲ್ಲವೆ
ಇಂದೇಕೆ ಇಳಿದಿವೆ? ಎಂಜಲನು ಬಯಸಿ

ಹಸಿದ ಕೈಗಳಿಗೆ ಪ್ರೀತಿಯೆಂದರೆ ಪ್ರೀತಿ
ಹಾಗೆಂದೆ ತಟ್ಟಿ ಎದೆ ಎದೆಯ ಕದವ
ಕಾದರೂ, ಹಸಿದವರಿಗವು ತೆರೆಯಲೆ ಇಲ್ಲ
ಎಷ್ಟೆಂದು ತಡೆದಾರು? ತಮ್ಮ ಹಸಿವೆ?

ಕಸದ ತೊಟ್ಟಿಗೆ ಇನ್ನು ಹಸಿದ ಕೈ ಇಳಿಯವು
ಅಂದುಕೊಂಡೆನು ಅಂಜಿ ನೊಂದುಕೊಂಡು,
ನೇಣುಗಂಬವ ಕೂಡ ಧಿಕ್ಕರಿಸಿ ನುಗ್ಗುವರು
ಎತ್ತಿಕೊಳ್ಳಲು ಸಿಕ್ಕ ಕೋವಿ. ಗುಂಡು

ಹಸಿದವರು ಕೂಡ ಬದುಕಬೇಕಲ್ಲವೆ? ಮ
ತ್ತೆ, ಪ್ರೀತಿಯೂ ಬೇಕಲ್ಲ ದುಡಿವ ಜನಕೆ
ಎದೆಯ ಕದಗಳು ಮುಚ್ಚಿದಾಗ, ಮತ್ತಿನ್ನೇನು
ಮುಖ್ಯವಲ್ಲವೆ ಸಾವಿಗಿಂತ ಬದುಕೆ?

**ಲೇಖಕರು**

ಸುಬ್ಬಣ್ಣ ರಂಗನಾಥ ಎಕ್ಕುಂಡಿ (೧೯೨೩-೧೯೯೫) ಅವರು ತಮ್ಮ ಕಥನ ಕವನಗಳಿಂದ ಹೆಸರಾದವರು. 'ಹಾವಾಡಿಗರ ಹುಡುಗ, 'ಬೆಳ್ಳಕ್ಕಿಗಳು', 'ಗೋಧಿಯ ತೆನೆಗಳು', 'ಕಥನ ಕವನ', ಅವರ ಕೆಲವು ಕವನ ಸಂಕಲನಗಳು. 'ಬಕುಲದ ಹೂವುಗಳು' ಸಂಕಲನಕ್ಕೆ ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ (೧೯೯೨) ಬಂದಿದೆ.

**ಆಶಯ**

ಪ್ರಸ್ತುತ ಕವನವನ್ನು 'ಬಕುಲದ ಹೂವುಗಳು' ಸಂಕಲನದಿಂದ ಆರಿಸಿಕೊಂಡಿದೆ. ಕವನವು ಹಸಿವಿನ ಬೀಕರತೆಯನ್ನು ಹೇಳುತ್ತಿದೆ. ಆದರೆ ಹಸಿವಿನಿಂದ ಕಂಗಾಲಾಗಿರುವ ಈ ಜನರೇ ದುಡಿದು ನಾಡಿನ ಸಂಪತ್ತನ್ನು ಸೃಷ್ಟಿಸುವವರು. ಇದೊಂದು ವೈರುಧ್ಯದ ಪರಿಸ್ಥಿತಿ.

ಈ ವಿಷಮ ಪರಿಸ್ಥಿತಿ ಬದಲಾಯಿಸಲು ಕೊನೆಗೆ ದುಡಿವ ಜನ ಅನಿವಾರ್ಯವಾಗಿ ಆಯುಧ ಕೈಗೆತ್ತಿಕೊಳ್ಳುತ್ತಾರೆ. ಯಾಕೆಂದರೆ ಅವರಿಗೂ ಚೆನ್ನಾಗಿ ಬಾಳಬೇಕು ಎಂಬ ಕನಸಿದೆ ಎಂದು ಕವನವು ಸೂಚಿಸುತ್ತದೆ.

**ಪದಕೋಶ**

ತಪ್ಪಡ್ಯಾಗಿ = ನೆನೆದು ತೊಪ್ಪೆಯಾಗಿ

**ಪ್ರಶ್ನೆಗಳು**

೧. ಹಸಿದ ಕೈಗಳು ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಏನು ಮಾಡುತ್ತಿವೆ?
೨. ಈ ಕೈಗಳನ್ನು ಎಲ್ಲೆಲ್ಲಿ ಕಂಡಿದ್ದೇನೆ ಎಂದು ಕವಿ ಹೇಳುತ್ತಾನೆ?
೩. ಹಸಿದವರಿಗೆ ರಾಮಾಜವ ಎದೆಕದ ತೆಗೆಯದೆ ಇದ್ದಾಗ, ಅವರು ಏನು ಮಾಡುತ್ತಾರೆ ಎಂದು ಕವಿತೆ ಎಚ್ಚರಿಸುತ್ತದೆ?
೪. ಸಾವಿಗಿಂತ ಬದುಕು ಮುಖ್ಯ ಎಂಬ ಮಾತಿನ ಅರ್ಥವನ್ನು ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿ.

**ಪೂರಕ ಓದು**

೧. ಕುವೆಂಪು ಅವರ 'ಕಲ್ಕಿ' ಪದ್ಯ ಹಾಗೂ 'ಧನ್ವಂತರಿಯ ಚಿಕಿತ್ಸೆ' ಕತೆ.
೨. ಕುಂವೀ ಅವರ 'ದೇವರ ಹೆಣ' ಕತೆ.
೩. ದ ರಾ ಬೇಂದ್ರೆ ಅವರ 'ತುತ್ತಿನಚೀಲ', 'ಅನ್ನಾವತಾರ', 'ಕುರುಡುಕಾಂಚಾಣ' ಮೊದಲಾದ ಕವನಗಳು.
೪. ದೇವನೂರ ಮಹಾದೇವ ಅವರ 'ಒಡಲಾಳ' ಕಾದಂಬರಿ.
೫. 'ಮಕ್ಕಳ ಮಾರ್ಯಾರ ಮಳಿರಾಯ' ಎಂಬ ಬರಗಾಲದ ವರ್ಣನೆಯಿರುವ ಜನಪದ ಹಾಡು.

# ೬. ಗುಬ್ಬಚ್ಚಿಯ ಗೂಡು

ತುಂಟು ಪುಟಾಣಿ ಹುಡುಗ ದಿನವೂ ನೋಡುತ್ತಿದ್ದ. ಅವನ ಆಟದ ಕೋಣೆಯ ಬಾಗಿಲು ತೆರದ ಕೂಡಲೆ ಎರಡು ಗುಬ್ಬಚ್ಚಿಗಳು ಕಿಚಕಿಚ ಮಾತಾಡಿಕೊಳ್ಳುತ್ತ ಹಾರಿ ಬಂದು ಕೋಣೆಯ ಚಾವಣಿಯ ಟೇರುಗಳ ನಡುವೆ ಹುಲ್ಲುಕಡ್ಡಿಗಳನ್ನು ಇಡುತ್ತಿದ್ದವು. ಒಂದು ದಿನ "ಏನು ಮಾಡ್ತಿದೀರಿ?" ಎಂದು ಕುತೂಹಲ ತಾಳಲಾರದೆ ಕೇಳಿದ. "ಮನೆ ಕಟ್ಟಿ ಕೊಳ್ತಿದ್ದೇವೆ" ಎಂದು ಹೆಣ್ಣು ಗುಬ್ಬಚ್ಚಿ ಹೇಳಿತು. ಕೂಡಲೇ ಗಂಡುಹಕ್ಕಿ ಅವಳನ್ನು ತಿದ್ದಿತು. "ಮನೆಯಲ್ಲಪ್ಪ, ಗೂಡು." ಗಂಡು ಹಕ್ಕಿಯ ಆತಂಕ ಏನೆಂದರೆ, ಈ ಹುಡುಗನ ಮನೆಯೊಳಗೆ ಇನ್ನೊಂದು ಮನೆ ಕಟ್ಟಿಕೊಳ್ಳುತ್ತಿದ್ದೇವೆ ಅಂದರೆ ಆತ ಹೆತ್ತವರಿಗೆ ಚಾಡಿಹೇಳಿ ತಮ್ಮನ್ನು ಅಲ್ಲಿಂದ ಓಡಿಸಬಹುದು ಎನ್ನುವುದು. ಅದನ್ನು ಗಂಡುಹಕ್ಕಿ ಹೆಂಡತಿಗೆ ಪಿಸುಮಾತಿನಲ್ಲಿ ವಿವರಿಸಿತು. ಅವನ ಪಿಸುಮಾತನ್ನು ಕೂಡ ಕೇಳಿಸಿಕೊಂಡ ಹುಡುಗ ನಕ್ಕ. "ನಿಮ್ಮನ್ನು ಓಡಿಸುವಷ್ಟು ಕೆಟ್ಟವನಲ್ಲ ನಾನು. ಒಂದಿಲ್ಲದಿದ್ದರೆ ಎರಡು ಗೂಡು ಕಟ್ಟಿಕೊಳ್ಳಿ. ಆದರೆ ನಿಮ್ಮನ್ನು ಒಂದು ಪ್ರಶ್ನೆ ಕೇಳ್ತೀನಿ, ಬೇಸರಪಡಬೇಡಿ" ಅಂದ. "ಕೇಳು" ಎಂದು ಎರಡು ಗುಬ್ಬಚ್ಚಿಗಳೂ ಹೇಳಿದವು. ಅವರಿಗೆ ಅವನು ತುಂಬ ಒಳ್ಳೆಯವನು ಎಂಬುದು ಗೊತ್ತಾಗಿತ್ತು. "ನನ್ನ ಕೋಣೆಲೇ ಇರಬಹುದಲ್ಲ, ನಿಮಗಾಗಿ ಬೇರೆ ಮನೆ ಯಾಕೆ ಬೇಕು ನನ್ನೊಂದಿಗೆ ಆಟ ಆಡಿಕೊಂಡು ಇರಬುದು" ಅಂದ.

ಗುಬ್ಬಚ್ಚಿಗಳಿಗೆ ಈ ಪ್ರಶ್ನೆ ತುಂಬ ಕಷ್ಟದ್ದಾಗಿ ಕಂಡಿತು. ಒಂದರ ಮುಖ ಇನ್ನೊಂದು ನೋಡಿಕೊಂಡು ಮೌನವಾದವು. ಉತ್ತರಿಸಬೇಕೆಂಬ ಕಾತರ ಇಬ್ಬರಲ್ಲೂ ಇತ್ತು. ಗಂಡುಗುಬ್ಬಚ್ಚಿ ಹೆಂಡತಿಯ ಹೊಟ್ಟೆಯ ಕಡೆಗೆ ನೋಡಿತು. ಇದರಿಂದ ಲಜ್ಜೆಗೊಂಡ ಹೆಣ್ಣು ಗುಬ್ಬಚ್ಚಿ, "ನಮಗೊಬ್ಬ ಪಾಪ ಬರ್ತಾನೆ - ಅವನಿಗೆ ನಮ್ಮ ಮನೆಯೇ ಇಷ್ಟ" ಅಂದಿತು ಆಗ ಹುಡಗನಿಗೆ ಹೊಳೆಯಿತು. ಚಿಕ್ಕವನಾದ ತಾನು ವಯಸ್ಕರಾದ ಗುಬ್ಬಚ್ಚಿಗಳ ಜೊತೆಗೆ ಮಾತಾಡುತ್ತಿರುವೆನೆಂದು ಆತನಿಗೆ ಆಗದಿರುವ ಲೈಂಗಿಕ, ಪ್ರಾಪಂಚಿಕ ಅನುಭವಗಳೆಲ್ಲ ಆ ಗುಬ್ಬಚ್ಚಿಗೆ ಆಗಿರುವುದು ತಿಳಿಯಿತು. ಜೊತೆಗೆ ಅವನ ಔದಾರ್ಯ ತೀವ್ರವಾಯಿತು. ಅವನ ಪ್ರೀತಿಯಿಂದ, ಗೌರವದಿಂದ ಹೇಳಿದ, "ನೀವು ನನ್ನ ಸ್ನೇಹಿತರು, ನಿಮ್ಮನ್ನು ಕಂಡರೆ ನಂಗೆ ತುಂಬ ಇಷ್ಟ. ಹುಲ್ಲಿನ ಮನೆ ಯಾಕೆ ಕಟ್ಟಿಕೊಳ್ತೀರಿ - ನನ್ನಪ್ಪ ಕಂಟ್ರಾಕ್ಟರು. ನಾನು ನಿಮಗೆ ಸಿಮೆಂಟು, ಇಟ್ಟಿಗೆ ಎಲ್ಲ ಕೊಡಬಲ್ಲೆ, ಬಾಗಿಲು, ಕಿಟಕಿಗೆ ಮರಮುಟ್ಟು ಎಲ್ಲ ಕೊಡಬಲ್ಲೆ, ನನ್ನ ಕೋಣೆ ದೊಡ್ಡದಾಗಿದೆ ಅಲ್ವ. ಈ ಮೂಲೇಲಿ ಒಂದು ಮನೆ ಕಟ್ಟಿಕೊಳ್ಳಿ, ನಿಮ್ಮ ಪಾಪನಿಗೆ ಇಷ್ಟವಾಗಬಹುದು" ಎಂದ.

ಗುಬ್ಬಚ್ಚಿಗಳು ಅವನ ಪ್ರೀತಿಯಿಂದ ಮೂಕವಾದವು. ಕಣ್ಣೀರು ಸುರಿಸತೊಡಗಿದವು. "ದಯವಿಟ್ಟು ಕ್ಷಮಿಸು, ನಾವು ಕಟ್ಟುವ ಹುಲ್ಲಿನ ಮನೆಯೇ ನಮಗೆ, ನಮ್ಮ ಪಾಪುವಿಗೆ ಇಷ್ಟ" ಅಂದವು. ಹುಡುಗನಿಗೆ ಬೇಸರವಾಯಿತು. ಅವರನ್ನು ಬೈಯಲಿಲ್ಲ, ಅಲ್ಲಿಂದ ಓಡಿಸಲಿಲ್ಲ, ಅವುಗಳೊಂದಿಗೆ ಮಾತಾಡುವುದನ್ನು ನಿಲ್ಲಿಸಿದ. ಅವು ಕಟ್ಟುತ್ತಿದ್ದ ಗೂಡನ್ನು ತಾತ್ಸಾರದಿಂದ ಗಮನಿಸುತ್ತಲೇ ಇದ್ದ. ಗೂಡು ಸಿದ್ಧವಾಯಿತು. ಒಂದು ದಿನ ತಾಯಿ ಮೊಟ್ಟೆ ಇಟ್ಟಿತು. ಹಕ್ಕಿಯ ಪಾಪು ಓಡಾಡುವುದಿಲ್ಲ, ಗೋಲಿಯಂತೆ ಸುಮ್ಮನೇ ಬಿದ್ದಿವೆ! ಬೇಸರದಿಂದ ಮೊಟ್ಟೆಗಳಿಗೆ ಹೇಳಿದ, "ನಿಮ್ಮ ತಂದೆತಾಯಿ ವಕ್ರಬುದ್ಧಿಯ ಬಡವರು, ನೀವಾದರೂ ಚೆನ್ನಾಗಿ ಬದುಕುವುದನ್ನು ಕಲಿಯಿರಿ". ತನಗಿರುವ ಆಟದ ಸಾಮಾನು, ಗೊಂಬೆಗಳ ಬಗ್ಗೆ ಹೇಳಿದ. ಆ ಮೊಟ್ಟೆಗಳ ತಂದೆತಾಯಿಗಳಾದರೂ ಮಾತಾಡುತ್ತಿದ್ದರು, ಈ ಮೊಟ್ಟೆಗಳು ಕಟುವ್ಯಂಗ್ಯದಿಂದ ಎನ್ನುವಂತೆ ಸುಮ್ಮನಿದ್ದವು. ಹುಡುಗನಿಗೆ ಕೋಪ ಬಂದು ಅವುಗಳನ್ನು ಹೆತ್ತವರಲ್ಲಿ ದೂರಿದ, ಗಂಡ ಹೆಂಡತಿ ಸುಮ್ಮನಿದ್ದರು. ಕೆಲವೇ ದಿನಗಳಲ್ಲಿ ಹುಡುಗ ನೋಡಿದರೆ ಅಲ್ಲಿ ಹಕ್ಕಿಗಳೂ ಇರಲಿಲ್ಲ, ಮೊಟ್ಟೆಯೂ ಇರಲಿಲ್ಲ. ಗೂಡು ಮಾತ್ರ ಇತ್ತು. ಹಕ್ಕಿಗಳು ಮತ್ತೆ ಬರಬಹುದೆಂದು ತುಂಬ ದಿನ ಕಾದ. ಅವು ಬರಲೇ ಅಲ್ಲ. ಇಡೀ ಪ್ರಕರಣ ಅವನಲ್ಲಿ ಒಬ್ಬಂಟಿತನ, ಅಳುಕು ಉಂಟುಮಾಡಿತು. ಗೂಡನ್ನು ತೆಗೆದುಕೊಂಡು ನೋಡಿದ. ಅದು ತೀರಾ ಸಾಮಾನ್ಯವಾಗಿ ಕಾಣುತ್ತಿತ್ತು. ಹುಲ್ಲುಕಡ್ಡಿಗಳನ್ನು ತಂದು ಅದರಂತೆ ಕಟ್ಟಲು ಯತ್ನಿಸಿದ. ಸಾಧ್ಯವಾಗಲಿಲ್ಲ. ಆಗ ಅವನಿಗೆ ಇನ್ನೂ ನಿರಾಶೆಯಾಯಿತು. ಬೆಳೆದಂತೆಲ್ಲ ಈ ನಿರಾಶೆ ಪ್ರಾಣಿಪಕ್ಷಿಗಳ ಬಗ್ಗೆ ಮೆಚ್ಚಿಗೆಯನ್ನೇ ಉಂಟುಮಾಡಿತು. ಗುಬ್ಬಚ್ಚಿಗಳು ಹಾರಾಡುವುದನ್ನು, ಕಿಚಕಿಚ ಮಾತಾಡಿಕೊಂಡು ಖುಷಿಯಾಗಿರುವುದನ್ನು ಕಂಡಾಗಲೆಲ್ಲ ಅವುಗಳ ನೆಲೆಯಿಲ್ಲದ ಬದುಕು, ಬಡತನ, ಸ್ವಾತಂತ್ರ್ಯ ಇವೆಲ್ಲವುಗಳ ಜೊತೆಗೆ ಅವುಗಳ ಸ್ವಾಭಿಮಾನ ಅವನನ್ನು ಅಚ್ಚರಿಗೊಳಿಸುತ್ತಿತ್ತು.

ಕವಿಗಳ ಬಗ್ಗೆ ಯೋಚಿಸಿದಾಗ ನನಗೆ ಮೇಲಿನ ಕತೆಯ ಸ್ವಾರಸ್ಯ ಬೆಳೆಯುತ್ತಾ ಹೋಗುತ್ತದೆ. "ನಿಮ್ಮ ಪ್ರಕಾರ ಕವನ ಎಂದರೇನು?" ಎಂದು ಗೆಳೆಯರೊಬ್ಬರು ಕೇಳಿದರು. ಆ ವಸ್ತುವನ್ನು ಅವರು ಅನೇಕರಿಗೆ ಹಂಚಿ ಪುಸ್ತಕವೊಂದನ್ನು ಹೊರತರಲು ಹವಣಿಸುತ್ತಿದ್ದರು. "ಅದಕ್ಕೇನು, ಉತ್ತರ ಸುಲಭ!" ಎಂದು ಹೇಳಿದೆ. ಆದರೆ ಉತ್ತರ ಗೊತ್ತಿದ್ದರೂ ಅವರಸರದಿಂದ ಹೇಳಿದರೆ ಸರಳವಾಗುತ್ತದೆ, ತಪ್ಪಾಗುತ್ತದೆ ಅನ್ನಿಸಿತು. "ಕವನ ಅಂದರೆ? ಗುಬ್ಬಚ್ಚಿಯ ಗೂಡು!" ಎಂದು ಹೇಳಿದ್ದರೆ ಮಾತ್ರ ಉತ್ತರಕ್ಕೆ ಹತ್ತಿರವಾಗುತ್ತಿದ್ದೆ.

ಕವಿಗಳ ಕವನದಂತೆಯೇ ಗುಬ್ಬಚ್ಚಿಯ ಗೂಡು, ಅನನ್ಯಯವಾದದ್ದು, ಮನುಷ್ಯ ಕಟ್ಟಲು ಆಗದಂಥದು, ಗೂಡಿನ ಹುಲ್ಲುಕಡ್ಡಿಗಳಂತೆಯೇ ಕವಿಯ ಮಾತುಗಳು ಮತ್ತು ಅನುಭವ ಸರಳವಾದವು, ಬದುಕಿನ ಅತ್ಯಂತ ಕೆಳಸ್ತರದಿಂದ ಸಂಗ್ರಹಿತವಾದವು. ಜನರ ಹೃದಯದ ಮಾತುಗಳಿಗೆ ಬದಲು ಪುಸ್ತಕಗಳ ಮಾತುಗಳನ್ನೇ ಬಳಸಿದವರು, ಕಡುಬಡವನ ಅಳಲಿಗೆ ಬದಲು ರಾಜಮಹಾರಾಜರ ಪ್ರತಾಪಗಳನ್ನು ವರ್ಣಿಸುವವರು, ಆಪ್ತ ದನಿಗೆ ಬದಲು ಡಂಗುರದ ವರಸೆಗೆ ಬಲಿಯಾದವರು ಕವಿಗಳಾಗಿ ವಿಫಲರಾಗಿದ್ದಾರೆ; ಅಥವಾ ಸತ್ಯಕ್ಕೆ ಹೆಚ್ಚು ಹತ್ತಿರವಾಗಬೇಕೆಂದರೆ, ಪುಸ್ತಕಗಳ ದೊಡ್ಡ ದೊಡ್ಡ ಮಾತುಗಳ ಹಿಂದಿನ ಅಪಸ್ವರವನ್ನು, ರಾಜ ಮಹಾರಾಜರ ಮೂಲಭೂತ ತಬ್ಬಲಿ ದನಿಯನ್ನು, ಡಂಗುರದ ಬೊಬ್ಬೆಯ ನಿರರ್ಥಕತೆಯನ್ನು ಹಿಡಿದವರು ಮಾತ್ರ ಕವಿಗಳಾಗಿದ್ದಾರೆ. ಕವಿಯೊಬ್ಬ ವಿಚಿತ್ರ ವ್ಯಕ್ತಿ: ಹುಡುಗ ಮನೆ ಕಟ್ಟಿಕೊಳ್ಳಲು ಗುಬ್ಬಚ್ಚಿಗೆ ಹೇಳಿದಾಗ ಗುಬ್ಬಚ್ಚಿಯ ದಿಗ್ಭ್ರಮೆಯಲ್ಲಿ ಕವಿಯ ಆಳದ ದಿಗಿಲಿದೆ. "ನಾನು ಬಡವಿ, ಆತ ಬಡವ, ಒಲವೆ ನಮ್ಮ ಬದುಕು" ಎಂದು ಹೇಳುವ ಬೇಂದ್ರೆಯ ಪ್ರೇಯಸಿಗೆ ಅವನೆ ರಂಗಸಾಲೆ, ಅವನೆ ಮಚ್ಚಿನೋಲೆ.

ಕಾಲವನ್ನು ಪಕ್ಷಿಗೆ ಹೋಲಿಸುತ್ತಾರೆ. ಪ್ರಾಣವನ್ನು ಪಕ್ಷಿಗೆ ಹೋಲಿಸುತ್ತಾರೆ. ಇದೆಲ್ಲ ಮಾಡುವವರು ಕವಿಗಳೇ. ಆದರೆ ಇಲ್ಲಿ ಒಂದು ಅರ್ಥಪೂರ್ಣ ವ್ಯತ್ಯಾಸ ಗುರುತಿಸಬೇಕು. ಗುಬ್ಬಚ್ಚಿಯ ಗೂಡನ್ನು ಮನುಷ್ಯ ತನ್ನೆಲ್ಲ ಜಾಣತನ ಬಳಸಿ ಕಟ್ಟಿಬಿಟ್ಟಾನು, ಆದರೆ ಆತ ಇದರಲ್ಲಿ ಜೀವಿಸಲಾರ. ಹಕ್ಕಿಗಳ ಹಾಡು ಇಂಪಾಗಿರುಬಹುದು, ಆದರೆ ಮನುಷ್ಯ ಅದನ್ನು ಅನುಕರಿಸಿದರೆ ಅದು ಹಾಡಾಗಲಾರದು. ಹಕ್ಕಿಗಳಂತೆ ಈತ ವಿಮಾನದಲ್ಲಿ ಹಾರಬಹುದು, ಆದರೆ ಅದು ಹಕ್ಕಿಯ ಹಾರಾಟ ಅನ್ನಿಸಿಕೊಳ್ಳುವುದಿಲ್ಲ. ಆದ್ದರಿಂದಲೇ ಮನುಷ್ಯನೊಂದು ನಿಗೂಢ ರಹಸ್ಯ! ಆತನ ದೇಹದ ರಚನೆಯನ್ನು ನೋಡಿದರೆ ಅವನು ಹಾರಲಾರ; ಹಾಡಲಾರ, ಹಕ್ಕಿಗಳ ಚಾಕಚಕ್ಯತೆಯಿಂದ, ಅಷ್ಟೇ ವೇಳೆಯಲ್ಲಿ ಗೂಡುಕಟ್ಟಲಾರ. ಆದರೂ ಆತ ಇವೆಲ್ಲವುಗಳನ್ನು ಮಾಡಿಬಿಟ್ಟು ಹಕ್ಕಿಯ ಸರಳತೆಯ ಬಗ್ಗೆ ನಿಬ್ಬೆರಗಾಗುತ್ತಾನೆ. ಕ್ರೌಂಚಪಕ್ಷಿಯ ಧ್ವನಿ ಕೇಳಿದ ವಾಲ್ಮೀಕಿ ಮಾತ್ರ ರಾಮಾಯಣ ರಚಿಸಬಲ್ಲ, ರಾಮಾಯಣದ ಅಗತ್ಯವೇ ಇಲ್ಲದ ಹಕ್ಕಿಗಳು ದ್ವೇಷ, ಸ್ನೇಹ, ಸಂಭೋಗ, ವಂಶದ ಬೆಳವಣಿಗೆ ಎಲ್ಲದರಲ್ಲಿ ತೊಡಗಿ ಸುಮ್ಮನಿರುತ್ತವೆ. ರಾಮಾಯಣ ರಚಿಸಲು ಬೇಕಾದ ಮಾತು, ಛಂದಸ್ಸು, ಮೌನ, ಏಕಾಗ್ರತೆಯನ್ನು ಬೆಳೆಸಿಕೊಂಡು ಕವಿ ಮನುಕುಲಕ್ಕೆ ಒಂದು ಕತೆಯನ್ನೇ, ಪರಂಪರೆಯನ್ನೇ ನೀಡುತ್ತಾನೆ.

ಮೌನ ಮುಖ್ಯವೆ? ಸಂಗೀತದಲ್ಲಿ, ನಾಟಕದಲ್ಲಿ ಮೌನ ಸದ್ದಿನಷ್ಟೇ ಮುಖ್ಯ. ಆದರೆ ಕವನದಲ್ಲಿ? ಆರೇ ಪದಗಳ ಮೂರು ಸಾಲಿನಲ್ಲಿ ಜಪಾನಿನ ಹಯಕು ಕವನ ರೂಪು ಗೊಳ್ಳುತ್ತದೆ. ಕುಮಾರವ್ಯಾಸನ ಷಟ್ಪದಿಯ ಒಂದು ಪದ್ಯವನ್ನು ವಿವರಿಸಹೋದರೆ ಅನೇಕ ಪುಟಗಳೇ ಬೇಕಾಗುತ್ತವೆ; ಶೇಕ್ಸ್‌ಪಿಯರ್‌ನ 'ಕಿಂಗ್‌ಲಿಯರ್'ನ ಎಂಟು ನುಡಿ ಸಂಪುಟಗಳನ್ನೇ ಹೇಳುತ್ತದೆ. ಮೊನ್ನೆ ನಾನು ನೋಡಿದ ಒಂದು ನಾಟಕದಲ್ಲಿ ಹಲವು ಜನ ಮುಖ್ಯ ಪಾತ್ರಧಾರಿಯ ಮಾತುಗಳಿಗಾಗಿ ಕಾಯುತ್ತಿದ್ದರು. ಪಾತ್ರಗಳು ಮಾತಾಡುತ್ತಿದ್ದವು. ಆದರೆ ಅಲ್ಲೊಂದು ಆಶ್ಚರ್ಯ ಕಾದಿತ್ತು. ಮುಖ್ಯ ಪಾತ್ರಧಾರಿ ಸುಮ್ಮನೆ ಹೋಗಿ ಮೌನದಲ್ಲಿ ಗಂಟೆ ಬಾರಿಸಿದ. ಆ ಗಂಟೆಯ ಧ್ವನಿ ಪ್ರೇಕ್ಷಕರಲ್ಲಿ ರೋಮಾಂಚನವನೇ ಮೂಡಿಸಿತು.

ಆದ್ದರಿಂದಲೇ ಕವಿ ಕೆಲವೇ ಮಾತುಗಳನ್ನು ಬಳಸಿಕೊಂಡು ಮಾತು ಮಾತಿನ ನಡುವೆ ಮೌನಿಯಾಗುತ್ತಾನೆ. ಅದೇ ಛಂದಸ್ಸು, 'ವಾರಿನೋಟ ಹಾರುತ್ತಿತ್ತೊ ಹೊಳೀಮ್ಯಾಗ! ಹೊಸಾ ಹರೆ ಈಸತಿತ್ತೊ ಹೊಳೀಯಾಗ!' ಎನ್ನುವ ಬೇಂದ್ರೆಯವರ ಕವನವನ್ನು ಹಾಡಬಹುದು, ಈ ಹಾಡಿನಲ್ಲಿ ಮೌನವಿದೆ. ಯಾರ ವಾರಿನೋಟ, ಯಾಕೆ ಹಾರುತ್ತಿತ್ತು, ಎಂಬುದೆಲ್ಲ ಇಲ್ಲಿ ಮೌನ. ಹರಯದ ಜನರ ಆಕಾರ ಕೂಡ ಇಲ್ಲಿ ನಿಶ್ಯಬ್ದ. ಮೂರು ಒತ್ತುಗಳುಳ್ಳ ಈ ಸಾಲುಗಳ ಸುದ್ದಿನಲ್ಲಿ ಕೂಡ ನಿಶ್ಯಬ್ದ ಕೆಲಸ ಮಾಡುತ್ತದೆ.

"ಹಕ್ಕಿ ಹಾರುತಿದೆ ನೋಡಿದಿರಾ?" ಎಂದು ಕೇಳುವ ಬೇಂದ್ರೆಯವರಾಗಲಿ, "ಮನೆಯೊಳಗೆ ಮನೆಯೊಡೆಯನಿಲ್ಲ" ಎನ್ನುವ ಬಸವಣ್ಣನಾಗಲಿ, "ಎಲ್ಲರಂಥವನಲ್ಲ ನನ ಗಂಡ" ಎನ್ನುವ ಶಿಶುನಾಳರಾಗಲಿ ಹಕ್ಕಿ, ಮನೆ, ಗಂಡಂದಿರನ್ನು ನೋಡಿದವರು; ಅವರ ವಹಿವಾಟನ್ನು, ಗುಣಧರ್ಮವನ್ನು ಸೂಕ್ಷ್ಮವಾಗಿ ಗಮನಿಸಿದವರು; ಈ ಹುಲ್ಲನ್ನು ಬಳಸಿಕೊಂಡು ತಮ್ಮ ಕವನದ ಗೂಡನ್ನು ಕಟ್ಟುವವರು, ಈ ಕವನದ ಗೂಡಿನಲ್ಲಿ ಗುಬ್ಬಚ್ಚಿಯ ಹೃದಯ ಸ್ಪಂದನವನ್ನು ಗುರುತಿಸಿದರು.

ಅದಕ್ಕೇ ನಾನು ಹೇಳಿದ್ದು, ಮನುಷ್ಯ ನಿಗೂಢ ಎಂದು. ಈತನಿಗೆ ಹಾರುವಿಕೆ, ಓಡುವಿಕೆ, ಮನೆ ಕಟ್ಟುವಿಕೆ ಸಾಲದು. 'ದೇಹರಚನೆಯ ದೌರ್ಬಲ್ಯದಿಂದಾಗಿಯೇ ಇವೆಲ್ಲ ಕ್ರಿಯೆಗಳನ್ನು ರೂಢಿಸಿಕೊಂಡು ಮನುಷ್ಯ ಒಟ್ಟಾಗಿ ಬಾಳುವುದನ್ನು ಕಲಿತವನು, ಒಟ್ಟಾಗಿ ಬಾಳುವುದರ ಬೇಸರ, ನೋವು, ಪ್ರೇಮ, ಕಾಮ, ಘರ್ಷಣೆಗಳ ಬಲೆಯಲ್ಲಿ ಬಿದ್ದವನು. ನೆಮ್ಮದಿಯಾಗಿರುವ ಹೆಲೆನ್‌ಮತ್ತು ಮೆನಿಲಾಸ್‌ಬದುಕಿಗೆ ಪ್ಯಾರಿಸ್‌ಪ್ರವೇಶಿಸಬೇಕು. ಹೆಲೆನ್‌ಳ ಅವಿವೇಕಿ ಪ್ರೇಮಕ್ಕಾಗಿ ಎರಡು ದೇಶಗಳ ಯುದ್ಧ, ರಕ್ತಪಾತವಾಗಿ ಎಲ್ಲ ದಾಂಪತ್ಯದ ಏಕತಾನತೆಯಂತೆಯೇ ಎಲ್ಲ ಪ್ರೇಮದ ಮಿತಿ ಕೂಡ ಗೊತ್ತಾಗಲು ಹೋಮರನ ಮಹಾಕಾವ್ಯ ಹುಟ್ಟಬೇಕು. ಕೈಕೇಯಿಯ ಅಸೂಯೆ, ಸಣ್ಣತನದಿಂದ ಶುರುವಾಗಿ ದಶಕಂಠನ ದಿಕ್ಕೆಟ್ಟ ಕಾಮದ, ಪ್ರೇಮದ ವ್ಯಾಖ್ಯಾನವಾಗಲು ರಾಮಾಯಣ ಮೂಡಬೇಕು. ಮನುಷ್ಯನ ಬದುಕುವ ಹೋರಾಟದ ಅಂಗವಾಗಿ ಆತ ಬದುಕಲು ಕಾವ್ಯ ಕೂಡ ಬೇಕು.

ಮನುಷ್ಯನ ಸಾಧನೆಯೇ ಆತ ನಡೆದ ದಾರಿಯಲ್ಲಿ ನೀಚತನದ ಹೆಜ್ಜೆ ಗುರುತುಗಳನ್ನು ಬಿಡುತ್ತಾ ಹೋಗುತ್ತದೆ. ಸದ್ದು, ಮೌನವನ್ನು ಸಾಧಿಸಲು ಇರುವ ಛಂದಸ್ಸೇ ಆತನ ಪಂಜರವಾಗುತ್ತದೆ; ಮಾನಸಿಕ, ಸಾಮಾಜಿಕ ನೆಮ್ಮದಿಗಾಗಿ ರೂಪಿಸಿಕೊಂಡ ಧರ್ಮವೇ ಜಾತಿಯ ಗೋಡೆಗಳಾಗಿ ಬೆಳೆಯುತ್ತದೆ; ಹಕ್ಕಿಯಂತೆ ಉಂಡು, ಪ್ರೇಮಿಸಿ ಹಾರಿ ಹೋಗಲಾರದ ಮುನಷ್ಯ ತನ್ನ ಮಹಾಕಾವ್ಯ, ಛಂದಸ್ಸು, ಜಾತೀಯತೆ, ಮೂಢ ನಂಬಿಕೆಗಳ ಜಾಲದಲ್ಲಿ ಬಿದ್ದುಹೋಗುತ್ತಾನೆ. ತನ್ನ ದೈಹಿಕದೌರ್ಬಲ್ಯಕ್ಕೆ ಪರ್ಯಾಯವಾಗಿ ಬೆಳೆಸಿಕೊಂಡ ಸರ್ವಸ್ವವೂ ಮನುಷ್ಯನನ್ನು ಅಣಕಿಸತೊಡಗುತ್ತದೆ.

*ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ*
*ಧರೆಹತ್ತಿ ಉರಿದರೆ ನಿಲಬಾರದು*
*ಏರಿ ನೀರುಂಬಡೆ, ಬೇಲಿ ಹೊಲವ ಮೇವಡೆ*
*ನಾರಿ ತನ್ನ ಮನೆಯಲ್ಲಿ ಕಳುವಡೆ*
*ತಾಯ ಮೊಲೆಹಾಲು ನಂಜಾಗಿ ಕೊಲುವೊಡೆ*
*ಇನ್ನಾರಿಗೆ ದೂರುವೆ*
*ತಂದೆ ಕೂಡಲ ಸಂಗಮದೇವ*

ಎಂದು ಬಸವಣ್ಣ ನಿಟ್ಟುಸಿರು ಬಿಡುತ್ತಾರೆ. ಕೂಡಲ ಸಂಗಮನ ಹೆಸರು ಹೇಳುವ ಬಸವಣ್ಣನವರಿಗೇ ಅನುಮಾನವಿದೆ – "ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ?" ಎಂದು. ಇಷ್ಟೊಂದು ಕಾವ್ಯ, ಧರ್ಮ, ಪವಾಡಗಳು, ಸಾಧನೆಗಳೆಲ್ಲ ಆದರೂ ಬಸವಣ್ಣನವರಿಗೆ ದೇವರ ಅಸ್ತಿತ್ವದ ಬಗ್ಗೆಯೇ ಅನುಮಾನವಿದೆ. ಹಾಗೆಯೇ ಛಂದಸ್ಸಿನ ಅಸ್ತಿತ್ವದ ಬಗ್ಗೆ. ಅವರ ಮೇಲಿನ ಮಾತುಗಳನ್ನು ಗಮನಿಸಿ. ಅದು ಗದ್ಯ. ಆದರೆ ಈ ಗದ್ಯ ಅಚ್ಚಕನ್ನಡದಲ್ಲಿ, ವಾಸ್ತವಕ್ಕೆ ಕಟ್ಟಿಕೊಂಡ ನುಡಿಕಟ್ಟಿನಲ್ಲಿ, ಮಾತಿನಂತೆಯೇ ಮೌನದ ಬಳಕೆಯಲ್ಲಿ, ಪಾಂಡಿತ್ಯಕ್ಕೆ ಬದಲು ಹೃದಯದ ಚಿಂತನೆಯ ಗ್ರಹಿಕೆಯಲ್ಲಿ ಕಾವ್ಯವಾಗುತ್ತದೆ. ಹತ್ತು ಮಾತುಗಳಲ್ಲಿ ಗಾಢ ಅನುಭವವನ್ನು ಹೇಳಿ ಕವನವಾಗುತ್ತದೆ.

ಆದ್ದರಿಂದಲೇ ಎಲ್ಲ ಕವನಗಳಲ್ಲಿನ ಸಿದ್ಧಾಂತ, ಬದ್ಧತೆ ಮುಖ್ಯವಾಗಿ ಬದುಕಿಗೆ, ಪ್ರೀತಿಗೆ ಮಾತ್ರ ಬದ್ಧ. ಈ ಸಿದ್ಧಾಂತಗಳು ಒಳ್ಳೊಳ್ಳೆಯ ಯೋಚನೆಗಳೆಲ್ಲ ಕವಿಯ ಆಟದ ಸಾಮಾನುಗಳು ಮಾತ್ರ. ನೆರೂಡ, ಬ್ರೆಕ್ಟ್‌ತಮ್ಮ ಸಮತಾವಾದದ ಬಗ್ಗೆ ಎಷ್ಟು ಹೇಳಿಕೊಂಡರೂ ಅವರ ಕವನಗಳು ಕೆಟ್ಟುಹೋಗಿರುವ ಭಾಷೆಯನ್ನು ಹೃದಯ ಸ್ಪಂದನದ ಭಾಷೆಯ ಹತ್ತಿರ ತರುವುದಕ್ಕಾಗಿ, ಅಸಮಾನತೆ, ಅನ್ಯಾಯಗಳಿಂದ ಕೊಳೆತು ಹೋಗಿರುವ ಸಮಾಜಕ್ಕೆ ಗುಬ್ಬಚ್ಚಿಯ ಮುಗ್ಧ ನಿಸ್ವಾರ್ಥತೆ, ಸ್ವಾಭಿಮಾನದ ನಿಲುವು ತರುವುದಕ್ಕಾಗಿ, ಸಂಕೀರ್ಣಗೊಂಡ ಮನುಷ್ಯನನ್ನು ತನ್ನ ಅರಮನೆಯಲ್ಲಿ, ಗುಡಿಸಲಲ್ಲಿ ತಬ್ಬಲಿಯನ್ನಾಗಿ ಮಾಡುವ ಪರಿಸರಕ್ಕೆ ಮಾತು ಮೀರಿದ ಪ್ರೀತಿ ತರುವುದಕ್ಕಾಗಿ ನಡೆಸುವ ಪ್ರಯತ್ನಗಳು.

ಕವನವೆಂದರೆ ಏನೆಂದು ಈಗ ಗೊತ್ತಾಯಿತೆ? ಗುಬ್ಬಚ್ಚಿಯಂತೆ ಹಾಡಲಾರದ, ಬದಕುಲಾರದ ಮನುಷ್ಯ ತನ್ನದೇ ಆದ ರೀತಿಯಲ್ಲಿ ಆಡುವ, ಮಾತಾಡುವ, ಮೌನವಾಗಿರುವ ಪ್ರಯತ್ನ.

**ಲೇಖಕರು**

ಪಾಳೇಗಾರ ಲಂಕೇಶ್(೧೯೩೫-೨೦೦೦) ಅವರು ಕನ್ನಡದ ನವ್ಯ ಲೇಖಕರೆಂದು ಹೆಸರಾದವರು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್‌ಅಧ್ಯಾಪಕರಾಗಿದ್ದ ಲಂಕೇಶ್‌ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟು, ಸಿನಿಮಾ ಮಾಡಲು ಆರಂಭಿಸಿದರು. 'ಪಲ್ಲವಿ' 'ಎಲ್ಲಿಂದಲೋ ಬಂದವರು' ಅವರು ನಿರ್ದೇಶಿಸಿದ ಸಿನಿಮಾಗಳು. ೧೯೮೦ರಲ್ಲಿ ಅವರು 'ಲಂಕೇಶ್‌ಪತ್ರಿಕೆ' ಶುರುಮಾಡಿದರು. ನಂತರ ಸುಮಾರು ಎರಡು ದಶಕಗಳ ಕಾಲ ಅವರು ಕನ್ನಡ ಪತ್ರಿಕೋದ್ಯಮದಲ್ಲಿ ಪ್ರಭಾವಶಾಲಿ ವ್ಯಕ್ತಿಯಾಗಿದ್ದರು. ಅವರು ಪ್ರತಿವಾರವೂ

'ಟೀಕೆಟಿಪ್ಪಣಿ' ಎಂಬ ಹೆಸರಲ್ಲಿ ಬರೆಯುತ್ತಿದ್ದ ಅಂಕಣ ತುಂಬ ಓದುಗರನ್ನು ಪಡೆದಿತ್ತು. ತಮ್ಮ ವಿಚಾರಗಳಿಂದ ಅಪಾರ ಓದುಗರನ್ನು ಪ್ರಭಾವಿಸಿದ್ದ ಲಂಕೇಶ್ಕರ್ನಾಟಕದಲ್ಲಿ 'ಪ್ರಗತಿರಂಗ' ಎಂಬ ರಾಜಕೀಯ ವೇದಿಕೆ ಕೂಡ ಕಟ್ಟಿದರು. 'ಉಮಾಪತಿಯ ಸ್ಕಾಲರ್ಶಿಪ್ಯಾತ್ರೆ', 'ಕಲ್ಲುಕರಗುವ ಸಮಯ', ಮೊದಲಾದ ಕಥಾಸಂಕಲನಗಳು, 'ಬಿರುಕು', 'ಮುಸ್ಸಂಜೆಯ ಕಥಾಪ್ರಸಂಗ' ಎಂಬ ಕಾದಂಬರಿಗಳು 'ಸಂಕ್ರಾಂತಿ', 'ಗುಣಮುಖ' ಮುಂತಾದ ನಾಟಕಗಳು ಅವರ ಪ್ರಮುಖ ಕೃತಿಗಳು. 'ಕಲ್ಲುಕರಗುವ ಸಮಯ'ಕ್ಕೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೯೩) ಬಂದಿತು.

**ಆಶಯ**

ಪ್ರಸ್ತುತ ಅಂಕಣ ಬರೆಹವನ್ನು ಅವರ 'ಟೀಕೆಟಿಪ್ಪಣಿ ಸಂಪುಟ ೧' ರಿಂದ ಆರಿಸಿಕೊಳ್ಳಲಾಗಿದೆ. ಇಲ್ಲಿ ಲೇಖಕರು ಗುಬ್ಬಚ್ಚಿಯ ಗೂಡಿನ ಸಂಕೇತವನ್ನು ಇಟ್ಟುಕೊಂಡು, ಚಿಂತನೆ ಮಾಡಿದ್ದಾರೆ. ಗುಬ್ಬಚ್ಚಿಗಳು ಎಷ್ಟೇ ಪುಟ್ಟ ಹಕ್ಕಿಗಳಾದರೂ ತಮಗೆ ಬೇಕಾದ ಗೂಡನ್ನು ತಾವೇ ಕಟ್ಟಿಕೊಳ್ಳುತ್ತವೆ. ಈ ಗೂಡು ಅವಕ್ಕೆ ವಿಶಿಷ್ಟವಾಗಿರುತ್ತದೆ. ಸ್ವಂತಿಕೆ ಇರುವ ಎಲ್ಲರೂ ತಮ್ಮ ವ್ಯಕ್ತಿತ್ವಕ್ಕೆ ತಕ್ಕನಾದ ಬದುಕನ್ನು ಬದುಕಲು ಹವಣಿಸುತ್ತಾರೆ. ಕವನ ಕೂಡ ಆಯಾ ಕವಿಯ ವಿಶಿಷ್ಟತೆಗೆ ತಕ್ಕಂತೆ ಇರಬೇಕು. ಮನುಷ್ಯರಿಗೆ ಪಕ್ಷಿಗಳಿಗಿರುವ ಕೆಲವು ಸ್ವಾತಂತ್ರ್ಯ ಅನುಕೂಲ ಇಲ್ಲ. ಆದರೆ ಪ್ರಾಣಿ ಪಕ್ಷಿಗಳಿಗಿಲ್ಲದ ಕೆಲವು ಸಾಮರ್ಥ್ಯಗಳು ಇವೆ. ತಮ್ಮ ಮಿತಿಗಳನ್ನು ಮೀರಲು ಅವರು ಅನೇಕ ಬಗೆಯಲ್ಲಿ ತೊಡಗುತ್ತಾರೆ. ಇದೇ ಅವರ ಅನೇಕ ಸಾಧನೆಗಳಿಗೆ ಕಾರಣವಾಗುತ್ತದೆ. ಎಂದು ಲೇಖನ ಸೂಚಿಸುತ್ತಿದೆ.

**ಟಿಪ್ಪಣಿ**

ಹಾಯಕು = ಜಪಾನಿ ಭಾಷೆಯ ಕಿರುಗವನ, ಹೆಲೆನ್= ಗ್ರೀಕ್ಪುರಾಣಗಳಲ್ಲಿ ಬರುವ ಒಬ್ಬ ಸುಂದರಿ, ಮೆನಿಲಾಸ್= ಹೆಲೆನಳ ಗಂಡ, ಪ್ಯಾರಿಸ್= ಟ್ರಾಯ್ದ್ವೀಪದ ರಾಜಕುಮಾರ, ಮೆನಿಲಾಸನ ಅತಿಥಿಯಾಗಿ ಬಂದು ಹೆಲೆನಳನ್ನು ಅಪಹರಿಸಿಕೊಂಡು ಹೋದವನು, ಹೆಲೆನಳನ್ನು ಬಿಡಿಕೊಂಡು ಬರಲು ೧೨ ವರುಷ ಕಾಲ ಗ್ರೀಕರಿಗೂ ಟ್ರಾಯನರಿಗೂ ನಡೆದ ಯುದ್ಧವು ಟ್ರೋಜನ್ಯುದ್ಧವೆಂದು ಖ್ಯಾತವಾಗಿದೆ. ಹೋಮರ್ಎಂಬ ಕವಿ ಈ ಯುದ್ಧವನ್ನು ವಸ್ತುವನ್ನಾಗಿ ಮಾಡಿಕೊಂಡು 'ಇಲಿಯಡ್' ಹಾಗೂ 'ಒಡೆಸ್ಸಿ' ಎಂಬ ಮಹಾಕಾವ್ಯಗಳನ್ನು ಬರೆದನು. ನೆರೂಡ = ಚಿಲಿ ದೇಶದ ಪ್ರಖ್ಯಾತ ಕವಿ ಹಾಗೂ ರಾಜಕಾರಣಿ, ಬ್ರೆಕ್ಟ್= ಜರ್ಮನಿಯ ಕವಿ, ನಾಟಕಕಾರ.

**ಪ್ರಶ್ನೆಗಳು**

೧. ತುಂಟ ಪುಟಾಣಿ ಹುಡುಗನಿಗೂ ಹಕ್ಕಿಗಳಿಗೂ ನಡೆಯುವ ಸಂಭಾಷಣೆಯನ್ನು ವಿವರಿಸಿ.
೨. ಗುಬ್ಬಚ್ಚಿಗಳಿಗೆ ಹುಡುಗನು ಮಾಡುವ ಸಹಾವನ್ನು ಯಾಕೆ ನಿರಾಕರಿಸುತ್ತವೆ?
೩. ಗುಬ್ಬಚ್ಚಿಗಳು ಯಾಕೆ ಗೂಡು ಬಿಟ್ಟು ಹಾರಿ ಹೋಗುತ್ತವೆ?
೪. ಲೇಖಕರು ಹೇಳುವ ಮೌನದ ಮಹತ್ವವೇನು?
೫. ಮನುಷ್ಯನೊಂದು ನಿಗೂಢ ರಹಸ್ಯ ಎಂದು ಲೇಖಕರು ಹೇಗೆ ವಿವರಿಸುತ್ತಾರೆ?
೬. ಹಕ್ಕಿಯಂತೆ ಸರಳವಾಗಿ ಬದುಕಲಾರದ ಮನುಷ್ಯರು ತಾವೇ ಕಟ್ಟಿಕೊಂಡ ವ್ಯವಸ್ಥೆಯಲ್ಲಿ ಬಂಧಿಗಳಾಗಿ ಬದುಕುತ್ತಾರೆ ಎಂದು ಲೇಖಕರು ಹೇಗೆ ಹೇಳುತ್ತಾರೆ?
೭. ಗುಬ್ಬಚ್ಚಿ ಗೂಡಿಗೂ ಕವನ ಕಟ್ಟುವುದಕ್ಕೂ ಇರುವ ಸಂಬಂಧಗಳನ್ನು ಲೇಖನ ಹೇಗೆ ವಿವರಿಸುತ್ತದೆ?

**ಪೂರಕ ಓದು**

೧. ಕೃಷ್ಣಕುಮಾರ ಕಲ್ಲೂರ ಅವರ 'ಗುಬ್ಬಿಗಳ ಸಂಸಾರ'

೨. ಪೂರ್ಣಚಂದ್ರ ತೇಜಸ್ವಿ ಅವರ 'ನಾವು ಕೊಂದಹಕ್ಕಿ ಕತೆ'

೩. ಪೂರ್ಣಚಂದ್ರ ತೇಜಸ್ವಿ ಅವರ 'ಕನ್ನಡ ನಾಡಿನ ಹಕ್ಕಿಗಳು', 'ಪರಿಸರದ ಕತೆ', 'ವಿಸ್ಮಯ ೧' ಹಾಗೂ 'ವಿಸ್ಮಯ ೨'

೪. ವೈದೇಹಿ ಅವರ 'ಪುಟ್ಟಹಕ್ಕಿ ಮತ್ತು ಆಕಾಶರಾಯ' ಕತೆ, 'ಮಿಲ್ಲು ಮತ್ತು ಹಕ್ಕಿ ಕತೆಗಳು' ಹಾಗೂ 'ಹಕ್ಕಿಹಾರಿತೆಲ್ಲಿಗೆ', 'ಕಾಡಿಗೆ ಹೋದಗುಬ್ಬಿ', 'ಬಿದ್ದಗೂಡಿನ ಹಕ್ಕಿ' ಮುಂತಾದ ಅಂಕಣ ಬರೆಹಗಳು.

## ೧೦. ಚೇಂಕ್ರಮೇಸ್ತ್ರಿ ಮತ್ತು ಅರಿಸ್ಟಾಟಲ್

ಹಾವುಮೀನಿನ ಬಗ್ಗೆ ಯೋಚಿಸಿದ ಕೂಡಲೆ ನನಗೆ ಇಬ್ಬರು ವ್ಯಕ್ತಿಗಳು ಜ್ಞಾಪಕಕ್ಕೆ ಬರುತ್ತಾರೆ. ಒಬ್ಬ ಚೇಂಕ್ರ ಮೇಸ್ತ್ರಿ, ಇನ್ನೊಬ್ಬ ಅರಿಸ್ಟಾಟಲ್, ಪ್ಲೇಟೋ ಶಿಷ್ಯನಾದ ವಿಶ್ವವಿಖ್ಯಾತ ತತ್ವಜ್ಞಾನಿ ಅರಿಸ್ಟಾಟಲ್ ಬಗ್ಗೆ ಎಲ್ಲರೂ ಕೇಳಿರಬಹುದು. ಆದರೆ ಚೇಂಕ್ರ ಮೇಸ್ತ್ರಿ ಬಗ್ಗೆ ಯಾರೂ ಕೇಳಿರುವುದಿಲ್ಲ ಅಲ್ಲವೆ? ಸಹ್ಯಾದ್ರಿಯ ಯಾವುದೋ ಒಂದು ಮೂಲೆಯಲ್ಲಿ ಮೌನವಾಗಿ ಬಾಳು ಸಾಗಿಸಿದ ಇವನ ಬಗ್ಗೆ ಕೇಳಬೇಕಾದ ಪ್ರಮೇಯವಾದರೂ ಏನಿದ್ದೀತು! ಅದಕ್ಕೇ ಅವನ ವಿಷಯ ಕೊಂಚ ಹೇಳಿದರೆ ಅವನಿಗೂ ಅರಿಸ್ಟಾಟಲ್‌ಗೂ ಏನು ಸಂಬಂಧ ಎಂದು ನಿಧಾನವಾಗಿ ಗೊತ್ತಾದೀತು.

ಭದ್ರಾನದಿ ಬಾಳೆಹೊನ್ನುರು ದಾಟಿದ ಮೇಲೆ ಲಕ್ಕವಳ್ಳಿ ಅಣೆಕಟ್ಟಿನ ಹಿನ್ನೀರಿನವರೆಗೂ ದಟ್ಟ ಕಾಡಿನ ನಡುವೆ ಹರಿದುಹೋಗುತ್ತದೆ. ಆಚೀಚೆಯ ದಟ್ಟಕಾಡಿನ ಗುಡ್ಡಗಳ ನಡುವೆ ನದಿ ಬೋರ್ಗರೆಯುತ್ತ ಹರಿಯುವ ಈ ಜಾಗಕ್ಕೆ ಯಾರೂ ಸಾಧಾರಣವಾಗಿ ಹೋಗುವುದಿಲ್ಲ; ಇಲ್ಲಿ ತುಂಬಾ ಆನೆ ಕಾಟ. ನಾವೇ ಕೆಲವಾರು ಸಾರಿ ಆನೆ ಕೈಲಿ ಸಿಕ್ಕಿಕೊಂಡು ಅಡ್ಡದಾರಿ ಹಿಡಿದು ಬಚಾವಾಗಿ ಬಂದಿದ್ದೇವೆ. ಈ ದಾರಿ ಹಿಡಿದು ನದಿಯ ಜಾಡಿನಲ್ಲೇ ಹೊರಟರೆ ಅಲ್ಲೊಂದು ಕಡೆ ಕುದುರೆ ಅಬ್ಬಿ ಅನ್ನುವ ಜಾಗ ಸಿಗುತ್ತೆ. ಇಲ್ಲಿ ಭದ್ರಾನದಿ ಬಂಡೆಗಳನ್ನು ಕೊರೆದುಕೊಂಡು ಸಣ್ಣ ಜಲಪಾತವಾಗಿ ಧುಮ್ಮಿಕ್ಕುತ್ತದೆ. ಇಲ್ಲಿ ನೀವು ಬಂಡೆಗಳ ನಡುವೆ ನದಿ ಹರಿಯುವುದನ್ನು ನೋಡುತ್ತಾ ತುಂಬ ಹೊತ್ತು ಕುಳಿತಿದ್ದರೆ, ಅಲ್ಲೊಬ್ಬ ಮುದುಕ ಕಲ್ಲಿನೊಡನೆ ಕಲ್ಲಾಗಿ ಅಲ್ಲಾಡದೆ ಗಾಳದ ಕೋಲು ಹಿಡಿದು ಕುಳಿತಿರುವುದು ಕಾಣುತ್ತದೆ. ಅವನ ಹೆಸರೇ ಚೇಂಕ್ರ ಮೇಸ್ತ್ರಿ. ಅವನ ಪಕ್ಕ ಒಂದು ಏಲಕ್ಕಿ ಕೊಯ್ಲಿಗೆ ಉಪಯೋಗಿಸುವ ಮುಚ್ಚಳದ ಬೆತ್ತದ ಬುಟ್ಟಿ ಇರುತ್ತದೆ. ಇದರಿಂದ ನೀವು ಅವನನ್ನು ಸುಲಭವಾಗಿ ಗುರುತಿಸಬಹುದು. ಏಕೆಂದರೆ ಬೇರೆ ಯಾರೂ ಆ ತರದ ಬುಟ್ಟಿ ಹಿಡಿದು ಅಲ್ಲಿಗೆ ಮೀನು ಹಿಡಿಯಲು ಬರುವುದಿಲ್ಲ.

ಅರಿಸ್ಟಾಟಲ್‌ಗೂ ಹಾವುಮೀನಿಗೂ ಇರುವ ಸಂಬಂಧ ತಿಳಿಯುವುದಕ್ಕೆ ಎಷ್ಟೋ ಮೊದಲೇ ಹಾವುಮೀನಿನ ವಿಚಿತ್ರ ಸಂಗತಿಗಳನ್ನು ನನಗೆ ಹೇಳಿದವನು ಈ ಮುದುಕ ಚೇಂಕ್ರ ಮೇಸ್ತ್ರಿ. ಅವನು ಅಲ್ಲಿಂದ ತುಂಬಾ ದೂರದಲ್ಲಿರುವ ಕರಡಿಕಾನು ತೋಟದಲ್ಲಿ ಹುಟ್ಟಿದವನು. ಅಲ್ಲೇ ಮೇಸ್ತ್ರಿ ಕೆಲಸ ಮಾಡುತ್ತಿದ್ದ ಈಗ ಚೇಂಕ್ರನ ಹೆಂಡತಿ ಮತ್ತು ಅಳಿಯ ಮಗಳು ಕೆಲಸಕ್ಕೆ ಹೋಗುತ್ತಾರೆ. ಚೇಂಕ್ರ ಕೆಲಸಕ್ಕೆ ಹೋಗುವುದಿಲ್ಲ. ನಾನು ಅವನಿಗೆ ವಯಸ್ಸಾಗಿರುವುದರಿಂದ ಕೆಲಸಕ್ಕೆ ಹೋಗುವುದಿಲ್ಲೆಂದು ತಿಳಿದೆ. ಚೇಂಕ್ರ ಮೇಸ್ತ್ರಿಗೆ ದಿನಾ ಹೊಳೆದಡಕ್ಕೆ ಬಂದು ಗಾಳ ಹಾಕಿಕೊಂಡು ಕೂರುವುದೊಂದೇ ಕೆಲಸ. ಮೀನು ಸಿಕ್ಕಿದರೂ ಸಂತೋಷ, ಸಿಗದಿದ್ದರೂ ಸಂತೋಷ. ಅವನೇನೂ ಮೀನು ಹಿಡಿದು ಹೆಂಡಿರು ಮಕ್ಕಳ ಹೊಟ್ಟೆ ಹೊರೆಯಬೇಕಾಗಿರಲಿಲ್ಲ. ಒಟ್ಟಿನಲ್ಲಿ ಬೆಳಗಿನಿಂದ ಸಂಜೆವರೆಗೆ ಹೊಳೆ ದಡದಲ್ಲಿ ಕುಳಿತುಕೊಳ್ಳಲು ಗಾಳ ಹಾಕುವುದು ಅವನಿಗೊಂದು ಕಾರಣ ಅಷ್ಟೆ.

ಚೇಂಕ್ರ ಯಾರ ಜೊತೆಯೂ ಮಾತಾಡದ ಮೌನಿ. ಅವನ ವರ್ತನೆ ನೋಡಿದರೆ ಅವನೊಬ್ಬ ಝೆನ್‌ಬುದ್ಧಿಸ್ಟ್‌ಇರಬಹುದೆನ್ನಿಸುತ್ತದೆ. ಇಲ್ಲದಿದ್ದರೆ ಯಾರೊಡನೆಯೂ ಮಾತಾಡದೆ ಕಾಲ ಪ್ರವಾಹದಂತೆ ಹರಿಯುವ ನದಿಯನ್ನೆ ನಿಟ್ಟಿಸುತ್ತಾ ಯಾಕೆ ಅವನು ಕುಳಿತುಕೊಳ್ಳಬೇಕು. ಯಾರೂ ಏನು ಮಾತಾಡಿಸಿದರೂ ಸಣ್ಣಗೆ ನಸುನಕ್ಕು ತಲೆಯಾಡಿಸಿ ಬಿಡುತ್ತಾನೆ. ಬಹಳ ಜನ ಅವನಿಗೆ ಮತು

ಬರುವುದಿಲ್ಲ, ಮೂಗ ಎಂದೇ ತಿಳಿದಿದ್ದಾರೆ. ಆದರೆ ನಾವೂ ಅವನಂತೆಯೆ ಗಾಳ ಹಾಕಿಕೊಂಡು ಕೂರುತ್ತಿದ್ದುದರಿಂದ ನಮ್ಮನ್ನು ಸಹೋದ್ಯೋಗಿಗಳೆಂದು ತಿಳಿದೋ ಏನೋ ನಮ್ಮ ಜೊತೆ ಮಾತ್ರ ಮಾಡುತ್ತಿದ್ದ.

ಅವನು ಕುಳಿತುಕೊಳ್ಳುತ್ತಿದ್ದ ಜಾಗಕ್ಕಿಂತ ಕೊಂಚ ಮೇಲೆ ಕುದುರೆ ಅಬ್ಬಿಯ ಪುಟ್ಟ ಜಲಪಾತ ಇತ್ತು. ಜಲಪಾತದ ಬಳಿ ಲೆಕ್ಕವಿಲ್ಲದಷ್ಟು ಮೀನುಗಳು ಮೇಲಕ್ಕೆ ಹೋಗಲು ನೆಗೆನೆಗೆದು ನೀರಿನ ಧಾರೆಗೆ ಸಿಕ್ಕೊಡನೆ ಹಿಂದಕ್ಕೆ ಮಡುವಿಗೆ ಬೀಳುತ್ತಿದ್ದವು. ಹೀಗೆ ಕೆಳಗಿನಿಂದ ಮೇಲಕ್ಕೆ ಹತ್ತಿಬಂದ ಮೀನುಗಳಿಗೆಲ್ಲ ಮುಂದೆ ಹೋಗಲು ಜಲಪಾತ ಅಡ್ಡಿಯಾಗಿ ಜಲಪಾತದ ಕೆಳಗಿನ ಆಳವಾದ ಮಡುವಿನಲ್ಲಿ ಗುಂಪಾಗಿ ಸೇರಿಕೊಂಡಿದ್ದವು. ಆದರೆ ನಾವು ಎಷ್ಟು ದಿನ ಆ ಮಡುವಿನಲ್ಲಿ ಮೀನು ಹಿಡಿಯಬೇಕೆಂದು ಪ್ರಯತ್ನಿಸಿದರೂ ಒಂದು ಮೀನೂ ನಮ್ಮ ಗಾಳಗಳಿಗೆ ಸಿಕ್ಕಲಿಲ್ಲ. ಹಾಗಾದರೆ ಗಾಳಕ್ಕೆ ಏನು ತಿಂಡಿ ಸಿಕ್ಕಿಸಿದರೆ ಈ ಮೀನುಗಳು ಬಾಯಿಹಾಕಿ ಸಿಕ್ಕಿಕೊಳ್ಳುತ್ತವೆ? ತಿಳಿಯೋಣ ಎಂದು ಈ ಮುದುಕನ ಬಳಿಗೆ ಹೋದೆವು. ಯಾರೊಡನೆಯೂ ಮಾತಾಡದ ಈ ವಿಚಿತ್ರ ಒಂಟಿಗೇಡಿ ಮುದುಕನನ್ನು ಆವರೆಗೂ ನಾವು ಮಾತಾಡಿಸಲು ಹೋಗಿರಲಿಲ್ಲ.

ಜಲಪಾತದ ಬಳಿ ಹಾರುವ ಆ ಮೀನುಗಳು ಯಾವತ್ತೂ ಯಾವ ಗಾಳಕ್ಕೂ ಸಿಕ್ಕುವುದೇ ಇಲ್ಲ. ಆದ್ದರಿಂದಲೇ ತಾನೆಂದೂ ಆ ಜಾಗಕ್ಕೆ ಗಾಳ ಹಾಕಲು ಹೋಗುವುದಿಲ್ಲೆಂದು ಚೇಂಕ್ರ ಮೇಸ್ತ್ರಿ ಹೇಳಿದ. ಅನೇಕ ದಿನಗಳಿಂದ ನಾವು ಅಲ್ಲಿ ಸತತ ಪ್ರಯತ್ನ ಪಡುತ್ತಿದ್ದುದನ್ನು ನೋಡಿಯೂ ಈ ಮುದುಕ ನಮಗೆ ಒಂದು ಮಾತು ಹೇಳದೆ ತಮಾಷೆ ನೋಡಿಕೊಂಡು ಸುಮ್ಮನೆ ಕುಳಿತಿದ್ದಾನಲ್ಲ ಎನ್ನಿಸಿತು. "ಹಾಗಾದರೆ ಆ ಮೀನುಗಳು ಏನನ್ನು ತಿನ್ನುತ್ತವೆ" ಎಂದು ಕೇಳಿದೆ.

"ಏನು ತಿನ್ನುತ್ತವೋ! ಆ ಭಗವಂತನನ್ನೇ ಕೇಳಬೇಕು. ನಾನಂತೂ ಈ ಪರ್ಪಂಚದ ಮೇಲೆ ಇರೋದನ್ನೆಲ್ಲಾ ತಂದು ಗಾಳಕ್ಕೆ ಹಾಕಿ ನೋಡಿದೆ. ಅವು ಬಾಯೇ ಬಿಡೋದಿಲ್ಲ. ತಿಳ್ಳೇಕ್ಯಾತರ ಬಲೆಗೆ ಮಾತ್ರ ಅವು ಬೀಳುತ್ತವೆ. ಅವರ ಹತ್ರ ಒಂದು ಮೀನು ತಗೊಂಡು ಹೊಟ್ಟೆ ಕೊಯ್ದು ಸಮೇತ ನೋಡಿದೆ. ಹೊಟ್ಟೆ ಒಳಗೆ ಎಂಥದೂ ಇರಲಿಲ್ಲ. ಬರೇ ಎಂಥದೋ ಹಳದಿ ಲೋಳಿ ಇತ್ತು" ಎಂದು ಹೇಳಿದ ಚೇಂಕ್ರ ಮೇಸ್ತ್ರಿ ಮಾತು ಕೇಳಿದರೆ ಅವನು ಆ ಮೀನುಗಳ ಬಗ್ಗೆ ಕೊಂಚ ಸಂಶೋಧನೆಯನ್ನೂ ನಡೆಸಿದ್ದಂತೆ ಕಂಡಿತು.

ಚೇಂಕ್ರ ಮೇಸ್ತ್ರಿ ಅಭಿಪ್ರಾಯಗಳು ಸರಿಯಾದುವೆಂದು ನನಗನ್ನಿಸಿತು. ಕೆಲವು ಮೀನುಗಳು ನೀರಿನ ಸೂಕ್ಷ್ಮ ಜೀವಿಗಳನ್ನೂ ಸಸ್ಯಗಳನ್ನೂ ಮಾತ್ರ ತಿನ್ನುತ್ತವೆ. ಅಂಥ ಜಾತಿ ಮೀನುಗಳಿಗೆ ಗಾಳಕ್ಕೆ ಯಾವ ತಿಂಡಿ ಹಾಕುವುದೂ ವ್ಯರ್ಥವೆ. ಈ ಮೀನುಗಳೂ ಅಂಥವೇ ಇರಬೇಕೆಂದು ಅಲ್ಲಿ ಮೀನು ಹಿಡಿಯುವ ವ್ಯರ್ಥ ಸಾಹಸವನ್ನು ನಾವು ಕೈಬಿಟ್ಟೆವು. ಚೇಂಕ್ರ ಮೇಸ್ತ್ರಿ ನಮಗೆ ಪರಿಚಯವಾಗಿದ್ದು ಹೀಗೆ. ನಾವು ಯಾವಾಗ ಮೀನು ಹಿಡಿಯಲು ಅಲ್ಲಿಗೆ ಹೋದರೂ ಈ ಕಂಟ್ರಿ ಅರಿಸ್ಟಾಟಲ್‌ಅಲ್ಲಿ ಕುಳಿತಿರುತ್ತಾನೆ. ಏನಾದರೂ ಶಿಕಾರಿ ಆಯ್ತ ಎಂದು ನಮ್ಮನ್ನೊಮ್ಮೆ ಕೇಳಿಯೇ ಕೇಳುತ್ತಾನೆ.

ಒಮ್ಮೆ ಚೇಂಕ್ರ ಮೇಸ್ತ್ರಿ ಹತ್ತಿರ ಮಾತಾಡುತ್ತಿರಬೇಕಾದರೆ ಅವನ ಬುಟ್ಟಿ ಡಬಡಬ ಸದ್ದುಮಾಡಿ ದೆವ್ವದ ಬುಟ್ಟಿ ತರ ಕುಣಿಯಿತು. ನಾನು ನೋಡುವಷ್ಟರಲ್ಲಿ ಬುಟ್ಟಿ ಮುಚ್ಚಳ ಅರ್ಧ ತೆರೆದುಕೊಂಡು ಅದರೊಳಗಿಂದ ಹಾವಿನಂತೆ ಉದ್ದಕ್ಕಿದ್ದ ಮೀನೊಂದು ಚಿಮ್ಮಿ ಹೊರನೆಗೆದು ಹಾವಿನ ಮಾದರಿಯಲ್ಲೇ ತೆವಳುತ್ತಾ ಅಂಕುಡೊಂಕಾಗಿ ನದಿ ಕಡೆಗೆ ಹರಿಯಿತು. ನಾನು ಮೀನು ನೀರಿಗೆ ಹಾರಿ ಪರಾರಿಯಾಗುತ್ತಲ್ಲಾ ಎಂದು ಅದರ ಕಡೆಗೆ ಓಡಿದೆ. ನೀರಿಗೂ ಮೀನಿಗೂ ಎರಡೇ ಮಾರು ಅಂತರ. ಗಡಿಬಿಡಿಯಲ್ಲಿ ಮೇಸ್ತ್ರಿ ತಡೆಯಿರಿ ಎಂದು ಹೇಳಿದ್ದು ಕೇಳಲಿಲ್ಲ. ಹೋಗಿ ಮೀನಿನ ತಲೆ ಹಿಡಿದುಕೊಂಡೊಡನೆ ಅದು ಹಾವಿನ ಮಾದರಿಯಲ್ಲೇ ಕೈಗೆ ಸುತ್ತಿಕೊಂಡು ನುಲಿಯತೊಡಗಿತು. ಆಮೇಲೆ ಅದೇನು ಮಾಡಿತೋ ನನಗೆ ಗೊತ್ತಾಗಲಿಲ್ಲ. ಇದ್ದಕ್ಕಿದ್ದಂತೆ ಗರಗಸದಲ್ಲಿ ಕೈ ಕುಯ್ದಹಾಗೆ ಯಾತನೆಯಾಯ್ತು. ಉರಿ ತಾಳಲಾರದೆ ಕೈಗೆ ಸುತ್ತಿಕೊಂಡಿದ್ದ ಮೀನನ್ನು ಕೊಡವಿದೆ. ಮೇಸ್ತ್ರಿ ಕೋಲು ತಗೊಂಡು ಹಾವು ಮೀನಿಗೆ ಹೊಡೆಯಲು ಓಡಿಬಂದ. ಅಷ್ಟರೊಳಗೆ ಮೀನು ನೀರೊಳಗೆ ನುಸುಳಿ ಮಂಗಮಾಯವಾಯ್ತು.

"ಹಾವುಮೀನು ಯಾರಾದರೂ ಕೈಯ್ಯಾಗ ಮುಟ್ತಾರ? ಅದರ ಬೆನ್ನ ಮೇಲೆ ಮುಳ್ಳಿನ ಗರಗಸ ಇರ್ತದೆ. ಕೈಗೆ ಸುತ್ತಾಕಿ ಮೂಳೆವರೆಗೂ ಕುಯ್ದುಬಿಡುತ್ತೆ" ಎಂದು ಹೇಳಿದ. ನನಗೆ ಅವನ ವಿವರಣೆಯ ಅಗತ್ಯವೇನೂ ಇರಲಿಲ್ಲ. ಉರಿಯುತ್ತಿದ್ದ ಕೈಯ್ಯೇ ಹೇಳುತ್ತಿತ್ತು. ಹಾವುಮೀನು ಓಡಿಹೋದ ನಂತರ ಹಾವುಮೀನಿನ ಮಾಂಸದ ಸಾರನ್ನು ಚೇಂಕ್ರ ಗುಣಗಾನ ಮಾಡಿದ. ಅನಂತರ ಇದ್ದಕ್ಕಿದ್ದ ಹಾಗೆ ಗಂಭೀರವಾಗಿ -

"ನೋಡಿ ನೀವೂ ಗಾಳ ಹಾಕ್ತಿರ್ತೀರ. ಒಂದಲ್ಲ ಒಂದು ದಿನ ನಿಮ್ಮ ಗಾಳಕ್ಕೂ ಅಂಥ ಮೀನು ಸಿಕ್ಕಬಹುದು ಅಂತ ನಿಮಗೆ ಒಂದು ಮೀನಿನ ವಿಚಾರ ಹೇಳಿರ್ತೀನಿ. ಯಾಕೆಂದ್ರ ಅದ್ರ ದೆಸಿಂದ ನಾನು ನನ್ನ ಮಗನ್ನೇ ಕಳಕೊಂಡೆ" ಎಂದು ಒಂದು ವಿಚಿತ್ರ ಹಾವುಮೀನಿನ ದೆಸೆಯಿಂದ ಅವನ ಜೀವನದಲ್ಲಾದ ಒಂದು ಹೃದಯವಿದ್ರಾವಕ ಘಟನೆ ಹೇಳಿದ.

ಭದ್ರಾ ನದಿಯಲ್ಲಿ ಒಂದು ಜಾತಿ ಹಾವುಮೀನು ಹದಿನೈದು ಅಡಿ ಉದ್ದ ಬೆಳೆಯುತ್ತಿದ್ದಂತೆ. ಮೈಮೇಲೆಲ್ಲ ಹಳದಿ ಪಟ್ಟೆಗಳಿರುವ ಅದು ನೋಡಲು ಹೆಬ್ಬಾವಿಗಿಂತ ಭಯಂಕರ. ಈ ಮೀನು ಒಮ್ಮೊಮ್ಮೆ ರಾತ್ರಿವೇಳೆ ನೀರಿನಿಂದ ಹೊರಬಂದು ನದಿ ಸಮೀಪದ ಮನೆಗಳಿಗೆ ನುಗ್ಗಿ ಅವರು ಸಾಕಿದ ಕೋಳಿಗಳನ್ನು ತಿಂದುಬಿಡುತ್ತದಂತೆ. ಅದಕ್ಕಾಗಿ ನದಿಯ ಬಳಿ ಮನೆಗಳಿರುವವರು ಕೋಳಿ ಒಡ್ಡಿ ಸುತ್ತ ಬೂದಿ ಚೆಲ್ಲಿರುತ್ತಾರಂತೆ. ಮೀನು ಕೋಳಿ ಕದಿಯಲು ಬಂದಾಗ ಅದರ ಮೈಮೇಲಿನ ಲೋಳೆಗೆ ಬೂದಿ ಅಂಟಿಕೊಂಡರೆ ಮೀನು ಚಲಿಸಲಾರದೆ ಸಿಕ್ಕಿಬೀಳುತ್ತದೆ. ಈ ಮೀನಿನ ಮಾಂಸವಂತೂ ಜಗತ್ತಿನಲ್ಲೇ ಸರ್ವಶ್ರೇಷ್ಠ ಆಹಾರವೆಂದೂ, ಅದನ್ನು ತಿಂದರೆ ಮೂಲವ್ಯಾಧಿಯಿಂದ ಹಿಡಿದು ಚರ್ಮರೋಗಗಳವರೆಗೆ ಸಕಲವೂ ಪರಿಹಾರವಾಗುತ್ತದೆಂದೂ ಹೇಳಿದ.

ಈ ಮೀನು ಚೇಂಕ್ರನ ಮಗನನ್ನು ಕೊಂದಿದ್ದಾದರೂ ಹೇಗೆಂದು ಕೇಳಬೇಕೆಂದಿದ್ದ ನನಗೆ ಅವನ ಅಡ್ಡ ಮಾತುಗಳಿಂದ ಅಸಹನೆಯಾಯ್ತು.
"ನಿನ್ನ ಮಗನನ್ನು ಕೊಲೋದಕ್ಕೆ ಅದೇನು ನಿನ್ನ ಮನೆವರೆಗೆ ಬಂದಿತ್ತೇನಯ್ಯಾ?" ಎಂದೆ.
"ಛೇ ಛೆ, ನಮ್ಮನೆ ಇಪ್ರೀತ ದೂರ. ಹಾವುಮೀನಿಗೆ ಅಲ್ಲೀತನಕ ಬರಕ್ಕಾಗಲ್ಲ ಬಿಡಿ" ಎಂದು ಮತ್ತೆ ತನ್ನ ಕತೆ ಮುಂದುವರಿಸಿದ.

ಭದ್ರಾ ನದಿಯ ಈ ಭಾಗದಲ್ಲಿ ಮೀನು ಹಿಡಿಯಲು ಕಟ್ಟುಗಾಳ ಕಟ್ಟುವ ವಾಡಿಕೆ ಇದೆ. ಈ ರೀತಿಯ ಕಟ್ಟುಗಾಳ ಬೇರೆ ಯಾವ ನದಿಯಲ್ಲೂ ಯಾರೂ ಕಟ್ಟಿದ್ದು ನೋಡಲಿಲ್ಲ. ಇಲ್ಲಿ ಏಕಾಂಗಿಗಳಾಗಿ ಕುಳಿತು ಗಾಳದಲ್ಲಿ ಮೀನು ಹಿಡಿಯಲು ಕಾಡುಮೃಗಗಳಿಗೆ ಹೆದರಿಯೋ ಅಥವಾ ಆನೆ ಕಾಟ ಎಂದೋ ಗಾಳಗಳಿಗೆ ಜೀವಂತರವಿರುವ ಚಿಕ್ಕ ಚಿಕ್ಕ ಮೀನುಗಳನ್ನು ಸಿಕ್ಕಿಸಿ ಸಂಜೆ ಕಟ್ಟಿ ಹೋಗಿಬಿಡುತ್ತಾರೆ. ಮೀನುಗಾರರು ಗಾಳದ ದಾರವನ್ನು ನದಿ ಪಕ್ಕ ಬೆಳೆದಿರುವ ಬಿದಿರನ್ನು ಬಿಲ್ಲಿನಂತೆ ಬಗ್ಗಿಸಿ ಅದರ ತುದಿಗೆ ಕಟ್ಟುತ್ತಾರೆ. ಅನಂತರ ಬಿದಿರು ಮತ್ತೆ ಚಿಮ್ಮದ ಹಾಗೆ ಕವೆಕಟ್ಟಿ ಅದನ್ನು ಸಿಡಿಕಡ್ಡಿ ಮಾದರಿಯಲ್ಲಿ ನಿಲ್ಲಿಸುರತ್ತಾರೆ. ದಡದ ನೀರಿನಲ್ಲಿರುವ ಗಾಳಕ್ಕೆ ಚುಚ್ಚಿದ ಮೀನಿಗೆ ಬಾಯಿಹಾಕಿ ದೊಡ್ಡ ಮೀನುಗಳು ದಾರ ಜಗ್ಗಿದ ಕೂಡಲೆ ಸಿಡಿ ಹಾರಿ ಬಿದಿರು ಸಟ್ಟನೆ ನೆಟ್ಟಗಾಗುತ್ತದೆ. ಗಾಳಕ್ಕೆ ಸಿಕ್ಕ ಮೀನೂ ಅದರೊಡನೆ ಆಕಾಶದಲ್ಲಿ ನೇತಾಡುತ್ತಿರುತ್ತದೆ. ಬೆಳಿಗ್ಗೆ ಬಂದ ಮೀನುಗಾರರು ಮತ್ತೆ ಬಿದಿರನ್ನು ಬಗ್ಗಿಸಿ ಮೀನು ಬಿಡಿಸಿಕೊಳ್ಳುತ್ತಾರೆ. ಚೇಂಕ್ರನ ಮಗನೂ ಇದೇ ರೀತಿ ಕಟ್ಟುಗಾಳ ಕಟ್ಟಿ ಅನೇಕ ಭಾರಿ ಭಾರಿ ಮೀನುಗಳನ್ನು ಹಿಡಿದಿದ್ದನಂತೆ. ಆದರೆ ಒಮ್ಮೆ ಕಟ್ಟು ಗಾಳಕ್ಕೆ ಬಿದ್ದ ಮೀನನ್ನು ನೋಡಲು ಬಂದಾಗ ಅವನು ಕಟ್ಟಿದ ಬಲವಾದ ಬಿದಿರೇ ಮುರಿದು ನೀರಿನಲ್ಲಿ ಬಿದ್ದಿತ್ತು. ತಾನು ಬಿದಿರನ್ನು ಬಗ್ಗಿಸಿದ್ದು ಅತಿಯಾದ್ದರಿಂದ ಬಿದಿರು ಮುರಿದು ನೀರಿಗೆ ಬಿದ್ದಿದೆ ಎಂದು ತಿಳಿದನೇ ಹೊರತು ಅದು ಮೀನಿನ ಕೆಲಸ ಇರಬಹುದೆಂದು ಶಂಕಿಸಲೂ ಇಲ್ಲ.

ಗಾಳ ಬಿಚ್ಚಕೊಳ್ಳಲು ಮೊಳಕಾಲದ್ದ ನೀರಿಗೆ ಇಳಿದು ಬಿದುರಿಗೆ ಕಟ್ಟಿದ್ದ ಗಾಳದ ದಾರಬಿಚ್ಚಿ ಎಳೆದಾಗ ತೂಕ ಇದ್ದ ಹಾಗೆ ಕಂಡರೂ ಮೀನಿನ ತಲೆ ಸಾಧಾರಣ ಗಾತ್ರಕ್ಕೆ ಇದ್ದುದರಿಂದ ಮೀನು ತಪ್ಪಿಸಿಕೊಳ್ಳದ ಹಾಗೆ ಚುರುಕಾಗಿ ತಲೆ ಹಿಡಿದುಬಿಟ್ಟ. ದೊಡ್ಡ ಹೆಬ್ಬಾವಿನಂತಿದ್ದ ಪಟ್ಟೆ ಪಟ್ಟೆಯ ಹದಿನೈದು ಅಡಿ ಉದ್ದದ ಹಾವುಮೀನಿನ ತಲೆಯೇ ಅದಾಗಿತ್ತು. ಚೇಂಕ್ರನ ಮಗ ಅದರ ತಲೆ

ಗಟ್ಟಿಯಾಗಿ ಹಿಡಿದೊಡನೆ ದಢಾರನೆ ಆಸ್ಫೋಟನೆಯಾದಂತಾಗಿ ನದಿಯೆಲ್ಲಾ ತಳಮಳಿಸಿ ಹೋಯ್ತು. ತಲೆ ಹಿಡಿದಿದ್ದ ಚೆಂಕ್ರನ ಮಗನ ಮೈಗೆಲ್ಲ ಹಾವುಮೀನು ಗಿರಿಗಿರಿ ಸುತ್ತಿಕೊಳ್ಳತೊಡಗಿತು.

"ಅದಕ್ಕೂ ಗರಗಸ ಇರುತ್ತದೇನಯ್ಯಾ ಬೆನ್ನ ಮೇಲೆ?: ಎಂದು ಕೇಳಿದೆ.

"ಎಂಥದೂ ಇಲ್ಲ. ಬಾಲದ ಹತ್ತಿರ ಅಂಗೈ ಅಗಲದ ರೆಕ್ಕೆ ಬಿಟ್ಟರೆ ಮಿಕ್ಕಿದ್ದೆಲ್ಲಾ ಅದು ಹೆಬ್ಬಾವಿನ ಹಾಗೇ. ಬೆನ್ನಮೇಲೆ ಗರಗಸ ಇರಲಿ, ಇದಕ್ಕೆ ಅಕ್ಕಪಕ್ಕ ರೆಕ್ಕೆಗಳೂ ಸೈತ ಇಲ್ಲ."

"ಹಂಗಾದರೆ ನಿನ್ನ ಮಗನಿಗೆ ಏನೂ ಅಪಾಯ ಮಾಡಲಿಲ್ಲ?"

"ಏನು ಮಾಡಲಿಲ್ಲ. ಅದು ಇವನ ಮಂಡೆ ಬಿಟ್ಟ ಕೂಡಲೆ ಸುರಳಿ ಬಿಚ್ಚಿಕೊಂಡು ಬದುಕಿದೆಯಾ ಎಂದು ಬಿದುರನ್ನೂ ಎಳೆದುಕೊಂಡು ಓಡೇಹೋಯ್ತು".

"ಮತ್ತೆ ನಿಮ್ಮಗ ಯಾಕೆ ಸತ್ತ ಮಹರಾಯ?"

ಚೇಂಕ್ರ ಮೇಸ್ತ್ರಿ ಮತ್ತೆ ಕತೆ ಮುಂದುವರಿಸಿದ. ಮೇಸ್ತ್ರಿ ಮಗನಿಗೆ ಮೀನಿನ ತಲೆ ಹಿಡಿದಿದ್ದೊಂದೇ ಗೊತ್ತು. ಮರುಕ್ಷಣ ಜಲ ಪ್ರಳಯ ಆದಂತೆ ನದಿಯೆಲ್ಲ ನೊರೆ ಎದ್ದು ಮೈಯನ್ನೆಲ್ಲಾ ಹಳದಿ ಪಟ್ಟೆಗಳು ಸುತ್ತಿ ಬಂದವು. ಹಾವುಮೀನು ಸುರುಳಿ ಬಿಚ್ಚಿ ಓಡಿಹೋದ ಕೂಡಲೇ ದಿಗ್ಭ್ರಾಂತನಾದ ಮೇಸ್ತ್ರಿ ಮಗ ನೇರ ಮನೆಗೆ ಓಡಿಬಂದ. ಮೈಗೆಲ್ಲಾ ಮೀನ ಲೋಳ ಮೆತ್ತಿಕೊಂಡಿದ್ದ ಅವನನ್ನು ನೋಡಿಯೇ ಮೇಸ್ತ್ರಿಗೆ ಏನು ನಡೆದರಬಹುದೆಂದು ತಿಳಿಯಿತು.

ಅವನು ಸ್ನಾನ ಮಾಡಿ ಮುಗಿಸುವುದರೊಳಗೇ ಮೈ ಬಿಸಿ ಏರಿ ಚಳಿಜ್ವರ ಹಿಡಿಯಿತು. ಹಠಾತ್ತಾಗಿ ಸಂಭವಿಸಿದ ಆಕಸ್ಮಿಕದಿಂದ ಅವನಿಗೆ ಬಲವಾದ ಮಾನಸಿಕ ಆಘಾತ ಉಂಟಾಗಿತ್ತು. ಜ್ವರದಲ್ಲಿ ಮೀನು ಸುತ್ತಿಕೊಂಡಿದ್ದನ್ನು ಹೇಳಿ ಚೀರಿ ಕನವರಿಸುತ್ತಿದ್ದ. ಎಷ್ಟು ಔಷಧ ಮಾಡಿ ಯಾವ್ಯಾವ ದೇವರಿಗೆ ಹೇಳಿಕೊಂಡರೂ ಜ್ವರ ಇಳಿಯದೆ ಅವನು ಸತ್ತೇ ಹೋದ.

"ನೋಡಿ ಇಂಥಾ ಇಳಿವಯಸ್ನಲ್ಲಿ ಕೈಗೆ ಬಂದ ಮಗ ಹೊರಟುಹೋದರೆ ನಾನು ಯಾತಕ್ಕಾಗಿ ದುಡಿಯಲಿ! ಯಾರಿಗಂತ ಸಂಪಾದನೆ ಮಾಡಲಿ ಹೇಳಿ? ಅವನು ಸತ್ತ ಮೇಲೆ ಅವತ್ತೇ ಕೊನೆ ನಾನು ಕೆಲಸಕ್ಕೆ ಹೋಗಿದ್ದು" ಎಂದು ಚೇಂಕ್ರ ಮೇಸ್ತ್ರಿ ಹೇಳಿ ಮತ್ತೆ ಗಂಭೀರವಾಗಿ ಗಾಳ ಹಿಡಿದುಕೊಂಡು ಹೊಳೆ ದಿಟ್ಟಿಸುತ್ತಾ ಕುಳಿತ.

ಒಂದು ಹಾವುಮೀನು ಒಬ್ಬರ ಸಾವಿಗೆ ಕಾರಣವಾಯ್ತೆಂದು ನಾನು ಕೇಳಿದ್ದು ಅದೇ ಮೊದಲು. ಯಾರ ಯಾರ ಸಾವು ಯಾವ್ಯಾವುದರಲ್ಲಿರುತ್ತೆ ಎಂದು ಆಶ್ಚರ್ಯ ಆಗುತ್ತೆ! ಚೇಂಕ್ರ ಮೇಸ್ತ್ರಿ ಹೇಳಿದ ಹಾಗೆ ಹದಿನೈದು ಅಡಿ ಉದ್ದದ ಹಾವು ಮೀನು ಇರುವುದು ಹೌದ ಎಂದು ತುಂಬಾ ಜನದ ಹತ್ತಿರ ನಾನು ವಿಚಾರಿಸಿದೆ. ಎಲ್ಲಾ ಹೌದಂತೆ! ಆ ಸಂತೆಗೆ ಬಂದಿತ್ತಂತೆ! ಈ ಊರ್ನಲ್ಲಿ ಹಿಡಿದಿದ್ರಂತೆ! ಎಂದು ಹೇಳುವವರೇ ಹೊರತು ಕಣ್ಣಾರೆ ಕಂಡೆವು ಅಂದವರು ಇಲ್ಲ.

ಒಮ್ಮೆ ಕುವೆಂಪುರವರ "ನೆನಪಿನ ದೋಣಿ" ಗ್ರಂಥ ಓದುತ್ತ ಅವರ ಚಿಕ್ಕವರಿದ್ದಾಗ ಭಾರಿ ದೊಡ್ಡ ಹಾವುಮೀನು ಹಿಡಿದ ಘಟನೆ ಓದಿದೆ. ಕುತೂಹಲದಿಂದ ಅವರ ಬಳಿ ಹೆಬ್ಬಾವಿನಂಥ ಹಾವುಮೀನಿನ ಬಗ್ಗೆ ಏನಾದರೂ ಗೊತ್ತ ಎಂದು ಕೇಳಿದೆ. "ನಾನು ಚಿಕ್ಕವರಿದ್ದಾಗ ಕೇಳಿದ್ದೆವು ಅಷ್ಟೆ. ಅದು ನದಿಗಳ ಹತ್ತಿರದ ಮನೆಗಳಿಗೆ ರಾತ್ರಿ ಬಂದು ಕೋಳಿ ಹಿಡಿಯುತ್ತದಂತೆ! ಒಡ್ಡಿಸುತ್ತ ಬೂದಿ ಹಾಕಿದರೆ ಅದು ಸಿಕ್ಕಿಬೀಳುತ್ತದೆ ಅನ್ನುತ್ತಿದ್ದರು" ಎಂದು ಹೇಳಿದರು. ಚೇಂಕ್ರ ಹೇಳಿದ ವೃತ್ತಾಂತವನ್ನೇ ತದ್ವತ್ತಾಗಿ ತಂದೆಯವರೂ ಹೇಳಿದ್ದರು. ಹಾಗಾದರೆ ಇಷ್ಟು ವರ್ಷಗಳವರೆಗೂ ಇಷ್ಟೊಂದು ವ್ಯಾಪಕವಾಗಿ ಪ್ರಚಾರದಲ್ಲಿರುವ ವದಂತಿ ಕೇವಲ ಕಟ್ಟುಕತೆಯೆ? ಕುದುರೆಮುಖದಿಂದ ಬಿಡುತ್ತಿರುವ ಕಶ್ಮಲಗಳಿಗೆ ಸಿಕ್ಕಿ ಆ ಮೀನು ನಿರ್ವಂಶ ಆಗದಿದ್ದರೆ ಚೇಂಕ್ರ ಮೇಸ್ತ್ರಿ ಹೇಳಿದ ಹಾಗೆ ಒಂದಲ್ಲ ಒಂದು ದಿನ ನಮಗೆ ಅದು ಸಿಕ್ಕೀತೇನೋ.

**ಲೇಖಕರು**

ಕೆ ಪಿ ಪೂರ್ಣಚಂದ್ರ ತೇಜಸ್ವಿ (೧೯೩೮) ಅವರು ಕನ್ನಡದ ಕತೆಗಾರರೂ ಕಾದಂಬರಿಕಾರರೂ ಆಗಿ ಜನಮನ್ನಣೆ ಪಡೆದಿರುವರು. ಭಾರತದಲ್ಲಿದ್ದಾಗ ಬೇಟೆ ಅನುಭವಗಳನ್ನು ಬರೆದು ಖ್ಯಾತನಾದ ಇಂಗ್ಲಿಷ್‌ಲೇಖಕ ಕೆನ್ನಿತ್‌ಅಂಡರ್‌ಸನ್ನನ ಕೃತಿಗಳನ್ನು ಅವರು

ಅನುವಾದಿಸಿದ್ದಾರೆ. ಅಂಡಮಾನ್‌ಮೇಲೆ ಪ್ರವಾಸ ಕಥನ ಬರೆದಿದ್ದಾರೆ. ಅಬಚೂರಿನ ಪೋಸ್ಟಾಫೀಸು ಅವರ ಮುಖ್ಯ ಕಥಾಸಂಕಲನ. 'ನಿಗೂಢಮನುಷ್ಯರು', 'ಕಿರಗೂರಿನ ಗಯ್ಯಾಳಿಗಳು' ಅವರ ಕಿರುಕಾದಂಬರಿಗಳು. 'ಕರ್ವಾಲೋ', ಚಿದಂಬರ ರಹಸ್ಯ', 'ಜುಗಾರಿಕ್ರಾಸ್' ಅವರ ಕಾದಂಬರಿಗಳು. ತೇಜಸ್ವಿಯವರು ಹದಿಯರೆಯದ ಓದುಗ ವಲಯದಲ್ಲಿ ಬಹಳ ಜನಪ್ರಿಯರಾಗಿದ್ದು ತಮ್ಮ ಪರಿಸರ ಬರೆಹಗಳಿಂದ. 'ಪರಿಸರದ ಕತೆ', 'ಕಾಡಿನ ಕತೆಗಳು', 'ಕನ್ನಡನಾಡಿನ ಹಕ್ಕಿಗಳು', 'ಫ್ಲೈಯಿಂಗ್‌ಸಾಸರ್ಸ್', ಮುಂತಾಗಿ ಅವರು ಕಳೆದ ಹದಿನೈದು ವರುಷಗಳಿಂದ ಬರೆಯುತ್ತಿರುವ ಪರಿಸರ ಕುರಿತ ಬರೆಹಗಳು ಹದಿಹರೆಯದ ಓದುಗರನ್ನು ಸೆಳೆದಿವೆ. ನಿಸರ್ಗದ ನಿಗೂಢಗಳ ಹುಡುಕಾಟ, ಪ್ರಕೃತಿಯ ಬಗ್ಗೆ ವಿಸ್ಮಯ, ಅವರ ಬರೆಹಗಳ ವಿಶಿಷ್ಟತೆ, ಮಾನವೀಯತೆ, ವಿಚಾರವಂತಿಕೆ, ವೈಜ್ಞಾನಿಕ ಚಿಂತನೆಗಳನ್ನುಳ್ಳ ಹೊಸತಲೆಮಾರನ್ನು ರೂಪಿಸಬೇಕು ಎಂಬುದು ಅವರ ಬರೆಹದ ಒಳ ತುಡಿತವಾಗಿದೆ.

**ಆಶಯ**

ಯಕಶ್ಚಿತ್ ಆಗಿ ಕಾಣುವ ವ್ಯಕ್ತಿಗಳಲ್ಲೂ ಅಸಾಧಾರಣವಾದ ಅನುಭವ 'ಪ್ರತಿಭೆ' ತಿಳಿವಳಿಕೆ ಇರುತ್ತದೆ. ಅದನ್ನು ಅವರು ಸಂದರ್ಭ ಬಂದಾಗ ಮಾತ್ರ ಹೊರಹಾಕುತ್ತಾರೆ. ಸಾಮಾನ್ಯ ಜನ ಒಳಗೆ ಅಪಾರ ನೋವು ತುಂಬಿಕೊಂಡಿರುತ್ತಾರೆ. ಅದನ್ನು ಮೀರುವುದಕ್ಕೆ ಏನೋ ಎಂಬಂತೆ ಅವರು ಪ್ರಕೃತಿಯ ಮಡಿಲಲ್ಲಿ ಅನೇಕ ಬಗೆಯ ಚಟುವಟಿಕೆಗಳಲ್ಲಿ ತೊಡುಗುತ್ತಾರ ಅಥವಾ ಮೌನ ಧರಿಸುತ್ತಾರೆ. ಅವರು ಮೌನಮುರಿದಾಗ ಅನೇಕ ಅದ್ಭುತ ಸಂಗತಿಗಳು ತಿಳಿಯುತ್ತವೆ. ಎಂದು ಈ ಬರೆಹ ಸೂಚಿಸುತ್ತದೆ.

**ಪದಕೋಶ**

ಪ್ರಮೇಯ = ಕಾರಣ, ಅಬ್ಬಿ = ಜಲಪಾತ, ಇಪ್ರೀತ = ವಿಪರೀತ, ಲೋಳಿ = ದೇಹದ ಮೇಲಿನ ಅಂಟುದ್ರವ, ಝೆನ್= ಧ್ಯಾನ ಮತ್ತು ಯೋಗದ ಆಚರಣೆಗಳನ್ನು ಮಾಡುವ ಬೌದ್ಧದರ್ಮದ ಒಂದು ಪಂಥ, ಜಪಾನಿನಲ್ಲಿದೆ. ಕಿಳ್ಳೇಕ್ಯಾತರು = ಮೀನು ಹಕ್ಕಿ ಹಿಡಿಯುತ್ತ ಊರಿಂದ ಊರಿಗೆ ಚಲಿಸುವ ಅಲೆಮಾರಿ ಸಮುದಾಯ, ಕಂಟ್ರಿ = ದೇಶಿ, ಸ್ಥಳೀಯ, ಮಂಡೆ = ತಲೆ, ಒಡ್ಡಿ = ಹಂದಿ ಹಾಗೂ ಕೋಳಿಗಳನ್ನು ಕೂಡುವ ದೊಡ್ಡಿ.

**ಪ್ರಶ್ನೆಗಳು**

೧. ಚೇಂಕ್ರ ಮೇಸ್ತ್ರಿ ಗಾಳ ಹಾಕಿಕೊಂಡು ಕುಳಿತುಕೊಳ್ಳುತ್ತಿದ್ದ ಜಾಗ ಹೇಗಿತ್ತು?

೨. ಚೇಂಕ್ರ ಮೇಸ್ತ್ರಿ ಜಲಪಾತದ ಬಳಿಯಿರುವ ಮೀನುಗಳ ವಿಷಯದಲ್ಲಿ ನಡೆಸಿದ್ದ ಸಂಶೋಧನೆ ಎಂತಹದು?

೩. ನಿರೂಪಕನಿಗೆ ಹಾವು ಮೀನಿನ ಜತೆ ಆದ ಮೊದಲ ಅನುಭವ ಹೇಗಿತ್ತು?

೪. ಚೇಂಕ್ರ ಮೇಸ್ತ್ರಿಯ ಮಗನ ಸಾವು ಹೇಗೆ ಸಂಭವಿಸಿತು?

೫. ಚೇಂಕ್ರ ಮೇಸ್ತ್ರಿ ಹೇಳಿದ ಭದ್ರಾನದಿಯ ಹಾವು ಮೀನು ಕುರಿತ ದಂತಕತೆಗಳು ಯಾವುವು?

**ಪೂರಕ ಓದು**

೧. ಪೂರ್ಣಚಂದ್ರ ತೇಜಸ್ವಿ ಅವರ 'ಪರಿಸರದ ಕತೆ', 'ಕನ್ನಡನಾಡಿನ ಹಕ್ಕಿಗಳು', 'ವಿಸ್ಮಯ ೧' ಹಾಗೂ 'ವಿಸ್ಮಯ ೨'.

೨. ಎನ್‌ವಾಸುದೇವ್‌ಅವರು ಪ್ರಜಾವಣಿಯ ಭಾನುವಾರದ ಪುರವಣಿಯಲ್ಲಿ ಬರೆಯುವ 'ವಿಜ್ಞಾನ ವಿನೋದ' ಎಂಬ ಅಂಕಣ.

೩. ನಾಗೇಶ ಹೆಗಡೆ ಅವರ 'ಇರುವುದೊಂದೇ ಭೂಮಿ' ಕೃತಿ.

೪. ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸುವ 'ವಿಜ್ಞಾನ ಸಂಗಾತಿ' ಪತ್ರಿಕೆ.

೫. ನವಕರ್ನಾಟಕ ಪ್ರಕಾಶನ ಪ್ರಕಟಿಸಿರುವ 'ಕರ್ನಾಟಕ ಜ್ಞಾನವಿಜ್ಞಾನ ಕೋಶ ಸಂಪುಟ ೩'.

೬. ಕುವೆಂಪು ಅವರ 'ಮಲೆನಾಡಿನ ಚಿತ್ರಗಳು'.

೭. ಕೆ ಪುಟ್ಟಸ್ವಾಮಿ ಹಾಗೂ ಕೃಪಾಕರ ಸೇನಾನಿ ಅವರ 'ಜೀವಜಾಲ'.

# ೧೦. ಗಾಂಧಿ

ಒಂದು ದಿನ:

ಇಂಡಿಯಾ ದೇಶದ ಕರ್ನಾಟಕ ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರ ಒಂದರಲ್ಲಿ - ಆ ದಿನ ಸೋಮವಾರವಾದುದರಿಂದ ಜನವೋ ಜನ. ದೊಡ್ಡ ಆಸ್ಪತ್ರೆಯ ರೀತಿಯಲ್ಲಿ ರೋಗಿಗಳು ತಮ್ಮ ಹೆಸರು ದಾಖಲು ಮಾಡಿಸಿ, ಗುಮಾಸ್ತನ ಅಮೃತಹಸ್ತದಿಂದ ತಮ್ಮ ಹೆಸರು, ಕುಲಗೋತ್ರ, ವಯಸ್ಸು ಮುಂತಾದವನ್ನು ಒಳಗೊಂಡ ಚೀಟಿಯ ಮೂಲಕ ವೈದ್ಯಾಧಿಕಾರಿಗಳನ್ನು ಕಾಣುವ ವ್ಯವಸ್ಥೆಗೆ ಇಲ್ಲಿ ಅವಕಾಶವಿಲ್ಲದ್ದರಿಂದ ಮೊದಲು ಬಂದ ರೋಗಿ ಯಾವುದೋ ಮೂಲೆಯಲ್ಲೋ ಅಥವಾ ವೈದ್ಯಾಧಿಕಾರಿಗಳ ಕೊಠಡಿಯ ಬಾಗಿಲಲ್ಲೋ ನಿಂತು ಅಸಹಾಯಕವಾಗಿ ಪಿಳಪಿಳನೆ ಕಣ್ಣಾಡಿಸುತ್ತ, ಅವರ ಕೃಪೆಗಾಗಿ ಕಾಯುತ್ತ, ಒಮ್ಮೊಮ್ಮೆ ಸುಸ್ತಾಗಿ ವರಾಂಡದಲ್ಲಿ ತಂದ ಸೀಸೆಯನ್ನು ತಲೆದಿಂಬಾಗಿ ಮಾಡಿಕೊಂಡು ತಾನು ಅಥವಾ ತಾವು ಬಂದ ಕೆಲಸವನ್ನೇ ಮರೆತು ನರಳುತ್ತಾ ಮಲಗಿಬಿಡುವುದು, ಹೀಗೆ ಏನೇನೋ ನಂಬಲಾರದಂಥ ವಿಷಯಗಳು. ಕೊನೆಯಲ್ಲಿ ಬಂದವನಿಗೆ ವೈದ್ಯಾಧಿಕಾರಿಗಳಿಂದ ಹಾರ್ದಿಕ ಸ್ವಾಗತ. ಇನ್ನೂ ವರ್ಣಿಸಲು ಅವಕಾಶವಿಲ್ಲದಂಥ ವರ್ಗದ ಜನ ಬಂದಾಗ ಕೃತಕ ವಿಧೇಯತೆ ತುಂಬಿದ ಸ್ವಾಗತ ಇವೆಲ್ಲಕ್ಕೂ ಪೂರ್ಣ ಅವಕಾಶ ಇದ್ದುದರಿಂದ ಬಳ್ಳಕೆರೆ ಎಂಬ ಹಳ್ಳಿಯಿಂದ ಹೊತ್ತು ಮೂಡುವುದಕ್ಕೆ ಮುಂಚೆಯೇ ಬಂದು ಆಸ್ಪತ್ರೆಯಲ್ಲಿ ಕಾಯುತ್ತಿದ್ದ ಒಬ್ಬ ಹೆಂಗಸು ಮತ್ತು ಸುಮಾರು ಹದಿನೈದು ವರ್ಷದ ಹುಡುಗ ಬಹಳ ಹೊತ್ತಿನವರೆಗು ಯಾರ ಗಮನಕ್ಕೂ ಬರದೆಯೇ ಬಿದ್ದಿದ್ದರು. ಆ ಹೆಂಗಸು ಆ ಹುಡುಗನ ತಾಯಿ, ಸುಮಾರು ನಲವತ್ತರ ಪ್ರಾಯ. ಹುಡುಗ ವರಾಂಡದಲ್ಲಿ ಕಂಬಕ್ಕೆ ಒರಗಿ, ಆಸ್ಪತ್ರೆಗೆ ಬಂದು ಹೋಗುವವರನ್ನು ಪ್ರಪಂಚದ ಮೇಲೆ ಒಂದು ಬಗೆಯ ಜಿಗುಪ್ಸೆ ಮೂಡಿನಿಂತಿತ್ತು. ಕುಳಿತೂ ಕುಳಿತೂ ಸಾಕಾಗಿ ಅವನ ಪಕ್ಕದಲ್ಲಿಯೇ ನಿಂತಿದ್ದ ತನ್ನ ಅವ್ವನ ಸೀರೆಯನ್ನು ಬಲವಾಗಿ ಎಳೆದು ಹೇಳಿದ:

"ಅವ್ವ ಬಿಸ್ಲು ಜಾಸ್ತಿ ಆಯ್ತಾ ಅದೆ, ನಡಿ ಊರಿಗೆ ಹೋಗ್ವ"
"ಒಸಿ ಸುಮ್ಕಿರು, ಬಂದೋರು ಬಂದೋ ತೋರಿಸ್ಕೊಂಡೇ ಹೋಗುವ"
"ಹೊತ್ತುಡಕೆ ಮುಂಚೆ ಬಂದೋ ನಾವು.... "
"ಇಲ್ಲಿ ನನ್ನ ನಿನ್ನ ರಾಗವ ಯಾರು ಕೇಳಾರು?"

ತನ್ನ ತಾಯಿಯ ಧ್ವನಿಯ ಹಿನ್ನೆಲೆಯ ಆಸಹಾಯಕತೆ, ಸುತ್ತಲಿನ ವಾತಾವರಣ ನಿಷ್ಕರುಣೆಯಿಂದ ತುಂಬಿರುವುದನ್ನು ಪರಿಚಯ ಮಾಡಿಕಡುವ ರೀತಿಯಲ್ಲಿ ಮೂಡಿಬಂದ ರೀತಿಯನ್ನು ಗಮನಿಸಿಯೋ ಅಥ್ವಾ ತನಗಾಗಿ ತನ್ನನ್ನು ಹೆತ್ತವಳು ಮೌನವಾಗಿ ನೋವನ್ನು , ಅವಮಾನವನ್ನು ಸಹಿಸಿಕೊಂಡು ನೀಂತಿರುವುದನ್ನು ಕಂಡೋ ಹುಡುಗ ಹೇಳಿದ: "ನಾನು ಇದ್ದರೆಷ್ಟು, ಸತ್ತರೆಷ್ಟು ನಡಿಯವ್ವಾ, ಹೋಗುವ ಊರಿಗೆ".

"ಮೂರೊತ್ತೂ 'ಸಾಯ್ತೀನಿ, ಸಾಯ್ತೀನಿ', ಇದೇ ನಿನ್ನ ನಾಲಿಗೆ ಮೇಲೆ"

"ಇದ್ದು ನಾನು ಯಾವ ರಾಜ್ಯ ಅಳಬೇಕು"- ವಯಸ್ಸಿಗೆ ಮೀರಿದ ಅನುಭವದ ಮಾತುಗಳು ತನ್ನ ಮಗನ ಬಾಯಿಂದ ಬಂದದ್ದು ತಾಯಿಗೆ ಆಶ್ಚರ್ಯವಾಗಲಿಲ್ಲ. ಈ ವಯಸ್ಸಿಗೆ ಅನುಭವಿಸಿದ್ದ ನೋವಿನ ಮೂಸೆಯಿಂದ ಬಂದ ಮಾತುಗಳಾಗಿದ್ದವು. ಹೆತ್ತ ಕರುಳು ಚುರಕೆಂದು ಸೆರಗಿನಿಂದ ಕಣ್ಣೊರೆಸಿಕೊಂಡಳು. ತನ್ನ ದೇಹದಲ್ಲಿರುವ ಕಾಯಿಲೆಯ ನೋವನ್ನು , ತಾಯಿಯ ಅಸಾಹಾಯಕತೆಯನ್ನೂ, ತಮಗಾಗುತ್ತಿರುವ ಅವಮಾನವನ್ನೂ ಇನ್ನು ಸಹಿಸಲಾಗದು ಎನ್ನುವ ರೀತಿಯಲ್ಲಿ ಹುಡುಗ ಧಡಕ್ಕನೆ ಮೇಲೆದ್ದು ಮುಂದುವರಿದ-

"ಎಲ್ಲಿಗೋ ಮಗ?"

“ಡಾಕ್ರು ನೋಡೋಕೆ.....”

“ಲೋ; ಮೊದಲೇ ತೂರಾಡ್ತಿ. ಬಿದ್ದು ಗಿದ್ದು ಬುಟ್ಟಿಕನಪ್ಪ” ಎಂದು ಹಿಡಿದುಕೊಳ್ಳಲು ಬಂದ ತಾಯಿಯ ಕೈಗಳಿಂದ ಕೊಸರಿಕೊಂಡವನೆ ವೈದ್ಯಾಧಿಕಾರಿಗಳ ಕೊಠಡಿಯನ್ನು ಪ್ರವೇಶಿಸಿ, ನೆರೆದಿದ್ದ ಜನರ ಗುಂಪನ್ನು ಸೀಳಿ ವೈದ್ಯಾಧಿಕಾರಿಯ ಮೇಜಿನ ಮುಂದೆ ನಿಂತು, ಜೋರಾಗಿ ಹೇಳಿದ: “ಸಾ! ನಾನು ನಮ್ಮವ್ವ ಒತ್ತಾರೆಯಿಂದ ಕಾಯ್ಕೊಂಡೀವಿ”.

ವೈದ್ಯಾಧಿಕಾರಿ ಕತ್ತೆತ್ತಿ ನೋಡಿದ. ಸುಮಾರು ಎತ್ತರದ, ನರಪೇತ್ಲ, ಅಗಲ ಕಿವಿಗಳ ಹೊಟ್ಟೆ ಡುಬ್ಬಣ್ಣನ್ನೊಬ್ಬ ತನ್ನ ಮುಂದೆ ಬಂದು ನಿಂತಿದ್ದಾನೆ. ಅವ್ಯಕ್ತ ನೋವಿನ ರೋಷ ಅವನ ಮುಖದ ಮೇಲೆ ನಿಂತಿದೆ.

ಹುಡುಗನೇ ಮತ್ತೆ ಹೇಳಿದ: “ನನ್ನೊಸಿ ನೋಡಿ ಸಾ!” ವೈದ್ಯಾಧಿಕಾರಿಗೆ ಈ ಅಪರೂಪದ ವ್ಯಕ್ತಿಯನ್ನು ಕಂಡು ಸ್ವಲ್ಪ ಕುಚೇಷ್ಟೆ ಮಾಡಬೇಕೆನಿಸಿ, ಅವನನ್ನೇ ದೃಷ್ಟಿಸಿ ಹೇಳಿದ: “ವಸಿ ಏನೋ ಚೆನ್ನಾಗೇ ನೋಡ್ಡೆ. ನಿನ್ನ ಹೊಟ್ಟೆ ದಪ್ಪಕ್ಕೆ ಕಾಲ ಸಣ್ಣ, ಕಿವಿಗಳು ಮಾತ್ರ ಗಾಂಧಿ ಕಿವಿಗಳು ಇದ್ದಾಗಿವೆಯಪ್ಪಾ”.

ಹುಡುಗ ತನ್ನ ಬಲಗೈಯನ್ನು ಮುಂದೆ ಚಾಚಿ: “ನನಗೆ ಕಾಯಿಲೆ ಏನು ನೋಡಿ ಸಾ” ಎಂದು ಬೇಡಿದ.

“ನಿಮ್ ದಮ್ಮಯ್ಯ ಕೋಪ ಮಾಡ್ಕೊಳ್ದೇ ನೋಡಿ ಸ್ವಾಮಿ. ಇವನೊಬ್ಬನೇ ನನಗೆ ಗಂಡು ಮಗ ಅಂತ ಇರೋನು!” ಹೆಂಗಸೊಬ್ಬಳು ಗೋಗೆರೆದಳು.

ವೈದ್ಯಾಧಿಕಾರಿಗೆ ತನ್ನ ಮುಂದೆ ನಿಂತಿರುವ ವ್ಯಕ್ತಿಗಳು ತನ್ನಂತೆಯೇ ಮನುಷ್ಯ ವರ್ಗಕ್ಕೆ ಸೇರಿದವರು ಎಂಬುದು ಜ್ಞಾಪಕಕ್ಕೆ ಬಂದೋ ಅಥವಾ ವೈದ್ಯರಾಗಬೇಕಾದವರಿಗೆ ಅನುಕಂಪದಿಂದ ಕೂಡಿದ ಹೃದಯ ಇರಬೇಕು ಎಂಬ ಮಾತು ನೆನಪಾಗಿಯೋ ಏನು ಕತೆಯೋ, ಒಟ್ಟಿನಲ್ಲಿ ಈ ತಾಯಿ - ಮಗನ ಮೇಲೆ ಕರುಣೆ ಬಂದು ಕೇಳಿದ: ಇವನು ನಿನ್ನ ಮಗನೇನಮ್ಮ?”

“ಹೂ! ಸ್ವಾಮಿ, ದೆವರಾಣೆಗೂ!”

“ಇವನ ಹೆಸರೇನಮ್ಮ?”

“ಗಾಂಧಿ ಸ್ವಾಮಿ!”

“ಏನಮ್ಮ ಹುಡುಗಾಟಕ್ಕೆ ನಾನು ಇವನ ಕಿವಿಗಳು ಗಾಂಧೀಜಿಗೆ ಇದ್ದಂತಿವೆ ಅಂದ್ರೆ ಇವನ್ನ ಸಾಕ್ಷಾತ್‌ಗಾಂಧಿ ಅಂತ್ಲೇ ತಿಳ್ಕೊಂಡು ಬಿಟ್ರ?”

“ಇಲ್ಲ ಸ್ವಾಮಿ, ಸುಳ್ಳಿ ಹೇಳಿದ್ರೆ ನನ್ನ ನಾಲ್ಗೆಗೆ ಉಳಾ ಬೀಳ್ಳಿ; ಸೇದೋಗ್ಲಿ ನನ್ನಾಣೆಗೂ ಇವನ ಹೆಸರು ಗಾಂಧಿ ಅಂತ”.

“ನನ್ನ ಹೆಸರು ದೇವರ ಸತ್ಯವಾಗ್ಲೂ ಸಾ ಮಹಾತ್ಮಗಾಂಧಿ ಅಂತ” ಹುಡುಗ ಧೈರ್ಯವಾಗಿ, ದೃಢ ನಿಲುವಿನಿಂದ ನುಡಿದ.

ವೈದ್ಯಾಧಿಕಾರಿ ಬೆಪ್ಪಾಗಿಹೋದ. ಅವನ ವೈದ್ಯಕೀಯ ಈವರೆಗಿನ ಅವಧಿಯಲ್ಲಿ ಈ ರೀತಿಯ ಕಾಕತಾಳ ನ್ಯಾಯವನ್ನು ಅವನು ಕಂಡಿರಲಿಲ್ಲ. ಕೇಳಿಯೂ ಇರಲಿಲ್ಲ. ತನ್ನ ಜೀವಿತದಲ್ಲಿ ಒದಗಿಬಂದ ಈ ಘಟನೆ ತೀರ ಅಪರೂಪವೆನ್ನಿಸಿ ಇದನ್ನು ತನ್ನ ಸಹದ್ಯೋಗಿಗಳೊಂದಿಗೆ ಪಾಲುಮಾಡಿಕೊಳ್ಳಲು ಮತ್ತು ಮುಂದೆ ತಾನು ಯಾರಿಗಾದರೂ ವರ್ಣಿಸುವಾಗ ಇದೊಂದು ಬಿಳಿ ಸುಳ್ಳೆಂದು

ಹೇಳಿದರೆ, ಇಂಥಿಂಥವರು ಇದ್ದರು; ಬೇಕಾದರೆ ಕೇಳಿಕೊಳ್ಳಿ ಎಂದು ಸಾಕ್ಷಿಗಳನ್ನು ದಾಖಲುಪಡಿಸಿಕೊಳ್ಳಲು ಜವಾನನನ್ನು ಜೋರಾಗಿ ಕರೆದು ಹೇಳಿದ.

"ನೋಡೋ ನಾಯ್ಡು, ನರಸಿಂಹಮೂರ್ತಿ, ಸರಸಮ್ಮ ಇವರನ್ನು ಬೇಗನೆ ನಾನು ಬರಹೇಳ್ದೆ ಅಂತ ಕೂಗಯ್ಯ", ಎಲ್ಲಾರೂ ಬಂದರು. ವೈದ್ಯಾಧಿಕಾರಿ ಹೇಳಿದ್ದನ್ನು ಕೇಳಿ ಕಿಸಕ್ಕನೆ ನಕ್ಕುಬಿಟ್ಟರು. ಅದರಲ್ಲಿಯೂ ಈಗ ತಾನೆ ಕುಟುಂಬ ಯೋಜನೆಯ ವಿಸ್ತರಣಾಧಿಕಾರಿಯಾಗಿ ಕೆಲಸಕ್ಕೆ ಸೇರಿದ ನರಸಿಂಹಮೂರ್ತಿ ತಾನು ಇದನ್ನು ನಂಬುವುದಿಲ್ಲ ಎನ್ನುವಂತೆ ಕಿಸಕ್ಕನೆ ನಕ್ಕ. ವೈದ್ಯಾಧಿಕಾರಿಗೆ ಸ್ವಲ್ಪ ಕೋಪ ಕೆರಳಿ, "ಬೇಕಾದ್ರೆ ಅವನ್ನೇ ಕೇಳ್ರಿ" ಎಂದ.

ನರಸಿಂಹಮೂರ್ತಿ ವೈದ್ಯಾಧಿಕಾರಿಗಳ ಕುರ್ಚಿಯ ಮೇಲೆ ಗೋಡೆಗೆ ತೂಗು ಹಾಕಿರುವ ಫೋಟೊ ಒಂದನ್ನು ತೋರಿಸಿ ಕೇಳಿದ: ಲೋ ಹುಡುಗ ಆ ಫೋಟೋ ಯಾರದಯ್ಯಾ

"ಮಹಾತ್ಮ ಗಾಂಧಿಯೋರ್ದು ಸಾ, ಇದ ನಾ ಕಾಣನೆ?"
"ನಿನ್ನ ಹೆಸರೇನಯ್ಯ"
"ಮಹಾತ್ಮಗಾಂಧಿ ಸಾ"
"ಸುಳ್ಳು ಹೇಳಬ್ಯಾಡ"
"ಸುಳ್ಳು ಹೇಳಿ ನಿಮ್ತಾವು ನಾನು ಯಾವ ಸಾಮ್ರಾಜ್ಯ ಈಸ್ಕೋಬೇಕು".

ಎಲ್ಲರೂ ನಾಲಿಗೆ ಸೇದಿ ಹೋದವರಂತೆ ನಿಂತರು. ಮಹಾತ್ಮಗಾಂಧಿಜಿಯ ಫೋಟೋವನ್ನು ಒಮ್ಮೆ; ನಂತರ ರಕ್ತಮಾಂಸ ತುಂಬಿಕೊಂಡು ಉಸಿರಾಡುತ್ತಾ ನೋವನ್ನು ಅನುಭವಿಸುತ್ತ ನೆಲದ ಮೇಲೆ ತಮ್ಮ ಕಣ್ಣೆದುರಿಗೆ ನಿಂತಿರುವ ಮಹಾತ್ಮಗಾಂಧಿಜಿಯ ಕಡೆಗೊಮ್ಮೆ ದೃಷ್ಟಿಯನ್ನು ಬೀರುತ್ತ ನಿಂತರು. ವೈದ್ಯಾಧಿಕಾರಿ ಮತ್ತು ಅವನ ಬಳಗ ಜಗತ್ತಿನ ಮೇಲೆ ತೀರ ಸೋಜಿಗದ ವಿಷಯವನ್ನು ಕಂಡವರಂತೆ ನಿಂತುದನ್ನು ಕಂಡು ಮಹಾತ್ಮಗಾಂಧಿಜಿಗೆ ಬೇಸರವಾಯಿತು.

"ನನ್ನ ಕಾಯಿಲೆ ನೋಡಿ ಸಾ! ನನ್ನ ಹಣೇಬರ ಎಂದ."

"ನಿನಗೆ ಈ ಹೆಸರು ಯಾರು ಕಟ್ಟಿದೋರು".

"ನಮ್ಮ ಅಯ್ಯ ಕರಿಸಿದ್ದೇಗೌಡ ಅಂತವ್ನೆ" ವೈದ್ಯಾಧಿಕಾರಿ, ಮಿಡ್‌ವೈಫ್‌ಅಮ್ಮನವರನ್ನು ಕರೆದು ಗಾಂಧಿಯನ್ನು ಪರೀಕ್ಷೆಯ ಕೊಠಡಿಗೆ ಕರೆದುಕೊಂಡು ಹೋಗಿ ಮಲಗಿಸುವಂತೆ ಹೇಳಿದರು. ಅವಳು ಹಾಗೆಯೇ ಮಾಡಿದಳು. ನಾಲಿಗೆ ಕಣ್ಣು, ಗಂಟಲು ನೋಡಿದ ಮೇಲೆ ಹೃದಯ ಶ್ವಾಸಕೋಶಗಳ ಪರೀಕ್ಷೆ ಮುಗಿಸಿ, ಹೊಟ್ಟೆಯನ್ನು ಪರೀಕ್ಷೆಮಾಡಿದ ವೈದ್ಯಾಧಿಕಾರಿ ಗಾಂಧಿಯ ತಾಯಿಯ ಕಡೆ ತಿರುಗಿ "ನಿನ್ನ ಹೆಸರೇನಮ್ಮ" ಎಂದರು.

"ನಿಂಗಮ್ಮ ಸ್ವಾಮಿ"

"ನೋಡಮ್ಮ ನಿಮ್ಮುಡುಗನಿಗೆ ನೀರು ಸೇರ್ಕೊಂಡಿದೆ. ಜೊತೆಗೆ ಕಾಲುಗಳೂ ಊದಿಕೊಂಡಿವೆ. ಇದು ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆ. ಆಗಲೇ ಕಪ್ಪು ಈಲಿಗೂ (ಲಿವರ್) ಕಾಯಿಲೆ ಹಬ್ಬಿ ಅದು ಮುಟ್ಟಿದರೆ ಸಾಕು ಗಾಂಧಿ ನೋವು ಅಂತ ಬಡ್ಕೋತಾನೆ" ಏನೋ ಸ್ವಾಮಿ ನಿಮ್ಮ ಎಕ್ಡ ಮೂರು ಮೈಲಿ ನಡಿಬೇಕಾದ್ರೆ ಮೂವತ್ತು ತಾವು ಕುಂತ್ಕಂಡು, ತೆವಳ್ಕೊಂಡು ಬಂದು, ಉಳಿಸಿ ಕೊಡಿ, ನಾಳಾಕೆ ನಮ್ಮಪ್ಪನ ಕರ್ಕೊಂಡು ಬತ್ತೀನಿ…. ತಂದೆ ಇಲ್ಲದ ತಬ್ಬಲಿ".

"ನಿನ್ನ ಗಂಡನಿಗೆ ಏನಾಗಿ ಸತ್ತೋದ?"

“ಸ್ವಾಮಿ ಸೇಂದಿ ಇಳಿಸೋಕೆ ಸಾಹುಕಾರ್ರು ತಾವು ಇದ್ರು. ಒಂದು ದಿನ ಮರದ ಮೇಲಿಂದ ಬಿದ್ದು ಫಕ್ಕನೆ ಪ್ರಾಣ ಬುಟ್ಟು -ಬುಟ್ರು”

“ಅಯ್ಯೋ ಪಾಪ! ನೋಡಮ್ಮ ನಿಮ್ಮುಡುಗನಿಗೆ ಎಕ್ಸರೇ ಆಗಬೇಕು. ಹೃದಯದ ಪರೀಕ್ಷೆ ಮಾಡಬೇಕು. ರಕ್ತ, ಮೂತ್ರ ಪರೀಕ್ಷೆ ಮಾಡಬೇಕು. ಇಲ್ಲಾಗೋ ವಿಷಯವಲ್ಲ ಇದು. ಇವನ್ನ ಡಿಸ್ಟ್ರಿಕ್ಟ್‌ಆಸ್ಪತ್ರೆಗೆ ಸೇರಿಸಬೇಕು. ನಾನು ಎಲ್ಲಾನು ಬರೆದು ಕೊಡ್ತೀನಿ. ಹೊಟ್ಟೇಲಿರೋ ನೀರು ಕಡಿಮೆ ಆಗೋಕೆ ಈಗ ಎರಡು ಗುಳಿಗೆ ನುಂಗಿಸ್ತೀನಿ ಎಂದು ಹೇಳಿ ನೀರು ತರಿಸಿ, ಗುಳಿಗೆಗಳನ್ನು ನುಂಗಿಸಿಯೇ ಬಿಟ್ಟರು ಸರಸರನೆ ದೊಡ್ಡಾಸ್ಪತ್ರೆಗೆ ಗಾಂಧಿಯ ಕಾಯಿಲೆಯ ವಿಷಯವಾಗಿ ತಾವು ಪತ್ತೆ ಹಚ್ಚಿರುವ ವಿವರಗಳನ್ನೂ ನಮೂದಿಸಿ ಕೈಗೆ ಕೊಟ್ಟರು.

* * *

ಮೊಮ್ಮಗನ ಸ್ಥಿತಿ ಚಿಂತಾಜನಕವಾದುದೆಂಬುದನ್ನು ಕರಿಸಿದ್ದೇಗೌಡನಿಗೆ ಯಾರೂ ಹೇಳಿಕೊಡಬೇಕಾಗಿರಲಿಲ್ಲ. ಅವನ ಆಸೆಯ ಕುಡಿ ತನ್ನ ಮಗಳು ನಿಂಗಮ್ಮ ಮತ್ತು ಅವಳ ಮಕ್ಕಳು ಪದ್ದಿ ಮತ್ತು ಗಾಂಧಿ. ಪದ್ದಿ ಎಷ್ಟೇ ಅದರೂ ನೆರಮನೆಗೆ ಹೋಗುವ ಹೆಣ್ಣು, ಗಾಂಧಿಯ ಮೇಲೆ ಕರಿಸಿದ್ದೇಗೌಡನಿಗೆ ಎಲ್ಲೂ ಇಲ್ಲದ ಪ್ರೀತಿ ತನ್ನ ಈ ಮೊಮ್ಮಗನಿಗೆ ಹೆಸರು ಕಟ್ಟಿದ್ದೇ ಒಂದು ಮರೆಯಲಾಗದ ಘಟನೆ. ಕರಿಸಿದ್ದೇಗೌಡನ ಜೀವನದಲ್ಲಿ ಹದಿನೈದು ವರ್ಷಗಳ ಹಿಂದಿನ ಮಾತು. ಹೊಲ ಉತ್ತು ಸಾಕಾಗಿ ತಾನೂ ಮತ್ತು ಅಳಿಯ ಬುಕ್ಕೇಗೌಡ ಹೊತ್ತು ಮುಳುಗಿದ ಮೇಲೆ ಬಂದಾಗ ಮೊರತುಂಬ ರಗರಗನೆ ಉರಿಯುತ್ತಾ ಮೊಮ್ಮಗು ಮಲಗಿತ್ತು. ಕರಿಸಿದ್ದೇಗೌಡ ಹಿಗ್ಗಿ ಹೀರೇಕಾಯಿ ಆದ. ತನ್ನ ಮೊಮ್ಮಗನ ಅಗಲವಾದ ಕಿವಿಗಳನ್ನು ಕಂಡು ಆನಂದಿಸುತ್ತಾ ಜೋಯಿಷರ ಮನೆ ಹಾರಿದ. ಜೋಯಿಷರು ಮುಗು ಬಹು ಪ್ರಶಸ್ತವಾದ ಘಳಿಗೆಯಲ್ಲಿ ಹುಟ್ಟಿದೆ ಎಂದು ಲೆಕ್ಕಾ ಹಾಕಿ ಹೇಳಿ ಮಗುವಿನ ಕಿವಿ ಅಗಲ ವಾಗಿರುವುದರಿಂದಲೂ ಮತ್ತು ಕರಿಸಿದ್ದೇಗೌಡ ಬಹಳ ವರ್ಷಗಳ ಹಿಂದೆ ಶಿವಪುರಕ್ಕೆ ಹೋಗಿ ಮಹಾತ್ಮ ಗಾಂದೀಜಿ ಯವರನ್ನು ಖುದ್ದಾಗಿ ದರ್ಶನ ಪಡೆದು ಬಂದವನು ಈ ಸುತ್ತಮುತ್ತಲಿಗೆ ಇವನೊಬ್ಬನೇ ಆದುದರಿಂದ ಮಗುವಿಗೆ ‘ಮಹಾತ್ಮಾಗಾಂಧಿ’ ಎಂದು ಹೆಸರಿಡಬೇಕೆಂದೂ ತೀರ್ಮಾನ ಹೇಳಿದರು. ಕರಿಸಿದ್ದೇಗೌಡ ಎಷ್ಟು ಮುಗ್ಧ ಎಂದರೆ ‘ಮಹಾತ್ಮಾಗಾಂಧೀಜಿಯವರೇ ಮತ್ತೆ ಜನ್ಮ ಪಡೆದು ನಿನ್ನ ಮಗಳ ಗರ್ಭದಲಿ ಜನಿಸಿದ್ದಾರೆ’ ಎಂದರೆ ಅದನ್ನೂ ನಂಬಿಬಿಡುತ್ತಿದ್ದ. ಸದ್ಯ ಜೋಯಿಷರು ಅಂಥ ಘೋರ ಅಪರಾಧ ಮಾಡಲಿಲ್ಲ.

ಕರಿಸಿದ್ದೇಗೌಡನಿಗೆ ಎರಡು ಎಕರೆ ಹೊಲ. ಒಂದು ಮನೆ, ಇತ್ತೀಚೆಗೆ ಈ ಹೊಲದಲ್ಲಿ ಒಂದು ಎಕರೆಯನ್ನು ಬಡವರಿಗೆ ಮನೆ ಕಟ್ಟಿಕೊಳ್ಳಲೆಂದು ಹಂಚುವುದಕ್ಕಾಗಿ ಸರ್ಕಾರ ವಶಪಡಿಸಿಕೊಂಡಿತ್ತು. ಇದು ಕರಿಸಿದ್ದೇಗೌಡನಿಗೆ ತನ್ನ ಅಳಿಯ ಸತ್ತುದಕ್ಕಿಂತಲೂ ತೀವ್ರ ಚಿಂತೆಗೆ ಗುರಿ ಮಾಡಿತ್ತು. ಈ ಚಿಂತೆಯಲ್ಲಿ ಮುಳುಗಿ ಫಲ ನೀಡುವ ಹಲಸಿನ ಮರವನ್ನು ಕಡಿದುಕೊಳ್ಳುವುದೋ ಬೇಡವೋ ಎನ್ನುವ ಜಿಜ್ಞಾಸೆಯಲ್ಲಿ ಸಿಕ್ಕಿಬಿದ್ದುದರಿಂದ ಅವನು ತನ್ನ ಮೊಮ್ಮಗನ ಆರೋಗ್ಯದ ಕಡೆಗೆ ಅಷ್ಟು ಗಮನ ಕೊಟ್ಟಿರಲಿಲ್ಲ.

ಮಗಳು ವೈದ್ಯರು ಬರೆದುಕೊಟ್ಟ ಚೀಟಿಯನ್ನು ಕೊಟ್ಟು ಗಾಂಧಿಯನ್ನು ‘ದೊಡ್ಡಾಸ್ಪತ್ರೆಗೆ’ ಸೇರಿಸಬೇಕೆಂತೆ ಎಂದು ಹೇಳಿದಾಗ ಕರಿಸಿದ್ದೇಗೌಡನಿಗೆ ಎದೆ ಧಸಕ್ಕೆಂದಿತು.

ಮಾರನೆಯ ದಿನವೇ ಇಡೀ ಸಂಸಾರವೇ ಬಸ್ಸಿನಲ್ಲಿ ಅಷ್ಟೋ ಇಷ್ಟೋ ಇದ್ದ ಪುಡಿಗಂಟನ್ನು ತೆಗೆದುಕೊಂಡು ದೊಡ್ಡಾಸ್ಪತ್ರೆ ಇರುವ ತಮ್ಮ ಜಿಲ್ಲಾ ಕೇಂದ್ರಕ್ಕೆ ಪಯಣ ಬೆಳೆಸಿತು.

ಆಸ್ಪತ್ರೆ ತಲುಪಿದಾಗ ಮಧ್ಯಾಹ್ನವಾಗಿತ್ತು. ಹೊರ ರೋಗಿಗಳನ್ನು (ಔಟ್‌ಪೇಷೆಂಟ್) ಪರೀಕ್ಷೆ ಮಾಡುವ ವಿಭಾಗದಲ್ಲಿ ರೋಗಿಗಳ ಹೆಸರು ದಾಖಲು ಮಾಡಿಕೊಂಡು ಚೀಟಿಯನ್ನು ಕೊಟ್ಟು ವೈದ್ಯರ ಬಳಿಗೆ ಕಳಿಸುವ ಗುಮಾಸ್ತರಿಗೆ ತಮ್ಮ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರರ ವೈದ್ಯಾಧಿಕಾರಿಗಳು ಕೊಟ್ಟಿದ್ದ ಕಾಗದವನ್ನು ಕೊಟ್ಟಾಗ, ಗುಮಾಸ್ತ ಎಲ್ಲವನ್ನೂ ಓದಿ, ರೋಗಿಯ ಹೆಸರನ್ನು ಎರಡು ಮೂರು ಸಾರಿ ಓದಿ, ಏನೋ ಅನುಮಾನ ಬಂದವನಂತೆ, ಕರಿಸಿದ್ದೇಗೌಡ ತನ್ನ ಮೊಮ್ಮಗನನ್ನು ತೋರಿಸಲು ಓಹೋ ಇವನ ಹೆಸರು ‘ಮಹಂತೇಗೌಡ’ ಅಂತ ಅಲ್ವೆ? ನಿಮ್ಮ ಡಾಕ್ಟ್ರು ಇವನ್ನ ‘ಮಹಾತ್ಮಾಗಾಂಧಿ’ ಅಂತ ಬರೆದು ಬುಟ್ಟವರಲ್ಲ ! ಎಂದು ನಕ್ಕ.

ಕರಿಸಿದ್ದೇಗೌಡ "ಬರೆದಿರೋದು ಸರಿಯಾಗೆ ಅದೆ ಸ್ವಾಮಿ. ಇವನ ಹೆಸರು ಮಹಾತ್ಮಗಾಂಧಿ ಅಂತ್ಲೆ!" ಎಂದ. ಗುಮಾಸ್ತ ಬಿಟ್ಟ ಬಾಯಿ ಬಿಟ್ಟುಕೊಂಡೆ ಮಹಾತ್ಮ ಗಾಂಧಿಯನ್ನು ನೋಡಿದ. "ಸರಿಯಪ್ಪ ತಗೋ ಚೀಟಿ". ಎಂದವನೆ ಹಳೆಯ ಕಾಗದ ಜೊತೆಗೆಂದು ಹೊಸ ಚೀಟಿಯನ್ನು ಕೊಟ್ಟ: ಆ ಕಡೆಗೆ ಹೋಗು ಎಂದು ತೋರಿಸಿದ.

ಅಲ್ಲೊಬ್ಬ ಇವರು ಕೊಟ್ಟ ಕಾಗದಗಳನ್ನೂ ಮತ್ತು ಇನ್ನೂ ಅನೇಕ ಹೊರರೋಗಿಗಳು ಕೊಟ್ಟ ಕಾಗದಗಳನ್ನೂ ತೆಗೆದುಕೊಂಡು ಒಳಗೆ ಹೋಗಿ ಒಂದು ದೊಡ್ಡ ಮೇಜಿನ ಸುತ್ತ ಕುರ್ಚಿಗಳಲ್ಲಿ ಕುಳಿತಿದ್ದ ವೈದ್ಯರ ಗುಂಪಿನ ಮುಂದೆ ಇಟ್ಟು ಬಂದ.

ಮಹಾತ್ಮಾಗಾಂಧಿಯ ಸರದಿ ಬಂದಾಗ ವೈದ್ಯರ ಗುಂಪು ಗಹಗಹಿಸಿತು. ಜೋರಾಗಿ ಕೂಗಿ ಕರೆದರು; 'ಯಾರಪ್ಪಾ ಮಹಾತ್ಮಾಗಾಂಧಿ?'

"ಕರ್ಕೊಂಡು ಬಂದೇ ಸ್ವಾಮಿ ಇಲ್ಲವನೆ" ಎಂದು ಕರಿಸಿದ್ದೇಗೌಡ  ತನ್ನ ಮೊಮ್ಮಗನನ್ನು ಕರೆದುಕೊಂಡು ಒಳಗೋದ. ನಿಂಗಮ್ಮನನ್ನೂ ಮತ್ತು ಪದ್ದಿಯನ್ನೂ ಹೊರಗಡೆಯೇ ಜವಾನ ತಡೆದ.

ಕರಿಸಿದ್ದೇಗೌಡ  ತಮ್ಮ ಮುಂದೆ ಕರೆದು ತಂದು ನಿಲ್ಲಿಸಿದ ವ್ಯಕ್ತಿಯನ್ನು ವೈದ್ಯ ಮಹಾಶಾಯರುಗಳೆಲ್ಲ ಒಂದು ವಿಚಿತ್ರ ಕಾಯಿಲೆಯನ್ನು ಪತ್ತೆ ಹಚ್ಚಿದಾಗಲೋ ಅಥವಾ ಕ್ಯಾನ್ಸರ್‌ವ್ಯಾಧಿಗೆ ಔಷಧಿ ಕಂಡುಹಿಡಿದಾಗಲೋ ಆಗುವ ವಿಸ್ಮಯದಂತೆಯೇ ನೋಡಿದರು.

'ಮಹಾತ್ಮಾಗಾಂಧಿ' ಎಂದು ಕರೆಯಲ್ಪಡುವ ವ್ಯಕ್ತಿಯನ್ನು ಕಂಡು ಅವರಿಗೆ ಅಳಬೇಕೋ ನಗಬೇಕೋ ಅಥವಾ ನಂಬಂದಿರುವಂಥ ಒಂದು ಸ್ಥಿಯಲ್ಲಿಯೇ ಇದ್ದು ಬಿಡಬೋಕೋ ಏನೂ ತೋಚದೆ ಪರೀಕ್ಷೆಯ ಕೊಠಡಿಗೆ ಕರೆದುಕೊಂಡು ಹೋಗಿ ಪರೀಕ್ಷೆ ಮಾಡಿ ಕರಿಸಿದ್ದೇಗೌಡನನ್ನು ಕರೆದು "ನೋಡಯ್ಯ ನಿನ್ನ ಮೊಮ್ಮಗನಿಗೆ ಹೃದಯ ಹಾಗೂ ಮೂತ್ರಪಿಂಡಗಳ ಕಾಯಿಲೆ, ಔಷಧಿಗಳೆಲ್ಲಾನೂ ಬರೆದು ಕೊಡ್ತೀವಿ. ತಗೋ, ಹೇಗೆ ಸೇವಿಸಬೇಕು. ಅನ್ನೋದು ಹೇಳ್ತೀವಿ. ಹಾಗೆ ಕೊಡು. ಸ್ವಲ್ಪ ಹುಷಾರುಗುತ್ತೆ' ಎಂದರು. ಕರಿಸಿದ್ದೇಗೌಡನನ್ನು ಕತ್ತಿಡಿದು ನೀರಿಗೆ ಅದುಮಿದಂತಾಯಿತು.

"ನಿಂದಮ್ಮಯ್ಯ, ಏನೋ ನನ್‌ಮೊಮ್ಮಗನ್ನ ಕಾಪಾಡಿ ಇಲ್ಲೇ ಒಸಿ ದಿನ ಇಟ್ಕೊಂಡು ಉಳಿಸಿಕೊಡಿ. ನೀವು ಇವನಿಗೆ ಮಾಡೋ ಉಪಕಾರ ಈ ನನ್ನ ಅಪ್ಪನಿಗೆ ಮಾಡೋ ಉಪಕಾರ ಅಂತ ತಿಳ್ಕೊಂಡು ಮಾಡಿ; ನಿಮ್ಗೆ ಪುಣ್ಯ ಬತ್ತದೆ" ಎಂದು ಅಲ್ಲಿಯೇ ನೇತು ಹಾಕಿದ್ದ ಭಾರತದ ಭಾಗ್ಯವಿಧಾತ ಮಹಾತ್ಮಗಾಂಧೀಜಿಯವರ ಭಾವಚಿತ್ರಕ್ಕೆ ಕೈಜೋಡಿಸಿ, ಕಣ್ಣೀರು ಹಾಕುತ್ತಾ ನಿಂತುಬಿಟ್ಟ. ವೈದ್ಯರು ಮರು ಮಾತಾನಾಡದೆ ಚೀಟಿಯಲ್ಲಿ ಬರೆದು ಗಂಡಸರ ವಾರ್ಡಿನಲ್ಲಿ ಮಹಾತ್ಮಗಾಂಧೀಜಿಯನ್ನು ಸೇರಿಸುವುದೆಂದು ಬರೆದು ಒಬ್ಬ ಜವಾನನನ್ನು ಕರೆದು ಜೊತೆಯಲ್ಲಿ ಕಳುಹಿಸಿದರು.

* * *

ಮುಂದಿನ ವಿಷಯವನ್ನು ಹೆಚ್ಚಿಗೆ ಬೆಳಸದೆ ಮುಗಿಸುವುದು ಒಳ್ಳೆಯದೆಂದು ಕಾಣಿಸುತ್ತದೆ. ಮಹಾತ್ಮ ಗಾಂಧೀಜಿಯನ್ನು ಮೂವತ್ತು ಜನರು ಇರಬೇಕಾದ ವಾರ್ಡಿನಲ್ಲಿ ಅರವತ್ತು ಜನರಿರುವ ಕಡೆ ನೆಲದ ಮೇಲೆ ಒಂದು ಹಾಸಿಗೆ ಕೊಟ್ಟು ಹಾಕಿದರು. ಎಕ್ಸರೇ, ತೊಂಟೆ ಪರೀಕ್ಷೆಗಳ ಜೊತೆಗೆ ಔಷಧೋಪಚಾರವೂ ನಡೆಯತೊಡಗಿತು. ವೈದ್ಯರು ಬರೆದುಕೊಟ್ಟ ಔಷಧಿಗಳನ್ನು ತಂದುಕೊಡುವುದಕ್ಕೆ ಮೂರು ದಿವಸಕ್ಕೆ ಕರಿಸಿದ್ದೇಗೌಡನ ಪುಟ್ಟ ಗಂಟು ಕರಗಿಹೋಯಿತು.

ನಾಲ್ಕನೆಯ ದಿನ ತನ್ನ ಅವ್ವ ನಿಂಗಮ್ಮ ತನ್ನ ತಂಗಿಯ ಕಿವಿಯ ಮತ್ತು ತನ್ನ ಕಿವಿಯ ಓಲೆಗಳನ್ನು ಬಿಚ್ಚಿ ತನ್ನ ಅಯ್ಯನಿಗೆ ಏಕೆ ಕೊಡುತ್ತಿದ್ದವರೆಂಬುದನ್ನು ಊಹಿಸಿ ತನ್ನ ಪ್ರೀತಿಯ ಅಯ್ಯನನ್ನು ಕರೆದು ಕೇಳಿದ: "ಅಯ್ಯ ನನ್ನ ಊರಿಗೇ ಕರ್ಕೊಂಡು ನಡಿ. ನನ್ನ ಹಣೇಬರಹ ಇದ್ದಾಂಗಾಯ್ತದೆ".

“ಅಂಗೆಲ್ಲ ಮಾತಡಬ್ಯಾಡ ನಾನು ಇನ್ನೂ ಬದುಕಿವ್ನಿಕಲ ಮಗ. ನಿನ್ನ ಉಳಿಸಿಕೋತಿನಿ”.

ತನ್ನ ಮೇಲೆ ಅಯ್ಯನಿಗಿರುವ ಪ್ರೀತಿಗಾಗಿ ಗಾಂಧಿಗೆ ಅಳು ಒಳಗಿನಿಂದ ಗುದ್ದುಕೊಂಡು ಬಂತು. ತನ್ನ ಪ್ರೀತಿಯ ಅಯ್ಯನ ತೊಡೆಯ ಮೇಲೆ ತಲೆ ಮಡಗಿಕೊಂಡು ದೃಷ್ಟಿಗೆ ದೃಷ್ಟಿ ಸೇರಿಸಿ ಹೇಳಿದ ; “ಅಯ್ಯ ನಾನು ಸತ್ತೋದ್ರೆ ನನ್ನ ನಮ್ಮ ಅಲಸಿನ ಮರದ ಬುಡದಲ್ಲೇ ಹಾಕಬೇಕು”. ಕರಿಸಿದ್ದೇಗೌಡ ಬಿಕ್ಕಿ ಬಿಕ್ಕಿ ಅತ್ತುಬಿಟ್ಟ. ನಿಂಗಕ್ಕ ‘ಬುಡ್ತು ಅನ್ನು’ ಎಂದು ಗಾಂಧಿಯನ್ನು ಗದರಿಕೊಂಡಳು. ಪದ್ದಿ ‘ಅಣ್ಣಾ ಅಣ್ಣಾ’ ಎಂದು ಬಿಕ್ಕಳಿಸಿ ಅತ್ತುಬಿಟ್ಟಳು.

ಇಷ್ಟೆಲ್ಲಾ ನಡೆಯುತ್ತಿರುವಾಗ ಎಂ.ಡಿ ಪಾಸು ಮಾಡಿರುವ ದೊಡ್ಡ ಡಾಕ್ಟರ್‌ಸಾಹೇಬರು ದಯಾಮಾಡಿಸಿ ಗಾಂಧಿಯನ್ನು ಪರೀಕ್ಷೆ ಮಾಡಿ, ಒಂದು ಚೀಟಿಯಲ್ಲಿ ಔಷಧಿಯನ್ನು ಬರೆದು ಆದಷ್ಟು ಬೇಗ ತರಿಸಬೇಕೆಂದು ಅಪ್ಪಣೆ ಮಾಡಿ, ಬೇರೆ ರೋಗಿಗಳನ್ನು ನೋಡತೊಡಗಿದರು. ಮಗಳು ಮತ್ತು ಮೊಮ್ಮಗಳ ಓಲೆಗಳನ್ನು ತೆಗೆದುಕೊಂಡು ಊರಿಗೆ ಬಂದು ಕರಿಸಿದ್ದೇಗೌಡ ಗಿರವಿ ಇಡಲು ಪ್ರಯತ್ನಿಸಿದ. ಯಾರೂ ಒಪ್ಪಲಿಲ್ಲ. ಸಾಲ ಪಡೆಯಲು ಯತ್ನಿಸಿದ. ಎಲ್ಲೂ ಒಂದು ಪೈಸೆ ಹುಟ್ಟಲಿಲ್ಲ. ಅಲಸಿನಮರ ಕೊಡುವುದಾರೆ ಕೊಂಡುಕೊಳ್ಳುವುದಾಗಿ ಸುಳಿವು ಸಿಕ್ಕಲು, ಇನ್ನೂರ ಐವತ್ತು ರೂಪಾಯಿಗಳಿಗೆ ಮರವನ್ನು ಮಾರಬೇಕಾದರೆ ಎರಡು ದಿವಸಗಳು ಹಿಡಿದವು. ಹಣ ಪಡೆದು ಕರಿಸಿದ್ದೇಗೌಡ ಬಸ್ಸು ಹತ್ತಿ ಆಸ್ಪತ್ರೆಯ ಬಳಿಗೆ ಬಂದಾಗ ಮಗಳು ನಿಂಗವ್ವ ಬಾಗಿಲಲ್ಲೆ ಪದ್ದಿಯನ್ನು ನಿಲ್ಲಿಸಿಕೊಂಡು ಅಳುತ್ತಾ ನಿಂತಿದ್ದಳು. ಕರಿಸಿದ್ದೇಗೌಡ, ‘ಗಾಂಧಿ ಹೇಗಿದ್ದಾನೆ?’ ಎಂದು ಕೇಳಲೇ ಇಲ್ಲ. ಬದಲು ‘ಯಾವಾಗ ಜೀವ ಹೋಯ್ತು’ ಎಂದು ಕೇಳಿದ.

“ರಾತ್ರಿ ಸರೊತ್ತಿನಲ್ಲಿ, ಹೆಣೀನ ಮನೇಲಿ ಮಲಗಿಸವ್ರೆ” ಎಂದು ಅಳಲು ಪ್ರಾರಂಭಿಸಿದ ಮಗಳನ್ನು ಸಂತೈಸುತ್ತ ಕರಿಸಿದ್ದೇಗೌಡ ಹೇಳಿದ: “ಮನುಷ್ರು ಸಾಯ್ದೆ ಕಲ್ಲು ಸತ್ತಾದ. ಸುಮ್ಕಿರು ಮಂತೆ” ಎಂದು ಗಾಂಧಿಯ ಹೆಣವನ್ನು ಪಡೆಯಲು ಅಪ್ಪಣೆಗಾಗಿ ದೊಡ್ಡ ಸಾಹೇಬರ ರೂಮಿನ ಕಡೆ ಹೆಜ್ಜೆ ಹಾಕಿದ.

**ಲೇಖಕರು**

ಬೆಸಗರ ಹಳ್ಳಿ ರಾಮಣ್ಣ (೧೯೩೮-೧೯೯೯) ವೃತ್ತಿಯಿಂದ ವೈದ್ಯರಾಗಿದ್ದವರು. ಬಂಡಾಯ ಚಳುವಳಿಯ ಪ್ರಸಿದ್ಧ ಲೇಖಕರಲ್ಲಿ ಒಬ್ಬರು. ಗ್ರಾಮೀಣ ಭಾಗದ ಬದುಕನ್ನು ಆಡು ಭಾಷೆಯಲ್ಲಿ ಚಿತ್ರಿಸುವುದರಲ್ಲಿ ಅವರು ಖ್ಯಾತರಾಗಿದ್ದಾರೆ. ಬಡವರ ಮತ್ತು ಅಸಹಾಯಕರ ಜೀವನವನ್ನು ಪ್ರೀತಿಯಿಂದ ಚಿತ್ರಿಸುವುದು ಅವರ ಕತೆಗಳ ವಿಶಿಷ್ಟತೆಯಾಗಿದೆ. ‘ಗರ್ಜನೆ’, ‘ಒಂದು ಹುಡುಗನಿಗೆ ಬಿದ್ದ ಕನಸು’, ‘ಹರಕೆಯ ಹಣ’ ಅವರ ಮುಖ್ಯಕಥಾಸಂಕಲನಗಳು. ‘ಗರ್ಜನೆ’ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಆಕಾಡೆಮಿ ಬಹುಮಾನ ಬಂದಿದೆ.

**ಆಶಯ**

ಪ್ರಸ್ತುತ ಕತೆಯನ್ನು ‘ಒಂದು ಹುಡುಗನಿಗೆ ಬಿದ್ದ ಕನಸು’, ಸಂಕಲನದಿಂದ ಆರಿಸಿಕೊಳ್ಳಲಾಗಿದೆ. ಈ ಕತೆಯ ಬಡ ಕುಟುಂಬದ ರೋಗಿಯೊಬ್ಬನ ದಾರುಣ ಪರಿಸ್ಥಿತಿಯ ಮೇಲೆ ಬೆಳಕು ಬೀರುತ್ತದೆ. ಬಡವರು ನಮ್ಮ ದೇಶದಲ್ಲಿ ವೈದ್ಯಕೀಯ ಸೌಲಭ್ಯ ಪಡೆಯಲು ಪಡಬೇಕಾದ ಪಾಡನ್ನು ಕತೆ ನೀರೂಪಿಸುತ್ತದೆ. ತಾಂಧಿಯ ಮೌಲ್ಯಗಳಿಗೆ ಈ ದೇಶದಲ್ಲಾಗಿರುವ ಅವಸ್ಥೆಯನ್ನು ಕತೆ ವಿಡಂಬನೆ ಮಾಡುತ್ತದೆ.

**ಪದಕೋಶ**

ಸರೊತ್ತು = ಮಧ್ಯರಾತ್ರಿ, ಗಿರವಿ =ಅಡ ಇಡುವುದು, ವಸಿ =ಸ್ವಲ್ಪ, ಮಂತೆ = ಮತ್ತೆ

**ಪ್ರಶ್ನೆಗಳು**

೧. ಕರಿಸಿದ್ದೇಗೌಡನು ತನ್ನ ಮೊಮ್ಮಗನಿಗೆ ಗಾಂಧಿಯ ಹೆಸರನ್ನು ಇಡಲು ಕಾರಣವೇನು?

೨. ಗಾಂಧಿ ಕತೆ ನಮ್ಮ ಭಾರತದ ವರ್ಧಮಾನದ ವಿಷಮತೆಯನ್ನು ಹೇಗೆ ಚಿತ್ರಿಸುತ್ತದೆ?

೩. ಗಾಂಧಿಯು ಆಸ್ಪತ್ರೆಗೆ ಬಂದಾಗ ವೈದ್ಯರ ಪ್ರತಿಕ್ರಿಯೆಗಳನ್ನು ವಿವರಿಸಿರಿ.

**ಪೂರಕ ಓದು**

೧. ಬೆಸಗರ ಹಳ್ಳಿ ರಾಮಣ್ಣ ಅವರ 'ಪ್ರಜಾಭುತ್ತ ಮತ್ತು ಮೂರು ಮಂಗಗಳು'ಕತೆ.

೨. ಚಂದ್ರಶೇಖರ ಪಾಟೀಲ ಅವರ 'ಗಾಂಧೀಸ್ಮರಣೆ' ಕವನ ಸಂಕಲನ.

೩. ಇದೇ ಪುಸ್ತಕದಲ್ಲಿರುವ ತ್ರಿವೇಣಿಯವರ 'ಬೆಡ್‌ನಂಬರ್‌ಏಳು' ಕತೆ.

೪. ಪಿ ಲಂಕೇಶ್‌ಅವರ 'ಮುಟ್ಟಿಸಿಕೊಂಡವನು' ಕತೆ.

೫. ಪೂರ್ಣಚಂದ್ರ ತೇಜಸ್ವಿ ಅವರ 'ಕುಬಿ ಮತ್ತು ಇಯಾಲ' ಕತೆ.

೬. ಡಾ. ಅನುಪಮಾ ನಿರಂಜನ ಅವರ ಕತೆಗಳು.

೭. ಡಾ. ಶಿವರಾಂ ಅವರ 'ಮನೋನಂದನ' ಎಂಬ ಮನೋವೈದ್ಯನ ಅನುಭವಗಳನ್ನು ಆಧರಿಸಿದ ಕೃತಿ.

# ೧೨. ಬೆಲ್ಚಿಯ ಹಾಡು

ದೊಡ್ಡಗೌಡರ ಬಾಗಿಲೀಗೆ
ನಮ್ಮ ಮೂಳೆಯ ತ್ವಾರಣ
ನಮ್ಮ ಜನಗಳ ಕಾಲು ಕಯ್ಯಿ
ಕಂಬ ಅವರ ಹಟ್ಟಿಗೆ

ಅವರ ಬೇಟೆಗೆ ನಾವು ಮೊಲಗಳು
ನಮ್ಮ ಬಾಳೇ ಬಂಗಲೆ
ಅವರ ಬಂಗಲೆಯಂಗಳಕ್ಕೆ
ನಮ್ಮ ರಕ್ತದ ರಂಗಾಲೆ

ಅವರ ತೋಟದಲ್ಲಿ ತೆಂಗಿನಲ್ಲಿ
ನಮ್ಮ ರಕ್ತದ ಎಳನೀರು
ಅವರ ಅಮಲಿನ ಗುಂಗಿನಲ್ಲಿ
ಕೂಲಿ ಹೆಣ್ಣಿನ ಕಣ್ಣೀರು

ಯಾವ ಪಾಪವ ಮಾಡಲಿಲ್ಲ
ಯಾರ ತಲೆಯನು ಹೊಡೆಯಲಿಲ್ಲ
ಕರಗಿ ನಮ್ಮಯ ಬಾಳಕತ್ತಲು
ಕಾಣಲಾರವೆ ಹಗಲನು

**ಲೇಖಕರು**

ಸಿದ್ಧಲಿಂಗಯ್ಯನವರು (೧೯೫೪) ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಇವರು ಕನಡದಲ್ಲಿ ದಲಿತ ಸಂವೇದನೆಯ ಕಾವ್ಯವನ್ನು ಉದ್ಘಾಟಿಸಿದವರು. ೧೯೭೫ರಲ್ಲಿ ಪ್ರಕಟವಾದ ಇವರ 'ಹೊಲೆಮಾದಿಗರ ಹಾಡು' ಕವನ

ಸಂಕಲನವು ಕನ್ನಡದಲ್ಲಿ ಬಹಳ ಪ್ರಭಾವ ಬೀರಿತು. ನಂತರ 'ಸಾವಿರಾರು ನದಿಗಳು' 'ಕಪ್ಪುನಾಡಿನ ಹಾಡು' ಎಂಬ ಎರಡು ಸಂಕಲನಗಳು ಪ್ರಕಟವಾದವು. ಅವರ ಅನೇಕ ಹಾಡುಗಳು ಚಳುವಳಿಯಲ್ಲಿ ಹಾಡುಗಳಾಗಿ ಬಳಕೆಯಾಗುತ್ತಿವೆ. ನೋವು ಕೋಪ ವಿಷಾದಗಳನ್ನು ತುಂಬಿಕೊಂಡ ಕಾವ್ಯ ಬರೆಯುವ ಸಿದ್ಧಲಿಂಗಯ್ಯನವರು, ಗದ್ಯದಲ್ಲಿ ತಮ್ಮ ಹಾಸ್ಯಪ್ರಜ್ಞೆಯನ್ನು ಹೊರಹಾಕುತ್ತಾರೆ. ಅವರ ಆತ್ಮ ಕಥೆಯಾದ 'ಊರುಕೇರಿ' ಹಾಗೂ ವಿಚಾರ ಲೇಖನಗಳಿರುವ 'ಅವತಾರಗಳು' ಕೃತಿಗಳಲ್ಲಿ ಇದನ್ನು ಕಾಣಬಹುದು. 'ಕರ್ನಾಟಕದ ಗ್ರಾಮದೇವತೆ' ಗಳ ಬಗ್ಗೆ ಸಂಶೋಧನೆ ಮಾಡಿರುವ ಸಿದ್ಧಲಿಂಗಯ್ಯನವರು ಜನಪ್ರಿಯ ಭಾಷಣಕರಾರು. ಅವರು ಕರ್ನಾಟಕದ ವಿಧಾನ ಪರಿಷತ್ತಿನ ಸದ್ಯರಾಗಿ ಸೇವೆ ಸಲ್ಲಿಸಿದ್ದಾರೆ.

**ಆಶಯ**

ಪ್ರಸ್ತುತ ಕವನವನ್ನು ಅವರ 'ಸಾವಿರಾರು ನದಿಗಳು' ಕವನ ಸಂಕಲನದಿಂದ ಆಯ್ದುಕೊಂಡಿದೆ. ಕವನವು ದಲಿತರು ತಮ್ಮ ನೋವನ್ನು ಹೇಳಿಕೊಳ್ಳುವುದನ್ನು ಚಿತ್ರಿಸುತ್ತದೆ. ಆದರೆ ನೋವಿನ ಒಳಗೂ ಅವರು ತಮ್ಮ ಕನಸುಗಳನ್ನು ಕಾಣುವುದನ್ನು ಕೂಡ ಕವನ ಕಾಣಿಸುತ್ತದೆ.

**ಪದಕೋಶ**

ರಂಗಾಲೆ = ರಂಗೋಲೆ

**ಟಿಪ್ಪಣಿ**

ಬೆಲ್ಚಿ = ಬಿಹಾರದ ಒಂದು ಹಳ್ಳಿಯ ಹೆಸರು. ಇಲ್ಲಿ ಸವರ್ಣೀಯ ಜಮೀನುದಾರರು ಕೂಲಿಕಾರರಾದ ದಲಿತರನ್ನು ಬರ್ಬರವಾಗಿ ಕೊಂದು ಹಾಕಿದ ಘಟನೆ ನಡೆಯಿತು.

**ಪ್ರಶ್ನೆಗಳು**

೧. ದೊಡ್ಡಗೌಡರ ಮನೆಗೆ ದಲಿತರ ಬಡವರ ಅಂಗಾಂಗಗಳು ಬಳಕೆಯಾಗಿರುವ ಇಲ್ಲಿನ ಚಿತ್ರ ಏನನ್ನು ಸೂಚಿಸುತ್ತದೆ?
೨. ಬಡವರು ಉಳ್ಳವರ ವಿಲಾಸಕ್ಕೆ ಹೇಗೆ ಬಲಿಪಶುಗಳಾಗುತ್ತಾರೆ?
೩. ದಲಿತರು ತಮ್ಮ ಬಾಳಿನಲ್ಲಿ ಏನನ್ನು ಆಶಿಸುತ್ತಿದ್ದಾರೆ?
೪. ಕವನವು ಹೇಗೆ ಅಸಹಾಯಕರ ವಿಷಾದ ಗೀತೆಯಾಗಿದೆ? ವಿಶ್ಲೇಷಿಸಿರಿ.

**ಪೂರಕ ಓದು**

೧. ಶಿವರಾಮ ಕಾರಂತರ 'ಚೋಮನದುಡಿ' ಕಾದಂಬರಿ.
೨. ಕೊರ್ಡ್ಕಲ್‌ಶ್ರೀನಿವಾಸರಾಯರ 'ದನಿಯರ ಸತ್ಯನಾರಾಯಣ' ಕತೆ.
೩. ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು' ಕವನ ಸಂಕಲನದ ಕವನಗಳು.
೪. ದೇವನೂರ ಮಹಾದೇವ ಅವರ 'ದ್ಯಾವನೂರು' ಕಥಾಸಂಕಲನ ಹಾಗೂ 'ಒಡಲಾಳ' ಕಾದಂಬರಿ.
೫. ಅರವಿಂದ ಮಾಲಗತ್ತಿ ಅವರ 'ಗೌರ್ಮೆಂಟ್‌ಬ್ರಾಹ್ಮಣ' ಆತ್ಮಕಥೆ.

# ೧೩. ಎಲ್ಲ ಹುಡುಗಿಯರ ಕನಸು

ಅವ್ವ ಕೇಳೇ ನಾನೊಂದ ಕನಸ ಕಂಡೇ . . . .
ಅವ್ವ ಕೇಳೇ ಕನಸೊಂದ ನಾ ಕಂಡೆನೆ . . . .
ಮುಂಗೋಳಿ ಕೂಗಿತ್ತು ಮೂಡಲ್ಲಿ ಕಂಪಿತ್ತು
ಬೆಳ್ಳಿಯೂ ಮರಳಿತ್ತು ಹಕ್ಕಿಯೂ ಹಾಡಿತ್ತು
ಮಲ್ಲಿಗೆ ಸಂಪಿಗೆ ಘಮ್ಮೆಂದು ಬಿರಿದಿತ್ತು
ಹಾದೀಲಿ ಇಬ್ಬನಿಯು ಮುತ್ತಾಗಿ ಸುರಿದಿತ್ತು ‖ ಅವ್ವ‖
ಕಣ್ಣರೆಪ್ಪೆ ಬಿಗಿಯೆ ಕದ ತಟ್ಟಿ ಒಳಬಂದ
ಕಾರಿರುಳ ಕೆಂಜೆಡೆಗೆ ಚಂದಿರನ ಮುಡಿದಿದ್ದ
ಕಾಲ್ಗೆಜ್ಜೆ ಕುಣಿಸುತ್ತ ಶರಣು ಶರಣು ಅಂದ
ಮುಕ್ಕಣ್ಣ ತಾನೆಂದು ಮುಂಗೈಗೆ ಮುತ್ತಿಟ್ಟ
ಕೀಟಲೆ ನಗೆ ನಕ್ಕು ಕಪ್ಪರವ ಮುಂದಿಟ್ಟ
ಒಲ್ಲೆ ಎಂದರೂ ಬಿಡದೆ ಒಲವು ಬೇಡಿದನವ್ವ
ಮುದ್ದಾಗಿ ಮಾತಾಡಿ ಮರುಳು ಮಾಡಿದನವ್ವ ‖ ಅವ್ವ‖
ತುಂಬೆಯ ಹೂ ಬಿಡಿಸಿ ತುರುಬಿಗೆ ಮುಡಿಸಿದ
ಒಂದೊಂದು ಕಿವಿಯಲ್ಲೂ ದುಂಬಿಯ ಇರಿಸಿದ
ಮಿಂಚಿನ ಹುಳುವಲ್ಲೇ ಮೂಗುತಿಯ ಮಾಡಿದ
ನೇರಳೆ ಹಣ್ಣಿನ ಹಾರವ ತೊಡಿಸಿದ
ಕೀಟಲೆ ನಗೆ ನಕ್ಕು ಕಪ್ಪರವ ಮುಂದಿಟ್ಟ
ಒಲ್ಲೆ ಎಂದರೂ ಬಿಡದೆ ಒಲವು ಬೇಡಿದನವ್ವ . . .
ಮುದ್ದಾಗಿ ಮಾತಾಡಿ ಮರುಳು ಮಾಡಿದನವ್ವ ‖ ಅವ್ವ‖
ಹುಲಿಚರ್ಮ ಹೊದ್ದರೂ ಹಾಲು ಮನಸಿನ ಹುಡುಗ
ಡೊಳ್ಳ ಬಾರಿಸಿ, ಢಕ್ಕೆಯ ಬಡಿದು, ಡಮರುಗ ನುಡಿಸಿದ
ನವಿಲ ಹಾಗೆ ಕುಣಿದು ಮಿಂಚು ಮಳೆ ಕರೆದ
ಹಕ್ಕಿಪಿಕ್ಕಿಯಂಗೆ ಕೂಗಿ ನಕ್ಕೂನಗಿಸಿದ
ಕೀಟಲೆ ನಗೆ ನಕ್ಕು ಕಪ್ಪರವ ಮುಂದಿಟ್ಟ
ಒಲ್ಲೆ ಎಂದರೂ ಬಿಡದೆ ಒಲವು ಬೇಡಿದನವ್ವ . . .
ಮುದ್ದಾಗಿ ಮಾತಾಡಿ ಮರುಳು ಮಾಡಿದನವ್ವ ‖ ಅವ್ವ‖
ಚಪ್ಪರ ತೋರಣ ಒಡವೆ ಓಲಗವಿಲ್ಲ
ಮಂಟಪ ಮಂಡಿಗೆ ಧಾರೆ ದಿಬ್ಬಣವಿಲ್ಲ
ಆರತಿ ಎತ್ತಲು ಮುತ್ತೈದೆಯರಿಲ್ಲ
ಮಂತ್ರಗಳಿಲ್ಲ ಶಾಸ್ತ್ರಗಳಿಲ್ಲ . . .
ಮಸಣದೊಳಗೆ ಮದುವಣಗಿತ್ತಿ ನಾನಾದೆನವ್ವ . . .
ಬೂದಿಬಡುಕನ ಬಾಳ ಬೆಳಗಿದೆನವ್ವ . . . ‖ ಅವ್ವ ‖

ಕದಳಿಯ ಬನದೊಳಗೆ ಕಾದಿಹನವ್ವ . . .
ಕಣಗಿಲೆ ಹೂ ಹಾಸಿ ಕಾದಿಹನವ್ವ . . .
ಕಣ್ಣ ಬತ್ತಿಯ ಉರಿಸಿ ಕಾದಿಹನವ್ವ . . .
ಜನುಮ ಜನುಮದ ಒಲವು ಫಲಗೂಡಿತವ್ವ . . .
ಹುಟ್ಟು ಸಾವಿನಾಚೆಯ ದಡದಿ ಮನೆ ಮಾಡಿಹನವ್ವ . . .
ತಪ್ಪೋ ಒಪ್ಪೋ ಮನ್ನಿಸಿ ಹರಸವ್ವ
ತಪ್ಪೋ ಒಪ್ಪೋ ಹರಸಿ ನೀ ಕಳಿಸವ್ವ ॥ ಅವ್ವ ॥

**ಲೇಖಕರು**

ಸವಿತಾ ನಾಗಭೂಷಣ (೧೯೬೧) ಅವರು ಅಂಚೆ ಇಲಾಖೆಯಲ್ಲಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ. 'ಸ್ತ್ರೀಲೋಕ' ಅವರ ಕಾದಂಬರಿ. 'ನಾ ಬರುತ್ತೇನೆ ಕೇಳು', 'ಚಂದ್ರನನ್ನು ಕರೆಯಿರಿ ಭೂಮಿಗೆ', 'ಹೊಳೆಮಗಳು' ಅವರ ಕವನ ಸಂಕಲನಗಳು.

**ಆಶಯ**

ಪ್ರಸ್ತುತ ಕವನವನ್ನು ಅವರ 'ನಾ ಬರುತ್ತೇನೆ ಕೇಳು' ಸಂಕಲನದಿಂದ ಆಯ್ದುಕೊಳ್ಳಲಾಗಿದೆ. ಕವನದ ನಾಯಕಿಯು ತನ್ನ ಅವ್ವನ ಮುಂದೆ ತನಗೆ ರಾತ್ರಿ ಬಿದ್ದ ಕನಸನ್ನು ಹೇಳಿಕೊಳ್ಳುವ ವಿಧಾನದಲ್ಲಿ ಕವನವಿದೆ. ಇದರಲ್ಲಿ ತನ್ನನ್ನು ಪ್ರೇಮಿಸಿರುವ ಗಂಡು ತನ್ನ ಒಲವನ್ನು ಪಡೆಯಲು ಮಾಡಿದ ನಾನಾ ಪ್ರಯತ್ನಗಳನ್ನು ಆಪ್ತವಾಗಿ ಆಕೆ ವರ್ಣಿಸುತ್ತಾಳೆ. ಜತೆಗೆ ತಾನು ಅವನ ಜತೆ ಮಾಡಿಕೊಂಡ ವಿಶಿಷ್ಟ ರೀತಿಯ ಮದುವೆಯನ್ನು ವಿವರಿಸುತ್ತಾಳೆ.

**ಪದಕೋಶ**

ಕಾರಿರುಳು = ಕಪ್ಪಾದ ರಾತ್ರಿ, ಕಪ್ಪರ = ಭಿಕ್ಷಾಪಾತ್ರೆ.

**ಟಿಪ್ಪಣಿ**

ಬೆಳ್ಳಿ = ಬೆಳಕಿನ ಜಾವದಲ್ಲಿ ಆಗಸದಲ್ಲಿ ಹೊಳೆಯುವ ಶುಕ್ರಗ್ರಹ, ಕದಳಿಯ ಬನ = ಶ್ರೀಶೈಲ ಪರ್ವತದಲ್ಲಿರುವ ಒಂದು ಸ್ಥಳ, ಮಂಡಿಗೆ = ಮದುವೆಯಲ್ಲಿ ಹಾಡಲಾಗುವ ಒಗಟಿನಂತಹ ಹಾಡು.

**ಪ್ರಶ್ನೆಗಳು**

೧. ಕವನದ ನಾಯಕಿ ತನ್ನ ಕನಸನ್ನು ಅವ್ವನ ಮುಂದೆ ಹೇಗೆ ಬಣ್ಣಿಸಿ ಹೇಳುತ್ತಾಳೆ?
೨. ಕನಸ್ಸಿನಲ್ಲಿ ಬಂದ ನಲ್ಲನು ಒಲವು ಬೇಡಿದ ನಾನಾ ಪರಿಗಳು ಎಂಥವು?
೩. ತನ್ನ ಮದುವೆಯ ವಿಶಿಷ್ಟ ವಿಧಾನವನ್ನು ಕವನದ ನಿರೂಪಕಿ ಹೇಗೆ ಯಾವ ರೀತಿಯಲ್ಲಿ ವಿವರಿಸುತ್ತಾಳೆ?

**ಪೂರಕ ಓದು**

೧. ೧೨ನೇ ಶತಮಾನದ ಕವಯಿತ್ರಿ ಅಕ್ಕಮಹಾದೇವಿಯ ವಚನಗಳು.
೨. ಪ್ರತಿಭಾ ನಂದಕುಮಾರ್ ಅವರ 'ನಾವು ಹುಡುಗಿಯರೆ ಹೀಗೆ' ಕವಿತೆ.
೩. ಎಚ್‌ಎಲ್‌ಪುಷ್ಪ ಅವರ 'ಗಾಜುಗೊಳ' ಕವನ ಸಂಕಲನ.
೪. ವೀಣಾ ಅವರ 'ಗಂಡಸರು' ಕಾದಂಬರಿ.
೫. ವೈದೇಹಿ ಅವರ ಸಣ್ಣಕತೆಗಳು.

# ೧೪. ನೀರು

'ಏನಪ್ಪ ಈ ದಗೆ ಉಬ್ಸಾ ಉಸ್ಸಪ್ಪಾ. ಈ ಆಳಾದ ಮಳೆಗಳೂ ಉಯ್ಯಲ್ಲೊ. ಅಸುನಿ ಬತ್ತು ವೊಯ್ತು. ರೇವತಿ , ಭರಣಿ, ಉಬ್ಬೆ ಎಲ್ಲಾ ಮಳೆಗಳೂ ಬಂದೊ ವೋದೊ. ಒಂದೂ ಕಣ್‌ಬುಟ್ಟು ನೋಡ್ನಿಲ್ವಲ್ಲ? ದಗೆ ಕತ್ತಗ ಬೇಯತದಲ್ಲೊ ಪರಮಾತ್ಮ. ನಮ್ಗೇ ಇಂಗಾದ್ರೆ ಇನ್ನು ಮುದುಕರು, ಮೋಟ್ರು ಎಂಗೆ ತಡಕಂಡರಪ್ಪ? ಊರಾದ ಊರೆ ಬ್ಯಾಸಗೆ ಜಳಕ್ಕೂ ಅದಕೂ ಜಿಗುಟದ್ರೆ ಜೀಂವ ಮೋಗಂಗದೆ. ಜನಗಳು ಎಂಗೋ ಅಂಗೇ ಮಳೆಗಳೂ ಆದೊ ತಕೊ. ಇನ್ನೊಂದದೆ ಕೆರೆ ಕಟ್ಟೆ ಒಂದ್‌ಮಾಡೊ ರೋಣಿ ಮಳೆ. ಅದೂ ಕದ್ರೆ ಜನಾದನಾ ಎಲ್ಲಾ ಒಟ್ಟಿಗೆ ಊರು ಕೇರಿ ಬುಡದೇ' ಎಂದು ಸೆಕೆ ತಾಳಲಾರದೆ ಹನುಮಣ್ಣ ತನ್ನ ಮೈ ಮೇಲಿದ್ದ ಶರಟನ್ನು ತೆಗೆದು ಒಂದು ಮೂಲೆಗೆ ಎಸೆದು ತನ್ನ ಮನೆಯೊಳಗೆ ಆತುಕೊಂಡು ಬಿದ್ದಿದ್ದ.

ಸುತ್ತಮುತ್ತಲಿನ ಹಳ್ಳಿಗಳು ಅಲ್ಲಿಯ ಜನರು ಮಳೆ ಇಲ್ಲದೆ ಬೆಳಸು ಕಾಣದೆ ಊರಿಗೆ ಕವುಚಿಕೊಂಡಿರುವ ಬರದ ಬವಣೆಯಲ್ಲಿ ಬಳಲುತ್ತಿದ್ದರು. ಅನ್ನಮಾರ್ಗ ಕಾಣದ ಜನರು ಮಳೆ ತರುವ ಸಿಳ್ಳಪ್ಪನ ನೆನೆಯುತ್ತಿದ್ದರು. ಅವನ ಜಾತ್ರೆಯನ್ನು ಮಾಡಬೇಕೆಂದು ಊರೂರಿಗೆ ಪತ್ರ ಬಿಟ್ಟಿದ್ದರು. ಇದು ಸುತ್ತಮುತ್ತಲ ಹಳ್ಳಿಗಳಲ್ಲಿ ಪ್ರಚಾರವಾಯಿತು. ಜನ ಹೌದು ಹೌದು ಮಾಡಬೇಕೆಂದು. ಮೂರಕ್ಷರ ಕಂಡಿರುವ ಹುಡುಗರು ಮಾತ್ರ ಈ ಹಬ್ಬದ ಹಿಂದಿರುವ ಮೂಡನಂಬಿಕೆಯನ್ನು ಹೀಗೆಳೆದರು. ಇವಕ್ಕೆಲ್ಲ ಮಳೆ ಬರುವಂತಿದರೆ ಕತ್ತೆ ಮೆರವಣಿಗೆ ಮಾಡಿದ ಊರುಗಳೆಲ್ಲಾ ಮಳೆ ಬರಬೇಕಿತ್ತೆಂದು ಗೇಲಿ ಮಾಡುತ್ತಿದ್ದರು.

ಊರ ಹಿರಿಯರು ಮೂಖಂಡರು ಇದು ಊರು ಹಾಳುಮಾಡುವ ಕೂಳೆ ಹುಡುಗರ ಬುದ್ಧಿ ಎಂದು ಲೆಕ್ಕಿಸದೆ, ಹಬ್ಬದ ದಿನವನ್ನು ನಿಗಧಿ ಪಡಿಸಿದರು. ಅಕ್ಕಪಕ್ಕದ ಊರುಗಳಿಂದೆಲ್ಲಾ ಹಬ್ಬದ ಬಗ್ಗೆ ಸಮ್ಮತಿ ಸೂಚಿಸಿ . ಊರಿನ ಮುಖ್ಯಸ್ಥರು ಖುದ್ದಾಗಿ ಬಂದು ಸುದ್ದಿ ಮುಟ್ಟಿಸಿ, ಜಾತ್ರೆಯ ರೂಪರೇಖೆ ಚರ್ಚಿಸಿ ತೀರ್ಮಾನ ಕೈಕೊಳ್ಳುವಂತೆ ಹೇಳಿ ಹೋದರು.

ಅಂದುಕೊಂಡಂತೆ ಸಿಳ್ಳಪ್ಪನ ಜಾತ್ರೆ ಬಂತು. ಸುತ್ತೆಲ್ಲಾ ಊರುಗಳ ಜನ ಜಾತ್ರೆಗೆ ಸೇರಿದರು. ಅಂದು ದೂಪ ದೀಪ ಹೆಚ್ಚಾಗಿ ನಡೆಯುತ್ತಿತ್ತು. ಜಾತ್ರೆ ಮುಗಿದು ಮಂಗಳಾರತಿ ಎತ್ತುವ ಸಮಯ. ಇನ್ನೇನು ಮುಗಿಯಿತು ಎನ್ನುತ್ತಿದ್ದಂತೆ ಆಕಾಶದಲ್ಲಿ ಮೋಡ ಆಡುವುದಕ್ಕೆ ಸುರುವಾಯಿತು. ಇಸಾನಿ ಮೂಲೆಯಲ್ಲಿ ತಳಾರ್ನೆ ಮಿಂಚೇರಿತು. ಸಿಳ್ಳೊಡೆದು ಗುಡುಗುತ್ತಾ ಮಳೆ ಬಂತು. ಜನ ಬಾಯಿಯ ಮೇಲೆ ಬೆರಳು ಇಟ್ಟುಕೊಂಡಿತು. 'ನೋಡದ್ರ್ಯ ಸಿಳ್ಳಪ್ಪನ ಮಹಿಮೆ, ಕಣ್‌ಕಾಣದ ಜನ ಅಂತದಲ್ಲ'! ಎಂದು ಅವನ ಮಹಿಮೆಯ ಹೊತ್ತುಕೊಂಡು ಮೆರೆಯುತ್ತಿದ್ದರು. ಬಂದ ಮಳೆ ಬಿಡದೆ ಸುರಿಯುತ್ತಿತ್ತು. ಬಂದಿದ್ದ ಜನ ಎಲ್ಲೆಲಿದ್ದರೋ ಅಲ್ಲಲ್ಲೆ ತಂಗಿದರು. ಊರಾದ ಊರೆ ಎಷ್ಟೊತ್ತಿಗೆ ಮಳೆ ನಿಂತರೂ ಸರಿಯೆ. ಬೇಕಾದರೆ ನೇಗಲಿಗೆ ಲಾಟೀನ ಕಟ್ಟಿಕೊಂಡು ಹೊಲ ಉಳುವುದಾಗಲಿ ಎಂದು ತಣ್ಣಗೆ ಯೋಚಿಸುತ್ತಿದ್ದರು. ಮಳೆ ಬಿಡದೆ ಸುರಿಯುತ್ತಿತ್ತು.

ಊರಿನ ಕೆರೆ ಸುತ್ತೆಲ್ಲಾ ಊರುಗೂ ದಾತನಾಗಿದ್ದ ದೊಡ್ಡಕೆರೆ. ಇದರ ಸುತ್ತಾ ಎದೆಯ ಸೀಳಿಕೊಂಡು ಮಲಗಿದ್ದ ಹಳ್ಳದಲ್ಲಿ ಹರಿಯುವುದು ಪನ್ನೀರು. ಅದು ಕೋಡಿ ಬಿದ್ದು ಹೊರಳಿದರೆ ಮರಳುತ್ತಿದ್ದವು ಮರಳಿ ಮೀನುಗಳು. ಅವು ಆತುಕೊಳ್ಳಲು ಸಾಲಾಗಿರುವ ಹೊಂಗೆ ಮರಗಳ ಮೇಲೆ ಕುಳಿತಿರುತ್ತಿದ್ದವು ಕೊಕ್ಕರೆಗಳು. ಧಾರಾಕಾರವಾಗಿ ಸುರಿಯುತ್ತಿದ್ದ ಮಳೆ ಸುತ್ತೆಂಟು ತಿಟ್ಟುಗಳಿಂದ ನೂರೆಂಟು ಹೊಳ್ಳಗಳಾಗಿ ಸದು ಸಿಕ್ಕಿದ ಕಡೆಯಲೆಲ್ಲಾ ಹರಿದು ನೀರು ನುಗ್ಗಿ ಬಂದು ಕೆರೆಯ ಸೇರುತ್ತಿತ್ತು.

ನೀರು ಸೇರಿದಂತೆ ಕೆರೆಯ ಹಿಗ್ಗುತ್ತಿತ್ತು. ಕೆರೆ ಹಿಗ್ಗಿ ಹಿಗ್ಗಿ ವಜನ್‌ತಡೆಯಲಾರದೆ ಕೆರೆಯ ಏರಿಯು ಕಿತ್ತು ಗಾಢವಾದ ಕತ್ತಲೆಯ ಮೌನವ ಸೀಳಿ ಕೆರೆಯು ಬಯಲಾಯ್ತು. ಮೌನವಾಗಿದ್ದ ಈ ರಾತ್ರಿಯಲ್ಲಿ ನುಗ್ಗಿದ ನೀರಿನಿಂದ ಎದ್ದ ಸದ್ದಿಗೆ ಸಕಲ ಪ್ರಾಣಿ ಪಕ್ಷಿಗಳಿಗೆ ನಿದ್ರಾಭಂಗವಾಯ್ತು. ದನಕರುಗಳು ಎದ್ದು ಮೈ ಮುರಿದವು. ಬಲ ನುಲಿದವು. ಕೋಳಿಗಳು ಕೊರಗರೆದವು. ಕೊತ್ತಿಗಳು ಮೊಗ್ಗಲು ಬದಲಿಸಿದವು. ಜನ ನಿದ್ರೆ ಕಳೆದುಕೊಂಡು ಜಾತ್ರೆಗೆ ಹೋಗಿದ್ದ ತಮ್ಮ ಮನೆಯ ಜನರ ನೆನೆಯುತ್ತಿದ್ದರು. ತುಂಬಿ ತುಳುಕುತ್ತಿದ್ದ ಕೆರೆ ಬೆಳಕು ಹರಿಯುವುದರಲ್ಲಿ ಇದ್ದು ಇಲ್ಲದಂತಾಯ್ತು. ಅದು ಎಬ್ಬಿಸಿ ಹೋದ ಸದ್ದು ಜನರ ಕಿವಿಯಲ್ಲಿ ಮೊರಗರಿಯುತ್ತಿತ್ತು.

ಈ ಗುಡಿಸಲು ಗಿಡಗಳ ಮೇಲೆ ಗೂಡು ಕಟ್ಟಿ ಗೌಜಲಕ್ಕಿಗೆ ಗೆಜ್ಜಲಾಗಿತ್ತು. ಈ ಗುಡಿಸಿಲಿನಲ್ಲಿ ಸೂಲು ಎರಡಾಗಿ ಎರಡು ನಾಕಾಗಿ ಸೂಲಾಡುತ್ತಿದವು. ಈ ಅಗಾಧ ಶಕ್ತಿಯ ಗಂಗವ್ವ ಕರುಣೆ ತೋರದೆ ಭೋರ್ಗರೆಯುತ್ತಾ ಬಂದವಳೆ ತನಗೆ ಸರಿಸಾಟಿಯಲ್ಲದ ಈ ಗುಡಿಸಿಲನ್ನು ಸೆಳೆದು ಚಿಂದಿ ಚಿಂದಿಯ ಮಾಡಿದಳು. ಅದು ಸೆತ್ತೆ ಸಿದಕಲುಗಳಲ್ಲಿ ತರಗಲೆಯ ಚೂರು ಚೂರುಗಳಂತೆ ಸಿಕ್ಕಿಕೊಂಡಿತು. ಏಕಾಂಗಿಯಾಗಿ ಮಲಗಿ ಸೂಲಾಡುತ್ತಿದ್ದ ಜವರಣ್ಣನ ಜೀವವು ಇದರ ರಭಸಕ್ಕೆ ಕೊಚ್ಚಿಕೊಂಡು ಹೋಗಿ ಗೊಬ್ಬಳಿ ಮರದಲ್ಲಿ ಸಿಕ್ಕಿಯಾಕಿಕೊಂಡು ನರಳಾಡುತ್ತಿತ್ತು. ಇವನ ಮುಂದೆಯೇ ಕಾಡೆಣಗಳಿಗೆ ಆಶ್ರಯವಾಗಿದ್ದ ದೈತ್ಯಾಕಾರದ ಆಲದಮರ ಕೈ ಬೀಸಿ ಕರೆವಂತೆ ಸುಂಯ್ಯೆಂದು ಗಾಳಿ ಬೀಸಿತು. ಅದರ ಪಕ್ಕವೇ ಸುಂಟರಗಾಳಿ ಎದ್ದು ಗಿರಿಯಮ್ಮನನ್ನು ಹೊತ್ತು ಒಯ್ಯುತ್ತಿದ್ದಾಗ ತಡೆದಿಟ್ಟುಕೊಂಡು ಮನೆಯವರಿಗೆ ಒಪ್ಪಿಸಿದ್ದ ಸೀಗೆ ಬೇಲಿ ಅಡ್ಡಗಟ್ಟಿತ್ತು. ಅದು ಹುಣಸೆ ಮರಗಳ ಒತ್ತಾಸೆಯಿಂದ ಗೀ ಎನ್ನುತ್ತಿದ್ದ ದಿವಾನರ ಮಾವಿನ ತೋಪಿನಲ್ಲಿ ಲೀನವಾಗಿತ್ತು. ಇದಕ್ಕೆ ತಗುಲಿಕೊಂಡಂತೆ ತಂಪಿನ ದೊಡ್ಡಮ್ಮ, ಸಿದ್ರಾಶ್ಯಾಮೆಯ ಸಿದ್ಧಪ್ಪಾಜಿ, ಸಿಡಿ ಮಾರಮ್ಮನವರು, ಸಿಳ್ಳೊಡೆವ ಸಿಳ್ಳಪ್ಪನವರು ಈ ದೇವಮಾನವರು ಇದನ್ನು ನೋಡುತ್ತಾ ಹಟ ತೊಟ್ಟಂತೆ ಜಾಗ ಬದಲಿಸದೆ ದೃಷ್ಟಿ ನೆಟ್ಟು ನಿಂತೇ ಇದ್ದರು.

ಬೆಳಕು ಕಂಡ ಜನರು ಎದ್ದು ಬಿದ್ದು ಓಡುತ್ತಾ ಜಾತ್ರೆಗೋಗಿದ್ದ ಜನರ ಎದುರುಗೊಂಡರು. ಗುಂಪಿನಲ್ಲಿ ತನ್ನ ಮನೆಯ ಜನಗಳ ಹುಡುಕಾಡಿದರು. ಜಾತ್ರೆಯಿಂದ ಬರುತ್ತಿದ್ದ ಜನ ಗಾಬರಿಯಾಗಿ ಏನೋ ಅಚಾತುರ್ಯ ನಡೆದಿರಬಹುದೆಂದು ತಿಳಿದು ಗಾಬರಿಯಾಯ್ತು. ದೊಡ್ಡಕೆರೆ ಒಡೆದು, ಸಿಕ್ಕಿದ ಜನ ದನಗಳ ಹೊತ್ತುಕೊಂಡು ಹೋಗಿದೆ ಎಂದಾಗ, ಇತ್ತಕಡೆಯಿಂದ ಇವರು ತಮ್ಮ ಮನೆಯ ಜನಗಳ ನೆನೆದು ಓಡಲು ಸುರುಮಾಡಿದಿರು. ಆ ಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆ ಕಡೆಗೆ ಜನ ಓಡಾಡುತ್ತಿದ್ದರು.

ಕೆರೆ ರಾತ್ರಿಯಲ್ಲದೆ ಬೆಳಿಗ್ಗೆ ಹೊಡೆದಿದ್ದರೆ ಇನ್ನಷ್ಟು ಕನ ಜಾನುವಾರುಗಳು ಹೋಗುತ್ತಿದ್ದವು. ಎಂದು ಜನ ನೆನೆದು ಕಂಪಿಸುತ್ತಿದ್ದರು. ಅವರು ತಮ್ಮ ಹೊಲಗಳ ಕಾಣದಾದರು ಹೊಲಗಳಲ್ಲಿದ್ದ ಮರಗಳ ಕಾಣರಾದರು. ಹೊಲಗಳಲ್ಲಿದ್ದ ಮೆದೆಗಳ ಕಾಣದಾದರು. ಅವುಗಳ ನೆನಪೂ ಅಳಿಸುವಂತೆ ನೀರು ಎಲ್ಲವನ್ನು ಕೊರೆದು ಗೋರಿ ತೆಗೆದುಕೊಂಡು ಹೊರಟೋಗಿತ್ತು. ಜನರು ಮೂಕಸ್ಮಿತರಾಗಿ ಬಾಯಿಂದ ಮಾತು ಕಡೆಸದೆ ಗಂಭೀರವಾಗಿದ್ದರು. ಮೂಡಳ್ಳಿ ಸಾಹುಕಾರ ಹೊಲದಲ್ಲಿ ಕಾವಲುಗಾರನಾಗಿದ್ದ ಜವರಣ್ಣನ ಗುಡಿಸಲೂ ನಾಪತ್ತೆಯಾಗಿರುವುದರಿಂದ ಕಂಡು ಚಲಿಸತೊಡಗಿದರು. ದಿಕ್ಕಿಗೂ ಕಣ್ಣಾಡಿಸಿ ನೋಡಿದರು. ಜವರಣ್ಣನ ಗುಡಿಸಲೂ ಚಿಂದಿಚಿಂದಿಯಾಗಿ ಅಲಲ್ಲಿ ಸ್ವಲ್ಪ ಸ್ವಲ್ಪವೇ ಸಿಕ್ಕಿಕೊಂಡಿದ್ದು ಅದರ ಕುರುಹು ದೊರೆಯಿತು. ಜವರಣ್ಣನನ್ನು ಎತ್ತುಕೊಂಡು ಹೋಗಿ ಗೊಬ್ಬಳಿ ಮರಕ್ಕೆ ತುರುಕಿದ್ದುದ್ದ ಕಂಡರು.

ಇವನ ಜೊತೆಯಲ್ಲಿ ಹೆಂಡತಿ ಮಕ್ಕಳೂ ಇದ್ದಿದ್ದರೆ ಅವರಿಗೂ ಇದೇ ಗತಿಯಾಗುತ್ತಿತ್ತು. ಆದರೆ ಜವರಣ್ಣ ಅವರನ್ನು ನೆನ್ನೆಯ ಸಿಳ್ಳಪ್ಪನ ಜಾತ್ರೆಗೆ ಕಳುಹಿಸಿದ್ದ. ಅಂಗಾಗಿ ಅವರನ್ನು ಸಿಳ್ಳಪ್ಪನೇ ಕಾಪಾಡಿದ್ದ. ಆದರೂ ಜಾತ್ರೆ ಮುಗಿಸಿ ಅಂದು ಸಂಜೆಯ ಬರುವವಳಿದ್ದಳು ಹೆಂಡತಿ. ಆದರೆ ಮಕ್ಕಳು ಅನ್ನವನ್ನು ಕಂಡಾಗ 'ಅನ್ನ ಉಣಬೇಕು' ಎಂದು ಹಟ ಹಿಡಿದವು. ಆಗ ಇವಳು 'ತಾಡು ಬರವಳು ಬಂದಿವ್ನಿ ಐಕಳು ಅನ್ನ ಅನ್ನ ಅಂತ ಆಗರಿತವೆ ಉಣಕಳ್ಳಿ' ಎಂದು ಜಾತ್ರೆಅಲ್ಲಿ ನಡೆಯುತ್ತಿದ್ದ ಅನ್ನ ಸಂತರ್ಪಣೆಗಾಗಿ ಕಾದಿದ್ದಳು. ಅಲ್ಲದೆ ಮಳೆಯೂ ಸಂಜೆಗೆ ಸುರುವಾದಾಗ ಮಕ್ಕಳನ್ನು ಎಳೆದುಕೊಂಡು ಬರಲಾರದೆ ಅಲ್ಲೇ ತಂಗಿದ್ದಳು.

ಮರದಲ್ಲಿ ಸಿಕ್ಕಿಕೊಂಡಿದ್ದ ಜವರಣ್ಣನನ್ನು ಜ್ವಾಪಾನವಾಗಿ ಇಳಿಸುತ್ತಾ; ಅವನ ಚರ್ಮಕ್ಕೆ; ಮತ್ತೆ ಕೆಲವು ಅವನ ಮಾಂಸಖಂಡಗಳಿಗೆ ನುಗ್ಗಿದ್ದ ಗೊಬ್ಬಳಿ ಮುಳ್ಳನ್ನು ಹಿರಿದಾಕುತ್ತಿದ್ದರು. ನಂತರ ಅವನನ್ನು ತಂದು ಮಾಳದಲ್ಲಿ ಮಲಗಿಸಿದರು. ಅವನ ಮೈಯಲ್ಲಿ ಗೊಬ್ಬಳಿ ಮುಳ್ಳಾಡಿದುದರಿಂದಲೂ ರಾತ್ರಿ ಇಡೀ ದೇಹ ನೀರಿನಲ್ಲಿ ನೆನೆದುದರಿಂದಲೂ ಜವರಣ್ಣನ ಸ್ಥಿತಿ ಚಿಂತಾಜನಕವಾಗಿತ್ತು. ಅವನು ಕಣ್ಣು ಕಾಲು ತೇಲಿಸುತ್ತಾ ಮೇಲಿನ ಉಸಿರನ್ನು ಆಡಿಸುತ್ತಿದ್ದ. ಇವನ ಸ್ಥಿತಿಯನ್ನು ಕಂಡು ಗೋಳಾಡುತ್ತಿದ್ದ ಹೆಂಡತಿಯನ್ನು ನೋಡಲಾರದ ಜನ ತನ್ನ ಊರಿಗೆ ಕರೆದುಕೊಂಡು ಬಂತು. ಜವರಣ್ಣನನ್ನು ಮೈಸೂರಿಗೆ ಕರೆದುಕೊಂಡು ಹೋಗದೆ ಅವನನು ಬದುಕಿಸಲು ಸಾಧ್ಯವಿಲ್ಲ ಎಂದು ಜನ ತೀರ್ಮಾನಿಸಿ ಅವನ ದೇಹವನ್ನು ಬಸ್ಸು ನಿಲ್ಲುವ ಬುಗರಿ ಮರದ ಕೆಳಗೆ ಮಲಗಿಸಿಕೊಂಡು ಬಸ್ಸಿಗಾಗಿ ಕಾಯುತ್ತಿದ್ದರು.

ಈ ಊರು ಹುಟ್ಟಿದಾಗಿನಿಂದಲೂ ಬಸ್ಸಿನ, ಮುಖವನ್ನೇ ಕಾಣದಿದ್ದ ಈ ಊರಿನ ಜನಕ್ಕೆ ಒಳ್ಳೆಯದಕ್ಕು ಕೆಟ್ಟದಕ್ಕು ಕಾಲು ಕಾಲುದಾರಿ ಎರಡೇ ನೆನಪು. ಮಂಡಲ ಪಂಚಾಯಿತಿ ಪ್ರಧಾನರು, ಸೆಕೆಟ್ರಿ, ಅವರು, ಇವರು ಎಂದು ಎದ್ದುಕೊಂಡ ಮೇಲೆ ಅದೂ ಒಂದು ವಾರದಿಂದ ಊರಿಗೆ ಸಿಟಿ ಬಸ್‌ಹಾಕಿದ್ದರು. ಅದೋ ಬರ್‌ಎಂದು ಬಂದರೆ ಒಂದು ಬಾರಿ ಉಸಿರಾಡುವುದೋ ಇಲ್ಲವೋ ಕುಂತು ನಿಂತದ್ದವರೆಲ್ಲರನ್ನು ಏರಿಸಿಕೊಂಡು ಬರ್ರನೆ ಹೊರಟು ಬಿಡುತ್ತಿತ್ತು. ಅದು ಯಾಕೊ ಇಂದು ಹೊತ್ತು ಮೂಡಿ ಮಾರುದ್ದ ಬಂದಿದ್ದರೂ ಇನ್ನೂ ಬಂದಿರಲಿಲ್ಲ.

ಜವರಣ್ಣನ ಘಟ ಗೊಟಕ ಗೊಟಕ ಎನ್ನುತ್ತಿತ್ತು. ಜನ ಸೀರಿಯಸ್‌ಆಗಿದ್ದರು. ಇವನು ಸಾಯುವುದು ಗ್ಯಾರಂಟಿ ಎಂದರು. ಊರಲ್ಲಿ ಹೆಣ ಬಿದ್ದರೆ ಮನೆಗೆ ನೀರು ತರುವುದು ಹ್ಯಾಗೆಂದು ಹೆಂಗಸರು ಮೊದಲೇ ಬಾವಿಗೂ ಮನೆಗೂ ಓಡಾಡುತ್ತಿದ್ದರು. ಜಾತ್ರೆಗೆ ಹೋಗಿದ್ದ ಎಷ್ಟೋ ಹುಡುಗರು ಇನ್ನೂ ಬಾರದಿರುವುದರಿಂದ ಇನ್ನೂ ಸಂಜೆಯ ತನಕ ಎಷ್ಟು ಹೆಣ ಬರುತ್ತವೋ ಎಂದು ಗಾಬರಿಯಾಗಿದ್ದರು. ಮೈಸೂರಿಗೆ ಜವರಣ್ಣನನ್ನು ತೆಗೆದುಕೊಂಡು ಹೋಗಿದ್ದರೆ ಬದುಕುತ್ತಿದ್ದ ಎಂದು ಕಂಡ ವಸ್ತುಗಳ ಮೇಲೆಲ್ಲಾ ಕಿಡಿ ಕಾರುತ್ತಿದ್ದರು. ಈ ಹಾಳಾದ ಬಸ್‌ಗೆ ಮೂರು ದಿಸಕೆ ಸಾಕಾಯ್ತೇನೋ? ಕಷ್ಟ ಸುಖಕ್ಕೆ ಇಲ್ಲೆ ವೋದ್ದು ಆಮೇಲೆ ಬಂದರೆಷ್ಟು ಬರದೆ ಇದ್ದರೆಷ್ಟು ತಕೊ? ಇಷ್ಟೊತ್ತಾಗಾಗಲೆ ತಿರ್ಯಾಕತಿರ್ನಿಲ್ವ? ಎಂದು ಮಾತನಾಡಿಕೊಳ್ಳುತ್ತಿದ್ದರು.

ಕಾದು ಕೆಂಡವಾಗಿದ್ದ ಗಂಡಸರು ರಸ್ತೆ ಮಾಡಿಸಿದವನ್ನು ತೆಹಳುತ್ತಾ; "ಆ ಪುಣ್ಯಾತ್ಮ ಪಕ್ಕದ ಊರನವರು ತೆಂಡ್ರ ತಕಂಡು ರಸ್ತೆ ಮಾಡಿಸ್ತಿನಿ ಅಂತ ಮಾಡಸದ, ಕಲ್‌ಗಳ ಮೇಲೆ ಮಣ್ಣಿಟ್ಟುಬುಟ್ಟು ಹೋದ. ಒಂದು ಸರ್ತಿ ಮಳೆ ಹುಯ್ತು. ರಸ್ತಿಯಾದ ರಸ್ತೆಯಲ್ಲಾ ಹಲ್‌ಕಿರಕತ್ತು. ಆ ಪಿಕಪ್ಪನ ತಾವು ಅದೇನು ರಸ್ತೆ ಕುಲವಯ್ಯಾ? ಈಪಿಪಾಟಿ ಹಿಟ್ಟಲ್‌ಗಳು ಮೆಡರಕ ನಿಂತಿವೆ. ಬಸ್ಸು ಹೊಯ್ತಿದ್ರೆ ದಡಗುಡತವೆ. ಒಳಗೆ ಕುಂತಿರವರ ಎತ್ತೆತ್ತಿ ಎಸಿತದೆ. ಇಂಥಾ ದಾರೀಲಿ ಎಂಥಾ ಬಸ್ಸಾದ್ರು ಕೆಟ್ಹೋಗದೆ ಪುರುವಾರವಾದ್ದ ತಕಳಿ" ಎಂದು ತಮ್ಮ ಕೈಗಳನ್ನು ಹೊಸೆಯುತ್ತಿದ್ದರು.

ಊರಿನ ಉಸ್ತುವಾರಿ ಸಿದ್ದಣ್ಣ ಊರಿನಲ್ಲೆಲ್ಲಾ ಸುತ್ತಾಡಿ ಮಕ್ಕಳು ಬಾರದೆ ಚಿಂತೆಯಲ್ಲಿದ್ದ ಜನಗಳಿಗೆ ಸಮಾಧಾನ ಹೇಳಿ ಬುಗುರಿ ಮರದ ಹತ್ತಿರಕ್ಕೆ ಬಂದ. ಇವನು ಪ್ಯಾಟೆ ಕಂಡಿರುವ ಮನುಷ್ಯ.ಅಲ್ಲದೆ ಗಿಲೀಟಿನ ಪಾರ್ಟಿ. ಊರಿನಲ್ಲಿ ಜನಕ್ಕೆ ಪಿಂಚಣಿ ಕೊಡಿಸುವುದು, ಹಸು, ಕುರಿ, ಸಾಲ ತರಿಸುವುದು ಜನತಾ ಮನೆ, ಈಗೆ ಓಡಾಡಿಕೊಂಡಿದ್ದ ಅಸಾಮಿ.

ಬಂದವನೆ; 'ಐ ಇದ್ಯಾಕ್ರಯ್ಯ ಇನ್ನೂ ಅಂಗೆ ಕುಂತಿದಿರಿ; ಇವತ್ತು ಬಸ್ಸೆಲ್ಲಿ ಬಂದವು. ಬೇರೆ ಏನಾರು ಏರ್ಪಾಡು ಮಾಡಂವ ಹೇಳ್ರಿ ಗಾಡಿನಾದ್ರು ಕಟ್ಟಿ' ಎಂದ.

'ಇತ್ತಿಂದ ಗಾಡೀಲಿ ತಕ ವೋದರೆ ಅತ್ತಿಂದ ಗಾಡೀಲಿ ಹೆಣ ತರಬೇಕಾಯ್ತೆ ಅಷ್ಟೆ' ಎಂದ ಅದಕೊಬ್ಬ.

'ಮಂತೆ ಬಸ್‌ಬರಲ್ವಲ್ಲ ಏನ್‌ಮಾಡಿರಿ'

'ಬಸ್‌ಬರದೆ ಎಲ್‌ಗೋದ್ದು; ವಸಿ ಹಿಂದು ಮುಂದು ಬತ್ತದೆ' ಎಂದ ಅದಕೊಬ್ಬ,

'ಐ ಇವತ್ತು ಬಸ್‌ಗಳು ಬಸ್‌ಸ್ಟ್ಯಾಂಡ್‌ನಿಂದ ಒಂದು ಯಜ್ಜೆ ಕಿತ್ತರೆ ವುಳಕಂಗಿದ್ದದ್ರುಯ್ಯಾ ಆತರವಾಗಿ ಆಡ್ರ ಮಾಡಿ ಮೈಸೂರಾದ ಮೈಸೂರೆ ಕೂಗತಾ ಕುಂತದೆ'!

'ಅದ್ಯಾಕ್ಲ ಸಿದ್ಧ'?

'ಐ ಕಟ್ಟೆ ನೀರಗೆ ತಗರಾಲಾಗಿ ಕುಂತಿಲ್ಲವಾ'?

‘ಅಂಗಂದರೆ ‘?

ಅಂಗಂದರೆ, ‘ಕನ್ನಂಬಾಡಿ ಕಟ್ಟೆ ನೀರ ನಮಗೂ ಬುಟ್ಟುಕೊಡಿ’ ನಮ್ಮ ಹೊಲ ಗದ್ದೆಗಳಿಗೂ ನೀರಿಲ್ದೆ ಒಣಹೋಗಿ ನಿಂತವೆ ಅಂತ ತಮಿಳ್ನಾಡನವರು ಕೊಯ್ರಿ ಆಕಂಡು ಕುಂತಿಲ್ವ?’ ಸಾಲದಕೆ ಡಿಲ್ಲಿಯಿಂದಲೇ ಆದ್ರ ಮಾಡ್ಸವ್ರೆ?

‘ಅದಕೆ?’

‘ಅದಕೇ ನಮ್ಮ ಮಿನಿಷ್ಟ್ರು, ಎಂಲ್ಲೆ, ಎಂಪಿಗಳು ನಮಗೆ ತಿಕ ತೊಳಕಳಕ್ಕೆ ನೀರಿದ್ರೆ ಮೊಖ ತೊಳಕಳಕ್ಕಿಲ್ಲ. ಮೊಖ ತೊಳಕಂಡ್ರೆ ತಿಕ ತೊಳಕೊಳಕ್ಕಿಲ್ಲ ಇನ್ನೂ . . . ನೀವು ವಲಕ್ಕೋದ್ರಿ! ಇರದ್ನು ಏನಾರು ಕೊಟ್ಟರೆ ನಮ್ಮ ಬಾಯಿಗೆ ಮಣ್ಣೇ. ಸಾಲದದಕೆ ಜನ ನಮ್ಮನ ಸುಮ್ಮನೆ ಬುಟ್ಟದಾ? ಅಂತ ತಗರಾಲ್‌ಗಿಳ್ದು ಏಡ್‌ಕಡೆಯವರೂ ಕುಣಿತಾ ಕುಂತವ್ರೆ.’

‘ಅದಕೆ?’

‘ಅದಕೇ ಇವತ್ತು ಅತ್ತಲ ಗುಲಬರ್ಗಾ ಧಾರವಾಡದಿಂದ ಇಡದೂ ಇಡೀ ಸ್ಟೈಟನಲ್ಲೆ (ಸ್ಟೇಟ್) ಎಲ್ಲೂ ಒಂದು ಬಸ್ಸು ರೈಲು ತಿರುಗಾಡದಂಗೆ ಅಂಗಡಿ ಮುಂಗಟ್ಟುಗಳು ಸುದಾ ಬಾಗಲ ಬಿಚ್ಚೆದಂಗೆ ಬಂದ್‌ಮಾಡಿ ನಮ್ಮ ನೀರು ನಮಗೆ ಬ್ಯಾರಿಯವರಿಗೆ ಒಂದು ಅನಿ ಮುಕ್ಷಾ ಕೊಡಕ್ಕಾಗಲ್ಲ ಅಂತಿಲ್ವ?’

‘ತಗಿಯಯ್ಯ ಇದ್ಯಾವ ಮಾತು ಅಂತ ಆಡಯಿ. ಚಿನ್ವಲ್ಲ, ಚಿಗ್ರಲ್ಲ ಕುಡಿಯ ನೀರ್ಗೆ ತಗ್ರಾಲ!?’

‘ಚಿನ್ವಾದ್ರೂ ಮಡಿಕಕೆ ಆದ್ದಯ್ಯ? ಅದೂವೆ ಸರಕಾರದ ಲೆಕ್ಕಕ್ಕೆ ಸೇರದದಲ್ವ? ಈ ಚಿನ್ನ, ಬೆಳ್ಳಿ, ಕಬ್ಬಿಣ ನೀರು ಇವು ಯಾರೊಬ್ಬರ ಸ್ವತ್ತಲ್ಲ’

ಅಂಗಾದ್ರ ದಾವಾರದವ್ರು ಮನೆ ಬಾಗ್ಲಗೆ ಬಂದು ಒಂದು ಗಳಾಸ್‌ನೀರ್‌ಕೊಡಿ ಅಂದರೆ ಅದ್ಯಾವ ಜಲ್ಮವಯ್ಯ ಇಲ್ಲ ಅನ್ನದು.

‘ಕುಡಿಯಕ್ಕೆ ಒಂದು ಗಳಾಸ್‌ಇಲ್‌ದಿದ್ರೆ ಒಂದು ಚೊಂಬನೆ ಕೊಡಂವ ಅದಕಲ್ಲ? ಆದರೆ ನಮ್ಮ ತಾವು ಇರದು ಒಂದು ಮಡಕೆ ನೀರು. ನೀನು ಬಂದು ಒಂದು ಅಳಗೆ ನೀರ್‌ಕೊಡು ಅಂದ್ರೆ ಎಂಗ್ಯಪ್ಪ’.

ಕ್ಯಾಣವಾದ ಜನ ‘ನಮ್ಮ ನೀರ ನಾವು ಇಷ್ಟ ಬಂದಂಗೆ ಬಳಸ್ಗಳಕೆ ಅದೆಂತಾ ಕೊಯ್ರಿಲಾ ಸಿದ್ಧ. ನಮಗೇ ಕುಡಿಯ ನೀರ್ಗೆ ಎಷ್ಟು ಕಷ್ಟ. ನಮ್ಮ ಬಾವಿಗಳೆಲ್ಲಾ ಸುಂಡೋಗಿ ನೀರಿಲ್ದೆ ನೀ ಕಂಡಂಗೆ ಎಷ್ಟು ಅನವಾಸ ಪಡತಾ ಇವಿ. ಮೂರು ಗಂಟೆ ರಾತ್ರಿಗೆ ಹೋಗಿ ಬಾಂವಿಗಿಳಿದು ಜಲ ಬಂದಿದಾ ನೋಡಕಂಡು ಇದ್ದ ನೀರ ಬಟ್ಟೇಲಿ ವಂಟಗ ಬಂದು ಸೋಸ್ಗ ಕುಡೀತೀವಲ್ಲ ಅದ್ನ ಯಾರೂ ಕೇಳಕ್ಕಾಗಲ್ವ?’

‘ಛೇ….. ಛೇ…. ಅಂಗಲ್ಲ ಕಣಣ್ಣ ಇದು. ಇದರ ಯವಾರನೇ ಬ್ಯಾರೆ. ನಿಮ್ಮನೇಲಿ ನೀವು ನೆಲಬಾವಿ ತೋಡಸ್ಗಂಡು ನೀರ ಕುಡದ್ರೆ ನೀ ಹೇಳತರದಲ್ಲಿ ಅದು ಸರಿ. ಅದು ನಿನ್ನ ಇಚ್ಚೆ ನಿನ್ನ ಸ್ವತಂತ್ರ. ಆದರೆ ಅದೇ ಸರಕಾರದವರು ಬಂದು ಬೋರಿಂಗ್‌ಹಾಕಸ್ದರೆ; ಅದು ನಿನ್ನೊಬ್ಬನಿಗ್ಯೊ ಅಥವಾ ಸರ್ವೆಂಟು ಜನಕ್ಕೋ?’

ವರಸೆಗೆ ವರಸೆ ಕೊಡಲು ಇಡೀ ಅಂಗಾಂಗಗಳನ್ನು ರೆಡಿ ಮಾಡಿಕೊಂಡವನೊಬ್ಬ ಪಾತಾಳದಿಂದ ಮಾತೊಂದು ಎಳೆದು ವಗೆದ.

‘ಅಲ್ವಪ್ಪ ಸಿದ್ಧ; ಸರಿ ಕಣಯ್ಯ ನಿನ್ನ ಮಾತು ಮಾತನಂತೆ ಆ ಬೋರಿಂಗು ಸರ್ವೆಂಟು ಜನಕ್ಕೂ ಸೇರಬೇಕು! ದೂರಕ್ಕೆ ಹೋಗದು ಬ್ಯಾಡ. ನಮ್ಮೂರ್ಗೆ ನಡಿಯ ಇಷಯನೆ ತಕಳಂವೆ. ಇದೇ ಗೌರ್ಮೆಂಟನವರು ಬಂದು ಇದು ಇಡೀ ಊರವರಿಗೆ ಅಂತ ಒಂದು ಹೋರಿಂಗ್‌ಹಾಕಸ್ದ್ರು. ಅದು ಲಿಂಗಾಯಿತರ ಕೇರಿ ಸೇರಕತ್ತು. ನಿನ್ನ ಮಾತನ ಸರಕಾರ, ಅದು ಸರ್ವೆಂಟು ಜನಕ್ಕೂ ಅಂದ ಮೇಲೆ ನಮ್ಮ ಕೇರಿಯವರನ್ನ ಯಾಕೆ ನೀರ್‌ತಕಳಕ್ಕೆ ಸೇರಗೊಡಲ್ವಲ್ಲ?’

ಸಿದ್ಧ ‘ಅದು ಬ್ಯಾರೆ’ ಎಂದ.

‘ಅಂದೆಂಗ್ಲ ಅದು ಬ್ಯಾರಿಯಾದದು. ನಮ್ದು ಚಿಕ್ಕದು , ನಮ್ಮ ನಮ್ಮಲೆ ಅದೆ. ಈಗ ನಡಿತಾ ಇರದು ದೊಡ್ಡದು ಅಷ್ಟೆ. ಅದಕಾಗಿ ನಮ್ಮೂರಿನಲ್ಲಿ ಜಗಳ ಕಲಿಯಾಗಿ ಎಷ್ಟು ಜನರ ಬುಂಡೆ ಹೊಡೆದೋಗಿ ಹೆಣಗಳೂ ಬಿದ್ದೊ. ಇದನ ನೀನು ಯಾಕಯಾ ಕೇಳಬಾರದು. ಇವತ್ತೂ ಈಗ ಮುಕ್ಷ ನಾವು ಏಡು ಪರ್ಲಾಂಗು ದೂರದಿಂದಲೇ ನೀರೊರತಾವಿಯಲ್ಲ?’

‘ಅಂಗಾರೆ ನೀನು ಹೇಳದು ಇದನಾ ಇನ್ನೂ ದೊಡ್ಡದು ಮಾಡಬೇಕು ಅನ್ನಪ್ಪ.?’

ಥೇ….. ಥೇ….. ನಾ ಹೇಳದು ಅಂಗಲ್ಲ ಕಣಯ್ಯ. ನಮ್ಮ ಇವ್ನು ಹೇಲದಂಗೆ ದಾವಾರದವರು ಬಾಗ್ಲಲ್ಲಿ ನಿಂತು ಒಂದು ಗಳಾಸ್‌ನೀರ್‌ಕೊಡ್ರಯ್ಯ ಅಂದರೆ ಎಂಥಾ ಜಲ್ಮನೂ ಇಲ ಅನ್ನಲ್ಲ. ಕೊಟ್ಟೇ ಕೊಡತದೆ. ಆದರೆ ಈ ನೀರಿನ ತಗರಾಲು ಒಳಗೂ ಅದೆ. ಹೊರಗೂ ಅದೆ. ಇದು ಅಮೃತ. ಸರ್ವೆಂಟು ಕೆಲಸಕ್ಕೆ ಬೇಕಾದ್ದು. ಇದನ ಎಲ್ಲ ಜನವೂ ಕೂತಗಂಡು ಒಳ್ಳೆ ತರದಲ್ಲಿ ಧರ್ಮ, ಕರ್ಮ ತೂಕ ಮಾಡಿ, ನಾವು ನಾವೇ ಸರವೋಗಸ್ಗಂಡು ಅಂಚಗ ಕುಡಿಬೇಕು ಅನ್ನದಷ್ಟೆ.

ಜನ ಅವರಿಗೆ ತಿಳಿದಂತೆ ಔಷಧಿ ಮಾಡುತ್ತಾ ಜವರಣ್ಣನ ಸುದಾರಾಯಿಸಲು ಪ್ರಯತ್ನ ಮಾಡುತ್ತಿದ್ದರು. ಮೈಗೆಲ್ಲಾ ಉಪ್ಪಿನ ಶಾಖ ಕೊಡುತ್ತಿದ್ದರು. ಕೆಲವರು ಬಿಸಿನೀರಿನ ಶಾಖಕೊಡುತ್ತಿದ್ದರು. ನಡುವೆ ಯಾಕೊ ಹೊಟ್ಟೆ ಉಬ್ರಾಣಿಗೆ ಎಂದು ಹೆಗ್ಗಣದ ಪಿಕ್ಕೆ ಕಲಸಿ ಹೊಟ್ಟೆಗೆ ಬೆಜ್ಜರ ಹಾಕುತ್ತಿದ್ದರು. ಅಷ್ಟರಲ್ಲಿ ಕೆಲವು ಜನ ಬಂದ್ರೂ, ಬಂದ್ರೂ ಎಂದು ಕೂಗಿದರು. ಆ ಕಾದೆಯಿಂದ ಕತ್ತಿನಲ್ಲಿದ್ದ ಚೌಕಗಳನ್ನು ಕುಣಿಸುತ್ತಾ ಒಂದೇ ಬೀಸಿನಲ್ಲಿ ಜಾತ್ರೆಗೆ ಹೋಗಿದ್ದ ಹುಡುಗರು ಬರುತ್ತಿದ್ದರು. ‘ಥೂ ನಿಮ್ಮ ಬಾಯಿಗೆ ಮಣ್ಣಾಕ ನಮ್ಮ ಕೈಕಾಲ ಬುಡಸಿದ್ರೆಲ್ಲೋ’ ಎಂದು ಹುಡುಗರ ಜೊತೆ ಹೋಗಿದ್ದ ದೊಡ್ಡವನೊಬ್ಬನಿಗೆ ಜನವೆಲ್ಲಾ ತಗುಳಕೊಂಡರು. ಅಲ್ಲ ಕಣಯ್ಯ ನೆನ್ನೆಯ ಜಾತ್ರೆ ಬುಟ್ಟಂತಲ್ಲ. “ಅರಿದ ಐಕಳ ಕಟಗಂಡು ಎಲಗೋಗಿದ್ದೆ” ಎಂದರು.

ಅವನು ‘ಕಟ್ಟೆಗೆ ನೀರು ಬಂದದೆ ಅಂದ್ರು. ನಡಿರ್ಲ ಅಲ್ಲೂ ನೊಡಕ ಬರಂವಾ ಅಂತ ನಡಕಾ ಹೊಂಟೋದ್ದೋ ಎಂದ’. ಜನ ಬಯ್ಯುವುದನ್ನ ನಿಲ್ಲಿಸಿ ‘ಸದ್ಯ ಬಂದ್ರಲ್ಲ’ ಎಂದು ನಿಟ್ಟುಸಿರಿಟ್ಟರು. ಆದೇ ಗುಂಪಿಗೆ ಸೇರಬೇಕಾಗಿದ್ದವನು ಬೆರಳ ಕಡಿಯುತ್ತಾ ‘ಅಂಗಾರೆ ಕಟ್ಟೆಗೆ ನೀರು ಬಂದಿದಾ’ ಎಂದ.

ಬೊಡ್ಡಡ್ಡೆ ‘ ನೀರು ಬಂದಿದ್ದು!’ ಈ ನಮ್ಮ ಸಣ್ಣ ಕೆರೆಗೇ ಇಷ್ಟು ನೀರು ಬಂದು ತಡಕನಾರದೆ ಕಿತ್ತಗ ಹೋಗಿರುವಾಗ ಕಟ್ಟೆಗೆ ಬಂದಿಲ್ವಾ? ಬಂದು ತುಂಬಿ ಮದನಾಡಿದಂತೆ.

ಕೆಲವರು ‘ನಾವು ಹೋಗಿ ನೋಡಬೇಕು ಕಣ್ರಲಾ’ ಎನ್ನುತ್ತಿದ್ದರು.

ಈ ಸಂಭಾಷಣೆಯ ಮಧ್ಯದಲ್ಲಿ ಜವರಣ್ಣ ನಳ್ಳಾಡತಾ ‘ನೀರು’ ಎಂದ. ಹೆಂಡತಿ ಮಕ್ಕಳ ಕಣ್ಣೀರು. ಜನರು ತಂದು ಹುಯ್ದು ತಣ್ಣೀರು, ಜವರಣ್ಣನ ಬಾಯಿಯಿಂದ ಮಾತು ತಂದವು.

ಜನ “ಜೀಂವ ವುಳಿಸದೂ ನೀರೆ; ಕಳಿಯದೂ ನೀರೆ. ಬಡ್ಡೀ ಮಗನ ದೇವರು ಎರಡನೂ ಅದರಲ್ಲೇ ಇಟ್ಟವನಲ್ಲ? ತಿಳಿದ ಬಡ್ಡೆತ್ತವು ಇದು ಕಾಣದೆ ಕತ್ತಗ ಉರಿತವೆ” ಎಂದರು.

**ಲೇಖಕರು**

ಬಸವರಾಜ ಕುಕ್ಕರಹಳ್ಳಿ (೧೯೫೫) ಅವರು ಈಗ ಮರಿಮಪಪ್ಪ ಕಿರಿಯ ಕಾಲೇಜಿನಲ್ಲಿ ಗ್ರಂಥಾಪಾಲಕರಾಗಿದ್ದಾರೆ. ದಲಿತ ಲೋಕವನ್ನು ತಮ್ಮ ಕತೆಗಳಲ್ಲಿ ದೇವನೂರ ಮಹದೇವ, ಆನಂದ ಮಾಲಗತ್ತಿ, ಮೊಗಳ್ಳಿ ಗಣೇಶ, ಮ ನ ಜವರಯ್ಯ ಮುಂತಾದವರು ಪ್ರಕಟಿಸುತ್ತಿರುವರು. ಈ ಸಾಲಿನಲ್ಲಿ ಕುಕ್ಕರಹಳ್ಳಿ ಅವರು ಕೂಡ ಸೇರುತ್ತಾರೆ. ಅವರ ಈಚಿನ ಸಂಕಲನದ ಹೆಸರು 'ಪುನುಗ'.

**ಆಶಯ**

ಪ್ರಸ್ತುತ ಕತೆಯನ್ನು ಕುಕ್ಕರಹಳ್ಳಿಯವರ 'ಮೋಕಾರ ' ಎಂಬ ಕಥಾ ಸಂಕಲನದಿಂದ ಆರಿಸಿಕೊಳ್ಳಲಾಗಿದೆ. ಈ ಕತೆಯು ಮಾನವ ಬದುಕಿಗೆ ನೀರಿನ ಮಹತ್ವವನ್ನು ತಿಳಿಸಿ ಕೊಡುತ್ತದೆ. ನೀರು ಹೇಗೆ ಜೀವನಕ್ಕೆ ಕಾರಣವಾಗುತ್ತದೆಯೋ ಹಾಗೆಯೇ ಅದು ಸಾವಿಗೂ ಕಾರಣವಾಗುತ್ತದೆ. ಅದನ್ನು ಹಂಚಿಕೊಂಡು ಬಳಸದಿದ್ದರೆ, ಮನುಷ್ಯರ ನಡುವಿನ ಕಲಹಗಳಿಗೂ ಕಾರಣವಾಗುತ್ತದೆ. ಎಂಬುದನ್ನು ಕತೆ ಸೂಚ್ಯವಾಗಿ ಹೇಳುತ್ತದೆ. ಕತೆಯು ನದಿ ನೀರಿನ ಹಂಚಿಕೆ ವಿಷಯದಲ್ಲಿ ಎರಡು ರಾಜ್ಯಗಳು ಮನಸ್ತಾಪದ ವಾಶ್ತಾವರಣ ಮಾಡಿಕೊಳ್ಳುವುದನ್ನು ವಿಡಂಭಿಸುತ್ತದೆ.

**ಪದಕೋಶ**

ಆಳಾದ = ಹಾಳಾದ, ಉಯ್ಯಲ್ಲೋ = ಹುಯ್ಯಲಿಲ್ಲವಲ್ಲ, ಮೋಟ್ರು =ವಯಸ್ಸಾದವರು, ಮೋಗಂಗದೆ = ಹೋಗುವಹಾಗಿದೆ, ರೋಣಿ = ರೋಹಿಣಿ, ಕದ್ರೆ = ಕೈಕೊಟ್ಟರೆ, ಇಸಾನಿ = ಈಶಾನ್ಯ, ತಳಾರ್ನೆ = ಘಳರನೆ, ತಿಟ್ಟು = ದಿಬ್ಬ, ಸದು = ಜಾಗ, ವಜನ್= ಒತ್ತಡ, ಕೊತ್ತಿ =ಬೆಕ್ಕು, ಮೊರಗರಿ = ಪ್ರತಿಧ್ವನಿಸು, ಸೂಲು, ಸೆತ್ತೆಸೆದಕಲು = ಕಸಕಡ್ಡಿ, ಗೋರಿ = ಬಾಚಿಕೊಂಡು, ಗೊಬಳಿಮರ = ಜಾಲಿಮರ, ಸೀಗೆ = ಮುಳ್ಳಿರುವ ಒಂದು ಜಾತಿ ಗಿಡ. ತಾಡು = ತಾಳು, ಐಕಳು =ಮಕ್ಕಳು, ಆಗರಿತವೆ = ಗೋಗರಿಯುತ್ತವೆ, ಮಾಳ = ಮೈದಾನ , ಘಟ = ದೇಹ, ತಿರ್ಯಾಕತಿರ್ನಿಲ್ವ = ತಿರುಗಿಹೋಗಿರುತ್ತಿತ್ತಲ್ಲವೇ. ತೆಂಡ್ರ = ಕಂಟ್ರ್ಯಾಕ್ಟು. ಕಿರಕತ್ತು = ಕಿರಿದುಕೊಂಡಿತು, ಪಿಕಪ್ಪನತಾಪು = ಪಿಕ್‌ಅಪ್‌ಮಾಡುವ ಜಾಗ, ಈಪಿಪಾಟಿ = ಇಷ್ಟಿಷ್ಟು ಗಾತ್ರದ, ಹಿಟ್ಗಲ್= ಬಿಳಿಬಣ್ಣದ ಮೃದುಕಲ್ಲು, ಮೆಡರಕ = ನಿಗುರಿ, ಪುರವಾರವಾದ್ಯ = ಉದ್ಧಾರವಾದೀತೇ, ಮಂತೆ = ಮತ್ತೆ, ವಸಿ = ಸ್ವಲ್ಪ , ಆಡ್ರ = ಆರ್ಡರ್, ಕಟ್ಟೆ = ಆಣೆಕಟ್ಟು, ತಕರಾಲ ಅಥವಾ ತಗ್ರಾಲ = ತಕರಾರು, ಕೊಯ್ರಿ = ವಿಚಾರಣೆ, ಕೇಸು, ಏಡ್=ಎರಡೂ, ಮುಕ್ಷಾ = .. ಮಡಿಕೆ = ಇಟ್ಟುಕೊಳ್ಳುವುದಕ್ಕೆ , ದಾವಾರ = ಬಾಯಾರಿಕೆ, ಆಳಗೆ =ಮಣ್ಣಿನ ಗುಡಾಣ, ಕ್ಯಾಣ = ಕೋಪ, ಸುಂಡೋಗಿ = ಒಣಗಿಕೊಂಡು ಹೋಗಿ, ಅನವಾಸ = ಕಷ್ಟ, ಇವಿ = ಇದ್ದೀವಿ, ವಂಟಗ = ಬಾಚಿಕೊಂಡು, ಕಲಿಯಾಗಿ = ಕಲೆತ , ಬುಂಡೆ = ಬುರುಡೆ. ಅಂಚಗ = ಹಂಚಿಕೊಂಡು, ಉಬ್ರಾಣಿ = ಉಬ್ಬರ, ಪಿಕ್ಕೆ= ಹಕ್ಕೆ, ಬೆಜ್ಜರ = ಲೇಪನ, ಚೌಕ ಕರವಸ್ತ್ರ, ಕೈಕಾಲಬುಡಿಸು =ಗಾಬರಿಯಿಂದ ಏನೂ ಮಾಡಲಾಗದಂತೆ ನಿಷ್ಕ್ರಿಯವಾಗುವುದು, ಅರಿದ = ಅರಿಯದ, ಜಿಂವ =ಜೀವ, ಕತ್ತಗ = ಹತ್ತಿಕೊಂಡು

**ಟಿಪ್ಪಣಿ**

ಅಸುನಿ =ಒಂದು ಮಲೆಯ ನಕ್ಷತ್ರದ ಹೆಸರು, ಅಶ್ವಿನಿ

ಸಿಳ್ಳಪ್ಪ = ಮಳೆ ಬರಿಸಬಲ್ಲದು ಎಂದು ಜನ ನಂಬಿರುವ ದೈವದ ಹೆಸರು ತಂಪಿನ ದೊಡ್ಡಮ್ಮ, ಸಿದ್ರಾಶ್ಯಾಮೆಯ ಸಿದ್ಧಪ್ಪಾಜಿ, ಸಿಡಿಮಾರಮ್ಮನವರು, ಸಿಳ್ಳೊಡೆವ

ಸಿಳ್ಳಪ್ಪನವರು = ಊರಿನ ಗ್ರಾಮದೇವತೆಗಳು.

ಗೌಜಲಕ್ಕಿಗೆ = ಗೆಜ್ಜಲಾಗಿತ್ತು ಗೌಜಲು ಎಂಬ ಹಕ್ಕಿ ಆರಿಸಿಕೊಂಡು ತಿನ್ನಲು ಬೇಕಾದ ಗೆದ್ದಲಿಗೆ ಕಾರಣವಾಗಿತ್ತು.

**ಪ್ರಶ್ನೆಗಳು**

೧. ಹನುಮಣ್ಣ ಮಳೆಬಾರದೆ ಇದ್ದುದ್ದಕ್ಕೆ ತೆಗೆದ ಉದ್ಗಾರ ಎಂತಹುದು?

೨. ಮಳೆ ಬರಿಸಲು ಊರಿನ ಜನರು ಕೈಗೊಂಡ ನಿರ್ಧಾರಗಳು ಯಾವುವು?

೩. ಕೆರೆ ಒಡೆದುದರಿಂದ ಊರಿನ ಜೀವನದ ಮೇಲೆ ಉಂಟಾದ ಪರಿಣಾಮಗಳು ಯಾವುವು?

೪. ಜವರಣ್ಣನನ್ನು ಮೈಸೂರು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಯಾಕೆ ಸಾಧ್ಯವಾಗಲಿಲ್ಲ?

೫. ನದಿ ನೀರಿನ ತಕರಾರಿನಿಂದ ಮೈಸೂರಿನಲ್ಲಿ ಉಂಟಾಗಿದ್ದ ಪರಿಣಾಮ ಜನರ ಮಾತುಗಳಲ್ಲಿ ಹೇಗೆ ವ್ಯಕ್ತವಾಗುತ್ತದೆ?

೬. ಜವರಣ್ಣನು ನೀರು ಎಂದು ಕೇಳಿದಾಗ ಜನ ನೀರಿನ ಬಗ್ಗೆ ಆಡಿಕೊಳ್ಳುವ ಮಾತುಗಳೇನು?

**ಪೂರಕ ಓದು**

೧. ಅಮರೇಶ ನುಗಡೋಣಿ ಅವರ 'ನೀರು ತಂದವರು' ಕತೆ.

೨. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ಹೇಮಾವತಿ ನದಿಯ ತೀರದಲ್ಲಿ' ಪ್ರಬಂಧ.

೩. ಎ ಎನ್‌ಮೂರ್ತಿರಾವ್‌ಅವರ 'ಅಕ್ಕಿಹೆಬ್ಬಾಳು' ಪ್ರಬಂಧ.

೪. ಮಳೆರಾಯನನ್ನು ಕುರಿತ ಜನಪದ ಹಾಡುಗಳು.

# ೧೫. ಕರ್ನಾಟಕ ಸಂಸ್ಕೃತಿಯ ಒಂದು ಚಿತ್ರ

**ಯಾಕೆ ಈ ಸ್ಥಿತಿ?**

ಕತೆಗಾರ ಡಾ. ಬೆಸಗರಹಳ್ಳಿ ರಾಮಣ್ಣನವರು ತಮ್ಮ ಅನುಭವವೊಂದನ್ನು ಹೇಳುತ್ತಿದ್ದರು. ವೈದ್ಯರಾಗಿದ್ದ ಅವರು ಒಮ್ಮೆ ಆಂಧ್ರದ ವೈದ್ಯಕೀಯ ವಿದ್ಯಾರ್ಥಿಗಳ ಜತೆ ಚರ್ಚೆ ಮಾಡುತ್ತಾ, ಪೊಟ್ಟಿ ಶ್ರೀರಾಮುಲು ಎಂಬುವರ ವಿಷಯ ತೆಗೆದರಂತೆ. ಆಗ ಆ ವಿದ್ಯಾರ್ಥಿಗಳು 'ಅವರು ಯಾರು, ತಮಗೇನೂ ಗೊತ್ತಿಲ್ಲ' ಎಂದು ಮುಗ್ಧವಾಗಿ ಉತ್ತರಿಸಿದರಂತೆ. ರಾಮಣ್ಣನವರಿಗೆ ಆಶ್ಚರ್ಯವಾಗಿ 'ಅಲ್ರಯ್ಯಾ, ತೆಲುಗು ಮಾತಾಡೋ ಪ್ರದೇಶಗಳೆಲ್ಲ ಸೇರಿ ಒಂದು ರಾಜ್ಯವಾಗಬೇಕು ಅಂತ ಆ ಮನುಷ್ಯ ೫೨ ದಿವಸ ಉಪವಾಸ ಮಾಡಿ ಪ್ರಾಣಬಿಟ್ನೋನು. ಅವನಿಂದಲೇ ನಿಮ್ಮ ಆಂಧ್ರಪ್ರದೇಶ ಆಗಿದ್ದು. ನಮ್ಮ ಕರ್ನಾಟಕ ಏಕೀಕರಣಕ್ಕೂ ಅವನ ಪ್ರಾಣತ್ಯಾಗ ಸಹಾಯ ಮಾಡ್ತು. ಅಂತಹವನ ಬಗ್ಗೆ ಗೊತ್ತಿಲ್ಲ ಅಂತೀದೀರಲ್ಲ, ಏನು ಹೇಳೋಣ' ಅಂತ ವಿಷಾದಿಸಿರಂತೆ.

ಇದೊಂದು ಉದಾಹರಣೆ ಅಷ್ಟೆ. ಇಂತಹವು ಇನ್ನೂ ಸಿಗಬಹುದು. ಪ್ರಶ್ನೆಯೆಂದರೆ, ಅಕ್ಷರಸ್ಥರಲ್ಲಿ ತಮ್ಮ ನಾಡಿನ ಜನರ ಬಗ್ಗೆ, ಸಂಸ್ಕೃತಿ ಬಗ್ಗೆ, ಅರಿವಿಲ್ಲದ ಈ ಪರಿಸ್ಥಿತಿ ಯಾಕೆ ಸೃಷ್ಟಿಯಾಗುತ್ತದೆ. ಎಷ್ಟೋ ವಿದ್ಯಾರ್ಥಿಗಳಿಗೆ ಕರ್ನಾಟಕದಲ್ಲಿ ಎಲ್ಲೆಲ್ಲಿ ಏನು ಬೆಳೆ ಬೆಳೆಯಲಾಗುತ್ತದೆ, ಅಲ್ಲಿನ ಆಹಾರ ಪದ್ಧತಿ, ಮನೆಕಟ್ಟುವ, ಬಟ್ಟೆ ಧರಿಸುವ ವಿಧಾನ ಯಾವುದು - ಈ ಬಗ್ಗೆ ಯಾಕೆ ಸಣ್ಣ ಕುತೂಹಲವೂ ಕಾಣುವುದಿಲ್ಲ. ಬಹುಶಃ ದೋಷ ಅವರಲ್ಲಿ ಇದ್ದಂತಿಲ್ಲ. ಅವರು ಕಲಿತ ಯುವ ಪರಿಸರದಲ್ಲಿ ಇದ್ದಂತಿದೆ.

ತಮ್ಮ ನಾಡಿನ ಬಗ್ಗೆ ಅರಿವಿರಬೇಕು ಎಂದರೇನು? ಅದಕ್ಕೆ ಸಂಬಂಧಿಸಿದ ಅಂಕಿ ಅಂಶಗಳನ್ನು ಜನರಲ್‌ನಾಲೆಜ್‌ರೀತಿಯಲ್ಲಿ ಸಂಗ್ರಹ ಮಾಡಿಕೊಂಡಿರಬೇಕು ಎಂದರ್ಥವಲ್ಲ. ಕರ್ನಾಟಕದ ವಿಸ್ತೀರ್ಣ ಎಷ್ಟು ಎಂದರೆ ಪಟಾರನೆ ಉತ್ತರ ಹೇಳುವುದಕ್ಕೂ, ಇಲ್ಲಿನ ಜನರ ಬದುಕಿನ ಜತೆ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡಿರುವುದಕ್ಕೂ ವ್ಯತ್ಯಾಸವಿದೆ. ಮಾಹಿತಿ ಬರಿ ನೆನಪಿನ ಶಕ್ತಿಯಾಗಿ ಉಳಿದರೆ ಜಡವಾಗಿರುತ್ತವೆ. ಅದು ಸಂವೇದನೆಯ ಭಾಗವಾದರೆ, ನಾಡಿನ ಬಗ್ಗೆ ಅಪ್ತ ಸಂಬಂಧ ಬೆಳೆಸಿಕೊಳ್ಳಲು ಕಾರಣವಾಗುತ್ತದೆ. ಈ

ಸಂಬಂಧವು ಜನರ ನೋವು ನಲಿವಿನ ಜತೆ ಮಿಡಿಯಲು ಪ್ರೇರಿಸುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸಂಸ್ಕೃತಿಯನ್ನು ತಿಳಿವ ಅಗತ್ಯವಿದೆ.

**ಸಂಸ್ಕೃತಿ ಎಂದರೇನು?**

'ಛೇ! ಅವರಿಗೆ ಕಲ್ಚರ್ರೇ ಇಲ್ಲಪ್ಪ' ಎಂಬ ಮಾತನ್ನು ಕೇಳಿದ್ದೇವೆ. ಹೀಗೆ ಹೇಳುವವರ ಮನಸ್ಸಲ್ಲಿ ಸಂಸ್ಕೃತಿ ಅಂದರೆ ಏನರ್ಥ? ಅದೊಂದು ಸಭ್ಯತೆ, ತಾವು ಬೈಯುತ್ತಿರುವವರಲ್ಲಿ ಅದು ಇಲ್ಲ ಅಂತ ತಾನೇ? ಅವರ ಪ್ರಕಾರ ಸಂಸ್ಕೃತಿ ಎನ್ನುವುದು, ನಡತೆಗೆ, ನೈತಿಕ ಮೌಲ್ಯಗಳಿಗೆ ಸಂಬಂಧಿಸಿದ್ದು. ಹೌದು, ಇದೇ ಸಂಸ್ಕೃತಿಗಿರುವ ಜನಪ್ರಿಯ ಅರ್ಥ. ಈ ಅರ್ಥವನ್ನು ಒಪ್ಪಿಕೊಂಡೊಡನೆ ಒಂದು ಪ್ರಶ್ನೆ ಹುಟ್ಟುತ್ತದೆ. ಯಾರೋ ಕೆಲವರು ನಂಬಿರುವುದೇ ಯಾಕೆ ಸಂಸ್ಕೃತಿ ಎಂದಾಬೇಕು? ಬೇರೆಯವರಿಗೂ ಅವರದೇ ಸಂಸ್ಕೃತಿ ಇರಬಹುದಲ್ಲವೇ? ಬಾಯಾರಿದವರಿಗೆ ನೀರು ಕೊಡೂವುದನ್ನು ಸಂಸ್ಕೃತಿ ಎಂದರೆ ಸಮಸ್ಯೆಯಿಲ್ಲ. 'ಅವರು ನಮಗೆ ಇಷ್ಟವಾಗದ ಆಹಾರ ತಿಂತಾರೆ, ಅವರು ಕೊಳಕಾಗಿದಾರೆ, ಅವರ ಭಾಷೆ ಒರಟು, ಆದ್ದರಿಂದ ಸಂಸ್ಕೃತಿ ಇಲ್ಲ' ಎಂದರೆ ಸಮಸ್ಯೆ. ನಾಡಿನ ಜನರೆಲ್ಲ ಒಂದೇ ರೀತಿಯಲ್ಲಿ ಉಣ್ಣುವ ಉಡುವ ಚಿಂತಿಸುವ ಕೆಲಸ ಮಾಡುತ್ತಿದ್ದಾರೆ, ಈ ಕಷ್ಟ ಇರುತ್ತಿರಲಿಲ್ಲ. ಆದರೆ ಇಲ್ಲಿ ಹಲವು ಬಗೆಯ ಜನಸಮುದಾಯಗಳಿವೆ. ಹಲವು ಧರ್ಮ ಜಾತಿ ಬುಡಕಟ್ಟುಗಳು ಇವೆ. ಬಡವರಿದ್ದಾರೆ, ಸಿರಿವಂತರಿದ್ದಾರೆ. ಈ ವಿಭಿನ್ನ ಜನ ಉಡುವ ಉಣ್ಣುವ ರೀತಿಗಳಲ್ಲಿ ಸಹಜವಾಗಿ ವ್ಯತ್ಯಾಸ ಇದೆ. ಹೀಗಿರುವಾಗ ಯಾರೋ ಕೆಲವರು ಶ್ರೇಷ್ಠ ಎಂದು ನಂಬಿರುವುದು ಮಾತ್ರ ಸಂಸ್ಕೃತಿ ಎಂದರೆ ಹೇಗೆ ಒಪ್ಪುವುದು? ನೂರಾರು ಸಮುದಾಯಗಳು ಬದುಕುವ ಭಾರತದಲ್ಲಿ, ಇದೇ ಸಂಸ್ಕೃತಿ ಎಂದು ನಿರ್ಧರಿಸುವುದು ಯಾವಾಗಲೂ ಕಷ್ಟದ ಕೆಲಸ.

ಸಾಮಾನ್ಯವಾಗಿ ಎಲ್ಲ ಸಮಾಜಗಳಲ್ಲೂ ಶ್ರೇಷ್ಠ ಕನಿಷ್ಠ ಅನ್ನುವುದನ್ನ ತೀರ್ಮಾನ ಮಾಡುವುದು ಪ್ರತಿಷ್ಠಿತರು. ಒಬ್ಬ ಧಣಿ, ಕೆಲಸಗಾರರು ತನಗೆ ನಿಷ್ಠರಾಗಿ ದುಡಿಯುವುದೆ ಸಂಸ್ಕೃತಿ ಅನ್ನಬಹುದು. ಬ್ರಿಟಿಷರು ಈ ದೇಶಕ್ಕೆ ಬಂದಾಗ ಭಾರತೀಯರ ಸಂಸ್ಕೃತಿ ಅನಾಗರಿಕ ಎಂದೂ, ಅವರಿಗೆ ತಮ್ಮ ಸಭ್ಯತೆ ಕಲಿಸಿ ನಾಗರಿಕರನ್ನಾಗಿ ಮಾಡಬೇಕು ಎಂದೂ ನಂಬಿದ್ದರು. ಅಧಿಕಾರಸ್ಥ ವರ್ಗಾದ ಜನ, ಸಂಸ್ಕೃತಿ ವ್ಯಾಖ್ಯೆ ಮಾಡಿದಾಗೆಲ್ಲ ಈ ತಾರತಮ್ಯ ಇದ್ದೇ ಇರುತ್ತದೆ.

ಎಲ್ಲಾ ಸಮುದಾಯಗಳಿಗೆ ತಮ್ಮ ನಂಬಿಕೆ ಆಚರಣೆಗಳನ್ನು ಮತ್ತೊಬ್ಬರಿಗೆ ಇಷ್ಟವಾಗಲಿ ಬಿಡಲಿ, ಅನುಸರಿಸುವುದಕ್ಕೆ ಹಕ್ಕಿದೆ. ಅವರ ಹಕ್ಕು ಮತ್ತೊಬ್ಬರ ಹಕ್ಕನ್ನು ಕಿತ್ತುಕೊಳ್ಳಬಾರದು ಅಷ್ಟೆ. ಮೀನು ತಿನ್ನುವುದು ನಮಗೆ ಇಷ್ಟ ಎಂದಾಗ, ಅದು ಸಾಂಸ್ಕೃತಿಕ ಹಕ್ಕಾಗುತ್ತದೆ. ಅಸ್ಪೃತ್ಯತೆ ಆಚರಿಸುವುದು ನಮ್ಮ ಸಂಪ್ರದಾಯ ಎಂದಾಗ ಅದು ಇನ್ನೊಬ್ಬರನ್ನು ಕೀಳಾಗಿ ನೋಡುವ ಮಾತಾಗುತ್ತದೆ. ಎರಡೂ ನಬಿಕೆಗಳಾದರೂ ಅವುಗಳಲ್ಲಿ ಎಷ್ಟೊಂದು ವ್ಯತ್ಯಾಸ! ನಾಗರಿಕ ಸಮಾಜಕ್ಕೆ ಭಾಧೆಯಾಗದಂತೆ ಜನ ತಮ್ಮ ಸಂಸ್ಕೃತಿಯ ವಿಷಿಷ್ಟತೆ ಉಳಿಸಿಕೊಂಡರೆ, ಅದು ಕೆಡುಕಲ್ಲ. ಕನ್ನಡದ ಮೊದಲ ಕೃತಿ 'ಕವಿರಾಜಮಾರ್ಗ' ದಲ್ಲಿ 'ಪರರ ಧರ್ಮವನ್ನು ಪರರ ವಿಚಾರಗಳನ್ನು ಸಹಿಸುವುದೇ ಬಂಗಾರ' ಎಂಬ ಒಂದು ಮಾತು ಬರುತ್ತದೆ. ಹಲವು ಸಂಸ್ಕೃತಿ ಗಳಿಗಿರುವ ಪರಿಸರದಲ್ಲಿ ಇರಲೇಬೇಕಾದ ಡೆಮಾಕ್ರಟಿಕ್‌ಸಹನೆಯನ್ನು ಇದು ಸೂಚಿಸುತ್ತಿದೆ.

ಹಾಗಾದರೆ 'ಸಂಸ್ಕೃತಿ' ಎಂದರೇನು? ಈ ಪ್ರಶ್ನೆಗೆ ಹೀಗೆ ಉತ್ತರಿಸಬಹುದು ಸಂಸ್ಕೃತಿ ಎಂದರೆ ಒಂದು ನಾಡಿನ ಎಲ್ಲ ಜನರ ಜೀವನ ವಿಧಾನ. ನಮ್ಮಂತಹ ದೇಶದಲ್ಲಿ ಒಂದು ಸಂಸ್ಕೃತಿಯಲ್ಲ, ಹಲವು ಸಂಸ್ಕೃತಿಗಳಿವೆ. ಅವೆಲ್ಲ ಸೇರಿಯೆ ನಾಡಿನ ಒಟ್ಟು ಸಂಸ್ಕೃತಿ. ಒಬ್ಬರ ಜೀವನ ವಿಧಾನವನ್ನು ಮತ್ತೊಬ್ಬರು ಗೌರವಿಸುವುದು ಇಲ್ಲಿ ಬಹಳ ಮುಖ್ಯ ತತ್ವವಾಗಿದೆ.

**ಒಂದಲ್ಲ ಹಲವು**

ಈ ತತ್ವ ಕರ್ನಾಟಕ ಸಂಸ್ಕೃತಿಗೂ ಅನ್ವಯವಾಗುತ್ತದೆ. ನಮ್ಮ ಜನ ನಿರ್ದಿಷ್ಟ ಧರ್ಮಕ್ಕೆ ಅಥವಾ ಭಾಷೆಗೆ ಸೇರಿದವರಾಗಿದ್ದರೂ, ಅವರ ಜೀವನ ವಿಧಾನದಲ್ಲಿ ವ್ಯತ್ಯಾಸಗಳಿವೆ. ಬೀದರ್‌ಸೀಮೆಯ ಉರ್ದು ಸೊಗಡಿನ ಕನ್ನಡ ಮಾತಾಡುವವರಿಗೆ, ಕೊಳ್ಳೇಗಾಲದ

ಕನ್ನಡ ಅರ್ಥವಾಗುವುದಿಲ್ಲ. ಬಿಜಾಪುರದ ಕನ್ನಡ ಉಡುಪಿಯವರಿಗೆ, ಪೂರ್ತಿ ತಿಳಿಯುವುದಿಲ್ಲ. ಧಾರವಾಡದವರು ಮೈಸೂರಿಗೆ ಹೋದರೆ ಜೋಳದ ರೊಟ್ಟಿ ಸಿಗದೆ ಯಾವುದೋ ದೇಶಕ್ಕೆ ಬಂದೆವಲ್ಲ ಎಂದು ಪರದಾಡುವಂತಾಗುತ್ತದೆ. ಬಂಗುಡೆ ಮೀನು ತಿನ್ನುವ ಕರಾವಳಿಯವರು ಬಳ್ಳಾರಿಗೆ ಹೋದರೂ ಹೀಗೇ ಅನಿಸಬಹುದು. ಕರ್ನಾಟಕದ ಪ್ರತಿ ಭಾಗದ ಜನ ಆಡುವ ಮಾತು, ಮಾಡುವ ಊಟ, ಉಡುವ ಬಟ್ಟೆಗಳಲ್ಲಿ ಇಷ್ಟೊಂದು ವೈವಿಧ್ಯವಿದೆ! ಇಲ್ಲಿನ ಸೋಲಿಗ ಸಿದ್ಧಿ ಹಾಲಕ್ಕಿ ಬುಡಕಟ್ಟು ಜನರ ಸಂಸ್ಕೃತಿಯಂತೂ ಮತ್ತು ವಿಶಿಷ್ಟ. ಕರ್ನಾಟಕ ಸಂಸ್ಕೃತಿ ನಿಜಕ್ಕೂ ಬಹುರೂಪಿಯಾಗಿದೆ.

ಹಾಗಾದರೆ ಯಾವುದು 'ಕರ್ನಾಟಕ ಸಂಸ್ಕೃತಿ'? ಕರ್ನಾಟಕದಲ್ಲಿ ಬದುಕುತ್ತಿರುವ ಎಲ್ಲಾ ಸಮುದಾಯಗಳ ಸಂಸ್ಕೃತಿಗಳ ಮೊತ್ತವೆ ಕರ್ನಾಟಕ ಸಂಸ್ಕೃತಿ. ಭಾರತೀಯ ಸಂಸ್ಕೃತಿ ಎಂದಾಗಲೂ ಇದೇ ರೀತಿಯಲ್ಲಿ ಅರ್ಥೈಸಬೇಕು.

**ಸಂಸ್ಕೃತಿ ಮತ್ತು ಭಾಷೆ**

'ಕರ್ನಾಟಕ ಸಂಸ್ಕೃತಿ' ಎಂದಂತೆ, 'ಕನ್ನಡ ಸಂಸ್ಕೃತಿ' ಎಂಬ ಮಾತೂ ಇದೆ. ಕನ್ನಡ ಸಂಸ್ಕೃತಿ ಎಂದಾಗ ಸಂಸ್ಕೃತಿಯನ್ನು ಭಾಷೆ ಹೆಸರಿನಲ್ಲಿ ಗುರುತಿಸುತ್ತೇವೆ. ಕರ್ನಾಟಕ ಸಂಸ್ಕೃತಿ ಎಂದಾಗ ಪ್ರದೇಶದ ಹೆಸರಿನಲ್ಲಿ ಗುರುತಿಸುತ್ತೇವೆ. ಇವುಗಳ ನಡುವೆ ಸೂಕ್ಷ್ಮ ವ್ಯತ್ಯಾಸವಿದೆ. ಕನ್ನಡ ಸಂಸ್ಕೃತಿ ಎಂದೊಡನೆ, ಕನ್ನಡ ಭಾಷೆ, ಕನ್ನಡ ಮಾತೃಭಾಷೆಯ ಜನ, ಕನ್ನಡ ಲೇಖಕರು ನೆನಪಾಗುತ್ತಾರೆ. ಆದರೆ ಮನೆಮಾತು ಕನ್ನಡವಾಗಿರದ ಜನಸಮುದಾಯಗಳೂ ಇಲ್ಲಿವೆ. ತುಳುವರಿದ್ದಾರೆ, ಕೊಡವರಿದ್ದಾರೆ. ಲಂಬಾಣಿ ಉರ್ದು ಕೊಂಕಣಿ ಮಲೆಯಾಳ, ತಮಿಳು, ತೆಲುಗು, ಮರಾಠಿ ಮಾತಾಡುವ ಜನರಿದ್ದಾರೆ. ಹಾಗಿರುವಾಗ ಇವರದು ಕನ್ನಡ ಸಂಸ್ಕೃತಿ ಹೌದೋ ಅಲ್ಲವೋ?

ಒಂದು ಭಾಷೆ ಮಾತಾಡುವ ಪ್ರದೇಶಗಳನ್ನೆಲ್ಲ ಸೇರಿಸಿ ರಾಜ್ಯ ಮಾಡಿದರೆ, ಜನ ಆ ಭಾಷೆಯಲ್ಲಿ ಶಿಕ್ಷಣ ಆಡಳಿತ ಮಾಡಿಕೊಂಡು, ಬೇಗನೆ ಅಭಿವೃದ್ಧಿ ಸಾಧಿಸುತ್ತಾರೆ. ಇದು ಭಾಷಾವಾರು ರಾಜ್ಯಗಳನ್ನು ಮಾಡಿದ್ದರ ಉದ್ದೇಶ. ಅದರಂತೆ, ೧೯೫೬ರಲ್ಲಿ ಕರ್ನಾಟಕ ರಾಜ್ಯ ಮೂಡಿತು. ಈ ಲೆಕ್ಕದಲ್ಲಿ ಕರ್ನಾಟಕ ಸಂಸ್ಕೃತಿಯೊಳಗೆ ಕನ್ನಡಭಾಷೆ ಕೇಂದ್ರ ಸ್ಥಾನದಲ್ಲಿರುವುದು ಸಹಜ. ಆದರೆ ಕರ್ನಾಟಕದಲ್ಲಿ ವಾಸಿಸುವ ಎಲ್ಲರನ್ನೂ ನಾವು ಕನ್ನಡಿಗರು ಎಂದೇ ಕರೆಯುತ್ತೇವೆ. ತುಳು, ಉರ್ದು, ಕೊಡವ ಭಾಷಿಕರು, ತಂತಮ್ಮ ಭಾಷೆಯ ಜತೆಗೆ, ಪರಿಸರದಲ್ಲಿರುವ ಕನ್ನಡವನ್ನು ಉಸಿರಾಟಕ್ಕೆ ಗಾಳಿ ಪಡೆದಷ್ಟು ಸಹಜವಾಗಿ ಪಡೆದು ಕೊಂಡಿದ್ದಾರೆ.

ಹೀಗಾಗಿ 'ಕನ್ನಡ ಸಂಸ್ಕೃತಿ' ಗಿಂತ 'ಕರ್ನಾಟಕ ಸಂಸ್ಕೃತಿ' ಎಂಬ ವಿಶಾಲ ಕಲ್ಪನೆಯನ್ನು ಬಳಸುವುದೇ ನಮ್ಮ ಸಂದರ್ಭದಲ್ಲಿ ಸೂಕ್ತ. ಕರ್ನಾಟಕ ಸಂಸ್ಕೃತಿ ಮರದ ದಿಮ್ಮಿಯಂತಿಲ್ಲ. ಕೊಂಬೆರೆಂಬೆಗಳುಳ್ಳ ಮರದಂತಿದೆ. ಅದರಲ್ಲಿ ಕನ್ನಡದ ಜತೆಗೆ ತುಳು ಕೊಡವ ಸಾಹಿತ್ಯವೂ ಇದೆ. ದಖನಿ ಉರ್ದುವಿನಲ್ಲಿ ಗುಲಬರ್ಗದ ಬಂದೇನವಾಜನೂ, ತೆಲುಗಿನಲ್ಲಿ ಕೈವಾರದ ತಾತಯ್ಯನು ರಚಿಸಿದ ಸಾಹಿತ್ಯವೂ ಇದೆ. ಧರ್ಮಗಳ ಆಧಾರದಲ್ಲಿ ಹೇಳುವುದಾದರೆ, ಹಿಂದುಗಳು ಕ್ರೈಸ್ತರು ಜೈನರು ಮುಸ್ಲಿಮರು ಎಲ್ಲ ಸೇರಿಯೇ ಕರ್ನಾಟಕ ಸಂಸ್ಕೃತಿಯಾಗಿದೆ.

ಕನ್ನಡದ ಜತೆ ಕನ್ನಡೇತರ ಮನೆಮಾತಿನ ಜನ ಇಟ್ಟುಕೊಂಡಿರುವ ಸಂಬಂಧ ಸ್ವಾರಸ್ಯಕರವಾಗಿದೆ. ಕನ್ನಡಿಗರಾದ ಗಂಗೂಬಾಯಿ ಹಾನಗಲ್, ಭೀಮಸೇನಜೋಶಿ ಹಾಡುವ ಹಿಂದೂಸ್ಥಾನಿ ಸಂಗೀತಕ್ಕೆ ಭಾಷೆಯ ಹಂಗೇ ಇಲ್ಲ. ಅವರು ಹಿಂದೂಸ್ಥಾನಿ ರಚನೆಗಳನ್ನು ಹಾಡುತ್ತಾರೆ. ಅವರು ಹಾಡುವ ಅಭಂಗಗಳಂತೂ ಮರಾಠಿಯವು. ಡಿವಿಜಿ, ಮಾಸ್ತಿ, ಕೈಲಾಸಂ, ಬೇಂದ್ರೆ, ನಿಸಾರ್ ಅಹಮದ್, ಸಾರಾ ಅಬೂಬಕರ್, ನಾ ಡಿಸೋಜ, ಲಲಿತನಾಯಕ ಇವರು ಕನ್ನಡ ಲೇಖಕರು. ಆದರೆ, ಇವರಲ್ಲಿ ಯಾರ ಮನೆಮಾತೂ ಕನ್ನಡವಲ್ಲ! ಬದಲಾಗಿ ತಮಿಳು, ತೆಲುಗು, ಉರ್ದು, ಕೊಂಕಣಿ, ಲಂಬಾಣಿ. ನೂರು ವರುಷಗಳ ಹಿಂದೆ ಕನ್ನಡಕ್ಕೊಂದು ಅಪರೂಪದ ನಿಘಂಟನ್ನು ರಚಿಸಿಕೊಟ್ಟ ಕಿಟ್ಟೆಲನಂತೂ ಈ ದೇಶದವನೇ ಅಲ್ಲ, ಜರ್ಮನಿಯವನು!

ವಿಚಿತ್ರವಾದರೂ ವಾಸ್ತವ ಸಂಗತಿಯೆಂದರೆ, ಮನೆಮಾತು ಕನ್ನಡವಾದರೂ ಕನ್ನಡದಲ್ಲಿ ವಿದ್ಯಾಭ್ಯಾಸ ಮಾಡದ, ಕನ್ನಡ ಮಾತಾಡಲು ಕೀಳರಿಮೆ ಪಟ್ಟುಕೊಳ್ಳುವ ಬೇಕಾದಷ್ಟು ಜನ ನಮ್ಮಲಿದ್ದಾರೆ! ಬಹುಶ ಬೆಂಗಳೂರಿನಲ್ಲಿ ಜಾಸ್ತಿ ಇದ್ದಾರೆ. ವೈದ್ಯಕೀಯ ಇಂಜಿನಿಯರಿಂಗ್‌ಶಿಕ್ಷಣವನ್ನು, ೨೦೦೦ ವರ್ಷದ ಚರಿತ್ರೆಯುಳ್ಳ, ಕೋಟ್ಯಂತರ ಜನರ ಭಾಷೆಯಾದ ಕನ್ನಡದಲ್ಲಿ, ಇನ್ನೂ ಕಲಿಸಲು ಯಾಕೆ ಸಾಧ್ಯವಾಗಿಲ್ಲ? ಕನ್ನಡಕ್ಕೆ ಸವಾಲು ಒಡ್ಡಿರುವುದು ಇಂಗ್ಲೀಷೊ, ಇಲ್ಲಿನ ಜನಭಾಷೆಗಳಾದ ತುಳು ಕೊಡವ ಉರ್ದುಗಳೋ? ಸಂಸ್ಕೃತಿಯನ್ನು ಆವೇಶದಲ್ಲಿ ಗ್ರಹಿಸಿದರೆ ಇಂತಹ ದೊಡ್ಡಸತ್ಯಗಳು ತಪ್ಪಿಸಿಕೊಂಡು ಬಿಡುತ್ತವೆ. ಸಂಸ್ಕೃತಿಯನ್ನು ಹುಶಾರಾಗಿ ವ್ಯಾಖ್ಯಾನಿಸದಿದ್ದರೆ, ಅದು ನಿಜವೈಖರಿಯನ್ನು ಬಿಟ್ಟು ಸಂಗಾತಿಯನ್ನು ದ್ವೇಷಿಸುವ ಕೆಲಸ ಮಾಡುತ್ತದೆ.

**ಸಂಸ್ಕೃತಿಯಲ್ಲಿ ಕೊಡುಕೊಳು**

ಬಿ ಜಿ ಎಲ್‌ಸ್ವಾಮಿ 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ' ಎಂಬ ಪುಸ್ತಕ ಬರೆದಿದ್ದಾರೆ. ಅದರಲ್ಲಿ ನಾವು ನಿತ್ಯ ಬಳಸುವ ಮೆಣಸಿನಕಾಯಿ ಗೋಡಂಬಿ ಕಡಲೆ ಪಪ್ಪಾಯಿ ಹೇಗೆ ಪರದೇಶದಿಂದ ಬಂದವು ಎಂದು ವಿವರಿಸುತ್ತಾರೆ. ನಮ್ಮ ಸಂಸ್ಕೃತಿ ಎಂಬುದು ನಮಗೇ ವಿಶಿಷ್ಟವಾದ ಗುರುತುಗಳಿರುವ ಸಂಗತಿ ಎಂಬ ಮಾತು ನಿಜ. ಹಾಗೆಂದು ಅದು ಹೊರಗಿನಿಂದ ಬಂದ ಯಾವುದರ ಜತೆಗೂ ಬೆರೆಯದೆ, ಮೂಲರೂಪದಲ್ಲಿ ಶುದ್ಧವಾಗಿ ಉಳಿದುಬಂದಿದೆ ಎಂದರ್ಥವಲ್ಲ. ಸಂಸ್ಕೃತಿಯು ಭೂಗರ್ಭದಿಂದ ಹುಟ್ಟಿ ಅಲ್ಲೇ ಬಿದ್ದಿರುವ ಬಂಡೆಯಂತಿಲ್ಲ. ಅದು ನದಿಯಂತೆ. ನೂರು ಕಡೆಯಿಂದ ಬಂದ ಜಲಧಾರೆಗಳನ್ನು ಸೇರಿಸಿಕೊಂಡು ಹರಿಯುತ್ತದೆ. ಎಂತಲೇ ಕರ್ನಾಟಕ ಸಂಸ್ಕೃತಿ ಒಂದು ದ್ವೀಪವಾಗಿಲ್ಲ. ಕನ್ನಡದಲ್ಲಿ ಸಾವಿರಾರು ಇಂಗ್ಲಿಷು ಪೋರ್ಚುಗೀಸು ಫಾರಿಸಿ ಅರಬ್ಬಿ ಸಂಸ್ಕೃತ ಭಾಷೆಯ ಪದಗಳು ಸೇರಿವೆ. ಅವು ಎಷ್ಟು ನಮ್ಮವಾಗಿವೆ ಎಂದರೆ, ಉಗಿಬಂಡಿ ಆರಕ್ಷಕ ವೈದ್ಯ ಅಭಿಯಂತರ ಮುಂತಾದವು 'ನಮ್ಮ' ಪದಗಳಾದರೂ ವಿದೇಶಿ ಅನಿಸುತ್ತದೆ. ರೈಲು ಪೋಲಿಸು ಇಂಜಿನಿಯರು ಡಾಕ್ಟರು ಇವು 'ವಿದೇಶಿ' ಪದಗಳಾದರೂ ನಮ್ಮವು ಅನಿಸುತ್ತವೆ.

ಜೀವಂತವಾದ ಯಾವ ಭಾಷೆಯೂ ಯಾವ ಸಂಸ್ಕೃತಿಯೂ ಒಂಟಿಯಾಗಿ ನಿಲ್ಲುವ ಹಟ ಮಾಡುವುದಿಲ್ಲ. ಅವು ಕೊಡುಕೊಳು ಮಾಡುತ್ತ ಬೆಳೆಯುತ್ತವೆ. ಕೊಡುಕೊಳೆ ಮಾಡುವಾಗ ಉಪಯುಕ್ತವಾದುದನ್ನು ಉಳಿಸುಕೊಳ್ಳಲು ಯತ್ನಿಸುತ್ತೇವೆ. ಬಿಜಾಪುರದ ಗೋಳಗುಮ್ಮಟ ಗಮನಿಸಿ. ಅದರಲ್ಲಿ ಪರ್ಶಿಯನ್‌ವಾಸ್ತುಶೈಲಿಯು ಭಾರತೀಯ ಶೈಲಿಯ ಜತೆ ಅದ್ಭುತವಾಗಿ ಮಿಲನಗೊಂಡಿದೆ. ಹಂಪಿಯ ಕಮಲಮಹಲ್‌ಇಡಿಯಾಗಿ ಇಸ್ಲಾಮಿಕ್‌ಶೈಲಿಯಲ್ಲಿದೆ. ಬ್ರಿಟಿಷ್‌ಇಂಜಿನಿಯರುಗಳು ಕಟ್ಟಿಸಿದ ಈಗಿನ ಮೈಸೂರು ಅರಮನೆಯಲ್ಲಿ, ಯೂರೋಪಿನ, ಪರ್ಶಿಯಾದ ಹಾಗೂ ಭಾರತೀಯ ವಾಸ್ತುಶೈಲಿಗಳೆಲ್ಲ ಮಿಲನವಾಗಿವೆ.

ಕರ್ನಾಟಕ ಸಂಸ್ಕೃತಿಗೆ ಕರ್ನಾಟಕಕ್ಕೆ ಲಗತ್ತಾಗಿರುವ ಪ್ರಾಂತ್ಯಗಳೂ ತಮ್ಮ ಕೊಡುಗೆ ಕೊಟ್ಟಿವೆ. ದಕ್ಷಿಣಕನ್ನಡ ಜಿಲ್ಲೆಯ ಊಟ ಉಡುಗೆ ಜಾತ್ರೆ ದೈವಗಳು ಹಬ್ಬಗಳು, ಕೇರಳ ಸಂಸ್ಕೃತಿಯೊಂದಿಗೆ ಗಾಢ ಸಂಬಂಧ ಹೊಂದಿವೆ. ಉತ್ತರ ಕರ್ನಾಟಕದ ಊಟ ನಾಟಕ ಉಡುಪು ವ್ಯಾಪಾರ ಇವು ಮಹಾರಾಷ್ಟ್ರ ಸಂಸ್ಕೃತಿಯೊಂದಿಗೆ ಸಂಬಂಧ ಪಡೆದಿದೆ. ಇದೇ ರೀತಿ ಕೊಳ್ಳೇಗಾಲದಲ್ಲಿ ತಮಿಳುನಾಡಿನ, ಕೋಲಾರದಲ್ಲಿ ಆಂಧ್ರದ, ಕಾರವಾರದಲ್ಲಿ ಕೊಂಕಣಿಯ ನೆರಳು ಚಾಚಿದೆ.

ಕರ್ನಾಟಕ ಸಂಸ್ಕೃತಿಯ ಬೆಳೆಗೆ ಎಷ್ಟೊಂದು ಕಡೆಯ ಮೋಡಗಳು ಮಳೆಸುರಿಸಿವೆ! ಎಷ್ಟು ದಿಸೆಯಿಂದ ಬಂದ ಗಾಳಿ ಬೀಸಿದೆ! ನಮ್ಮೀ ಸಂಸ್ಕೃತಿ ನೆರೆಯ ರಾಜ್ಯಗಳ ಮಾತ್ರವಲ್ಲ, ಜಗತ್ತಿನ ಅನೇಕ ದೇಶಗಳ ಸಂಸ್ಕೃತಿ ಪ್ರಭಾವಗಳನ್ನು ಹೊಟ್ಟೆಯೊಳಗೆ ಇಟ್ಟುಕೊಂಡು ರೂಪುತಳೆದಿದೆ. ಇದಕ್ಕೆ ಒಳ್ಳೆ ಉದಾಹರಣೆ ಎಂದರೆ, ಕರ್ನಾಟಕದಲ್ಲಿ ನಡೆಯುವ ಮೊಹರಂ ಹಬ್ಬ. ಮುಸ್ಲಿಮ್ಮರಿಲ್ಲದ ಹಳ್ಳಿಗಳಲ್ಲೂ ಮೊಹರಂ ಆಚರಣೆಗಳು ನಡೆಯುತ್ತವೆ. ಇಲ್ಲಿನ ಸೂಫಿಸಂತರ ದರ್ಗಾಳಿಗೆ, ಎಲ್ಲ ಧರ್ಮಗಳ ಜನ ನಡೆದುಕೊಳ್ಳುತ್ತಾರೆ. ಶಿರಹಟ್ಟಿ ಫಕೀರೇಶ, ಸಾವಳಗಿ ಶಿವಲಿಂಗ, ತಿಂತಿಣಿ ಮೋನಪ್ಪ ಮುಂತಾದ ಸಂತರ ಜಾಗಗಳು, ಸೂಫಿಪಂಥದ ಪ್ರಭಾವದಲ್ಲಿ ರೂಪುಗೊಂಡಿರುವ ಧಾರ್ಮಿಕ ಸಾಮರಸ್ಯದ ಕ್ಷೇತ್ರಗಳಾಗಿವೆ.

**ಹಿರೀಕರ ಸಾಧನೆ ಮಾತ್ರವೆ?**

ಸಂಸ್ಕೃತಿ ಎನ್ನುವುದು ನಮ್ಮ ಪೂರ್ವಿಕರು ಗೈದ ಸಾಧನೆ ಎಂಬ ನಂಬಿಕೆ ಸಾಮಾನ್ಯವಾಗಿ ಇದೆ. ಹೀಗೆ ನಂಬಿದವರಿಗೆ ಸಂಸ್ಕೃತಿ ಎಂದೊಡನೆ ಗತಕಾಲವೆ ನೆನಪಾಗುವುದು. ಗತಕಾಲದ ಮೂಲಕ ನೋಡುತ್ತ ಹೋದರೆ, ಅದರಲ್ಲಿ ವರ್ತಮಾನದ ಪಾತ್ರವೆ ಕಾಣುವುದಿಲ್ಲ. ಆದರೆ ಸಂಸ್ಕೃತಿ ಕೇವಲ ಗತಕಾಲದ ಚಿತ್ರವಲ್ಲ ಅಥವಾ ಪೂರ್ವಜರು ಬಿಟ್ಟುಹೋದ ಆಸ್ತಿಯಲ್ಲ. ಅದು ವರ್ತಮಾನದವರ ಸಾಧನೆ ಸೋಲುಗಳನ್ನೂ ಒಳಗೊಂಡಿದೆ. ಹೀಗಾಗಿ ಕರ್ನಾಟಕ ಸಂಸ್ಕೃತಿಯಲ್ಲಿ ಹಂಪಿ ಹಳೇಬೀಡು ಶ್ರವಣಬೆಳಗೊಳ ಬಿಜಾಪುರಗಳಲ್ಲಿರುವ ಶಿಲ್ಪಕಲೆ ವಾಸ್ತುಕಲೆಗಳು ಮಾತ್ರವಲ್ಲ. ಈಗ ಕಟ್ಟುತ್ತಿರುವ ಕಟ್ಟಡಗಳು ಇವೆ. ವಿಧಾನಸೌಧದಿಂದ ಹಿಡಿದು ನಮ್ಮ ಜನ ವಾಸಕ್ಕೆ ಕಟ್ಟಿಕೊಂಡಿರುವ ಮನೆಗಳೂ ಇವೆ. ಸಂಸ್ಕೃತಿಯ ನದಿಯೊಳಗೆ ನೆಲದಾಳದಿಂದ ಉಕ್ಕುವ ಒರತೆ ನೀರೂ ಉಂಟು. ಹೊಸದಾಗಿ ಬೀಳುವ ಮಳೆನೀರೂ ಉಂಟು.

ಸಂಸ್ಕೃತಿಯನ್ನು ಚರಿತ್ರೆಯ ಪ್ರಸಿದ್ಧ ರಾಜರಾಣಿಯರಲ್ಲಿ ಅವರ ಅರಮನೆ ಕೋಟೆಗಳಲ್ಲಿ ಹುಡುಕುವ ಮತ್ತೊಂದು ಪದ್ಧತಿಯಿದೆ. ಅರಮನೆ ಕೋಟೆಗಳನ್ನೆಲ್ಲ ಕಟ್ಟಿದವರು. ಸಾಮಾನ್ಯ ಜನರೇ. ಆದರೆ ಹೆಸರು ಉಳಿದಿರುವುದು ಮಾತ್ರ ಕಟ್ಟಿಸಿದವರದು! ಇಂತಹ ಸಂದರ್ಭದಲ್ಲಿ ಸಮುದಾಯಗಳ ಮೂಲಕ ಸಂಸ್ಕೃತಿಯನ್ನು ನೋಡಲು ಯತ್ನಿಸಬೇಕು. ಚರಿತ್ರೆಯನ್ನು ಅಧಿಕಾರಸ್ಥರ ಕಣ್ಣಲ್ಲಿ ನೋಡುವಾಗ, ಕೆಲವರ ಸುಖಕ್ಕಾಗಿ ಹಲವರು ಕಷ್ಟಪಡುವುದು ಸರಿ ಅನಿಸತೊಡಹುತ್ತದೆ; ಜನರ ದುಡಿಮೆ ಸೇವೆ ನಿಷ್ಠೆಗಳು ತ್ಯಾಗದಂತೆಯೂ, ಜನ ನ್ಯಾಯಕ್ಕಾಗಿ ಮಾಡುವ ಪ್ರತಿಭಟನೆ ದ್ರೋಹವಾಗಿ ಕಾಣತೊಡಗುತ್ತದೆ.

ನಾವು ಯಾವುದನ್ನು 'ತ್ಯಾಗ' ಎನ್ನುತ್ತೇವೆ - ಇದು ಕೇಳಿಕೊಳ್ಳಬೇಕಾದ ಪ್ರಶ್ನೆ. ನಮ್ಮ ಪ್ರಾಚೀನರ ಬದುಕಿಗೆ ಸಂಬಂಧಿಸಿದಂತೆ ಇರುವ 'ವೀರಗಲ್ಲು' ಹಾಗೂ 'ಸಿಡಿತಲೆಕಲ್ಲು' ಗಳನ್ನು ಗಮನಿಸೋಣ. ವೀರಗಲ್ಲುಗಳನ್ನು ಮೂರು ಕಾರಣಕ್ಕಾಗಿ ನಿಲ್ಲಿಸಲಾಗುತ್ತಿತ್ತು. ಊರಿಗೆ ಕಳ್ಳರು ಮುತ್ತಿದಾಗ, ಊರ ಮಹಿಳೆಯರನ್ನು ಹೊರಗಿನವರು ಅಪಹರಿಸಿದಾಗ, ಊರ ದನಗಳನ್ನು - ಪರ ಊರಿನವರು ಕದ್ದು ಒಯ್ಯುವಾಗ ರಕ್ಷಿಸುತ್ತ ಹೋರಾಡಿ ಜೀವತೆತ್ತ ವೀರರಿಗೆ ವೀರಗಲ್ಲು ನಿಲ್ಲಿಸಿ ಜನ ಕೃತಜ್ಞತೆ ಸಲ್ಲಿಸುತ್ತಿದ್ದರು. ಸಿಡಿತಲೆ ಕಲ್ಲುಗಳೆಂದರೆ, ರಾಜನಿಗೆ ಸೇವಕರು ತೋರಿಸುತ್ತಿದ್ದ ಸ್ವಾಮಿನಿಷ್ಠೆಯ ಸ್ಮಾರಕಗಳು ರಾಜನಿಗೆ ಮಕ್ಕಳಾಗಲೆಂದು ಅಥವಾ ಯುದ್ಧದಲ್ಲಿ ಗೆಲವು ಸಿಗಲೆಂದು ಹರಸಿಕೊಂಡವರು, ತಮ್ಮ ತಲೆ ಕತ್ತರಿಸಿಕೊಂಡು ಹರಕೆ ತೀರಿಸುತ್ತಿದ್ದರು. ಇದರ ರೀತಿ ಭಯಾನಕವಾಗಿತ್ತು.

ವೀರಗಲ್ಲಿನದು ಸಮುದಾಯಕ್ಕಾಗಿ ಪ್ರಾಣತ್ಯಾಗ ಮಾಡುವ ಶೌರ್ಯವಾದರೆ, ಸಿಡಿತಲೆಯದು ಧಣಿಗಾಗಿ ಸೇವಕರು ತೋರಿದ ನಿಷ್ಠೆ. ಈ ಎರಡೂ ಮುಖಗಳು ಕರ್ನಾಟಕದ ಗತಕಾಲದ ಚರಿತ್ರೆಯಲ್ಲಿವೆ. ಪ್ರಜಾಪ್ರಭುತ್ವದಲ್ಲಿ ಬದುಕ್ಕುತ್ತಿರುವ ನಾವು. ಇದರಲ್ಲಿ ಯಾವುದನ್ನು 'ನಮ್ಮ ಸಂಸ್ಕೃತಿ' ಎಂದು ಹೆಮ್ಮೆಯಿಂದ ಮಂಡಿಸಬೇಕು? ಚರಿತ್ರೆಯನ್ನು ಧಣಿಗಳ ಮೂಲಕ ನೋಡುವುದಕ್ಕೂ ಜನರ ಮೂಲಕ ನೋಡುವುದಕ್ಕೂ ವ್ಯತ್ಯಾಸ ಮಾಡುವ ಎಚ್ಚರ ತೋರಿಸಬೇಕಾದ್ದು ಇಲ್ಲೇ.

**ವೈಭವೀಕರಣ ಮತ್ತು ಅಭಿಮಾನ**

ಕರ್ನಾಟಕ ಸಂಸ್ಕೃತಿಯನ್ನು ಗತವೈಭವದ ಚಿತ್ರಗಳ ಮೂಲಕ ಕಟ್ಟಿ ತೋರಿಸುವ ರೂಢಿ ಕನ್ನಡದಲ್ಲಿದೆ. ಕನ್ನಡಿಗರು ಶೂರರೂ ಚೆಲುವರೂ ಅಭಿಮಾನಿಗಳೂ ವಿವೇಕಿಗಳೂ ರಸಿಕರೂ ಆಗಿದ್ದರು. 'ಕವಿರಾಜಮಾರ್ಗ' ವರ್ಣಿಸುತ್ತದೆ. ಅಂಡಯ್ಯನೆಂಬ ಕವಿಯ ಪ್ರಕಾರ, ಕನ್ನಡನಾಡಿನಲ್ಲಿ ತೆಂಗು ಅಡಕೆ ಮಾವು ಸಂಪಿಗೆಯ ಮರಗಳು, ಪಕ್ಷಿಗಳಲ್ಲಿ ಗಿಳಿ ಕೋಗಿಲೆ ನವಿಲುಗಳು ಮಾತ್ರ ಇದ್ದವಂತೆ. ತಮ್ಮ ದೇಶವನ್ನು ಭಾವುಕವಾಗಿ ಉತ್ಪ್ರೇಕ್ಷೆಯಿಂದ ಬಣ್ಣಿಸಿಕೊಳ್ಳುವ ಸ್ವಭಾವ ಎಲ್ಲ ಕಡೆ ಇದ್ದಂತಿದೆ. ಆದರೆ ಇಂಥ ಉದಾಹರಣೆಗಳನ್ನೆ ಕಟ್ಟಿ ತೋರಿಸಿದರೆ, ಸಂಸ್ಕೃತಿಯ ನಿಜವಾದ ನೋಟ ಸಿಕ್ಕುತ್ತದೆಯೇ? ಸಂಸ್ಕೃತಿಯಲ್ಲಿ ಅಭಿಮಾನದ ಜತೆ ಜತೆಯಲ್ಲಿ ಲಜ್ಜೆಯ ಅಂಶಗಳೂ ಇರುತ್ತವೆ. ಕರ್ನಾಟಕದಲ್ಲಿ ಗುಣವಂತರು ಶೂರರು ಇದ್ದರು, ಈಗಲೂ ಇದ್ದಾರೆ. ಇಂತಹವರ ಜತೆ, ಕಳ್ಳರೂ ಅಪ್ರಾಮಾಣಿಕರೂ ಶೂರರು ಇದ್ದರು, ಟಿಪ್ಪುನಿನಂತಹ ಕನಸುಗಾರನೂ ಸ್ವಾಭಿಮಾನಿಯೂ ಇದ್ದ ಕಾಲದಲ್ಲೆ ಮೀರ್‌ಸಾಧಿಕನಂತಹ

ಸಮಯಸಾಧಕನೂ ಇದ್ದನಲ್ಲವೆ? ಪ್ರಾಚೀನ ಕರ್ನಾಟಕದಲ್ಲಿ ಜೀತಪದ್ಧತಿಯಿತು, ಅಸ್ಪೃಶ್ಯತೆಯಿತ್ತು. ಮಹಿಳೆಯರ ಮಾರಾಟವಿತ್ತು. ಬಡತನವಿತ್ತು. 'ಬಡವರು ಸತ್ತರೆ ಸುಡಲಿಕ್ಕೆ ಸೌದಿಲ್ಲ. ಹಸಿವಿನ ಬೆಂಕಿ ಅವರನ್ನು ಸಾಕಷ್ಟು ಸುಟ್ಟಿದೆ. ಆದ್ದರಿಂದ ಬಡವರಿಗೆ ಸಾವು ಕೊಡಬ್ಯಾಡ' ಎಂಬ ಅರ್ಥದ ಜನಪದ ಗೀತೆಯನ್ನು ನೆನೆಯಬೇಕು. ಬರಗಾಲ ಬಂದಾಗ ಜನ, ಹೆತ್ತ ಮಕ್ಕಳನ್ನು ಮರಾಟ ಮಾಡುತ್ತಿದ್ದರು ಎಂದು 'ಮಕ್ಕಳ ಮಾರ್ಯಾರ ಮಳೆರಾಯ' ಎಂಬ ಹಾಡು ಹೇಳುತ್ತದೆ. ಇವೆಲ್ಲ ಕುರೂಪಗಳು ದುಃಖಗಳು ಬೇರೆ ವೇಷದಲ್ಲಿ ಈಗಲೂ ಉಳಿದುಬಂದಿವೆ. ಇವನ್ನೆಲ್ಲ ಕೂಡಿಸಿ ನೋಡಿದಾಗಲೇ ನಮ್ಮ ಸಂಸ್ಕೃತಿಯ ವಾಸ್ತವ ಚಿತ್ರ ಸಿಕ್ಕುವುದು.

**ಸಂಸ್ಕೃತಿಯಲ್ಲಿ ಸ್ವವಿಮರ್ಶೆ**

ಹಾಗಾದರೆ ವರ್ತಮಾನದ ನಮಗೆ ಚರಿತ್ರೆಯ ಸುಂದರವಾದ ಅಭಿಮಾನ ಹುಟ್ಟಿಸುವ ನೆನಪುಗಳು ಬೇಡವೇ? ಅವು ಬೇಕು. ಅವುಗಳ ನೆನಪಿನಿಂದ ನಮ್ಮ ಕಣ್ಣೆದುರಿನ ಕೇಡುಗಳ ವಿರುದ್ಧ ಹೋರಾಡಲು ಚೈತನ್ಯ ಸಿಗುತ್ತವೆ. ಸಂಸ್ಕೃತಿಯಲ್ಲಿ ಇಂತಹ ಅಬಿಮಾನದ ಮುಖಗಳು ಬೇಕಾದಷ್ಟಿವೆ. ಆದರೆ ಅಭಿಮಾನವು ಕೊಂಚ ಜಾರಿದರೂ ವೈಭವೀಕರಣಕ್ಕೆ ಹೋಗಿಬಿಡುತ್ತದೆ. ಕರ್ನಾಟಕ ಸಂಸ್ಕೃತಿ ಬರಿ ವೈಭವಗಳ ಕಥನವಲ್ಲ. ಅಲ್ಲಿ ನಾವು ಹೆಮ್ಮೆ ಪಡಲಾಗದ ನೂರಾರು ಕಪ್ಪುಕಲೆಗಳಿವೆ. ಯಾವತ್ತೂ ಸಾಧನೆಗಳು ಹೆಮ್ಮೆಯಿಂದ ತಲೆಯೆತ್ತಿಸುತ್ತವೆ. ನೋವು ಪಶ್ಚಾತ್ತಾಪಗಳು ಆತ್ಮವಿಮರ್ಶೆಗೆ ಹಚ್ಚುತ್ತವೆ. ಆತ್ಮವಿಮರ್ಶೆ ಇಲ್ಲದೆ ಯಾವ ದೇಶವೂ ದೊಡ್ಡದಾಗಿ ಬೆಳೆದಿಲ್ಲ. ಚರಿತ್ರೆಯನ್ನಾಗಲಿ ವರ್ತಮಾನವನ್ನಾಗಲಿ ಅಲ್ಲಿರುವ ಕೇಡೂ ನೋವು ಸೋಲುಗಳ ಸಮೇತ ಸ್ವೀಕರಿಸಬೇಕು. ನಮ್ಮಲ್ಲಿ ಕೊರತೆಯಿದೆ ಎಂದು ಒಪ್ಪಿಕೊಂಡರೆ, ಅದನ್ನು ತೊಡೆಯಲು ಯತ್ನಿಸಬಹುದು, ನೋವಿರದ ಸುಂದರ ಸಮಾಜ ಕಟ್ಟಿಕೊಳ್ಳುವ ಕನಸನ್ನು ಕಾಣಬಹುದು ತಾನೆ.

**ಸಂಘರ್ಷದ ನೆನಪುಗಳು**

ಕರ್ನಾಟಕ ಸಂಸ್ಕೃತಿ ಬರಿ ಸಾಮರಸ್ಯ ತ್ಯಾಗ ನಿಷ್ಠೆಗಳಿಂದ ರೂಪುಗೊಂಡಿಲ್ಲ ಅನೇಕ ಸ್ವಾಭಿಮಾನಿಗಳು ಅನ್ಯಾಯದ ವಿರುದ್ಧ ಮಾಡಿದ ಸಂಘರ್ಷಗಳಿಂದಲೂ ರೂಪುಗೊಂಡಿದೆ. ಸಮಾಜದಲ್ಲಿ ಅರ್ಥಪೂರ್ಣ ಬದಲಾವಣೆ ಸಂಭವಿಸುವುದೇ ಪ್ರಶ್ನಿಸುವಿಕೆಯಿಂದ, ಪ್ರತಿರೋಧದಿಂದ. ನಮ್ಮ ಜನ ಬಡವರಾಗಿದ್ದರು. ಆದರೆ ಅಭಿಮಾನ ಹೀನರಾಗಿರಲಿಲ್ಲ. ಕಣಸೆ ಜಟ್ಯ ಎಂಬುವನ ಕತೆ ನೆನಪಾಗುತ್ತದೆ. ೧೯೫೦ರಲ್ಲಿ ಶಿವಮೊಗ್ಗ ಜಿಲ್ಲೆಯ ಕಾಗೋಡು ಹಳ್ಳಿಯಲ್ಲಿ ಗೇಣಿರೈತರು ಉಳುವವನಿಗೆ ಭೂಮಿ ಎಂದು ಹೋರಾಟ ಮಾಡಿದರು. ಅವರಲ್ಲಿ ಕಣಸೆ ಜಟ್ಯನೂ ಒಬ್ಬ. ಕಾಗೋಡಿನಲ್ಲಿ ಬಯಲಾಟ ನಡೆವಾಗ ಜಮೀನುದಾರರೊಬ್ಬರೇ ಕುರ್ಚಿಯ ಮೇಲೆ ಕೂರುವ ಸಂಪ್ರದಾಯ ಇತ್ತು. ಉಳಿದ ಜನರೆಲ್ಲ ನೆಲದ ಮೇಲೆ ಕೂರುತ್ತಿದ್ದರು. ಆದರೆ ಜಟ್ಯ 'ನಮಗೆ ಭೂಮಿ ಬಿಟ್ಟುಕೊಡದ ಧಣಿಯ ಮುಂದೆ ಯಾಕೆ ತಗ್ಗಬೇಕು' ಎಂದು, ಮನೆಯಿಂದ ಒಂದು ಕುರ್ಚಿ ತಂದು ಕೂರುತ್ತಿದ್ದನಂತೆ. ಪಕ್ಕದ ಊರಿಲ್ಲಿ ಬಯಲಾಟ ನಡೆದರೆ, ಅಲ್ಲಿಗೂ ಕುರ್ಚಿ ಹೊತ್ತುಕೊಂಡು ಹೋಗುತ್ತಿದ್ದನಂತೆ. ಇದು ನೋಡಲು ಸಣ್ಣ ಘಟನೆಯಂತೆ ತಮಾಶೆಯಂತೆ ಕಾಣುತ್ತದೆ. ಆದರೆ ಅಳದಲ್ಲಿ ಉಳ್ಳವರಿಗೆ ಬಾಗದೆ ತಮ್ಮ ಸ್ವಾಭಿಮಾನ ಉಳಿಸಿಕೊಳ್ಳಲು ಜನ ಮಾಡುವ ಸೆಣಸಾಟವನ್ನು ಸೂಚಿಸುತ್ತದೆ. ಕರ್ನಾಟಕದ ಚರಿತ್ರೆಯಲ್ಲಿ ಇಂತಹ ಜನ ಉದ್ದಕ್ಕೂ ದಿಟ್ಟ ಹೋರಾಟ ಮಾಡಿಕೊಂಡು ಬಂದಿರುವ ನಿದರ್ಶನಗಳಿವೆ. 'ಹೋರಾಟ' ವೆಂದರೆ ರಾಜನಿಗಾಗಿ ಸೈನಿಕರು ಮಾಡಿದ ಯುದ್ಧಗಳು ಮಾತ್ರವಲ್ಲ. ಇಡೀ ನಾಡಿನ ಬಿಡುಗಡೆಗಾಗಿ ಮಾಡಿದ ವಿಶಾಲ ಯುದ್ಧಗಳು ಹೌದು. ಉಳ್ಳಾಲದ ರಾಣಿ ಅಬ್ಬಕ್ಕ, ನರಗುಂದದ ಬಾಬಾಸಾಹೇಬ, ಮುಂಡರಗಿ ಭೀಮರಾಯ, ಕಿತ್ತೂರಚೆನ್ನಮ್ಮ, ಟಿಪ್ಪುಸುಲ್ತಾನ ಇವರೆಲ್ಲ ವಿದೇಶಿ ಆಕ್ರಮಣಕಾರರ ವಿರುದ್ಧ ಮಾಡಿದ ಯುದ್ಧಗಳು ಇಂತಹವು.ರೈತರು ಸರಕಾರಕ್ಕೆ ತೆರಿಗೆ ಕಟ್ಟದೆ ತೋರಿದ ಅಸಹಕಾರವೂ ಇನ್ನೊಂದು ಬಗೆಯ ಯುದ್ಧವೆ. ಅಂಕೋಲದಲ್ಲಿ ಇಂತಹ ಕರನಿರಾಕರಣೆ ಚಳುವಳಿ ನಡೆಯಿತು. ಗದಗ ಜಿಲ್ಲೆಯ ಕೊರ್ಲಹಳ್ಳಿಯಲ್ಲಿ ೧೯೫೭೦ರ ಸುಮಾರಿಗೆ ಬ್ರಿಟಿಷರ ವಿರುದ್ಧ ೨೬ ಜನ ದಂಗೆಯೆದ್ದರು. ಅವರನ್ನು ಹಿಡಿದು ಗಲ್ಲಿಗೇರಿಸಲಾಯಿತು. ೧೯೪೨ರಲ್ಲಿ ಶಿವಮೊಗ್ಗ ಜಿಲ್ಲೆಯ ಈಸೂರಿನಲ್ಲಿ ಕೂಡ ಬ್ರಿಟಿಷ್ ಸರಕಾರದ ವಿರುದ್ಧ ಬಂಡೆದ್ದ ಹಳ್ಳಿ ಜನರನ್ನು ಗಲ್ಲಿಗೇರಿಸಲಾಯಿತು. ಈ ಜನರನ್ನು ಚರಿತ್ರೆಯ ಪುಸ್ತಕಗಳು ನಾಯಕರಂತೆ ದಾಖಲಿಸದೆ ಇರಬಹುದು. ಆದರೆ ಇವರ ಧೀರಸಾವು ನಮ್ಮ ಸಂಸ್ಕೃತಿಯ ಸತ್ವವನ್ನು ರೂಪಿಸಿದೆ. ಉಳ್ಳಾಲ, ಶ್ರೀರಂಗಪಟ್ಟಣ, ಕಿತ್ತೂರು ಸಂಗೊಳ್ಳಿ, ಹಲಗಲಿ, ನರಗುಂದ ಇವೆಲ್ಲ ಕರ್ನಾಟಕ ಸಂಸ್ಕೃತಿಯನ್ನು

ಸಂಘರ್ಷದ ಚಾಣದಿಂದ ಕಟೆದ ತಾಣಗಳು, ೨೦ನೇ ಶತಮಾನವಂತೂ ಜನರ ಚಳುವಳಿಗಳಿಂದ ತುಂಬಿ ಹೋಗಿದೆ. ಕನ್ನಡ ಚಳುವಳಿ, ರೈತ ಚಳುವಳಿ, ದಲಿತ ಚಳುವಳಿ, ಪರಿಸರ ಚಳುವಳಿ, ಮಹಿಳಾ ಹೋರಾಟ, ನದಿ ಉಳಿಸುವ ಚಳುವಳಿ, ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಹೋರಾಟ ಇವೆಲ್ಲ ನಮ್ಮ ಸಂಸ್ಕೃತಿಗೆ ಆಕಾರ ಕೊಟ್ಟಿವೆ.

**ಶಿಖರಗಳ ಕೆಳಗೆ ನೆಲ**

ಚರಿತ್ರೆಯಲ್ಲಿ ನಾಯಕರಿತ್ತಾರೆ. ಬಸವಣ್ಣ, ಅಕ್ಕಮಹಾದೇವಿ, ಕುಮಾರರಾಮ, ಮಂಟೇಸ್ವಾಮಿ, ಕುಮಾರವ್ಯಾಸ, ಕನಕದಾಸ, ಟಿಪ್ಪುಸುಲ್ತಾನ, ಸರ್‌ಎಂವಿ, ಕುವೆಂಪು, ಶಿವರಾಮಕಾರಂತ, ಗುಬ್ಬಿವೀರಣ್ಣ, ಶಾಂತವೇರಿ ಗೋಪಾಲಗೌಡ, ದೇವರಾಜ ಅರಸು, ರಾಜಕುಮಾರ್, ಪಿ ಲಂಕೇಶ್‌ಇವರೆಲ್ಲ ಕರ್ನಾಟಕ ಸಂಸ್ಕೃತಿಯ ನಾಯಕರೆ, ಆದರೆ ನಾಯಕರ ಮೂಲಕ ಸಂಸ್ಕೃತಿ ನೋಡುವಾಗ ಮರೆತುಹೋಗುವ ಒಂದು ಅಂಶವಿದೆ. ಅದೆಂದರೆ ಈ ನಾಯಕರು ತಮ್ಮ ಪ್ರತಿಭೆ ತ್ಯಾಗ ದುಡಿಮೆಗಳಿಂದ ಮಾತ್ರ ದೊಡ್ಡವರಾದವರಲ್ಲ. ತಮ್ಮ ಪರಿಸರದಲ್ಲಿದ್ದ ಜನ ಬಲದಿಂದಲೂ ದೊಡ್ಡವರಾದವರು. ಬಸವಣ್ಣನನ್ನು ಅವನ ಜತೆಗಿದ್ದ ನೂರಾರು ಸಂಗಾತಿಗಳಿಂದ ಬೇರೆಮಾಡಿ ಹೇಗೆ ನೋಡುವುದು? ಶಿಖರಗಳು ಗಗಚುಂಬಿ ಯಾಗಿರಬಹುದು. ಆದರೆ ಅವು ನೆಲದ ಮೇಲೆಯೆ ನಿಲ್ಲಬೇಕು ತಾನೇ? ನಾಯಕರು ರಂಗದ ಮೇಲೆ ಬರುತ್ತಾರೆ. ನಾಯಕರಲ್ಲದ ಲಕ್ಷಾಂತರ ಜನ ರಂಗದ ಹಿಂದೆ ದುಡಿಯುತ್ತಾರೆ. ಎಷ್ಟೋ ಸುಂದರವಾದ ಜನಪದ ಹಾಡುಗಳನ್ನು ಕಟ್ಟಿದ ಪ್ರತಿಭಾವಂತ ಕವಿ ಯಾರೆಂದು ಗೊತ್ತೆ ಅಗುವುದಿಲ್ಲ. ಸಂಸ್ಕೃತಿ ಒಂದು ಕಾಡಿದ್ದಂತೆ. ಅದರಲ್ಲಿ ಆಕಾಶದೆತ್ತರಕ್ಕೆ ಬೆಳೆದ ಮರಗಳೂ ಇವೆ. ಹೆಸರಿಲ್ಲದ ಸಣ್ಣಪುಟ್ಟ ಗಿಡಗಳೂ ಇವೆ. ನೆಲದಲ್ಲಿ ಹರಡಿರುವ ಹುಲ್ಲೂ ಇದೆ. ಇವೆಲ್ಲ ಸೇರಿತಾನೆ ಒಂದು ಕಾಡು?

**ಸಮುದಾಯದ ಸೃಜನಶೀಲತೆ**

ಸಮುದಾಯಗಳ ಮೂಲಕ ನೋಡತೊಡಗಿದರೆ ಸಂಸ್ಕೃತಿಯ ವ್ಯಾಖ್ಯೆ ವಿಶಾಲಗೊಳ್ಳುತ್ತದೆ. ಆಗ ಅದು ಹೆಸರಿಲ್ಲದ ಅಧಿಕಾರವಿಲ್ಲದ ಲಕ್ಷಲಕ್ಷ ಮಾನವರ ಕಥನವನ್ನೂ ಒಳಗೊಳ್ಳಲಾರಂಭಿಸುತ್ತದೆ. ಆಗ ಧೀಮಂತ ಮಹಿಳೆಯರಾದ ಅತ್ತಿಮಬ್ಬೆ ಅಕ್ಕಮಹಾದೇವಿ ಅಬ್ಬಕ್ಕ ಕಿತ್ತೂರಚೆನ್ನಮ್ಮ ಚಾದಂಬೀಬಿಯರ ಜತೆ, ಸಾಲುಮರದ ತಿಮ್ಮಕ್ಕನೂ ಸೇರುತ್ತಾಳೆ. ಹಾದಿ ಹೋಕರಿಗೆ ನೆರಳನ್ನು ನೀಡುವ ನೂರಾರು ಮರಗಳನ್ನು ಒಂದು ಬಡಕುಟುಂಬ ಸಾಕಿ ಬೆಳೆಸಿತು. ಇದರ ಹಿಂದೆ ಕೆಲಸ ಮಾಡಿರುವ ಮನಸ್ಸು, ಕರ್ನಾಟಕ ಸಂಸ್ಕೃತಿಯ ಅಪೂರ್ವ ಸೃಷ್ಟಿಯಲ್ಲದೆ ಮತ್ತೇನು?

ಸಮುದಾಯದ ಸೃಜನಶೀಲತೆ ಎಂದರೆ, ಜನ ತಮ್ಮ ಶ್ರಮದ ಭಾಗವಾಗಿ ಪ್ರಕಟಿಸುವ ಜೀವಂತಿಕೆ; ತಮ್ಮ ಸುಖಸಂಭ್ರಮ ದುಃಖದುಗುಡಗಳ ಭಾಗವಾಗಿ ಚಿಮ್ಮಿಸುವ ಮಾನವೀಯಸ್ತೆ. ಗದಗ ಜಿಲ್ಲೆಯ ಮುಳಗುಂದದ ಹತ್ತಿರ ಒಬ್ಬ ರೈತ, ಬೆರ್ಚಪ್ಪನನ್ನು ಮಾಡುತ್ತಾನೆ. ಬೆಳೆದ ಬೆಳೆಗೆ ಕೆಟ್ಟದೃಷ್ಟಿ ತಾಗದಿರಲಿ ಎಂಬ ನಂಬಿಕೆಯಿಂದ ನಿಲ್ಲಿಸುವ ಬೆದರು ಬೊಂಬೆಗೆ 'ಬೆರ್ಚಪ್ಪ' ಎನ್ನುತ್ತಾರೆ. ಈ ರೈತ ಬೆರ್ಚಪ್ಪನನ್ನು ಎಲ್ಲರಂತೆ ಅಂಗಿಯೊಳಗೆ ಹುಲ್ಲುತುಂಬಿ ಮಡಕೆಯ ತಲೆಯಿಟ್ಟು ಮಾಡುತ್ತಿರಲಿಲ್ಲ. ಅಲ್ಲಿ ಇಲ್ಲಿ ಬಿದ್ದಿದ್ದ ಬಣ್ಣದ ಚಿಂದಿಬಟ್ಟೆ ಆರಿಸಿತಂದು ಮಾನವಾಕೃತಿಯ ಗೊಂಬೆ ಮಾಡುತ್ತಿದ್ದ. ಅವು ಎಷ್ಟು ಸುಂದರ ಗೊಂಬೆಗಳಾಗುತ್ತಿದ್ದವು ಎಂದರೆ, ಅವನ್ನು ನೋಡಲು ದೂರದಿಂದ ಜನ ಬರುತ್ತಿದ್ದರು. ರೈತ ಇವನ್ನು ಕಲೆ ಎಂದು ಮಾಡಲಿಲ್ಲ. ಬೆರ್ಚಪ್ಪ ಎಂದು ಮಾಡಿದರೆ ಅದು ಕಲೆಯೂ ಆಯಿತು. ಇದೇ ರೀತಿ, ನಮ್ಮ ಮಡಕೆ ಮಾಡುವಾಗ, ಬುಟ್ಟಿ ಹೆಣೆಯುವಾಗ ಕೌದಿ ಹೊಲೆಯುವಾಗ ಜನ ಕಲಾತ್ಮಕತೆ ಮೆರೆಯುತ್ತಾರೆ. ಹಳ್ಳಿಗಾಡಿನಲ್ಲಿ ಇಂತಹ ಸಾವಿರಾರು ಪ್ರತಿಭೆಗಳಿವೆ. ಇವು ನಮ್ಮ ಸೃಜನಶೀಲತೆಯಿಂದ ಇಡೀ ಪರಿಸರವನ್ನು ಜೀವಂತವಾಗಿ ಇಡುತ್ತವೆ. ರೈತರು ಬೆಳೆ ತಿನ್ನಲು ಬರುವ ಪ್ರಾಣಿಪಕ್ಷಿಗಳನ್ನು ಓಡಿಸಲು ಅಥವಾ ಬೇಟೆಯಾಡಲು ಮಾಡಿಕೊಂಡಿರುವ ನೂರಾರು ಉಪಕರಣಗಳಲ್ಲಿ, ಪಾರಂಪರಿಕ ತಂತ್ರಜ್ಞಾನದ ಸಾಧನೆಯಿದೆ. ನಮ್ಮ ನಾಡಮದ್ದು, ಕಾಡಿನ ಜನ ನೂರಾರು ವರುಷಗಳಿಂದ ಮಾಡಿದ ಪ್ರಯೋಗಗಳ ಫಲವಾದರೆ, ನಮ್ಮ ತಿಂಡಿತಿನುಸುಗಳು ಅಡುಗೆಮನೆಗಳಲ್ಲಿ ಸಾವಿರಾರು ವರುಷಗಳ ಪ್ರಯೋಗಶೀಲತೆಯ ಫಲವಾಗಿವೆ.

ದುಡಿವ ಜನರ ಸೃಜನಶೀಲತೆಯ ಅಸಲಿ ಮುಖ ಕಾಣಬೇಕಾದರೆ, ಜಾನಪದಕ್ಕೆ ಹೋಗಬೇಕು. ಜನಪದ ಸಾಹಿತ್ಯ, ಸಂಗೀತ, ಕುಣಿತ, ನಾಟಕ, ಅಡುಗೆ, ವೈದ್ಯ, ಆಚರಣೆಗಳ ಒಂದು ದೊಡ್ಡಲೋಕವೇ ಅಲ್ಲಿದೆ. ಮಂಟೆಸ್ವಾಮಿ, ಮಲೆಯ ಮಾದೇಶ್ವರ, ಜುಂಜಪ್ಪ, ಬೀರಪ್ಪ, ಎಲ್ಲಮ್ಮ ಮುಂತಾದ ದೈವಗಳ ಮೇಲೆ, ಜನಪದರು ರಾತ್ರಿಯಿಡಿ ಹಾಡಬಲ್ಲ ಕಾವ್ಯ ಕಟ್ಟಿದ್ದಾರೆ. ಗಣ್ಯರೆನಿಸಿಕೊಂಡ ವಿಜ್ಞಾನಿಗಳು ಲೇಖಕರು ಸಂಗೀತಗಾರರು ಚಿತ್ರಗಾರರು ನಟರು ಮಾಡಿದ ಸಾಧನೆ ಮೂಲಕವೆ ಸಂಸ್ಕೃತಿ ಚಿತ್ರ ಬರೆಯಲು ಸಾಧ್ಯವಿಲ್ಲ. ಹಾಗೆ ಬರೆದರೆ, ನಾಡಿನ ಕೋಟ್ಯಂತರ ದುಡಿವ ಜನ, ನೂರಾರು ವರ್ಷಗಳಿಂದ ಕಟ್ಟಿಕೊಂಡಿರುವ ದೊಡ್ಡಲೋಕ ಹೊರಗುಳಿದು ಬಿಡುತ್ತದೆ. ರೈತರು ನೇಕಾರರು ಕಮ್ಮಾರರು ಕೂಲಿಕಾರರು ತಮ್ಮ ಶ್ರಮದ ಭಾಗವಾಗಿ ಸೃಷ್ಟಿಸಿರುವ ಈ ಲೋಕಕ್ಕೆ ಹೋಗದಿದ್ದರೆ, ಸಂಸ್ಕೃತಿಯ ಅರ್ಥವೆ ಕುಬ್ಜವಾಗಿಬಿಡುತ್ತದೆ.

**ಸಂಸ್ಕೃತಿಯ ಸಂಕೀರ್ಣ ಚಿತ್ರ**

ಇಷ್ಟೆಲ್ಲ ಹೇಳಿದ ಮೇಲೆ 'ಕರ್ನಾಟಕ ಸಂಸ್ಕೃತಿ' ಎಂದರೆ, ನಮ್ಮ ಮಸ್ಸಿನ ಪರದೆಯ ಮೇಲೆ ಮೂಡುವ ಚಿತ್ರ ಎಂತಹುದು? ಆ ಚಿತ್ರದಲ್ಲಿ ರೈತರು, ಕೂಲಿಕಾರರು, ಕಸಬುದಾರರು, ಕವಿಗಳು ಸಂತರು, ದೊರೆಗಳು, ಆಡಳಿತಗಾರರು, ಹೋರಾಟಗಾರರು, ಬುಡಕಟ್ಟು ಜನ ಸುಳಿಯತೊಡಗುತ್ತಾರೆ; ಪಂಪ ಕುಮಾರವ್ಯಾಸರ ಕಾವ್ಯಗಳು, ಶರಣರ ವಚನಗಳು, ಕುವೆಂಪು ಕಾರಂತರ ಕಾದಂಬರಿಗಳು, ಬೇಂದ್ರೆ ಕವನಗಳು, ಜನಪದ ಗೀತೆಗಳು ಗೋಚರಿಸುತ್ತವೆ; ಬಂಗುಡೆಮೀನು, ಜೋಳದರೊಟ್ಟಿ, ರಾಗಿಮುದ್ದೆ ಯಕ್ಷಗಾನ, ದೊಡ್ಡಾಟ, ಕೃಷ್ಣಪಾರಿಜಾತ, ಮೈಲಾರದ ಜಾತ್ರೆ, ಗೋಳಗುಮ್ಮಟ, ಹಂಪಿಯ ಗುಡಿ, ಶ್ರವಣಬೆಳಗೊಳದ ಬಾಹುಬಲಿ, ವೀರಗಲ್ಲು ಮುಂತಾದವೆಲ್ಲ ಮಿಂಚಿ ಮಾಯವಾಗುತ್ತವೆ; ಜತೆಗೆ ನಮ್ಮ ನಾಡಿನ ಬಡತನ, ಕಡಿತಲೆಯಾದ ಕಾಡು, ಚರಂಡಿಯಾಗಿರುವ ನದಿಗಳು, ಪರದೇಶಿಗರಿಗೆ ಸೂರೆಹೋಗುತ್ತಿರುವ ಸಂಪನ್ಮೂಲಗಳು, ಕನ್ನಡದ ದುಸ್ಥಿತಿ, ರೈತರ ಆತ್ಮಹತ್ಯೆ - ಇವೆಲ್ಲ ಕಾಡುತ್ತವೆ. ಇವೆಲ್ಲ ಸೇರಿದರೆ ಅದೆಂತಹ ಸಂಕೀರ್ಣ ಚಿತ್ರವಾಗುತ್ತದೆ! ಹೌದು, ಒಂದು ನಾಡಿನ ಜನಜೀವನದ ಎಲ್ಲವೂ ಸಂಸ್ಕೃತಿ ಎನ್ನುವುದಾದರೆ, ಇಂತಹ ಸಂಕೀರ್ಣ ಚಿತ್ರವೇ ಮೂಡಬೇಕು.

ಹೀಗೆ ಕರ್ನಾಟಕ ಸಂಸ್ಕೃತಿ ಬಹುರೂಪಿಯಾಗಿದೆ, ವರ್ಣರಂಜಿತವಾಗಿದೆ. ಅದರಲ್ಲಿ ಸಂಘರ್ಷವೂ ಇವೆ, ಸಾಮರಸ್ಯವೂ ಇದೆ. ಹಳತು ಹೊಸತು ಎರಡೂ ಇವೆ. ಸಂಭ್ರಮ ನೋವುಗಳೆರಡೂ ಇವೆ. ಇವೆಲ್ಲ ಇರುವುದರಿಂದಲೇ ಅದು ಜೀವಂತವಾಗಿದೆ, ಚಲನಶೀಲವಾಗಿದೆ. ಕರ್ನಾಟಕ ಸಂಸ್ಕೃತಿ ಹಡೆದ ಅಪರೂಪದ ವ್ಯಕ್ತಿ ಬಸವಣ್ಣ ಹೇಳುವಂತೆ, 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ'! ಅಂದರೆ ಚಲನಶೀಲವಾಗಿರುವ ಯಾವುದಕ್ಕೂ ನಾಶದ ಭಯವಿಲ್ಲ. ಎಂತಲೇ ಅನಿಸುತ್ತದೆ: ಕರ್ನಾಟಕ ಸಂಸ್ಕೃತಿಯ ಸುಂದರ ದಿನಗಳು ಗತಕಾಲದಲ್ಲಿ ಮುಗಿದು ಹೋಗಿಲ್ಲ. ಅವು ನಮ್ಮ ಕಣ್ಮುಂದೆ ರೂಪುಗೊಳ್ಳಬೇಕಾಗಿವೆ. ಅವು ಭವಿಷ್ಯದ ಕಾಲಗರ್ಭದಲ್ಲಿ ಸುಪ್ತವಾಗಿ ಅಡಗಿಕೊಂಡಿವೆ.

**ಲೇಖಕರು**

ರಹಮತ್‌ತರೀಕೆರೆ (೧೯೫೯) ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯದ ಅಧ್ಯಾಪಕರಾಗಿದ್ದಾರೆ. 'ಪ್ರತಿಸಂಸ್ಕೃತಿ' 'ಮರದೊಳಗಣ ಕಿಚ್ಚು' 'ಕರ್ನಾಟಕದ ಸೂಫಿಗಳು' 'ಅಂಡಮಾನ್‌ಕನಸು' ಮುಂತಾದ ಪುಸ್ತಕಗಳನ್ನು ಬರೆದಿದ್ದಾರೆ.

**ಆಶಯ**

ಪ್ರಸ್ತುತ ಲೇಖನವು ಕರ್ನಾಟಕ ಸಂಸ್ಕೃತಿ ಹೇಗೆ ಬಹುರೂಪಿಯಾಗಿದೆ ಎಂದು ವಿವರಿಸಲು ಯತ್ನಿಸುತ್ತದೆ. ಯಾವುದಾರೂ ಒಂದು ಭಾಷೆ, ಸಮುದಾಯ ಅಥವಾ ಧರ್ಮದ ನೆಲೆಯಲ್ಲಿ ಮಾತ್ರ ನೋಡಿದರೆ, ಅದರ ನಿಜರೂಪ ಸಿಗಲಾರದು. ಅದರಲ್ಲಿ ಹೆಮ್ಮೆಯ ಹಾಗೂ ಅಪಮಾನದ ಎರಡೂ ಚಿತ್ರಗಳಿವೆ. ಅವೆರಡನ್ನೂ ಕೂಡಿಸಿಯೇ ನೋಡಬೇಕು ಎಂದು ಲೇಖನ ಪ್ರತಿಪಾದಿಸುತ್ತದೆ.

**ಟಿಪ್ಪಣಿ**

ಮಲೇಮಾದೇಶ್ವರ = ಕೊಳ್ಳೆಗಾಲ ತಾಲ್ಲೂಕು ಮಹದೇಶ್ವರ ಬೆಟ್ಟದಲ್ಲಿರುವ ದೈವ, ಕುಮಾರರಾಮ = ೧೪ನೇ ಶತಮಾನದ ಕಂಪಲಿ ರಾಜ್ಯದ ರಾಜಕುಮಾರ, ಸಂಗೊಳ್ಳಿರಾಯಣ್ಣ = ಕಿತೂರುಚೆನ್ನಮ್ಮನ ಅನುಯಾಯಿ, ಬ್ರಿಟಿಷ್‌ಸರಕಾರದ ನಿದ್ದೆ ಕೆಡಿಸಿದ್ದ ಹೋರಾಟಗಾರ, ನರಗುಂದದ ಬಾಬಾಸಾಹೇಬ = ಗದಗ ಜಿಲ್ಲೆಯ ನರಗುಂದ ಸಂಥಾನದ ಅಧಿಪತಿಯಾಗಿದ್ದವನು, ಬ್ರಿಟಿಷರ ವಿರುದ್ಧ ಹೋರಾಡಿದವನು. ಅವನನ್ನು ೧೮೫೮ ರಲ್ಲಿ ಹಿಡಿದು ಗಲ್ಲಿಗೇರಿಸಲಾಯಿತು ತಿಮ್ತಿಣಿಮೋನಪ್ಪ = ಗುಲಬರ್ಗಾ ಜಿಲ್ಲೆಯ ಜನಪ್ರಿಯ ಸಂತ, ೨ನೇ ಇಬ್ರಾಹಿಂ = ಬಿಜಾಪುರವನ್ನಾಳಿದ ಪ್ರಸಿದ್ಧ ಆದಿಲಶಾಹಿ ದೊರೆ, ಸರಸ್ವತಿಯ ಆರಾಧಕನೂ ಸಂಗೀತಪ್ರೇಮಿಯೂ ಆಗಿದ್ದ  ಈತ ಕಿತಾಬೆ ನವರ್ಸ್‌ಎಂಬ ಕೃತಿ ರಚಿಸಿದನು. ಕೈವಾರದ ತಾತಯ್ಯ = ೧೯ ನೇ ಶತಮಾನದಲ್ಲಿ ಕೋಲಾರ ಭಾಗದಲ್ಲಿದ್ದ ಸಂತ, ಅಭಂಗ = ಮರಾಠಿ ಸಂತರ ತತ್ವಪದ, ಬಂದೇನವಾಚ್= ೧೪ನೇ ಶತಮಾನದಲ್ಲಿ ಗುಲಬರ್ಗಾದಲ್ಲಿದ್ದ ಜನಪ್ರಿಯ ಸೂಫೀಸಂತ, ಕವಿರಾಜಮಾರ್ಗ = ೯ನೇ ಶತಮಾನದ ಅಲಂಕಾರ ಗ್ರಂಥ, ಇದರಲಿ ಕನ್ನಡ ನಾಡು, ಕನ್ನಡಭಾಷೆ ಹಾಗೂ ಕನ್ನಡಿಗರನ್ನು ಕುರಿತ ವರ್ಣನೆಗಳಿವೆ, ಮಂಟೆ ಸ್ವಾಮಿ = ಮೈಸೂರು ಮಂಡ್ಯ ಸೀಮೆಯ ಕೆಳವರ್ಗದ ಸಮುದಾಯದಲ್ಲಿ ಜನಪ್ರಿಯನಾಗಿರುವ ಸಂತ, ಪರ್ಶಿಯನ್= ಈಗಿನ ಇರಾನ್‌ದೇಶಕ್ಕೆ ಸಂಬಂಧಿಸಿದ, ಶಿಶುನಾಳ = ೧೯ನೇ ಶತಮಾನದಲ್ಲಿ ಗದಗ ಜಿಲ್ಲೆಯಲ್ಲಿದ್ದ ಸಂತ, ಸೂಫಿ = ಅನುಭಾವಿ ಪಂಥದ ಯೋಗಿ, ಉರುಸು = ಸೂಫಿಸಂತನ ಪುಣ್ಯತಿಥಿಯ ನೆನಪಿನಲ್ಲಿ ವರ್ಷಕ್ಕೊಮ್ಮೆ ನಡೆಯುವ ಉತ್ಸವ, ಮೊಹರಂ = ೭ನೇ ಶತಮಾನದಲ್ಲಿ ಅರಬ್‌ದೇಶದಲ್ಲಿ ತಮ್ಮ ಶತ್ರುಗಳಿಂದ ಹತರಾದ ಹಸೇನ ಹುಸೇನ ಎಂಬ ಅಣ್ಣತಮ್ಮಂದಿರ ನೆನಪಲ್ಲಿ ನಡೆವ ಆಚರಣೆ, ದರ್ಗಾ = ಸಮಾಧಿ, ಗುಬ್ಬಿವೀರಣ್ಣ = ಪ್ರಸಿದ್ಧ ನಾಟಕ ಕಂಪನಿ ನಡೆಸಿದವರು, ರಾಣಿಅಬ್ಬಕ್ಕ = ಪೋರ್ಚುಗೀಸರ ವಿರುದ್ಧ ಹೋರಾಡಿದ ಉಳ್ಳಾಲದ ರಾಣಿ, ಚಾಂದಬೀಬಿ = ಮೊಗಲರ ವಿರುದ್ಧ ಹೋರಾಡಿದ ಬಿಜಾಪುರ ರಾಣಿ, ಅತ್ತಿಮಬ್ಬೆ = ದಾನಕ್ಕೆ ಹೆಸರಾಗಿದ್ದ ೧೦ನೇ ಶತಮಾನದಲ್ಲಿದ್ದ ಒಬ್ಬ ಜೈನಮಹಿಳೆ, ಮುಂಡರಗಿ ಭೀಮರಾಯ = ೧೮೫೭ ಕ್ರಾಂತಿಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ವೀರ, ಜುಂಜಪ್ಪ = ಗೊಲ್ಲಸಮುದಾಯದ ಸಾಂಸ್ಕೃತಿಕ ನಾಯಕ, ಬೀರಪ್ಪ = ಕುರುಬ ಸಮುದಯದ  ಸಾಂಸ್ಕೃತಿಕ ನಾಯಕ, ಹಲಗಲಿ = ಬಾಗಲಕೋಟೆ ಜಿಲ್ಲೆಯ ಒಂದು ಹಳ್ಳಿ, ೧೮೫೭ರಲ್ಲಿ ಇಲ್ಲಿನ ಬೇಡರು ಶಸ್ತ್ರಗಳನ್ನು ಇಟ್ಟುಕೊಳ್ಳಬಾರದು ಎಂಬ ಬ್ರಿಟಿಷರ ಕಾನೂನನ್ನು ಪ್ರತಿಭಟಿಸಿ ಹೋರಾಡಿದರು, ಇವರಲ್ಲಿ ೧೯ ಜನರನ್ನು ಗಲ್ಲಿಗೇರಿಸಿದರು. ಸಾಲುಮರದ ತಿಮ್ಮಕ್ಕ = ತನ್ನ ಗಂಡನೊಂದಿಗೆ ಸೇರಿ ಸಾಲುಮರಗಳನ್ನು ನೆಟ್ಟು ಮಕ್ಕಳಂತೆ ಸಾಕಿದ ಮಹಿಳೆ.

**ಪ್ರಶ್ನೆಗಳು**

೧. ಪೊಟ್ಟಿಶ್ರೀರಾಮಲು ಬಗ್ಗೆ ಬೆಸಗರಹಳ್ಳಿ ರಾಮಣ್ಣನವರಿಗೆ ಆದ ಅನುಭವ ಏನನ್ನು ಸೂಚಿಸುತ್ತದೆ?
೨. 'ಸಂಸ್ಕೃತಿ' ಇರುವ ಜನಪ್ರಿಯ ಕಲ್ಪನೆಗಳು ಯಾವುವು?
೩. ಸಂಸ್ಕೃತಿಯನ್ನು ಪ್ರಜಾಪ್ರಭುತ್ವದ ನೆಲೆಯಲ್ಲಿ ಯಾಕೆ ವ್ಯಾಖ್ಯಾನಿಸುವ ಅಗತ್ಯವಿದೆ?
೪. ಕರ್ನಾಟಕ ಸಂಸ್ಕೃತಿಯನ್ನು ಸ್ವವಿಮರ್ಶೆಯ ಮೂಲಕ ಗ್ರಹಿಸುವ ಅಗತ್ಯ ಯಾಕಿದೆ?
೫. ಸಂಸ್ಕೃತಿಯನ್ನು ಗತಕಾಲದಲ್ಲಿ ಮಾತ್ರ ಅರಸುವ ಪ್ರವೃತ್ತಿಯು ಯಾಕೆ ಸರಿಯಲ್ಲ?
೬. ಕರ್ನಾಟಕ ಸಂಸ್ಕೃತಿಯಲ್ಲಿ ವೈಭವೀಕರಣದ ಅಪಾಯಗಳು ಯಾವುವು?
೭. ಸಮುದಾಯದ ಸೃಜನಶೀಲತೆ ಎಂದರೇನು?
೮. ಯಾಕೆ ಕರ್ನಾಟಕ ಸಂಸ್ಕೃತಿಯನ್ನು ಶಿಖರಗಳಿಂದಲೇ ಗುರುತಿಸುವುದು ಸಲ್ಲದು, ವಿವರಿಸಿ.

**ಪೂರಕ ಓದು**

೧. ಮಂಟೆಸ್ವಾಮಿ ಹಾಗೂ ಮಲೆಮಾದೇಶ್ವರ ಮಹಾಕಾವ್ಯಗಳು.
೨. ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ 'ಕರ್ನಾಟಕ ಜನಪದ ಕಲೆಗಳ ಕೋಶ'.

೩. ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸಿರುವ 'ವಿಷಯ ವಿಶ್ವಕೋಶ : ಕರ್ನಾಟಕ'.

೪. ಬರಗೂರು ರಾಮಚಂದ್ರಪ್ಪ ಅವರ 'ಸಂಸ್ಕೃತಿ : ಶ್ರಮ ಮತ್ತು ಸೃಜನಸೀಲತೆ'.

೫. ಎಚ್. ತಿಪ್ಪೇರುದ್ರಸ್ವಾಮಿ ಅವರ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ'.

೬. ಮಾಸ್ತಿ ವೆಂಕಟೇಶ ಅಯ್ಯಂಗಾರ್ಅವರ 'ಕರ್ನಾಟಕದ ಜನತೆಯ ಸಂಸ್ಕೃತಿ'.

೭. ಎಂ ಚಿದಾನಂದಮೂರ್ತಿ ಅವರ 'ಕರ್ನಾಟಕ ಸಂಸ್ಕೃತಿ '

೮. ಕನ್ನಡ  ವಿಶ್ವವಿದ್ಯಾಲಯ ಪ್ರಕಟಿಸಿರುವ  'ಕನ್ನಡ ಕನ್ನಡಿ' ಮಾಹಿತಿಕೋಶ.

೯. ಎಸ್ಎಸ್ಹಿರೇಮಠ ಅವರ 'ಕರ್ನಾಟಕ ಸಂಸ್ಕೃತಿ ಪರಂಪರೆ ಹಬ್ಬಗಳು ',

೧೦. ಬೆಟಗೇರಿ ಕೃಷ್ಣಶರ್ಮ ಅವರ 'ನಮ್ಮ ಸಂಸ್ಕೃತಿ ಪರಂಪರೆ'.

೧೧. ಎಚ್ಎಸ್ಗೋಪಾಲರಾವ್ಅವರ 'ನಮ್ಮ ನಾಡು ಕರ್ನಾಟಕ '.

೧೨. ಜಿ. ರಾಜಶೇಖರ ಅವರ 'ಕಾಗೋಡು ಸತ್ಯಾಗ್ರಹ'.

೧೩. ಶಿವರಾಮ ಕಾರಂತರ 'ನಮ್ಮ ಸಂಸ್ಕೃತಿಯ ಹೆಮ್ಮ ಸಾಲದು' ಎಂಬ ಲೇಖನ.

೧೪. ಎನ್, ಪಿ. ಶಂಕರನಾರಾಯಣರಾವ್ಅವರ 'ಸಾತಂತ್ರ್ಯ ಗಂಗೆಯ ಸಾವಿರ ತೊರೆಗಳು'.

## ೧೬. ವೃತ್ತಿಶಿಕ್ಷಣದಲ್ಲಿ ಕನ್ನಡ ಮಾಧ್ಯಮ

ನಾನೊಮ್ಮೆ ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿಷ್ಠಿತ ಕಾಲೇಜೊಂದರ ಆಟೋಮೊಬೈಲ್ಸ್ ವೃತ್ತಿಶಿಕ್ಷಣ ವಿಭಾಗಕೆ ಒಬ್ಬ ಬಾಹ್ಯ ಪರೀಕ್ಷಕನಾಗಿ ಹೋಗಿದ್ದೆ, ಕುತೂಹಲಕ್ಕೆಂದು ವಿಭಾಗದ ಮುಖ್ಯಸ್ಥರಿಗೆ ಕೇಳಿದೆ. "ನಿಮ್ಮಲ್ಲಿ ಬರುವ ವಿದ್ಯಾರ್ಥಿಗಳ ಇಂಗ್ಲಿಷ್ಹೇಗಿದೆ?" "ನಮ್ಮಲ್ಲಿ ಅದೆಲ್ಲಾ ಸಮಸ್ಯೆಯೇ ಇಲ್ಲ ಮಾರಾಯರೆ, ಎಲ್ಲ ಸ್ಟ್ಯಾಂಡರ್ಡ್" ಎಂದರು. ದಕ್ಷಿಣ ಕನ್ನಡ ಜಿಲ್ಲೆ ರಾಜ್ಯದಲ್ಲೇ ಹೆಚ್ಚು ಅಕ್ಷಸ್ಥರ ನಾಡಗಿರುವುದರಿಂದ, ಇರಬಹುದೇನೋ ಎಂದು ಸುಮ್ಮನಾದೆ. ಆದರೆ ಪ್ರಾಕ್ಟಿಕಲ್ಪರೀಕ್ಷೆಯ ಹೊತ್ತಲ್ಲಿ ರೆಕಾರ್ಡ್ಗಳನ್ನು ಪರಿಶೀಲಿಸುವಾಗ ೩೦, ವಿದ್ಯಾರ್ಥಿಗಳಲ್ಲಿ ಸುಮಾರು ೨೦ ವಿದ್ಯಾರ್ಥಿಗಳು, ಪುಟವೊಂದಕ್ಕೆ ೧೫ಕ್ಕಿಂತಲೂ ಹೆಚ್ಚು ಕಾಗುಣಿತ ದೋಷ ಮಾಡಿ ಬರೆದಿದ್ದರು. ಕೆಲವರಲ್ಲಿ ಪುಟಕ್ಕೆ ೩೦-೪೦ ತಪ್ಪುಗಳು! ೪ ವಿದ್ಯಾರ್ಥಿಗಳು ಮಾತ್ರ ತಪ್ಪಿಲ್ಲದೆ ರೆಕಾರ್ಡ್ಬರೆದಿದ್ದರು. ಆ ೩೦ ಜನರಲ್ಲಿ ೧೩ ಜನ ಫಸ್ಟ್ಕ್ಲಾಸಿನಲ್ಲಿ ೧೫ ಜನ ಸೆಕೆಂಡ್ಕ್ಲಾಸಿನಲ್ಲಿ ಮತ್ತು ೨ ಜನ ಮಾತ್ರ ತೃತೀಯ ದರ್ಜೆಯಲ್ಲಿ ಎಸ್ಸೆಸೆಲ್ಸಿ ಪಾಸಾದವರು. ಆನಂತರ ಮುಖ್ಯಸ್ಥರಲ್ಲಿ ಪ್ರಸ್ತಾಪಿಸಿದೆ. ಅವರು ನಿಜ ಬಾಯ್ಬಿಟ್ಟರು. "ನೋಡಿ ಸಾರ್, ನಾವು ಮಾಡುವುದು ಮಾಡ್ತೆವೆ. ಕಲಿಯುವುದು ಅವರಿಗೆ ಬಿಟ್ಟಿದ್ದು. ಅವರು ಎಸ್ಸೆಸೆಲ್ಸಿ ಪಾಸ್ಮಾಡಿ ಬಂದಿಲ್ಲವ್ವಾ? ಅವರಿಗೆ ನಾವು ಇಲ್ಲಿ ಆಟೋಮೊಬೈಲ್ಬಗ್ಗೆ ಹೇಳುವುದು ಬಿಟ್ಟು ಇಂಗ್ಲಿಷ್ಕಲಿಸಲಿಕ್ಕಾಗುತ್ತಾ? ಜನಕ್ಕೆ ಈಗ ಇಂಗ್ಲಿಷಿನ ಹುಚ್ಚು ಹಿಡಿದಿದೆ. ಎಂತಾ ಮಾಡಕಾತಿಲ್ಯೆ.

ರಾಜ್ಯದ ಯಾವುದೇ ಕಾಲೇಜಿಗೆ ಹೋಗಿ ವಿಜ್ಞಾನ ಅಥವಾ ತಾಂತ್ರಿಕ ಜ್ಞಾನದ ಅಧ್ಯಾಪಕರನ್ನು, ಭಾಷಾ ಸಮಸ್ಯೆಯ ಬಗ್ಗೆ ಕೇಳಿ ನೋಡಿ. ಎದೆಯುಬ್ಬಿಸಿಕೊಂಡು 'ನಮ್ಮ ವಿದ್ಯಾರ್ಥಿಗಳಿಗೆ ಸಮಸ್ಯೆಯೇ ಇಲ್ಲ' ಎಂದು ಉತ್ತರ ನೀಡುತ್ತಾರೆ. ಖಾಸಗಿಯಾಗಿ ಆಪ್ತವಾಗಿ ಪ್ರಾಮಾಣಿಕವಾಗಿ ಉತ್ತರಿಸುವಂತೆ ಮಾಡಿದರೆ, ನಿಜ ಬಾಯ್ಬಿಡುತ್ತಾರೆ.

ಕರ್ನಾಟಕ ತಾಂತ್ರಿಕ ಶಿಕ್ಷಣದಲ್ಲಿ ನಾಲ್ಕು ಬಗೆಯ ವೃತ್ತಿಪರ ಸಂಬಂಧ ಕೋರ್ಸುಗಳಿವೆ ಅವೆಂದರೆ, ಐಟಿಐ, ಜೆಓಸಿ, ಪಾಲಿಟೆಕ್ನಿಕ್ಮತ್ತು ಇಂಜಿನಿಯರಿಂಗ್ಮೊದಲ ಮೂರು ಕೋರ್ಸುಗಳಿಗೆ ಎಸ್ಸೆಸೆಲ್ಸಿಯಲ್ಲಿ ಕಡಿಮೆ ಅಂಕಗಳನ್ನು ಪಡೆದ ಅಥವಾ ಹೆಚ್ಚು ಅಂಕ ಪಡೆದಿದ್ದರೂ ವಿಧ್ಯಾಭ್ಯಾಸದಲ್ಲಿ ಮುಂದುವರೆಸಲಾಗದ ವಿದ್ಯಾರ್ಥಿಗಳು, ಸಾಮಾನ್ಯವಾಗಿ ೨ ವರ್ಷದ ಅವಧಿಯ ಐಟಿಐ, ಮತ್ತು ಜೆಓಸಿ ಕೋರ್ಸುಗಳಿಗೆ ಸೇರುತ್ತಾರೆ. ಇವರಿಗೆ ಎಸ್ಸೆಸೆಲ್ಸಿ ನಂತರ ಏಳು ವರ್ಷಗಳಲ್ಲಿ ಓದಿ, ಇಂಜಿನಿಯರಿಂಗ್ಪದವಿ ಪಡೆಯುವಷ್ಟು ಆರ್ಥಿಕ ಚೈತನ್ಯವಿರುದಿಲ್ಲ. ಓದಿನ ನಂತರ ಕೆಲಸ ಸಿಗುವುದು ಮತ್ತು ಓದು ಅಲ್ಪಕಾಲಾವಧಿಯಲ್ಲೇ ಮುಗಿಯುವುದು

ಬೇಕಿರುತ್ತದೆ. ಇದಕ್ಕೆ ಕಾರಣ, ಈ ಕೋರ್ಸುಗಳಿಗೆ ಬರುವ ವಿದ್ಯಾರ್ಥಿಗಳು ಬಹುಪಾಲು ಗ್ರಾಮೀಣ ಹಿನ್ನೆಲೆ ಅಥವಾ ನಗರದ ಕೆಳಮದ್ಯಮ ವರ್ಗಕ್ಕೆ ಸೇರಿದವರಾಗಿರವುದು. ಸರ್ಕಾರಿ ಶಾಲೆಗಳಲ್ಲಿ ಕಲಿತವರಾಗಿರುವುದು.

ಇಂಜಿನಿಯರಿಂಗ್‌ಕೋರ್ಸುಗಳಿಗೆ ಸೇರುವವರು ಪಿಯುಸಿಯಲ್ಲಿ ಇಂಗ್ಲಿಷ್‌ಮಾಧ್ಯಮದ ಅನುಭವ ಹೊಂದಿರುವುದರಿಂದ, ಇತರರಿಗೆ ಹೋಲಿಸಿದರೆ ಬೇಗನೇ ಇಂಗ್ಲಿಷ್‌ಮಾಧ್ಯಮಕ್ಕೆ ಹೊಂದಿಕೊಳ್ಳುತ್ತಾರೆ. ಎಂದು ಹೇಳಲಾಗುತ್ತದೆ. ಪಾಲಿಟೆಕ್ನಿಕ್‌ಕಾಲೇಜುಗಳಿಗೆ ಸೇರುವ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಹೆಚ್ಚು ತೊಂದರೆಯು ಆಗುತ್ತಿರುವುದು ನಿಜವಾದರೂ, ಬಹುತೇಕ ಮೆರಿಟ್‌ವಿದ್ಯಾರ್ಥಿಗಳು ಸೇರಿಕೊಳ್ಳುವುದರಿಂದ ಅಲ್ಲೂ ಸಹ ಇಂಗ್ಲಿಷಿನ ಸಮಸ್ಯೆ ತೀವ್ರವಾಗಿಲ್ಲ ಎಂದೇ ನಂಬಿಕೆ. ಆದರೆ ಐಟಿಐ ಮತ್ತು ಜೆಓಸಿ ಶಿಕ್ಷಣದಲ್ಲಿ ಮಾತ್ರ, ಕನ್ನಡ ಮಾಧ್ಯಮದಲ್ಲಿ ಓದಿ ಬಂದ ವಿದ್ಯಾರ್ಥಿಗಳು ಇಂಗ್ಲಿಷಿನ ಜೊತೆ ಹೆಣಗಾಡುವುದು ನಿಚ್ಚಳವಾಗಿ ಕಾಣುತ್ತದೆ.

ಪ್ರತೀ ವರ್ಷ ೫೦-೬೦ ಸಾವಿರ ವಿದ್ಯಾರ್ಥಿಗಳು ನಮ್ಮ ರಾಜ್ಯದಲ್ಲಿ ಪದವಿಪೂರ್ವ ಹಂತದ ವೃತ್ತಿಶಿಕ್ಷಣ ತರಬೇತಿ ಪಡೆಯುತ್ತಿದ್ದಾರೆ. ಪದವಿ ತರಗತಿಗಳ ನಿರರ್ಥಕತೆಯನ್ನು ಮನಗಂಡ ಕರ್ನಾಟಕ ಸರ್ಕಾರ, ಅನವಶ್ಯಕವಾಗಿ ಪದವಿ ಸೇರುವುದನ್ನು ತಪ್ಪಿಸುವ ಉದ್ದೇಶದಿಂದ ಮತ್ತು +೨ ಹಂತದಲ್ಲಿ ಬದುಕಿಗೆ ಪೂರಕವಾದ ಶಿಕ್ಷಣವನ್ನು ನೀಡುವ ಉದ್ದೇಶದಿಂದ, ೧೯೭೭ರಿಂದ ವೃತ್ತಿಶಿಕ್ಷಣ ಕೋರ್ಸುಗಳನ್ನು ಆರಂಭಿಸಿತು. ರಾಜ್ಯದಲ್ಲಿರುವ ಎಲ್ಲ ತಾಂತ್ರಿಕ ಮತ್ತು ಇತರೆ ಔದ್ಯೋಗಿಕ ಕ್ಷೇತ್ರಗಳಿಗೆ ಸಂಬಂಧಪಟ್ಟ ಸುಮಾರು ೫೩ ವಿವಿಧ ವೃತ್ತಿ ವಿಷಯಗಳು ಈ ಕಲಿಕೆಗಿವೆ. ಉದಾ: ಆಟೋಮೊಬೈಲ್ಸ್, ಎಲೆಕ್ಟ್ರಿಕಲ್, ಕಂಪ್ಯೂಟರ್, ಡೈರಿಸೈನ್ಸ್, ಸಿರಿಕಲ್ಚರ್, ಬ್ಯೂಟಿಕೇರ್, ಫಿಶ್‌ಫಾರ್ಮಿಂಗ್, ಹೊಲಿಗೆ ಮತ್ತು ಕಸೂತಿ ಇತ್ಯಾದಿ.

ಈ ಮೊದಲೇ ತಿಳಿಸಿದಂತೆ ವೃತಿ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿಗಳಿಗೆ ತುರ್ತು ಜೀವನದ ದಾರಿಯನ್ನು ಕಂಡುಕೊಳ್ಳುವ ಒತ್ತಡವಿರುತ್ತದೆ. ಇವರ ಗುರಿ ವೃತ್ತಿ ನೈಪುಣ್ಯತೆಯೇ ಹೊರತು ವಿಷಯದ ಪಾಂಡಿತ್ಯವಲ್ಲ. ಆದರೆ ಈ ಎಲ್ಲಾ ಕೋರ್ಸುಗಳ ಶಿಕ್ಷಣ ಮಾಧ್ಯಮ ಇಂಗ್ಲಿಷ್‌ಆಗಿದೆ. ಕರ್ನಾಟಕ ರಾಜ್ಯ ವೃತ್ತಿ ಶಿಕ್ಷಣ ಇಲಾಖೆಯವರು, ಕನ್ನಡದಲ್ಲೂ ಬೋಧನೆ ಬರಹ ಮಾಡಬಹುದೆಂದು ತನ್ನ ಸುತ್ತೋಲೆಯಲ್ಲಿ ತಿಳಿಸಿದೆ. ಆದರೆ ಇದುವರೆಗೂ ಅಂತಹ ಯಾವ ಪ್ರಯತ್ನ ನಡೆದಿಲ್ಲ. ಕನ್ನಡದಲ್ಲಿ ಇದಕ್ಕೆ ಪೂರಕವಾದ ಬೋಧನಾ ಸಾಮಗ್ರಿ ಯಾಗಲೀ ಆ ಬಗ್ಗೆ ಯೋಚಿಸುವ ತಜ್ಞರಾಗಲೀ ಕಾರ್ಯಕ್ರಮಗಳಾಗಲೀ ಯಾವುದೂ ಇಲ್ಲ. ಕಳೆದ ೨೪ ವರ್ಷಗಳಿಂದ ಶಿಕ್ಷಣ ಮಾಧ್ಯಮದ ಈ ಸಮಸ್ಯೆ ಹಾಗೆ ಉಳಿದಿದೆ. ವಿದ್ಯಾರ್ಥಿಗಳ ಮೇಲೆ ಹಿಂಸೆಯಾಗಿ ಕೂತಿದೆ.

ವೃತ್ತಿ ಶಿಕ್ಷಣ ವಿದ್ಯಾರ್ಥಿಗಳಿಗೆ ಮೊದಲ ಆರು ತಿಂಗಳು ನರಕಯಾತನೆ. ಇಂಗ್ಲಿಷಿನಲ್ಲಿ ಪಾಠಮಾಡಿದರೆ ಮುಖಗಳು ಕಳಾಹೀನವಾಗಿ, ತರಗತಿಯಲ್ಲಿ ನೀರವ ಮೌನ ಆವರಿಸುತ್ತದೆ. ನಾವು ನೋಟ್ಸ್‌ಗಳನ್ನು ಇಂಗ್ಲಿಷಿನಲ್ಲೇ ಕೊಟ್ಟರೂ ಪಾಠ ಮಾಡುವಾಗ ಕನ್ನಡಕ್ಕೇ ಒತ್ತುಕೊಡುತ್ತೇವೆ. ಅವರಿಗೆ ತಾಂತ್ರಿಕ ಪರಿಕಲ್ಪನೆ ಹೊಸದು. ಭಾಷೆಯೂ ಹೊಸತಾದಾಗ ಗಲಿಬಿಲಿಗೆ ಒಳಗಾಗುತ್ತಾರೆ. ಉದಾಹರಣೆಗೆ, ಒಂದು ವಾಹನದ ಇಂಜಿನ್‌ಬಗ್ಗೆ ಅಭ್ಯಾಸ ಮಾಡಬೇಕೆಂದಿಟ್ಟುಕೊಳ್ಳಿ. ಅದರಲ್ಲಿ ಬರುವ ನೂರಾರು ಸಂಕೀರ್ಣವಾದ ಬಿಡಿಭಾಗಗಳನ್ನೂ ಅದರ ಕಾರ್ಯ ವಿಧಾನಗಳನ್ನೂ ನೆನಪಿಟ್ಟುಕೊಳ್ಳಬೇಕು. ಹೀಗೆ ಮನಸ್ಸು ಹೊಸ ವಿಷಯವೊಂದಕ್ಕೆ ಹೊಸ ಪರಿಕಲ್ಪನೆಯೊಂದಕ್ಕೆ ತೆರೆದುಕೊಳ್ಳಬೇಕಾದಗ ಇಂಗ್ಲಿಷಿನ ಗೋಡೆ ಎದುರಾಗುತ್ತದೆ. ತರಗತಿಯಲ್ಲಿ ಎಷ್ಟು ಹೇಳುತ್ತೇವೋ ಅಷ್ಟೇ. ಮನೆಯಲ್ಲಿ ಹೊತ್ತಿನಲ್ಲಿ, ಇದುವರೆಗೂ ಒಂದು ಒಳ್ಳೆಯ ಪುಸ್ತಕ ಆಟೋಮೊಬೈಲ್ಸ್ ಬಗ್ಗೆ ಕನ್ನಡದಲ್ಲಿ ಲಭ್ಯವಿಲ್ಲ. ಹೀಗಾಗಿ ಅವರಲ್ಲಿ ಒಂದು ರೀತಿಯ ಅನ್ಯತನ ಬೆಳೆಯಲಾರಂಭವಾಗುತ್ತದೆ. ಒಂದು ಹೊಸ ವಿಷಯದ ಬಗ್ಗೆ. ನಾಳೆ ತಮ್ಮ ಬದುಕಿನ ಆಧಾರವಾಗಬಲ್ಲ ಕ್ಷೇತ್ರದ ಬಗ್ಗೆ ನಿಜವಾಗಿಯೂ ಮಾಡಬೇಕಾದಷ್ಟು ಆಸಕ್ತಿ ಕುತೂಹಲಗಳು ಬೆಳೆಯುವುದಿಲ್ಲ. ಇದಕ್ಕೆ ಒಟ್ಟಾರೆಯಾಗಿ ನಮ್ಮ ಶಿಕ್ಷಣ ವ್ಯವಸ್ಥೆಯ ಲೋಪದೋಷಗಳು ಕಾರಣವೆಂಬುದು ನಿಜವಾದರೂ, ಇದರಲ್ಲಿ ಭಾಷೆಯ ಪಾತ್ರ ಬಹಳ ಮುಖ್ಯ. ಹೀಗಾಗಿಯೇ ತರಗತಿಯಲ್ಲಿ ಓದುವುದರಲ್ಲಿ ಆಸಕ್ತಿಯಿರುವ ವಿದ್ಯಾರ್ಥಿಗಳೂ ಕೂಡ ಹೆಚ್ಚಿನ ಓದಿಗೆ ಇಂಗ್ಲಿಷನ್ನೇ ನೆಚ್ಚಬೇಕಾದ್ದರಿಂದ, ಜನರಲ್‌ರೀಡಿಂಗ್‌ಹೋಗುವುದಿಲ್ಲ. ವಿದ್ಯಾರ್ಥಿಗಳು ಮಾತ್ರವಲ್ಲ. ಶಿಕ್ಷಕರೂ ಸಹ. ಈ ಶಿಕ್ಷಣವು ನಮ್ಮ ಇತರೆ ಶಿಕ್ಷಣದಂತಲ್ಲದೆ ಬದುಕಿಗೆ ನೇರವಾಗಿ ಸಂಬಂಧಿಸಿದ್ದರೂ, ತರಗತಿಯಲ್ಲಿ ಈ ಬಗೆಗಿನ ಪ್ರಶ್ನೆಗಳು ಬರುವುದು ಬಹಳ ಬಹಳ ಕಡಿಮೆ. ನಾವಾಗಿಯೇ

ಕೆದಕಿ ಕೇಳಿದಾಗ ಅದ್ಭುತವಾದ ಉತ್ತರ ನೀಡುವ ಪ್ರಸಂಗಗಳಿವೆ. ಥಿಯರಿ ಕ್ಲಾಸ್‌ನಲ್ಲಿ ಬೆಪ್ಪಾಗಿ ಕುಳಿತಿರುವ ಎಷ್ಟೋ ವಿದ್ಯಾರ್ಥಿಗಳು, ಪ್ರಾಯೋಗಿಕ ತರಗತಿಗಳಲ್ಲಿ ಲವಲವಿಕೆಯಿಂದ ಕೆಲಸ ಮಾಡುವುದನ್ನು ಕಾಣಬಹುದು. ನಮ್ಮ ವಿದ್ಯಾರ್ಥಿಗಳಿಗೆ ಒಂದು ಇಂಜಿನನ್ನು ಬಿಚ್ಚಿ ರಿಪೇರಿ ಮಾಡುವುದು ಸುಲಭ. ಅದರ ಬಗ್ಗೆ ಬರೆಯುವುದು ಅಥವಾ ಮಾತನಾಡುವುದು ಕಷ್ಟ.

ನಮ್ಮ ಕಾಲೇಜಿನ ಬೆಳ್ಳಿಹಬ್ಬದ ಸಂದರ್ಭದಲ್ಲಿ ವಸ್ತು ಪ್ರದರ್ಶನವೊಂದನ್ನು ಏರ್ಪಡಿಸಲಾಗಿತ್ತು. ನಮ್ಮ ವಿದ್ಯಾರ್ಥಿಗಳ ಒಂದು ತಂಡದವರು ಅಂಬಾಸಿಡರ್‌ಕಾರ್‌ಇಂಜಿನ್‌ನಲ್ಲಿ ಪೂರ್ತಿಯಾಗಿ ಸ್ವತಃ ಎರಡು ವಾರಗಳ ಕಾಲ ಶ್ರಮವಹಿಸಿ, ವರ್ಕಿಂಗ್‌ಸೆಕ್ಷನ್‌ಮಾಡೆಲ್‌ಮಾಡಿ ಪ್ರದರ್ಶನ ಕೊಟ್ಟರು. ಅವರ ಪಕ್ಕದಲ್ಲೇ ಇಂಗ್ಲಿಷ್‌ಮಾಧ್ಯಮದ ಪಿಯುಸಿ ವಿಜ್ಞಾನದ ವಿದ್ಯಾರ್ಥಿಗಳು ತಮ್ಮ ಸಣ್ಣಪುಟ್ಟ ಪ್ರಯೋಗಗಳನ್ನೇ ಇಂಗ್ಲಿಷಿನಲ್ಲಿ ಅರಳು ಹುರಿದಂತೆ ವಿವರಿಸುತ್ತಿದ್ದರು. ನಮ್ಮ ವಿದ್ಯಾರ್ಥಿಗಳು ತೀರ್ಪುಗಾರರು ಬಂದಾಗ ಅಂಜಿಕೆಯಿಂದ ಕನ್ನಡದಲ್ಲೇ ತಮ್ಮ ಇಂಜಿನ್‌ಮಾಡೆಲ್‌ಬಗ್ಗೆ ವಿವರಿಸಿದರು. ಅವರಿಗೆ ಮೊದಲ ಬಹುಮಾನ ಬರಲಿಲ್ಲ. ಒಂದು ಇಂಜಿನ್‌ಮಾಡೆಲ್‌ಮಾಡುವುದು ಅಷ್ಟು ಸುಲಭದ ಕೆಲಸವಲ್ಲ ಎಂದು ಒಬ್ಬ ಸಾಧಾರಣ ಅಧ್ಯಾಪಕನಿಗೂ ಹೊಳೆಯುತ್ತದೆ. ಆದರೇನು ಮಾಡುವುದು, ಅವರಿಗೆ ಇಂಗ್ಲಿಷ್‌ಇರಲಿಲ್ಲ. ನಮ್ಮಲ್ಲಿ ಇಂಗ್ಲಿಷಿನ ನದಿ ದಾಟಲಾರದೆ ಅಧಿಕೃತವಾಗಿ ಆಟೋಮೊಬೈಲ್ಸ್ ಡಿಪ್ಲೊಮಾ ಪ್ರಮಾಣ ಪತ್ರವನ್ನು ಪಡೆಯುವ ಎಷ್ಟೋ ವಿದ್ಯಾರ್ಥಿಗಳಿದ್ದಾರೆ. ಅವರು ಫೀಲ್ಡ್‌ನಲ್ಲಿ ಬಹಳ ಹೆಸರು ಪಡೆದ ತಂತ್ರಜ್ಞರಾಗಿರುವ ನಿದರ್ಶನಗಳು ಇವೆ.

ಉತ್ತರ ಪತ್ರಿಕೆಗಳನ್ನು ಪರಿಶೀಲಿಸುವಾಗ ಅರ್ಧಕಿಂತ ಹೆಚ್ಚು ಜನರಿಗೆ ಕನಿಷ್ಠ ವಾಕ್ಯ ರಚನೆಯೇ ತಿಳಿದಿಲ್ಲವೆಂದು ಸ್ಪಷ್ಟವಾಗುತ್ತದೆ. ತಿಣುಕಾಡಿ ತಿಣುಕಾಡಿ ಒಂದಷ್ಟು ಪದಗಳನ್ನು ಗುಡ್ಡೆ ಹಾಕಿರುತ್ತಾರೆ. ರಾಶಿಬಿದ್ದ ಆ ಪದಗಳಲ್ಲಿ ನಮಗೆ ಬೇಕಾದದ್ದುನ್ನು ಆಯ್ದು ಅಂಕಗಳನ್ನು ನಿಡುತ್ತಾ ಹೋಗಬೇಕಾಗುತ್ತದೆ. ಆಗ ಕುವೆಂಪು ಹೇಳಿದ 'ಗ್ರೇಸ್' ಅಂಕಗಳ ದುರಂತ ನಾಟಕ ನೆನಪಾಗುತ್ತದೆ." ದಡದಲ್ಲಿ ನಿಂತು ನೋಡುವ ಹಿರಿಯರ ಇತ್ಯರ್ಥವೇನು? ಹುಡುಗರೆಲ್ಲ ಈಚೀಚೆಗೆ ದಡ್ಡರಾಗುತ್ತಿದ್ದಾರೆ. ಸ್ಟಾಂಡರ್ಡ್‌ತುಂಬಾ ಇಳಿದು ಹೋಗಿದೆ! ಹಾಗಾದರೆ ಏನು ಮಾಡಬೇಕು? ಇನ್ನಷ್ಟು ಪಠ್ಯಪುಸ್ತಕ ಹೆಚ್ಚಿಸಿ! ಗ್ರಾಮಲ್‌ಲೇಹ್ಯ ಇನ್ನೂ ಸ್ವಲ್ಪ ಹೆಚ್ಚಾಗಿ ತಿನ್ನಿಸಿ! ಪರಿಣಾಮ: ಪರೀಕ್ಷೆಯ ಫಲಿತಾಂಶ ಪ್ರಕಟನೆ ಸಮಯದಲ್ಲಿ ಮತ್ತೆ 'ಕೃಪೆ' ಯ ಕೈಹಿಡಿದು ಎತ್ತಬೇಕು, ಮುಂದಿನ ಮೆಟ್ಟಿಲಿಗೆ."

ಈ ದುರಂತ ನಾಟಕ ಇನ್ನು ಸಾಕು ಎಂದು ಕುವೆಂಪುರವರು ೧೯೩೮ರಲ್ಲಿಯೇ ನಮ್ಮನ್ನು ಎಚ್ಚರಿಸಿದ್ದಾರೆ. ಆದರೆ ವಾಸ್ತವದಲ್ಲಿ ಆಗುತ್ತಿರುವುದೇನು? ಎಷ್ಟೋ ಭಾರಿ ಪ್ರಾಕ್ಟಿಕಲ್‌ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯ ಅಂಕ ಪಡೆದ ವಿದ್ಯಾರ್ಥಿಗಳು ಥಿಯರಿಯಲ್ಲಿ ಪ್ರಯಾಸದಿಂದ ಪಾಸಾಗುತ್ತಾರೆ. ಆಂದರೆ ಏನರ್ಥ? ಅವರಿಗೆ ವಿಷಯ ಮನದಟ್ಟಾ ಗಿಲ್ಲವೆಂದೇ ಅಥವಾ ಆಭಿವ್ಯಕ್ತಿಯ ತೊಡಕೇ? ಇನ್ನೂ ದುರಂತವೆಂದರೆ, ಒಮ್ಮೆ ಒಂದು ಕಾಲೇಜಿನ ಎಲೆಕ್ಟ್ರಿಲ್‌ವಿಭಾಗದ ವಿದ್ಯಾರ್ಥಿಗಳಲ್ಲಿ ಅರ್ಧ ಜನ ಐಚ್ಛಿಕ ವಿಷಯಗಳೆಲ್ಲಾ ತೇರ್ಗಡೆ ಹೊಂದಿದ್ದರು. ಇಂಗ್ಲಿಷ್‌ಭಾಷಾ ವಿಷಯದಲ್ಲಿ ಫೇಲಾದರು. ಬದುಕಿಗೆ ಬೇಕಾದ ವೃತ್ತಿ ವಿಷಯದಲ್ಲಿ ನೈಪುಣ್ಯತೆ ಪಡೆದರೂ, ಇಂಗ್ಲಿಷ್‌ಭಾಷೆ ಪಾಸಾಗಿಲ್ಲವೆಂಬ ಕಾರಣಕ್ಕೆ ಫೇಲ್‌ಎಂಬ ಹಣೆಪಟ್ಟಿ ಹೊತ್ತು, ಅದನ್ನು ಪಾಸು ಮಾಡುವವರೆಗೂ ಕಾಯಬೇಕಾಗುತ್ತದೆ. ಪ್ರತಿಷ್ಠಿತ ಸಂಸ್ಥೆಗಳಲ್ಲಿ ಇಂಗ್ಲಿಷಿಲ್ಲದ ಕಾರಣಕ್ಕೆ ನೌಕರಿ ಸಿಕ್ಕದೇ ಹೋಗಬಹುದು. ಅಗ್ರಿಕಲ್ಚರ್, ಹೊಲಿಗೆ ಕಸೂತಿಯಂತಹ ವಿಷಯಗಳನ್ನು ಸುಲಭವಾಗಿ ಕನ್ನಡದಲ್ಲಿ ಬರೆಯಬಹುದು. ಆದರೆ ಕನ್ನಡದಲ್ಲಿ ಬರೆದರೆ ಅಂಕಗಳು ಕಡಿಮೆ ಎಂಬುದು ವಿದ್ಯಾರ್ಥಿಗಳು ಕಂಡುಕೊಂಡ ಸತ್ಯ. ಅದು ನಿಜವೂ ಹೌದು. ಏಕೆಂದರೆ ಮೌಲ್ಯಮಾಪನ ಮಾಡುವಾಗ ನಮ್ಮ ಅಧ್ಯಾಪಕ ಮಿತ್ರರು, ಕನ್ನಡ ಉತ್ತರ ಪತ್ರಿಕೆ ಕಂಡರೆ ಉದಾಸೀನದಿಂದಲೇ ಕೈಗೊತ್ತಿಕೊಂಡು ಸಾಗಹಾಕುತ್ತಾರೆ. ತಾಂತ್ರಿಕ ಕ್ಷೇತ್ರದಲ್ಲಿ ಕನ್ನಡ ಎಂದರೆ ಮಹಾ ಅಲರ್ಜಿ.

ಬಿಸಿಲಿಗೆ ಊದಿಟ್ಟ ಒಂದು ಬಲೂನು, ಶಾಖ ಹೆಚ್ಚಾದಾಗ ಒಡೆದು ಹೋಗುತ್ತದೆ. ಎಂಬ ಪ್ರಯೋಗವನ್ನು ಪ್ರಾಥಮಿಕ ತರಗತಿಯಿಂದಲೇ ಎಲ್ಲರೂ ಓದಿರುತ್ತಾರೆ. ಆದರೆ ಅದರಿಂದ "ಯಾವುದೇ ಅನಿಲವನ್ನು ಕಾಯಿಸಿದಾಗ ಅದು ಹಿಗ್ಗುತ್ತದೆ" ಎಂಬ ಸೂತ್ರವನ್ನು (ಸಾರವನ್ನು) ವಿದ್ಯಾರ್ಥಿಗಳು ಗ್ರಹಿಸುವುದಿಲ್ಲ. ಇದು ಆಟೋಮೊಬೈಲ್ಸ್‌ನ ಮೂಲಸೂತ್ರ. ತಲೆಯಲ್ಲಿ ಯೋಚಿಸುವ ಭಾಷೆ ಬೇರೆ, ಪಠ್ಯದಲ್ಲಿ ಓದುವ ಭಾಷೆ ಬೇರೆಯಾದಾಗ ಸಂವಹನಕ್ಕೆ ನಡುವೆ ಎಲ್ಲೋ ಕಂದಕವೇರ್ಪಡುತ್ತದೆ. ಹಾಗಾಗಿಯೇ ನಮ್ಮ ವಿದ್ಯಾರ್ಥಿಗಳಿಗೆ ಅಪ್ಲಿಕೇಶನ್‌ಆಫ್‌ನಾಲೆಜ್‌ಇಲ್ಲ. ಇದು ಇಲ್ಲದಿದ್ದಲ್ಲಿ ತಾಂತ್ರಿಕ ಶಿಕ್ಷಣದಲ್ಲಿ ಬಾಯಿಪಾಠಮಾಡಿ ಪರೀಕ್ಷೆ ಪಾಸು

ಮಾಡಬಹುದೇ ವಿನಃ ಫೀಲ್ಡ್‌ನಲ್ಲಿ ಯಶಸ್ಸು ಸಾಧ್ಯವಿಲ್ಲ. ಪದಕೋಶಗಳನ್ನು ತಾಂತ್ರಿಕ ಶಿಕ್ಷಣದ ಪ್ರತಿಯೊಂದು ಶಾಖೆಗೂ ಪ್ರತ್ಯೇಕ ಪ್ರತ್ಯೇಕವಾಗಿ ರಚಿಸಬೇಕು. ವಿವಿಧ ಕೋರ್ಸುಗಳ ಬೋಧನೆಯಲ್ಲಿ ತೊಡಗಿರುವ ಅಧ್ಯಾಪಕರು, ಆಗಾಗ ಸೇರಿಸಿ, ವಿಚಾರ ವಿನಿಮಯ ನಡೆಸಿ, ಕನ್ನಡದ ಸಮರ್ಥ ಬಳಕೆಯ ಬಗ್ಗೆ ಹೆಚ್ಚು ಹೆಚ್ಚು ಕಾರ್ಯಕ್ರಮ ಹಾಕಿಕೊಳ್ಳವಂತಾಗಬೇಕು. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಮತ್ತು ತಾಂತ್ರಿಕ ಶಿಕ್ಷಣ ಮಂಡಳಿಗಳು, ಪ್ರತ್ಯೇಕವಾಗಿ ತಂತಮ್ಮ ಇಲಾಖೆಗೆ ಸಂಬಂಧಪಟ್ಟ ಕೋರ್ಸುಗಳಿಗೆ, ಕನ್ನಡ ಪಠ್ಯಗಳನ್ನು ರಚಿಸಬೇಕು. ಸೋವಿಯತ್‌ಒಕ್ಕೂಟದಲ್ಲಿ ಅನೇಕ ರಾಷ್ಟ್ರೀಯ ಭಾಷೆಗಳನ್ನು ಈ ರೀತಿಯಾಗಿ ಬೆಳೆಸಿದ ಉದಾಹರಣೆಗಳು ನಮ್ಮ ಮುಂದಿವೆ.

ಏಕಮುಖೀ ಸಂಸ್ಕೃತಿಯತ್ತ ಜಗತ್ತಿನ ಚೈತನ್ಯ ಸಮಸ್ತವನ್ನು ಬಲಾತ್ಕರಿಸುತ್ತಿರುವ ಜಾಗತೀಕರಣದ ಈ ಸಂದರ್ಭದಲ್ಲಿ, ನಾವು ಎಚ್ಚೆತ್ತುಕೊಂಡು ವಾಸ್ತವಕ್ಕೆ ಸ್ಪಂದಿಸದಿದ್ದರೆ, ನಮ್ಮ ವಿದ್ಯಾರ್ಥಿಗಳ ಬುದ್ಧಿ ಪ್ರತಿಭೆ ಹೀಗೆ ವೃಥಾ ಪೋಲಾಗುವುದಿಲ್ಲದೇ ದೇಶವೂ ಅಧೋಗತಿಯತ್ತ ಸಾಗುತ್ತದೆ. ಶಿಕ್ಷಣದಲ್ಲಿ ನಮ್ಮ ಭಾಷೆಯನ್ನು ಅಳವಡಿಸಿಕೊಳ್ಳುವ ಹೋರಾಟವೆಂದರೆ, ನಮ್ಮ ನಿಜವಾದ ರಾಜಕೀಯ ಆರ್ಥಿಕ ಸ್ವಾತಂತ್ರ್ಯವನ್ನು ಮರಳಿ ಪಡೆಯುವುದೆಂದೇ ಅರ್ಥ

ಜಗದೀಶಚಂದ್ರ ಬೋಸರಿಗೆ ಸಸ್ಯಶಾಸ್ತ್ರದ ಅಧ್ಯಯನಕ್ಕೆ ಅಂತಾರಾಷ್ಟ್ರೀಯ ಮನ್ನಣೆ ಬಂದ ಸಂದರ್ಭದಲ್ಲಿ ಅವರನ್ನು ಸಂದರ್ಶನ ನಡೆಸುತ್ತಿದ್ದ ಸಂದರ್ಶನಕಾರ ಒಂದು ಪ್ರಶ್ನೆ ಕೇಳಿದನಂತೆ. "ಬೋಸ್‌ಜೀ, ಸಸ್ಯಶಾಸ್ತ್ರವನ್ನು ಬಂಗಾಳಿಯಲ್ಲಿ ಬೋಧಿಸುವುದು ಕಷ್ಟ ಎನ್ನುತಾರಲ್ಲ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಬೋಸ್‌ಉತ್ತರಿಸಿದರು."ನಿಜ ಹೇಳಬೇಕೆಂದರೆ ಯಾರು ಈ ಮಾತನ್ನು ಹೇಳುತ್ತಾರೋ ಅವರಿಗೆ ಸಸ್ಯ ಶಾಸ್ತ್ರವೂ ತಿಳಿದಿಲ್ಲ. ಬಂಗಾಳಿಯೂ ತಿಳಿದಿಲ್ಲ".

**ಲೇಖಕರು**

ಎಸ್‌ಸುಂದರ್(೧೯೬೮) ಅವರು ಶಿವಮೊಗ್ಗೆಯ ದಿವಿಎಸ್‌ಪದವಿ ಪೂರ್ವ ಸ್ವತಂತ್ರ ಕಾಲೇಜಿನಲ್ಲಿ ಆಟೋಮೊಬೈಲ್ಸ್ ವಿಷಯದಲ್ಲಿ ಅಧ್ಯಾಪಕರಾಗಿದ್ದಾರೆ. ಜನಪರ ಚಳುವಳಿಗಾರರು. ಪ್ರತ್ರಿಕೆಗಳಲ್ಲಿ ಅನೇಕ ಲೇಖನಗಳನ್ನು ಬರೆದಿದ್ದಾರೆ.

**ಆಶಯ**

ಪ್ರಸ್ತುತ ಲೇಖನಗಳನ್ನು ಕನ್ನಡ ವಿಶ್ವವಿದ್ಯಾಲಯದ ದಶವಾರ್ಷಿಕ ಸಂದರ್ಭದಲ್ಲಿ ಪ್ರಕಟವಾದ 'ಕನ್ನಡ ಅಧ್ಯಯನ' ಪತ್ರಿಕೆಯಿಂದ ಆರಿಸಿಕೊಳ್ಳಲಾಗಿದೆ. ತಾಂತ್ರಿಕ ಶಿಕ್ಷಣವನ್ನು ಮಾತೃಬಾಷೆ ಅಥವಾ ಪರಿಸರದ ಭಾಷೆಯಲ್ಲಿ ಪಡೆಯುವುದರ ಮಹತ್ವವನ್ನು, ಲೇಖಕರು ತಮ್ಮ ಅನುಭವಗಳ ಮೂಲಕ ಇಲ್ಲಿ ವಿಶ್ಲೇಷಣೆ ಮಾಡಿದ್ದಾರೆ.

**ಪದಕೋಶ**

ಎಂತಾ ಮಾಡುಕಾತಿಲ್ಯೆ = ಏನು ಮಾಡುವುದು ತಿಳಿಯುತ್ತಿಲ್ಲ, ಲೇಹ್ಯ = ಶಕ್ತಿಕೊಡುವ ಔಷಧಿ, ಅಲರ್ಜಿ = ಆಗದಿರುವುದು, ಒಗ್ಗದಿರುವುದು

**ಮಾದರಿ ಪ್ರಶ್ನೆಗಳು**

೧. ಪರೀಕ್ಷಕರಾಗಿ ಹೋದ ಲೇಖಕರ ಅನುಭವ ಎಂತಹದು?
೨. ಐಟಿಐ ಮತ್ತು ಜೆಓಸಿ ಕೋರ್ಸುಗಳಿಗೆ ಸಾಮಾನ್ಯವಾಗಿ ಬರುವ ವಿದ್ಯಾರ್ಥಿಗಳ ಹಿನ್ನೆಲೆಯೇನು?
೩. ಕರ್ನಾಟಕದಲ್ಲಿರುವ ವೃತ್ತಿ ಶಿಕ್ಷಣದ ಸ್ವರೂಪ ಹೇಗಿದೆ?
೪. ಲೇಖಕರಿಗೆ ತರಗತಿಗಳಲ್ಲಿ ಭಾಷೆ ವಿಷಯದಲ್ಲಿ ಆಗುವ ಅನುಭವ ಎಂತಹದು?

೫. ತಾಂತ್ರಿಕ ವಸ್ತು ಪ್ರದರ್ಶನದಲ್ಲಿ ಕನ್ನಡ ವಿದ್ಯಾರ್ಥಿಗಳು ಮೊದಲ ಬಹುಮಾನ ಗಳಿಸದಿರಲು ಭಾಷೆ ಅಡ್ಡಿಯಾಯಿತು ಎನ್ನುವ ಲೇಖಕರ ಅಭಿಪ್ರಾಯ ಕುರಿತು ನಿಮಗೇನನಿಸುತ್ತದೆ?

೬. ಕುವೆಂಪು ಹೇಳುವ 'ದುರಂತ ನಾಟಕ' ಯಾವುದು?

೭. ವಿದ್ಯಾರ್ಥಿಗಳು ಥಿಯರಿ ಮತ್ತು ಪ್ರಾಕ್ಟಿಕಲ್‌ತರಗತಿಗಳಲ್ಲಿ, ಪರೀಕ್ಷೆ ಹಾಗೂ ಫೀಲ್ಡಿನಲ್ಲಿ , ಬೇರೆಬೇರೆ ತರಹದ ಪ್ರತಿಭೆ ವ್ಯಕ್ತಪಡಿಸುವುದಕ್ಕೆ ಕಾರಣಗಳೇನು?

೮. ಕನ್ನಡದಲ್ಲಿ ತಾಂತ್ರಿಕ ಶಿಕ್ಷಣ ನೀಡಲು ಸರಕಾರ ಹಾಗೂ ವಿಶ್ವವಿದ್ಯಾಲಯಗಳು ಏನು ಮಾಡಬೇಕೆಂದು ಲೇಖಕರು ಸಲಹೆ ಕೊಡುತ್ತಾರೆ?

೯. ಜಗದೀಶಚಂದ್ರ ಬೋಸರು ಬಂಗಾಳಿಯಲ್ಲಿ ಸಸ್ಯಶಾಸ್ತ್ರ ಬೋಧಿಸುವ ಬಗ್ಗೆ ಹೇಳಿದ ಮಾತಿನ ಒಳಾರ್ಥವೇನು?

**ಪೂರಕ ಓದು**

೧. ಕುವೆಂಪು ಅವರ 'ನಮಗೆ ಬೇಕಾಗಿರುವ ಇಂಗ್ಲಿಷ್‌ಶಿಕ್ಷಣ' ಲೇಖನ.

೨. ಯು ಆರ್‌ಅನಂತಮೂರ್ತಿ ಅವರ 'ಇಂಗ್ಲಿಷ್‌ಬ್ರಾಹ್ಮಣ ಕನ್ನಡ ಶೂದ್ರ' ಲೇಖನ.

೩. ಕೆ. ವಿ. ನಾರಾಯಣ ಅವರ 'ಭಾಷೆಯ ಸುತ್ತಮುತ್ತ' ಪುಸ್ತಕ.

೪. ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ 'ಕನ್ನಡ ಅಧ್ಯಯನ' ದಶವಾರ್ಷಿಕ ವಿಶೇಷ ಸಂಚಿಕೆಯಲ್ಲಿ (೨೦೦೧) 'ಕನ್ನಡದ ಜತೆ ನನ್ನ ಅನುಸಂಧಾನ' ಭಾಗದಲ್ಲಿ, ವಿಜ್ಞಾನಿಗಳು ಹಾಗೂ ತಾಂತ್ರಿಕ ಶಿಕ್ಷಣದ ಪ್ರಾಧ್ಯಾಪಕರು ಬರೆದಿರುವ ಲೇಖನಗಳು.

೫. ಕರ್ನಾಟಕಾ ವಿಮೋಚನ ರಂಗ ಪ್ರಕಟಿಸಿರುವ 'ಕನ್ನಡ ಬದುಕಿನ ಕಂಟಕಗಳು' ಕೃತಿ.

೬. ಅಫ್ರಿಕಾದ ಲೇಖಕ ಗೂಗಿ ವಾ ಥಿಯಾಂಗೋ ಅವರ ಪುಸ್ತಕದ ಅನುವಾದ 'ವಸಾಹತು ಪ್ರಜ್ಞೆ ಮತ್ತು ವಿಮೋಚನೆ'.

## ೧೭. ಕೊಣವೇಗೌಡ (ಜನಪದ ಗೀತೆ)

ಗೋವಿಂದ ಮುರಹರ ಮಾಧವ |
ಸರ್ವರ ಪಾಲಿಸು ಶ್ರೀಧವ ||

ನಮ್ಮೂರಲ್ಲಿದ್ದ ಕೋಣವೇಗೌಡ
ಜೀನನೆಂದರೆ ಹೆಸರೇಳಬೇಕು
ಜೋಳನಾದ್ರೆ ಬಿತ್ತೇ ಆಯ್ತು
ಮೂರು ವರ್ಷ ಮಳೆಯೇ ಹೋಯ್ತು
ಇರುವೆ ಕಾಳಹೊತ್ಕೊಂಡೋದೊ
ಗೌಡನು ಇಲಿಗೆ ಸಂಕಲೆ ಹಾಕಿ
ಕಾಳನೆಲ್ಲಾ ತೆಗೆದು ತುಂಬ್ದ

ಹೊಟ್ಗಿಲ್ದೋರು ಕೇಳಿದವರನ
ಭಿಕ್ಷನಾದರೆ ಕೊಡಿಗಿಡಿಯೆಂದು
ಭಿಕ್ಷದೋನ್ಕಾಟ ತಡಿಲಾರ್ದೆ

ಕರೆದು ಹೆಂಡ್ತೀಗೇಳ್ದಹಾಗೆ
ಭಿಕ್ಷದವರು ಬಂಧ್ಗಿಂದಾರು
ಭಿಕ್ಷಕಾದರೆ ಬಂದಾರೀಗ
ಸತ್ತಂತೆ ನಾನು ಬಿದ್ಕೋತೀನಿ ||

ಅಳುತಾ ಬಾಕ್ಲಲ್ಲೆ ಕುಂತ್ಕೋ ಹೆಣ್ಣೆ
ದಾಸಯ್ಯನಾದ್ರೆ ಬರ್ತಾನಾಗ
ಇದ್ಯಾರಮ್ಮ ಅನ್ನುತಾನೆ
ಗಂಡ ಸತ್ತೋದ ಅಂತ ಹೇಳು
ದೇವ್ರು ಸೂತ್ನಕ್ಕೆ ಸಿಕೋಯ್ತೆಂದು
ದಾಸಯ್ಯನಾದ್ರೆ ಓಡ್ತಾನಾಗ
ಹೀಗಂತ ಹೇಳಿ ಗೌಡ ಮಲಗ್ದ
ಸತ್ತಂಗೆ ಮೂಲೇಲಿ ಬಿದ್ಕೊಂಡ ||

ಕೊಡಗಿನ ಮಾರಿ ತಂಟಲ ಮಾರಿ
ಗೌಡಗೆ ಬುದ್ಧಿ ಕಲಿಸಾಲೆಂತ
ದಾಸಯ್ನ ವೇಷ ಹಾಕಿಕೊಂಡು
ತುಳಸೀ ಮಣಿಯ ಕತ್ತಿಗೆ ಹಾಕಿ
ಕೈಲಿ ಜಾಗಟೆ ಕಂಕ್ಳಲ್ಲ್ಯಂಖು
ಹಣೀಲ್ನಾಮ ಇಟ್ಟುಕೊಂಡು
ಗೋವಿಂದ ತಿಮ್ಮಪ್ಪ ಎಂದೆನ್ನುತ್ತ
ಗೌಡ್ನ ಹಟ್ಟಿ ಬಾಗ್ಲಿಗೆ ಬಂದ್ಲು
ನೋಡಿದಳಲ್ಲಿ ಗೌಡ್ನ ಹೆಂಡ್ತಿ
ಅಳುತ ಬಾಕ್ಲಲ್ಲಿ ಕುಂತಿರೋದ
ಇದ್ಯಾಕಮ್ಮ ಅಳ್ತಿ ಎಂದ್ಲು
ಗೌಡ ಸತ್ತೋದ ಕೆಟ್ಟೆ ಕಾಣಪ್ಪ
ಹೊರೋರು ಹೆಣವ ದಿಕ್ಕಿಲ್ವಲ್ಲೋ
ನನಗೆ ಮುಂದಕೆ ದಿಕ್ಕಿಲ್ಲ ತಂದೆ
ಕೆಟ್ನಲ್ಲಪ್ಪೊ ಕೆಟ್ನಲ್ಲಪ್ಪೊ
ಅಂತ ಹೇಳಿ ಬಿಕ್ಕಿ ಅತ್ಲು
ಕಣ್ಣಲ್ಲಿ ತೊಟ್ಟು ನೀರೇ ಇಲ್ಲ.||

ಅಯ್ಯೋ ಕೊಣವಪ್ಪ ಸತ್ಯಾ ನೀನು
ಚೆನ್ನದಂತ ಮನುಷ್ಯನು ನೀನು
ನಿನ್ನಂಥಾ ದಾನಿ ಸತ್ತಾ ಮೇಲೆ
ನಮ್ಗೆ ಹೊಟ್ಟ್ಯಾರೊ ಕೊಡಾರಪ್ಪ

ಅಂತಾ ತುಂಬಾ ಬಗೇಲಿ ದಾಸಯ್ಯ
ತಲೆಯಾ ತಲೆಯಾ ಹೊಡಕೊಂಡತ್ತ ||

ಏಟೊತ್ತು ಬಡ್ಕೊಂಡ್ರು ಇದ್ದೆ ಆದೆ
ಹೆಣವ ಹೋರೋರು ದಿಕ್ಕಿಲ್ಲಂತೆ
ಅಂತ ಹೇಳಿ ದಾಸಯ್ಯನಾಗ
ಶಂಕು ಜಾಗಾಟೆ ತೆಗೆದು ಮಡಗಿ
ಉಟ್ಟಿದೊದ್ದಿದ್ಬಟ್ಟೆ ತೆಗೆದು
ಒಂದು ಕಡೀಕೆ ಗಂಟ್ಕಟ್ಟಿಟ್ಟು
ಗೌಡ ಮೊಕವಾ ನೋಡಾಕೋದ ||

ಹೊರಗಡೆ ನಡೆಯೋ ಪರಸಂಗ ಕೇಳಿ
ದಾಸಯ್ಯ ಬರುವಾ ಗುರ್ತಾನರ್ತು
ಗೌಡ ಬಿಗೀಲಿ ಉಸಿರಾ ಕಟ್ಟಿ
ಕಣ್ಗುಡ್ಡೆ ಮೇಕ್ಕೆ ಸಿಕ್ಕಿಸಿಕೊಂಡು
ಕೈ ಕಾಲ್ತಾನು ಮುದುರಿಕೊಂಡು
ಸತಂಗೆ ತಾನು ಬಿದ್ಕೊಂಡಿದ್ದ ||

ಗೌಡ್ನ ರುಣವ ತೀರ್ಸೋನೆವದಿ
ದಾಸಯ್ಯ ಒಂದಿಡಿ ಅಕ್ಕೀ ತಮ್ದು
ಮೊಕ್ದಾ ಮುಸ್ಕಾ ಒಕ್ಕಡಿಕೇಳ್ದು
ಕಿಸಿದಿದ್ಬಾಯ್ಗೆ ಅಕ್ಕೀ ತುಂಬಿ
ಆಯ್ಯೋ ಅಪ್ಪಾ ಸತ್ಯಾ ಗೌಡ
ನಿನ್ನಂತಾ ಗೌಡ ಹುಟ್ತಾನೇನೋ
ಅಂತಾ ಅಳ್ತಾ ಹೋರಿಕೆ ಬಂದಾ ||

ಬಿದಿರಾ ಹಿಂಡ್ಲಲ್ಬಿದಿರಾ ತಂದು
ಚಟ್ಟವನಾದ್ರೇ ಕಟ್ಟಿಕೊಂಡು
ಹೆಣವ ತಂದು ಅದರ ಮೇಲಿಡಲು
ಹಣೀನ ಮುಸುಕು ತೆಗೆದು ನೋಡಿದ್ರೆ
ಅಕ್ಕಿ ಒಂದ್ಕಾಳಿರಲೇಯಿಲ್ಲ
ತೆಗೆದಿದ್ದ ಬಾಯಿ ಮುಚ್ಕೊಂಡಿತ್ತು
ಮುದುರಿದ್ದ ಕಾಲು ನೀಡ್ಕೊಂಡಿತ್ತು ||

ದೆವ್ವ ಬಂದದೆ ಹೆಣದ ಮ್ಯಾಲೆ
ಅದ್ನ ಈಗ ಓಡ್ಸಲೇಬೇಕು
ಅಂತಾ ಹೇಳಿ ಬರಗುಳಾವಾ

ಬೆಂಕೀಲಾಕಿ ಚಂದ್‌ಗ್ಕಾಸಿ
ಒಡೋಡ್ಲೇ ಹಾಳು ದೆವ್ವೇ ನೀನು
ಹೆಣಾನ ಯಾಕೆ ಹಿಡಕೊಂಡಿದ್ದಿ
ಅಂತಾ ಹೇಳಿ ಗೌಡ್ನ ಬೆನ್‌ಮೇಲೆ
ಬರಗುಳ ಉಳ್ದ ಚೋರ ಚೋರ ಅಂತು ॥

ಅಯ್ಯಯ್ಯಪ್ಪ ಎಂದಾ ಗೌಡ
ಉರೀಗೆ ಬಾಯ್ಬಾಯಿ ಬಡ್ಕೊಂಡ್ಬಿಟ್ಟ
ದಾಸಯ್ಯನಾದ್ರೆ ಕಿಸಿಕಿಸಿ ನೆಗ್ತಾನೆ
ಗೌಡ್ನ ಹೆಂಡ್ತಿ ಬೀದೀಲಿದ್ದೋಳು
ಬಳೀಕೆ ಬಂದು ನೋಡ್ತಾಳಲ್ಲಿ
ಗಂಡಗೆ ರಗುಳ ಬಿದ್ದೀರೋದಾ
ಜೀನಗಂಡ್ನಾ ಗತಿಯಾ ಕಂಡು
ಅಳುವಿನ ಜೊತೆಗೆ ನಗುವೂ ಬಂತು ॥

ದಾಸಯ್ಯ ಶಂಕು ಜಾಗಟೆ ತಂದು
ಭಿಕ್ಷಾ ಹಾಕಮ್ಮ ಅಂತ ಳೇಳ್ತಾನೆ
ಕೊಣವೇ ಗೌಡ್ನಗೆ ಈಟು ಹೊತ್ಗೇ
ಬಂದಿತ್ತು ಬುದ್ಧಿ ಚೆನ್ನಾಗೇಯೆ
ಹಾಕೆ ಒಂದಿಡಿ ಜೋಳ ಅವನ್ಗೆ
ಅಂತಾ ಹೆಂಡ್ತಿಗೇಳ್ದಾ ಅವನು ॥

ಸತ್ತೋದ ಗೌಡ ಬದುಕ್ಕೊಂಡವನೇ
ಒಂದಿಡಿ ಜೋಳ ನನಗೆ ಸಾಲ್ದು
ಕೊಡಬೇಕು ನನಗೆ ಒಂದು ಹೇರು
ಅಂತಾ ಹೇಳಿ ಹಟವಾ ಹಿಡಿದ ॥

**ಕರ್ತೃ**

ಇದೊಂದು ಜನಪದ ರಚನೆ, ಜನಪದ ಕತೆಯನ್ನೊ ಹಾಡನ್ನೊ ಮೂಲತಃ ಯಾರೋ ಒಬ್ಬ ಪ್ರತಿಭಾವಂತ ವ್ಯಕ್ತಿಗಳೇ ರಚಿಸಿರುತ್ತಾರೆ. ಆದರೆ ರಚನೆಯ ಜತೆ ಅವರ ಹೆಸರು ಉಳಿದು ಬರುವುದಿಲ್ಲ. ಇಡೀ ಸಮುದಾಯ ಅದನ್ನು ತನ್ನದನ್ನಾಗಿ ಮಾಡಿಕೊಂಡು ಬಾಯಿಂದ ಬಾಯಿಗೆ ಮುಂದುವರೆಸುತ್ತಾ ಬರುತ್ತದೆ. ಕನ್ನಡದಲ್ಲಿ ಕಾವ್ಯ ಕತೆ ಗಾದೆ ನಾಟಕ ಹಾಡು ಮೊದಲಾದ ಪ್ರಕಾರಗಳಲ್ಲಿ ಅಪಾರ ಜನಪದ ಸಾಹಿತ್ಯವಿದೆ. ಜನಪದ ಕಾವ್ಯದಲ್ಲಿಯೇ ತ್ರಿಪದಿ, ಕೋಲಾಟದ ಪದ, ಲಾವಣಿ, ಕಥನಗೀತೆ, ಮಹಾಕಾವ್ಯ, ಮಕ್ಕಳಪದ ಇತ್ಯಾದಿ ರೂಪಗಳಿವೆ.

**ಆಶಯ**

ಪ್ರಸ್ತುತ ಗೀತೆಯನ್ನು ದೇ. ಜವರೇಗೌಡ ಅವರು ಸಂಕಲಿಸಿರುವ 'ಜನಪದ ಗೀತಾಂಜಲಿ' ಕೃತಿಯಿಂದ ಆರಿಸಿಕೊಳ್ಳಲಾಗಿದೆ. ಇದೊಂದು ಕಥನಗೀತೆಯಾಗಿದೆ. ಇದರಲ್ಲಿ ಜಿಪುಣ ವ್ಯಕ್ತಿಯೊಬ್ಬನ ಜಿಪುಣತನದ ಪರಿಣಾಮಗಳನ್ನು ತಮಾಶೆ ಮಾಡಲಾಗಿದೆ.

**ಪದಕೋಶ**

ಜೀನ = ಜಿಪುಣ, ಸಂಕಲೆ = ಸರಪಳಿ, ಮೊಕ್ದಾ = ಮುಖದ, ಮುಸ್ಕಾ = ಮುಸುಕನ್ನು, ಒಕ್ಕಡಿಕೆ = ಒಂದು ಕಡೆಗೆ, ಬರಗುಳ = ನೇಗಿಲಿನ ತುದಿಗೆ ನೆಲ ಉಳಲು ಸಿಕ್ಕಿಸುವ ಕಬ್ಬಿಣದ ಪಟ್ಟಿ, ಹೇರು = ಒಬ್ಬ ಮನುಷ್ಯ ಹೊತ್ತುಕೊಂಡು ಹೋಗುವಷ್ಟು

**ಟಿಪ್ಪಣಿ**

ದಾಸಯ್ಯ = ಹಾಸನ ಮಂಡ್ಯ ಜಿಲ್ಲೆಗಳಲ್ಲಿ ಕಾಣಬರುವ ಶ್ರೀವೈಷ್ಣವ ಪಂಥದ ಒಬ್ಬ ಪೂಜಾರಿ. ಹಣೆಗೆ ಮೂರು ನಾಮಧರಿಸಿ ಒಂದು ಕೈಯಲ್ಲಿ ಜಾಗಟೆ ಹಾಗೂ ಶಂಖ ಹಿಡಿರುತ್ತಾನೆ. ಇನ್ನೊಂದರಲ್ಲಿ ಗರುಡಗಂಬ ಎಂದು ಕರೆಯುವ ದೀಪದ ಕಂಬ ಹಿಡಿರುತ್ತಾನೆ. ಬಗಲಲ್ಲಿ ಜೋಳಿಗೆ ಇರುತ್ತದೆ.

**ಪ್ರಶ್ನೆಗಳು**

೧. ಕೊಣವೇಗೌಡನ ಜಿಪುಣತನ ಇರುವೆ ವಿಷಯದಲ್ಲಿಯೂ ಹೇಗೆ ವ್ಯಕ್ತವಾಗುತ್ತಿತ್ತು?
೨. ಭಿಕ್ಷೆ ಬೇಡಲು ಬಂದವರಿಗೆ ಬರಿಗೈಲಿ ಕಳಿಸಲು ಗೌಡನು ಮಾಡಿದ ಉಪಾಯವೇನು?
೩. ಕೊಣವೇಗೌಡನಿಗೆ ಬುದ್ಧಿಕಲಿಸಲು ಕೊಡಗಿನ ಮಾರಿ ಹೂಡಿದ ಆಟವೆಂತಹದು?
೪. ಜಿಪುಣತನದ ಮೇಲೆ ಜನಪದ ಗೀತೆಯನ್ನು ಯಾವ ಅಭಿಪ್ರಾಯ ತಾಳುತ್ತಿದೆ?

**ಪೂರಕ ಓದು**

೧. ಜಿಪುಣರನ್ನು ಕುರಿತ ಜನಪದ ಗೀತೆಗಳು.
೨. ಜಿಪುಣರನ್ನು ಕುರಿತು ತಮಾಶೆ ಮಾಡುವ ಶರಣರ ವಚನಗಳು.
೩. ಜಿಪುಣರನ್ನು ವಿಡಂಬಿಸುವ ಪುರಂದರದಾಸರ ಕೀರ್ತನೆಗಳು.

***